ಸೆಪ್ಟೆಂಬರ್ 2013

₹ 15/-

# ಯುಗರಶ್ಮಿ

ತ್ರೈಮಾಸಿಕ



- ಲೋಕದಲ್ಲಿ ಶಾಂತಿ ಸ್ಥಾಪನೆ
- ಇಸ್ಲಾಮ್ ಭೀಕರವಾದವನ್ನು ಪ್ರೋತ್ಸಾಹಿಸುವುದಿಲ್ಲ
- ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟಿಷರು ನೆಟ್ಟ ಗಿಡವೇ?
- ಹಿಂದೂಸ್ಥಾನದಲ್ಲಿ ಯೇಸುಕ್ರಿಸ್ತರು

"ಮನುಷ್ಯರ ದುಷ್ಕೃತ್ಯಗಳ ಪರಿಣಾಮವಾಗಿ ನೆಲದಲ್ಲೂ ಜಲದಲ್ಲೂ ನಾಶ ಗೋಚರಿಸಿದೆ. ಅವರು ತಮ್ಮ ದುಷ್ಕೃತ್ಯಗಳನ್ನು ತೊರೆಯಲಿಕ್ಕೋಸ್ಕರ, ಅವರ ಕೆಲವು ಕೃತ್ಯಗಳ ಫಲಗಳನ್ನು ಅವರು ಅನುಭವಿಸುವಂತೆ ಅವನು (ಅಲ್ಲಾಹನು) ಮಾಡುತ್ತಾನೆ."

ಪವಿತ್ರ ಖುರ್‌ಆನ್ (30 : 42)

ವಿಷಯ ಸೂಚಿಕೆ

# ಯುಗರಶ್ಮಿ


| ವಿಷಯ | ಪುಟ |
|---|---|
| ☆ ಪವಿತ್ರ ಖುರ್‌ಆನಿನ ಮಹಿಮೆ | 1 |
| ☆ ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು | 2 |
| ☆ ಲೋಕದಲ್ಲಿ ಶಾಂತಿ ಸ್ಥಾಪನೆ – ದೇಶಗಳ ಮಧ್ಯೆ ನ್ಯಾಯಪೂರ್ಣ ಸಂಬಂಧ ಸ್ಥಾಪನೆಯ ಮೂಲಕ ಸಾಧ್ಯ | 3 |
| ☆ ಇಸ್ಲಾಮ್ ಭೀಕರವಾದವನ್ನು ಪ್ರೋತ್ಸಾಹಿಸುವುದಿಲ್ಲ | 8 |
| ☆ ಪಾಕಿಸ್ತಾನ ಸರಕಾರದ ಶ್ವೇತ ಪತ್ರಕ್ಕೆ ಉತ್ತರ: ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟಿಷರು ನೆಟ್ಟ ಗಿಡವೇ? | 14 |
| ☆ ಹಿಂದೂಸ್ಥಾನದಲ್ಲಿ ಯೇಸು ಕ್ರಿಸ್ತರು : ಜಾಗತಿಕ ಸಾಹಿತ್ಯ ಕೃತಿಗಳ ಬಗ್ಗೆ ವಿಮರ್ಶೆ (1899–1999) | 26 |
| ☆ ವ್ರತಾನುಷ್ಠಾನ ಏಕೆ? | 38 |
| ☆ 'ಸನ್ಮಾರ್ಗ'ದ ಜಲ್ಪ | 39 |
| ☆ ಇಸ್ಲಾಮಿನ ಪ್ರಾಥಮಿಕ ಪಾಠಗಳು | 42 |
| ☆ ಓದಿದ್ದು: *ಬಾಂಗ್ಲಾ: ಜಮಾತೆ ನಾಯಕನಿಗೆ ಜೀವಾವಧಿ *ಟಿಪ್ಪು ಹಿಂದೂ ದ್ವೇಷಿಯೆನ್ನುವುದು ಅಪ್ಪಟ ಸುಳ್ಳಿನ ಮುದ್ದೆ | 44 |
| *ಭಾರತ ವಿರೋಧಿ ಅಲ್ಲ *ಕುರಾನ್ ನೆನಪಿಟ್ಟುಕೊಳ್ಳದ ಮಗನನ್ನು ಹೊಡೆದು ಕೊಂದಳು *ಯೇಸುಕ್ರಿಸ್ತನ ಸಮಾಧಿ! | 45 |
| *ಯುದ್ಧಾಪರಾಧ; ಹಿರಿಯ ಜಮಾತ್ ನಾಯಕನಿಗೆ ಮರಣದಂಡನೆ *ಯುದ್ಧಾಪರಾಧ; ಜಮಾತ್ ಕಟ್ಟಾಳುವಿಗೆ ಮರಣದಂಡನೆ *91 ವರ್ಷದ ಬಾಂಗ್ಲಾ ವ್ಯಕ್ತಿಗೆ 90 ವರ್ಷ ಜೈಲು *ದೇವರು ದೊಡ್ಡವನು..! | 46 |
| *ಬಾಂಗ್ಲಾದೇಶ: ಜಮಾಅತೆ ಇಸ್ಲಾಮಿ ನೋಂದಣಿ ರದ್ದು *'ಏಸುವನ್ನು ಶಿಲುಬೆಗೇರಿಸಿದ್ದು ಅನ್ಯಾಯ' *ಸಲಿಂಗಿಗಳ ಪರ ಪೋಪ್ ದನಿ *ಮತ್ತೊಬ್ಬ ಬಾಂಗ್ಲಾ ಮೂಲಭೂತವಾದಿಗೆ ಗಲ್ಲು | 47 |
| ☆ ಅಹ್ಮದಿಯರಿಗೆ ಸುತ್ತೋಲೆ : ತಹ್‌ರೀಕ್ ಜದೀದ್ ಮತ್ತು ಪವಿತ್ರ ರಮಝಾನ್ ತಿಂಗಳು | 48 |
| ☆ ವಾರ್ತೆ : *ಅಹ್ಮದಿಯಾ ಶಾಂತಿ ಸಮ್ಮೇಳನ | 49 |
| *ಖುದ್ದಾಮುಲ್ ಅಹ್ಮದಿಯಾ ಪ್ಲಾಟಿನಮ್ ಜೂಬಿಲಿ ಸಮ್ಮೇಳನ *ಅಹ್ಮದಿಯಾ ಬುಕ್ ಸ್ಟಾಲ್ *ಪ್ರೊ। ಶರೀಫ್ ಅಹ್ಮದ್ ಖಾನ್‌ರಿಗೆ ಡಾಕ್ಟರೇಟ್ | 50 |
| *ಡಾ। ಅಮತುಶ್ಶಾಫಿಗೆ 6 ಗೋಲ್ಡ್ ಮೆಡಲ್ | 51 |
| ☆ ಸಂಪಾದಕರಿಗೆ ಪತ್ರ | 52 |
| ☆ ನಬಿ ಕೀರ್ತನೆ | |


ಮುಖಪುಟ ಚಿತ್ರ : ಸ್ಪೈನಿನ ವೆಲೆನ್ಸಿಯಾದಲ್ಲಿ 2013 ಎಪ್ರಿಲ್ 3ರಂದು ಉದ್ಘಾಟಿಸಲ್ಪಟ್ಟ 2ನೇ ಅಹ್ಮದಿಯಾ ಮಸೀದಿ "ಬೈತುರ್ರಹ್ಮಾನ್"


ಬಿಡಿ ಪ್ರತಿ : ರೂ.15/- ವಾರ್ಷಿಕ ಚಂದಾ : ರೂ.60/- ಅಂಚೆ ಮೂಲಕ : ರೂ.70/-

ವಿಳಾಸ : 10 -23-10 0 8 / 1ನೇ ಮಹಡಿ, ಅನ್ಸಾರಿ ರಸ್ತೆ, ಬಂದರ್, ಮಂಗಳೂರು - 575 0 0 1

بِسۡمِ اللّٰہِ الرَّحۡمٰنِ الرَّحِیۡمِ
نَحۡمَدُہٗ وَنُصَلِّیۡ عَلٰی رَسُوۡلِہِ الۡکَرِیۡمِ

# ಯುಗಶಕ್ತಿ

ಸೆಪ್ಟೆಂಬರ್ 2013

ಆರಂಭ : 1975 | ಸಂಪುಟ : 30 | ತಬೂಕ್ 1392 ಹಿಜರೀ ಶಮ್ಸೀ | ಸಂಚಿಕೆ : 1-2

ಸಂಪಾದಕ : ಮುಹಮ್ಮದ್ ಯೂಸುಫ್

## ಪವಿತ್ರ ಖುರ್‌ಆನಿನ ಮಹಿಮೆ

ಪವಿತ್ರ ಖುರ್‌ಆನ್ ರತ್ನಗಳ ನಿಧಿಸಂಚಯವಾಗಿದೆ; ಲೋಕವು ಅದನ್ನು ತಿಳಿಯುವುದಿಲ್ಲ.

(ಮಲ್‌ಫೂಝಾತ್ – ಸಂಪುಟ 2, ಪುಟ 344)

ಪವಿತ್ರ ಖುರ್‌ಆನಿನ ಮಹಿಮೆ ಅತ್ಯುನ್ನತವಾಗಿದೆ. ಮಹಾತ್ಮೆಯಲ್ಲಿ ಅದನ್ನು ಮೀರಿಸುವಂಥದ್ದೇನೂ ಇಲ್ಲ. ಅದು 'ಹಕಂ' ಆಗಿದೆ. ಅಂದರೆ, ಅದರ ವಿಧಿ ಅಂತಿಮವಾಗಿದೆ. ಅದು 'ಮುಹೈಮಿನ್' ಆಗಿದೆ. ಅಂದರೆ, ಅದು ಎಲ್ಲ ಮಾರ್ಗದರ್ಶನಗಳ ಸಾರಸಂಗ್ರಹವಾಗಿದೆ. ಅವಶ್ಯವಿರುವ ಎಲ್ಲ ವಾದಮುಖಗಳು ಅದರಲ್ಲಿ ಕ್ರೋಢೀಕರಿಸಲ್ಪಟ್ಟಿವೆ. ಶತ್ರುಗಳ ಸಂಘಟಿತ ಶಕ್ತಿಯನ್ನು ಅದು ಛಿನ್ನ ಭಿನ್ನ ಮಾಡಿಬಿಟ್ಟಿದೆ. ಎಲ್ಲ ವಿಚಾರಗಳ ವಿಶದಾಂಶಗಳು ಅದರಲ್ಲಿ ಅಡಕವಾಗಿವೆ. ಮುಂದೆ ಘಟಿಸುವಂಥ ಮತ್ತು ಹಿಂದೆ ಘಟಿಸಿದಂಥ ವೃತ್ತಾಂತಗಳು ಅದರಲ್ಲಿ ಒಳಗೊಂಡಿದೆ. ಅಸತ್ಯಕ್ಕೆ ಅದರ ಎಡ ಭಾಗದಿಂದಾಗಲಿ, ಬಲ ಭಾಗದಿಂದಾಗಲಿ, ಮುಂದಿನಿಂದಾಗಲಿ, ಹಿಂದಿನಿಂದಾಗಲಿ ಅದನ್ನು ಸಮೀಪಿಸಲಿಕ್ಕೆ ಸಾಧ್ಯವಾಗದು. ಅದು ಅತ್ಯುನ್ನತನಾದ ನಮ್ಮ ಪ್ರಭುವಿನ ಪ್ರಕಾಶವಾಗಿದೆ.

(ರೂಹಾನಿ ಖಝಾಯಿನ್ ಸಂಪುಟ 19, ಪುಟ 103; ಖುತುಬ ಇಲ್‌ಹಾಮಿಯ್ಯ)

ಎಲ್ಲ ಪ್ರತಿಯೊಂದು ಜನತೆಯ ಮತ್ತು ಭಾಷೆಗಾರರ ಮುಂದೆ ಪ್ರಕಟಪಡಿಸಬಹುದಾದ ಪವಿತ್ರ ಖುರ್‌ಆನಿನ ಪ್ರತ್ಯಕ್ಷವಾದ ಈ ಅದ್ಭುತ ವೈಶಿಷ್ಟ್ಯವನ್ನು ಮುಂದಿಟ್ಟುಕೊಂಡು ಭಾರತೀಯನೋ ಫಾರ್ಸಿಯೋ ಯುರೋಪಿಯನ್ನನೋ ಅಮೇರಿಕನ್ನನೋ ಬೇರೆ ಯಾವುದೇ ರಾಜ್ಯದವನೋ ಆದ ಯಾವನೇ ವ್ಯಕ್ತಿಯನ್ನು ನಿರಾಯುಧನೂ ನಿರುದ್ಧಕಂಠನೂ ನಿರುತ್ತರನೂ ಆಗಿ ಮಾರ್ಪಡಿಸಲು ನನ್ನಿಂದ ಸಾಧ್ಯವೆಂದು ತಿಳಿದುಕೊಳ್ಳಬೇಕಾಗಿದೆ. ಪ್ರತಿಯೊಂದು ಕಾಲದಲ್ಲಿ ಆಯಾಯ ಕಾಲದ ಆವಶ್ಯಾನುಸಾರವಾಗಿ, ಪ್ರತಿಯೊಂದು ಕಾಲದ ವೈಚಾರಿಕತೆಯನ್ನು ಎದುರಿಸಲಿಕ್ಕಾಗಿ ಸಾಯುಧರಾದ ಸೈನಿಕರಂತೆ ಸನ್ನದ್ಧವಾಗುವ ಅಂತ್ಯವಿಲ್ಲದ ಅಗಾಧಜ್ಞಾನಗಳೂ ಸತ್ಯತತ್ವಗಳೂ ಬುದ್ಧಿಜ್ಞಾನಗಳೂ ಖುರ್‌ಆನಿನ ವಚನಗಳಲ್ಲಿ ತುಂಬಿಕೊಂಡಿವೆ. ಪವಿತ್ರ ಖುರ್‌ಆನ್ ಅದರ ಸತ್ಯತತ್ವಗಳ ಮತ್ತು ಸೂಕ್ಷ್ಮ ಜ್ಞಾನಗಳ ವಿಚಾರದಲ್ಲಿ ಅಪರ್ಯಾಪ್ತವೆಂದಾದರೆ

# ಮುಹಮ್ಮದ್ ಪೈಗಂಬರರ(ಸ) ನುಡಿಮುತ್ತುಗಳು

❖ ಕಿರಿಯರೊಡನೆ ಕರುಣೆ ಇಲ್ಲದವನು ಮತ್ತು ಹಿರಿಯರನ್ನು ಗೌರವಿಸದವನು ನಮ್ಮ ಪೈಕಿಯವನಲ್ಲ. (ಅಬೂದಾವೂದ್, ತಿರ್ಮಿದಿ)

❖ ಒಬ್ಬ ಒಳ್ಳೆಯ ಸ್ನೇಹಿತನ ಮತ್ತು ಕೆಟ್ಟ ಸ್ನೇಹಿತನ ಸ್ಥಿತಿ, ಕಸ್ತೂರಿ ಸಹಿತ ನಡೆಯುವವನ ಮತ್ತು ಒಲೆಯಲ್ಲಿ ಊದುವವನ ಸ್ಥಿತಿಯಂತಾಗಿದೆ. ಕಸ್ತೂರಿ ಸಹಿತ ನಡೆಯುವವನು ಅದನ್ನು ನಿನಗೆ ಉಚಿತವಾಗಿ ನೀಡಬಹುದು. ಅಲ್ಲವಾದರೆ ಅವನಿಂದ ನೀನು ಅದನ್ನು ಖರೀದಿಸಬಹುದು. ಅಥವಾ ಅವನಿಂದ ಸುಗಂಧವಾದರೂ ನಿನಗೆ ಲಭಿಸಬಹುದು. ಒಲೆಯಲ್ಲಿ ಊದುವವನಾದರೋ ಕೆಲವೊಮ್ಮೆ ನಿನ್ನ ವಸ್ತ್ರವನ್ನು ಮಲಿನಗೊಳಿಸುವನು ಅಥವಾ ಅವನಿಂದ ದುರ್ಗಂಧ ಬರುತ್ತಲಿರುವುದು. (ಬುಖಾರಿ, ಮುಸ್ಲಿಂ)

❖ ನಾಲ್ಕು ಕಾರ್ಯಗಳಿಗೋಸ್ಕರ ಸ್ತ್ರೀಯನ್ನು ವಿವಾಹವಾಗುತ್ತಾರೆ. 1. ಧನ. 2. ಕುಲೀನತೆ. 3. ಸೌಂದರ್ಯ. 4. ಧರ್ಮನಿಷ್ಠೆ. ಧರ್ಮನಿಷ್ಠೆಯುಳ್ಳವಳನ್ನು ನೀನು ವರಿಸಿಕೋ. ಇಲ್ಲವಾದರೆ ನಿನಗೆ ಅದು ನಾಶ. (ಬುಖಾರಿ, ಮುಸ್ಲಿಂ)

❖ ಒಬ್ಬನು ತನ್ನ ಸಹೋದರನನ್ನು ಸ್ನೇಹಿಸುವುದಾದರೆ, ಅದನ್ನು ಅವನಿಗೆ ತಿಳಿಸಲಿ. (ಅಬೂದಾವೂದ್, ತಿರ್ಮಿದಿ)

❖ ಅಲ್ಲಾಹು ಹೇಳಿದ್ದಾನೆ: ಒಳಿತು ಮಾಡಿದವನಿಗೆ ಅದರ ಹತ್ತು ಪಾಲು ಅಥವಾ ಅದಕ್ಕಿಂತ ಹೆಚ್ಚು ಪ್ರತಿಫಲ ಲಭಿಸುವುದು. ಯಾರಾದರೂ ಕೆಡುಕು ಮಾಡಿದರೆ ಕೆಡುಕಿಗೆ ತುಲ್ಯವಾದ ಪ್ರತಿಫಲವಿದೆ. ಅಥವಾ ನಾನು ಅವನನ್ನು ಕ್ಷಮಿಸುವೆನು. ಯಾರಾದರೂ ನನಗೆ ಒಂದು ಗೇಣು ಸಮೀಪವಾದರೆ ನಾನು ಒಂದು ಮೊಳ ಅವನಿಗೆ ಸಮೀಪವಾಗುವೆನು. ಯಾರಾದರೂ ಒಂದು ಮೊಳ ನನಗೆ ಸಮೀಪವಾದರೆ ನಾನು ಅವನಿಗೆ ಒಂದು ಮಾರು ಸಮೀಪವಾಗುವೆನು. ಯಾರಾದರೂ ನನ್ನ ಬಳಿಗೆ ನಡೆದು ಬಂದರೆ ನಾನು ಅವನ ಬಳಿಗೆ ಓಡಿ ಹೋಗುವೆನು. (ಮುಸ್ಲಿಂ)

❖ ಐದು ಫರ್ಝ್ (ಕಡ್ಡಾಯ) ನಮಾಝ್‌ಗಳ ಸ್ಥಿತಿ, ನಿಮ್ಮಲ್ಲಿ ಪ್ರತಿಯೊಬ್ಬರ ಮನೆ ಬಾಗಿಲ ಬಳಿ ಹರಿಯುವ ನದಿಯಲ್ಲಿ ಪ್ರತಿದಿನ ಐದು ಸಲ ಸ್ನಾನ ಮಾಡಿ ಶುದ್ಧವಾಗುವಂತೆ. (ಮುಸ್ಲಿಂ)

❖ ಐಹಿಕ ಜೀವಿತ ಮಾಧುರ್ಯಭರಿತವೂ ಅಲಂಕಾರಪ್ರದವೂ ಆಗಿದೆ. ಅಲ್ಲಾಹು ನಿಮ್ಮನ್ನು ಈ ಲೋಕದಲ್ಲಿ ಪ್ರತಿನಿಧಿಗಳನ್ನಾಗಿ ನಿಶ್ಚಯಿಸಿದ್ದಾನೆ. ಆದ್ದರಿಂದ ಐಹಿಕ ಜೀವಿತ ಮತ್ತು ಸ್ತ್ರೀಯರ ಬಗ್ಗೆ ಜಾಗರೂಕತೆ ವಹಿಸಿರಿ. (ಬುಖಾರಿ, ಮುಸ್ಲಿಂ)

ಅದು ಸಮಗ್ರವಾದ ಒಂದು ದಿವ್ಯಜ್ಞಾನವಾಗಲಾರದು. (ರೂಹಾನಿ ಖಝಾಯಿನ್ – ಸಂಪುಟ 3, ಪುಟ 255)

ಪವಿತ್ರ ಖುರ್‌ಆನ್ ಒಂದು ದಿವ್ಯಾದ್ಭುತವಾಗಿದೆ. ಅದಕ್ಕೆ ತುಲ್ಯವಾದ ಮತ್ತೊಂದು ಅದ್ಭುತ ಇದಕ್ಕೆ ಮುಂಚೆ ಉಂಟಾಗಿಲ್ಲ. ಮುಂದೆಯೂ ಉಂಟಾಗಲಿಕ್ಕಿಲ್ಲ. ಅದರ ಅನುಗ್ರಹಗಳ ಮತ್ತು ಔದಾರ್ಯಗಳ ಸಂಪತ್ತು ಸದಾ ನೆಲೆನಿಲ್ಲುವುದು. ಮುಹಮ್ಮದ್ ಪೈಗಂಬರ್ (ಸಲ್ಲಲ್ಲಾಹು ಅಲೈಹಿ ವಸಲ್ಲಂ) ರವರ ಕಾಲದಲ್ಲಿ ಯಾವ ರೀತಿಯಲ್ಲಾಗಿತ್ತೋ ಅದೇ ರೀತಿಯಲ್ಲಿ ಅದು ಎಲ್ಲ ಕಾಲಗಳಲ್ಲಿ ಪ್ರಕಾಶ ಬೀರುವಂಥದ್ದಾಗಿದೆ. ಪ್ರತಿಯೊಬ್ಬನ ಮಾತು ಆತನ ಮನೋಭಾವಕ್ಕೆ ಅನುಗುಣವಾಗಿರುವುದೆಂದು ನೆನಪಿಡಬೇಕಾಗಿದೆ. ಒಬ್ಬ ವ್ಯಕ್ತಿಯ ಮನೋಭಾವವೂ ಮನೋದಾರ್ಢ್ಯವೂ ಲಕ್ಷ್ಯಗಳ ಶ್ರೇಷ್ಠತೆಯೂ ಎಷ್ಟರ ಮಟ್ಟಗಿದೆಯೋ ಅಷ್ಟರ ಮಟ್ಟಿಗೆ ಆತನ ಮಾತಿಗೆ ಶಕ್ತಿಯಿರುವುದು. ದೈವಿಕ ಪ್ರಕಟನೆಗಳ ಸ್ಥಿತಿ ಸಹ ಇದೇ ರೀತಿ ಆಗಿದೆ. ಯಾವ ವ್ಯಕ್ತಿಗೆ ದೇವ ಪ್ರಕಟಣೆ ಅವತೀರ್ಣವಾಗುತ್ತದೋ, ಆತನು ಯಾವ ರೀತಿಯ ವ್ಯಕ್ತಿಯೋ, ಅದೇ ತರದ ವಚನ ಆತನಿಗೆ ಲಭಿಸುವುದು. ಒಟ್ಟಾರೆ, ಆ ಪುಣ್ಯ ಪುರುಷರಿಗೆ ಲಭಿಸಿದ ವಚನ ಅತ್ಯುನ್ನತವಾದುದು. ಅಂಥ ಮನೋವೈಶಾಲ್ಯ, ಮನೋದಾರ್ಢ್ಯ ಮತ್ತು ಅಚಂಚಲ ಮನಸ್ಸಿನ ಇನ್ನೊಬ್ಬ ವ್ಯಕ್ತಿ ಇನ್ನು ಜನ್ಮ ತಾಳಲಿಕ್ಕಿಲ್ಲ.

(ಮಲ್‌ಫೂಝಾತ್–ಸಂಪುಟ 3, ಪುಟ 57)

– ಹಝ್ರತ್ ಮಿರ್ಝಾ ಗುಲಾಂ ಅಹ್ಮದ್
ಅಹ್ಮದಿಯಾ ಜಮಾಅತಿನ ಸ್ಥಾಪಕರು

# ಲೋಕದಲ್ಲಿ ಶಾಂತಿ ಸ್ಥಾಪನೆ – ದೇಶಗಳ ಮಧ್ಯೆ ನ್ಯಾಯಪೂರ್ಣ ಸಂಬಂಧ ಸ್ಥಾಪನೆಯ ಮೂಲಕ ಸಾಧ್ಯ

**ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹೇಬ್**

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರ, ಪಂಚಮ ಖಲೀಫ
ಅಮೇರಿಕದ ವಾಶಿಂಗ್ಟನ್ ಡಿ. ಸಿ. ಯ ಕೆಪಿಟೋಲ್ ಹಿಲ್‌ನಲ್ಲಿ ಮಾಡಿದ ಚಾರಿತ್ರಿಕ ಭಾಷಣ





2012 ಜೂನ್ ದಿನಾಂಕ 27ರಂದು ವಾಶಿಂಗ್‌ಟನ್ ಡಿ.ಸಿ.ಯ ಕೆಪಿಟೋಲ್ ಹಿಲ್‌ನಲ್ಲಿ ಒಂದು ಚಾರಿತ್ರಿಕ ಘಟನೆ ನಡೆಯಿತು. ಆ ದಿನ ವಾಗ್ದತ್ತ ಮಸೀಹರ ಪಂಚಮ ಖಲೀಫರೂ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ನೇತಾರರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದರು ಭಾಷಣ ಮಾಡಿದರು. ಆ ಸಭೆಯಲ್ಲಿ ಕಾಂಗ್ರೆಸ್ ಸಭೆಯ ಪ್ರಮುಖ ಸದಸ್ಯರೂ ಸೆನೆಟ್ ಸಭೆಯ ಸದಸ್ಯರೂ ರಾಯಭಾರಿಗಳೂ ವೈಟ್‌ಹೌಸ್ ಮತ್ತು ಸ್ಟೇಟ್ ಡಿಪಾರ್ಟ್‌ಮೆಂಟಿನ ಉದ್ಯೋಗಸ್ಥರೂ ಎನ್.ಜಿ.ಒ. ನಾಯಕರೂ ಧಾರ್ಮಿಕ ನಾಯಕರೂ ಪ್ರೊಫೆಸರ್‌ಗಳೂ ಸರಕಾರಿ ಧೋರಣೆಯ ಸಲಹೆಗಾರರೂ ಸರಕಾರಿ ಅಧಿಕಾರಿಗಳೂ ರಾಯಭಾರಿ ಕಛೇರಿಗಳ ಮುಖ್ಯಸ್ಥರೂ ಬುದ್ಧಿಶಾಲಿ ಕೂಟಗಳ ಪ್ರತಿನಿಧಿಗಳೂ ಪೆಂಟಗನ್ ಅಧಿಕಾರಿಗಳೂ ಸಂಪರ್ಕ ಮಾಧ್ಯಮಗಳ ಪ್ರತಿನಿಧಿಗಳೂ ಹಾಜರಿದ್ದರು. ಇಂತಹ ಸಭೆ ಮೊದಲ ಬಾರಿ ಏರ್ಪಡಿಸಲಾಗಿದ್ದು ಅಮೇರಿಕದ ಪ್ರಭಾವಶಾಲಿ ರಾಜಕೀಯ ನಾಯಕರಾದ ಹೌಸ್ ಆಫ್ ರೆಪ್ರಸೆಂಟೇಟಿವ್ಸ್‌ನ ಡೆಮೋಕ್ರಾಟಿಕ್ ಪಾರ್ಟಿಯ ಲೀಡರ್ ಬಹುಮಾನ್ಯ ನ್ಯಾನ್ಸಿ ಪೆಲೋಸಿ ಮೊದಲಾದವರಿಗೆ ಜಾಗತಿಕ ಶಾಂತಿಯ ಬಗ್ಗೆ ಇಸ್ಲಾಮಿನ ನಿಲುವನ್ನು ನೇರವಾಗಿ ತಿಳಿಯಲು ಸಾಧ್ಯವಾಯಿತು. ಈ ಸಭೆ ಮುಕ್ತಾಯಗೊಂಡ ನಂತರ, ಹಝ್ರತ್ ಖಲೀಫತುಲ್ ಮಸೀಹ್‌ರವರಿಗೆ ಕೆಪಿಟೋಲ್ ಹಿಲ್ ಬಿಲ್ಡಿಂಗ್‌ನ ವಿವಿಧ ಭಾಗಗಳನ್ನು ತೋರಿಸಲಾಯಿತು. ಅನಂತರ ಅವರನ್ನು ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ಗೆ ಬರಮಾಡಲಾಯಿತು. ಅಲ್ಲಿ ಹಝ್ರತ್ ಖಲೀಫತುಲ್ ಮಸೀಹರು ಅಮೇರಿಕಕ್ಕೆ ಸಂದರ್ಶನ ನೀಡಿದುದಕ್ಕೆ ಗೌರವ ನೀಡುತ್ತಾ ಒಂದು ಠರಾವನ್ನು ಅಂಗೀಕರಿಸಲಾಯಿತು. ಆ ಠರಾವಿನ ಪ್ರಸ್ತಾವನೆಯಲ್ಲಿ ಹೀಗೆ ಹೇಳಲಾಗಿದೆ:

**"ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಆಧ್ಯಾತ್ಮಿಕ ಮತ್ತು ಆಡಳಿತಾತ್ಮಕ ಸರ್ವೋಚ್ಚ ನಾಯಕರಾದ, ಪರಿಶುದ್ಧರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದರನ್ನು ಜಾಗತಿಕ ಶಾಂತಿ, ನ್ಯಾಯಪಾಲನೆ, ಅಹಿಂಸೆ, ಮಾನವ ಹಕ್ಕುಗಳ ಸಂರಕ್ಷಣೆ, ಧಾರ್ಮಿಕ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಬಗ್ಗೆ ಅವರಿಗಿರುವ ಬದ್ಧತೆಯನ್ನು ಗುರುತಿಸಿಕೊಂಡು ವಾಶಿಂಗ್‌ಟನ್ ಡಿ.ಸಿ.ಗೆ ಸ್ವಾಗತಿಸುತ್ತೇವೆ."**

ಸೆನೆಟರ್ ರೋಬರ್ಟ್ ಕೇಸೀ ಹಝ್ರತ್ ಖಲೀಫತುಲ್ ಮಸೀಹರನ್ನು ಸ್ವಾಗತಿಸುತ್ತಾ ಅವರನ್ನು ಭೇಟಿಯಾಗಲು ಸಂದರ್ಭ ದೊರೆತ ಬಗ್ಗೆ ಮೆಚ್ಚುಗೆ ಸೂಚಿಸುತ್ತಾ ಹೇಳಿದರು:

*"ಪರಿಶುದ್ಧ ಮಹನೀಯರೇ, ನಿಮ್ಮ ಮಹಾನ್ ನಾಯಕತ್ವ ಮತ್ತು ಶಾಂತಿ, ಸಹನೆ ಮತ್ತು ನ್ಯಾಯಪಾಲನೆಗೋಸ್ಕರ ನಿಮ್ಮ ಬದ್ಧತೆಗಾಗಿ ನಾನು ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ."*

ಅಮೇರಿಕದ ಪ್ರಥಮ ಮುಸ್ಲಿಮ್ ಕಾಂಗ್ರೆಸ್‌ಮ್ಯಾನ್ ಕೆಯಿತ್ ಎಲ್ಲಿಸನ್ ಹೀಗೆಂದರು: *"ನಿಮ್ಮ ಉಪಸ್ಥಿತಿಯಿಂದ ಅಮೇರಿಕ ಗೌರವಿಸಲ್ಪಟ್ಟಿದೆ."* ಅವರು ಮುಂದುವರಿದು ಹೇಳಿದರು: *"ಖಲೀಫರ ನಾಯಕತ್ವವನ್ನು ಹೊಂದಿರುವ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಅಮೇರಿಕದ ಜನರಿಗೆ ನಿಜವಾದ ಒಂದು ಅನುಗ್ರಹವಾಗಿ ಪರಿಣಮಿಸಿದೆ."*

ಕಾಂಗ್ರೆಸ್‌ಮ್ಯಾನ್ ಬ್ರಾಡ್ ಶೆರ್‌ಮನ್, ತಾನು ಹೌಸ್ ಆಫ್ ರೆಪ್ರಸೆಂಟೀಟಿವ್ಸ್‌ನಲ್ಲಿ ಸ್ವಾಗತ ಠರಾವು ಮಂಡಿಸಲಿರುವುದಾಗಿ ಹೇಳಿದರು ಮತ್ತು ಹಝ್ರತ್ ಖಲೀಫರು *"ಸಕಲ ಜಗತ್ತಿಗೆ ಸಹನೆಯ ಒಂದು ಅನುಕರಣೀಯ ಮಾದರಿ"* ಎಂದು ಪ್ರಶಂಸಿಸಿದರು.

ಯುನೈಟೆಡ್ ಸ್ಟೇಟ್ಸ್ ಕಮಿಶನ್ ಆನ್ ಇಂಟರ್‌ನೇಶನಲ್ ರಿಲಿಜಸ್ ಫ್ರೀಡಮ್ (USCIRF) ಇದರ ಚೆಯರ್ ಪರ್ಸನ್ ಕ್ಯಾಟ್ರೀನ ಲಾಂಟೋಸ್ ಸ್ವೆಟ್ ಹೀಗೆ ಹೇಳಿದರು: *"ಈ ಸಭಾಭವನ ಅನುಗ್ರಹ ಭರಿತವಾಗಿದೆ ಎಂದು ನನಗೆ ತೋರುತ್ತದೆ. ಪರಿಶುದ್ಧ ಮಹನೀಯರು ಕೆಪಿಟೋಲ್ ಹಿಲ್‌ಗೆ ತಂದ ಅನುಗ್ರಹದ ಪ್ರತಿಬಿಂಬ ಇದಾಗಿದೆ*

ಎಂಬುದು ನಿಸ್ಸಂದೇಹ." ವಿವಿಧ ದೇಶಗಳಲ್ಲಿ ಅಹ್ಮದಿಯಾ ವಿರುದ್ಧ ನಡೆಯುತ್ತಿರುವ ದೌರ್ಜನ್ಯಗಳನ್ನು ಅವರು ಖಂಡಿಸಿದರು.

ಕಾಂಗ್ರೆಸ್‌ಮ್ಯಾನ್ ಫ್ರಾಂಕ್ ವೂಲ್ಫ್ ಹಝ್ರತ್ ಖಲೀಫರನ್ನು ಅಮೇರಿಕಕ್ಕೆ ಸ್ವಾಗತಿಸುತ್ತಾ, ಅಹ್ಮದಿಯಾ ಮುಸ್ಲಿಮ್ ಜಮಾಅತ್ ಎಲ್ಲಾ ಮಾನವರ ಮೂಲಭೂತ ಹಕ್ಕುಗಳ ಸಂರಕ್ಷಣೆಯ ಕೆಲಸಗಳನ್ನು ಬೆಂಬಲಿಸುತ್ತಾ ಇದೆ ಎಂದು ಹೇಳಿದರು.

ಕಾಂಗ್ರೆಸ್‌ಮ್ಯಾನ್ ಮೈಕ್ ಹೋಂಡಾ ತಾನು ಹಝ್ರತ್ ಖಲೀಫರನ್ನು ಹಿಂದಿನ ದಿನ ಸಂಜೆ ಬೈತುರ್ರಹ್ಮಾನ್ ಮಸ್‌ಜಿದ್‌ನಲ್ಲಿ ಭೇಟಿಯಾದ ಬಗ್ಗೆ ಸಂತೋಷ ಸೂಚಿಸುತ್ತಾ, ಅಹ್ಮದಿಯರು ಅಮೇರಿಕದಲ್ಲಿ ಸುರಕ್ಷಿತರಾಗಿದ್ದು ತಮ್ಮ ಶಾಂತಿ ಸಂದೇಶವನ್ನು ಮುಂದುವರಿಸುವುದನ್ನು ಆಶಿಸುವುದಾಗಿ ಹೇಳಿದರು.

ಕಾಂಗ್ರೆಸ್‌ವುಮನ್ ಝೋ ಲೋಫ್‌ಗ್ರೀನ್ ಸ್ಪೆಶಲ್ ಕಾಂಗ್ರೆಸನಲ್ ರೆಸೋಲ್ಯುಶನ್ ಪ್ರತಿಯನ್ನು ಹಝ್ರತ್ ಖಲೀಫರಿಗೆ ನೀಡಿದರು.

ಡೆಮೋಕ್ರಾಟಿಕ್ ಪಾರ್ಟಿಯ ಲೀಡರ್, ಕಾಂಗ್ರೆಸ್ ವುಮನ್ ನ್ಯಾನ್ಸಿ ಪೆಲೋಸಿ, ಅಮೇರಿಕದ ಎರಡು ರಾಜಕೀಯ ಪಾರ್ಟಿಗಳು ನೀಡಿದ ಸ್ವಾಗತದಿಂದ ತಾನು ಅಭಿಮಾನ ಹೊಂದಿರುವುದಾಗಿ ಹೇಳಿದರು.

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದರ ನಾಯಕತ್ವ ಬುದ್ಧಿ ಮತ್ತು ದಯೆಯಿಂದ ಭರಿತವಾಗಿದೆ ಎಂದು ಅವರು ಹೇಳಿದರು: ಅವರು ಮುಂದುವರಿದು ಹೇಳಿದರು: *"ಹಿಂಸಾಚಾರಗಳಿಗೆ ಪಾತ್ರರಾಗಿದ್ದರೂ ಪರಿಶುದ್ಧ ಮಹಾನುಭಾವರು ದ್ವೇಷ ಮತ್ತು ಪ್ರತೀಕಾರಕ್ಕೆ ಸರಿಯುವುದನ್ನು ನಿರಾಕರಿಸಿದರು."*

## ಹಝ್ರತ್ ಖಲೀಫರ ಭಾಷಣ

ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್.

ಪರಮ ದಯಾವಂತನೂ ಕಾರುಣ್ಯನಿಧಿಯೂ ಆದ ಅಲ್ಲಾಹನ ನಾಮದಿಂದ.

ಎಲ್ಲಾ ಗಣ್ಯ ಅತಿಥಿಗಳೇ, ಅಸ್ಸಲಾಮು ಅಲೈಕುಮ್ ವ ರಹ್ಮತುಲ್ಲಾಹಿ ವ ಬರಕಾತುಹೂ.

ಅಲ್ಲಾಹನ ಶಾಂತಿ ಮತ್ತು ಅನುಗ್ರಹ ನಿಮ್ಮೆಲ್ಲರ ಮೇಲೆ ಇರಲಿ.

ನೀವು ಇಲ್ಲಿಗೆ ಆಗಮಿಸಿ ನನ್ನ ಭಾಷಣವನ್ನು ಆಲಿಸಲು ಸಮಯವನ್ನು ವಿನಿಯೋಗಿಸಿದುದಕ್ಕೋಸ್ಕರ ನಾನು ನಿಮಗೆ ಮೊದಲನೆಯದಾಗಿ ಕೃತಜ್ಞತೆ ಅರ್ಪಿಸುತ್ತೇನೆ. ಯಾವ ವಿಷಯದ ಬಗ್ಗೆ ನಾನು ಭಾಷಣ ನೀಡಬೇಕೆಂದು ಕೋರಲಾಗಿದೆಯೋ ಆ ವಿಷಯ ಬಹಳ ವಿಶಾಲವೂ ವಿಸ್ತೃತವೂ ಆಗಿದೆ. ಅದಕ್ಕೆ ಅನೇಕ ಪಾರ್ಶ್ವಗಳಿವೆ. ನನಗೆ ಲಭಿಸಿರುವ ಸೀಮಿತ ಸಮಯದೊಳಗೆ ಈ ವಿಷಯಕ್ಕೆ ಸಂಬಂಧಿಸಿ ಸಮಗ್ರವಾಗಿ ವಿವರಿಸಲು ಸಾಧ್ಯವಾಗಲಾರದು. ಜಾಗತಿಕ ಶಾಂತಿಯ ಸ್ಥಾಪನೆ ಬಗ್ಗೆ ಮಾತನಾಡಲು ನನ್ನೊಡನೆ ಕೋರಲಾಗಿದೆ. ಖಂಡಿತವಾಗಿಯೂ ಇಂದು ಲೋಕವು ಎದುರಿಸುತ್ತಿರುವ ಅತ್ಯಂತ ಮುಖ್ಯ ಮತ್ತು ಆತಂಕಕಾರಿ ವಿಷಯ ಇದಾಗಿದೆ. ಸಮಯವು ಸೀಮಿತವಾಗಿರುವ ಕಾರಣ ದೇಶಗಳ ಮಧ್ಯೆ ನ್ಯಾಯಪೂರ್ಣ ಮತ್ತು ಸಮಾನ ಸಂಬಂಧಗಳ ಸ್ಥಾಪನೆಯ ಬಗ್ಗೆ ಇಸ್ಲಾಮಿನ ದೃಷ್ಟಿಕೋನವನ್ನು ವಿವರಿಸುವೆನು.

ವಾಸ್ತವಿಕವಾದ ವಿಷಯವೇನೆಂದರೆ, ಶಾಂತಿ ಮತ್ತು ನ್ಯಾಯ ಪಾಲನೆ ಅವಿಭಾಜ್ಯವಾಗಿವೆ. ಒಂದನ್ನು ಹೊಂದದೆ ಇನ್ನೊಂದನ್ನು ಹೊಂದಲು ಸಾಧ್ಯವಾಗಲಾರದು. ನಿಶ್ಚಯವಾಗಿಯೂ ಎಲ್ಲಾ ಬುದ್ಧಿಶಾಲಿಗಳೂ ಇದನ್ನು ಮನವರಿಕೆ ಮಾಡಿಕೊಂಡಿರುತ್ತಾರೆ. ಲೋಕದಲ್ಲಿ ಅಶಾಂತಿಯನ್ನು ಉಂಟುಮಾಡಬೇಕೆಂದು ನಿರ್ಧರಿಸಿದವರನ್ನು ಹೊರತುಪಡಿಸಿ ಯಾವುದೇ ಸಮಾಜದಲ್ಲಿ, ಯಾವುದೇ ದೇಶದಲ್ಲಿ ಅಥವಾ ಜಗತ್ತಿನಾದ್ಯಂತ ಯಾರೂ, ನ್ಯಾಯಪಾಲನೆ ಮತ್ತು ಸರಿಯಾದ ವ್ಯವಹಾರವಿರುವಲ್ಲಿ ಅಸ್ತವ್ಯಸ್ತತೆ ಅಥವಾ ಅಶಾಂತಿ ಇರುವುದೆಂದು ಹೇಳಲಾರರು. ಇಂದು ಲೋಕದ ಅನೇಕ ಪ್ರದೇಶಗಳಲ್ಲಿ ಅಶಾಂತಿ ಮತ್ತು ಅಸ್ತವ್ಯಸ್ತತೆ ಕಂಡು ಬರುತ್ತವೆ. ಕೆಲವು ದೇಶಗಳಲ್ಲಿ ಆಂತರಿಕವಾಗಿಯೂ ವಿವಿಧ ದೇಶಗಳ ಮಧ್ಯೆ ಬಾಹ್ಯವಾಗಿಯೂ ಈ ಅಶಾಂತಿ ಕಾಣಿಸುತ್ತಾ ಇದೆ. ಎಲ್ಲಾ ಸರಕಾರಗಳು ತಮ್ಮ ಧೋರಣೆಗಳು ನ್ಯಾಯಬದ್ಧವಾಗಿವೆ ಎಂದು ವಾದಿಸುತ್ತಿವೆಯಾದರೂ ಇಂತಹ ಸಂಘರ್ಷ ಮತ್ತು ಅಸ್ತವ್ಯಸ್ತತೆಗಳು ಕಂಡು ಬರುತ್ತವೆ. ಶಾಂತಿಸ್ಥಾಪನೆಯೇ ತಮ್ಮ ಪ್ರಮುಖ ಉದ್ದೇಶವೆಂದು ಎಲ್ಲರೂ ವಾದಿಸುತ್ತಾರೆ. ಹೀಗಿದ್ದರೂ ಲೋಕದಲ್ಲಿ ಆತಂಕ ವರ್ಧಿಸುತ್ತಾ ಇರುವುದರ ಬಗ್ಗೆ ಮತ್ತು ಅಸ್ತವ್ಯಸ್ತತೆ ಹರಡುತ್ತಾ ಇದೆ ಎನ್ನುವ ಬಗ್ಗೆ ಸಂಶಯವಿಲ್ಲ. ಇದರಿಂದ ಸ್ಪಷ್ಟವಾಗುವುದೇನೆಂದರೆ, ಎಲ್ಲಿಯೋ ಒಂದು ಕಡೆ ನ್ಯಾಯಪಾಲನೆ ಮಾಡಬೇಕೆಂಬ ಆವಶ್ಯಕತೆಯು ಈಡೇರಿಸಲ್ಪಟ್ಟಿಲ್ಲ. ಆದುದರಿಂದ ಅಸಮಾನತೆಯನ್ನು ಅದು ಎಲ್ಲಿದ್ದರೂ ಯಾವಾಗ ಇದ್ದರೂ ನಿವಾರಿಸಬೇಕಾದುದು ಅತ್ಯಂತ ತುರ್ತಾಗಿ ಮಾಡಬೇಕಾದ ಕೆಲಸವಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನೇತಾರನಾದ ನಾನು ನ್ಯಾಯದ ಮೇಲೆ ಅಸ್ತಿಭಾರ ಹೊಂದಿದ ಶಾಂತಿ ಸ್ಥಾಪನೆಯ ಆವಶ್ಯಕತೆ ಮತ್ತು ಅದನ್ನು ಸಾಧಿಸುವ ಮಾರ್ಗಗಳ ಬಗ್ಗೆ ಕೆಲವು ಅಭಿಪ್ರಾಯಗಳನ್ನು ಹೇಳಲು ಬಯಸುತ್ತೇನೆ.

ಅಹ್ಮದಿಯಾ ಮುಸ್ಲಿಮ್ ಸಂಘಟನೆ ಪೂರ್ಣವಾಗಿ ಒಂದು ಧಾರ್ಮಿಕ ಸಮುದಾಯವಾಗಿದೆ. ನಮ್ಮ ವಿಶ್ವಾಸವೇನೆಂದರೆ, ಇಸ್ಲಾಮಿನ ನೈಜ ತತ್ವಗಳ ಕುರಿತು ಲೋಕಕ್ಕೆ ಅರಿವು ನೀಡುವ ಮಸೀಹ್ ಮತ್ತು ಸುಧಾರಕನಾಗಿ ಆಗಮಿಸಬೇಕಾದ ಮಹಾನುಭಾವರು ಆಗಮಿಸಿದ್ದಾರೆಂದಾಗಿದೆ. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಹೀಗೆ ಆಗಮಿಸಿದ ಮಸೀಹರೆಂದೂ ಸುಧಾರಕರೆಂದೂ ನಾವು ನಂಬುತ್ತೇವೆ. ಪವಿತ್ರ ಖುರ್‌ಆನನ್ನು ಆಧಾರವಾಗಿಟ್ಟುಕೊಂಡು ಇಸ್ಲಾಮಿನ ನೈಜ ತತ್ವಗಳನ್ನು ಅನುಷ್ಠಿಸಿ ಪ್ರಚಾರ ಮಾಡಬೇಕೆಂದು ಅವರು ತನ್ನ ಅನುಯಾಯಿಗಳನ್ನು ಆಗ್ರಹಪಡಿಸಿದರು. ಆದುದರಿಂದ ಶಾಂತಿಸ್ಥಾಪನೆ ಬಗ್ಗೆ, ಅಂತರ್ರಾಷ್ಟ್ರೀಯ ಸಂಬಂಧಗಳನ್ನು ಹೇಗೆ ಸ್ಥಾಪಿಸಬೇಕೆನ್ನುವುದರ ಬಗ್ಗೆ ನಾವು ಪ್ರತಿಪಾದಿಸುವ ಎಲ್ಲವೂ ಪವಿತ್ರ ಖುರ್‌ಆನನ್ನು ಆಧಾರವಾಗಿಟ್ಟುಕೊಂಡು ಹೇಳುವುದಾಗಿದೆ.

ಜಾಗತಿಕ ಶಾಂತಿ ಸ್ಥಾಪನೆ ಬಗ್ಗೆ ನೀವು ಆಗಾಗ ನಿಮ್ಮ ಅಭಿಪ್ರಾಯಗಳನ್ನು ಪ್ರಕಟಿಸುತ್ತಿರುವಿರಿ ಮತ್ತು ನೀವು ನಿಜವಾಗಿಯೂ ಬಹಳ ಪ್ರಯತ್ನಮಾಡುತ್ತಿರುವಿರಿ. ನಿಮ್ಮ ರಚನಾತ್ಮಕ ಬುದ್ಧಿಶಾಲಿ ಮನಸ್ಸು ನೀವು ಮಹತ್ತಾದ ಅಭಿಪ್ರಾಯಗಳನ್ನೂ ಯೋಜನೆಗಳನ್ನೂ ದೂರಗಾಮಿ ಶಾಂತಿಯ ಪ್ರಸ್ತಾಪಗಳನ್ನೂ ಮಾಡಲು ಪ್ರೇರೇಪಿಸುತ್ತಿವೆ. ಆದುದರಿಂದ ನಾನು ಈ ವಿಷಯದ ಬಗ್ಗೆ ಲೌಕಿಕ ಅಥವಾ ರಾಜಕೀಯ ದೃಷ್ಟಿಕೋನದಿಂದ ಮಾತನಾಡಲು ಬಯಸುವುದಿಲ್ಲ. ನಾನು ಸಂಪೂರ್ಣವಾಗಿ ಧಾರ್ಮಿಕ ದೃಷ್ಟಿಕೋನದ ಮೇಲೆ ನನ್ನ ಗಮನವಿರಿಸಿ ಮಾತನಾಡುವೆನು ನಾನು ಇದರ ಮೊದಲು ಹೇಳಿದ ಹಾಗೆ ಪವಿತ್ರ ಖುರ್‌ಆನಿನ ಉಪದೇಶಗಳಿಗೆ ಅನುಸಾರವಾಗಿ ಕೆಲವು ಮಾರ್ಗದರ್ಶನಗಳನ್ನು ನಿಮ್ಮ ಮುಂದೆ ಇರಿಸುವೆನು.

ಮನುಷ್ಯನ ಜ್ಞಾನ ಮತ್ತು ಬುದ್ಧಿಶಕ್ತಿ ಪರಿಪೂರ್ಣವಾಗಿರುವುದಿಲ್ಲ ಮತ್ತು ವಾಸ್ತವಿಕವಾಗಿ ಅದು ಸೀಮಿತವಾಗಿರುತ್ತದೆ ಎಂಬುದನ್ನು ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳುವುದು ಆವಶ್ಯಕವಾಗಿದೆ. ಆದುದರಿಂದ ನಿರ್ಧಾರ ಕೈಗೊಳ್ಳುವಾಗ ಮತ್ತು ಯೋಚನೆಗಳನ್ನು ಮಾಡುವಾಗ ಯಾವಾಗಲೂ ಕೆಲವು ವಿಷಯಗಳು ಮನುಷ್ಯನ ಮನಸ್ಸನ್ನು ಪ್ರಭಾವಿಸುತ್ತವೆ. ಆದ ಕಾರಣ ಅವನ ತೀರ್ಮಾನಗಳು ತನ್ನ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸುವ ರೀತಿಯಲ್ಲಿರುತ್ತವೆ. ಇದರ ಪರಿಣಾಮವಾಗಿ ಅನ್ಯಾಯಕರವಾದ ನಿರ್ಧಾರಗಳು ಕೈಗೊಳ್ಳಲ್ಪಡುತ್ತವೆ. ಆದರೆ ದೇವನ ನಿಯಮಗಳು ಪರಿಪೂರ್ಣವಾಗಿರುತ್ತವೆ. ಆದ್ದರಿಂದ ಅದರಲ್ಲಿ ಸ್ವಾರ್ಥ ಹಿತಾಸಕ್ತಿಗಳು ಅಥವಾ ಅನ್ಯಾಯಕರವಾದ ವಿಷಯಗಳು ಇರುವುದಿಲ್ಲ. ಇದಕ್ಕೆ ಕಾರಣವೇನೆಂದರೆ ದೇವನು ತಾನು ಸೃಷ್ಟಿಸಿದವರ ಹಿತವನ್ನು ಮಾತ್ರ ಬಯಸುತ್ತಾನೆ. ಆದುದರಿಂದ ಅವನ ನಿಯಮಗಳು ನ್ಯಾಯಪಾಲನೆ ಮೇಲೆ ಪೂರ್ಣವಾಗಿ ಅಸ್ತಿಭಾರ ಹೊಂದಿರುತ್ತವೆ. ಈ ಮುಖ್ಯ ವಿಷಯವನ್ನು ಲೋಕದ ಜನರು ಮನವರಿಕೆ ಮಾಡಿಕೊಳ್ಳುವಾಗ ನಿಜವಾದ ಮತ್ತು ಶಾಶ್ವತ ಶಾಂತಿಗೆ ಅಸ್ತಿಭಾರ ಹಾಕಲ್ಪಡುವುದು. ಹೀಗೆ ಆಗದಿದ್ದರೆ, ಜಾಗತಿಕ ಶಾಂತಿ ಸ್ಥಾಪಿಸಲಿಕ್ಕೋಸ್ಕರ ಕೆಲವರು ನಿರಂತರ ಪ್ರಯತ್ನ ಮಾಡುತ್ತಾ ಇದ್ದರೂ ಅದರಿಂದ ಯಾವುದಾದರೂ ಪ್ರಯೋಜನಕರವಾದ ಪರಿಣಾಮ ಉಂಟುಮಾಡಲು ಅವರಿಗೆ ಸಾಧ್ಯವಾಗಲಿಲ್ಲವೆಂದು ಕಾಣುವೆವು.

ಪ್ರಥಮ ಜಾಗತಿಕ ಮಹಾಯುದ್ಧ ಕೊನೆಗೊಂಡ ನಂತರ ಕೆಲವು ದೇಶಗಳ ನಾಯಕರು ದೇಶಗಳ ಮಧ್ಯೆ ಭವಿಷ್ಯದಲ್ಲಿ ಉತ್ತಮ ಮತ್ತು ಶಾಂತಿಯ ಸಂಬಂಧ ಸ್ಥಾಪಿಸಲು ಬಯಸಿದರು. ಜಾಗತಿಕ ಶಾಂತಿಯನ್ನು ಸ್ಥಾಪಿಸುವ ಉದ್ದೇಶದಿಂದ ಲೀಗ್ ಆಫ್ ನೇಶನ್ಸ್ ಸ್ಥಾಪಿತವಾಯಿತು. ಅದರ ಮುಖ್ಯ ಉದ್ದೇಶ ಲೋಕದಲ್ಲಿ ಶಾಂತಿ ಸ್ಥಾಪಿಸಿ ಮುಂದೆ ಯುದ್ಧಗಳು ನಡೆಯದಂತೆ ಮಾಡುವುದಾಗಿತ್ತು. ಆದರೆ ದುರದೃಷ್ಟಕರವಾಗಿ ಲೀಗ್ ಆಫ್ ನೇಶನ್ಸ್ ಸ್ಥಾಪನೆಯ ನಿಯಮಗಳು ಮತ್ತು ಅದು ಅಂಗೀಕರಿಸಿದ ಠರಾವುಗಳಲ್ಲಿ ಕೆಲವು ನ್ಯೂನತೆಗಳು ಇದ್ದುದರಿಂದ ಅವು ಲೋಕದ ಎಲ್ಲಾ ಜನರ ಹಕ್ಕುಗಳನ್ನು ಸಮಾನವಾಗಿ ಸಂರಕ್ಷಿಸಲು ಸಾಧ್ಯವಾಗಲಿಲ್ಲ. ಅದರ ಪರಿಣಾಮವಾಗಿ ಅಸಮಾನತೆಯು ಉಂಟಾದುದರಿಂದ ದೀರ್ಘ ಕಾಲ ಶಾಂತಿ ಪರಿಸ್ಥಿತಿ ಮುಂದುವರಿಯಲಿಲ್ಲ. ಲೀಗ್ ಆಫ್ ನೇಶನ್ಸ್ ಜಾಗತಿಕ ಶಾಂತಿ ಸ್ಥಾಪನೆಗೆ ಮಾಡಿದ ಪ್ರಯತ್ನಗಳು ನಿಷ್ಫಲವಾದವು ಮತ್ತು ದ್ವಿತೀಯ ಜಾಗತಿಕ ಮಹಾಯುದ್ಧಕ್ಕೆ ಅದು ಸಾಗಿಸಿತು.

ಆಗ ಹಿಂದೆಂದೂ ಸಂಭವಿಸದಂತಹ ಬೃಹತ್ ಮಟ್ಟದ ನಾಶವು ಲೋಕದಲ್ಲಿ ಸಂಭವಿಸಿದುದು ನಮಗೆಲ್ಲರಿಗೂ ತಿಳಿದಿದೆ. 75 ಮಿಲಿಯ ಜನರು ಲೋಕದಾದ್ಯಂತ ಆ ಯುದ್ಧಕಾಲದಲ್ಲಿ ಕೊಲ್ಲಲ್ಪಟ್ಟರು. ಅವರಲ್ಲಿ ಅನೇಕ ಸಂಖ್ಯೆಯ ಜನರು ನಿಷ್ಕಳಂಕರಾದ ನಾಗರಿಕರಾಗಿದ್ದರು. ಆ ಯುದ್ಧವು ಲೋಕದ ಕಣ್ಣನ್ನು ತೆರೆಯಲು ಸಾಕಾಗುವುದಕ್ಕಿಂತ ಹೆಚ್ಚಾಗಿತ್ತು. ಲೋಕದ ದೇಶಗಳು ಬುದ್ಧಿಪೂರ್ವಕವಾಗಿ ಧೋರಣೆಗಳನ್ನು ರೂಪಿಸಿ ಎಲ್ಲಾ ಜನರಿಗೆ ಅವರವರ ಹಕ್ಕುಗಳನ್ನು ನೀಡುವ ವ್ಯವಸ್ಥೆಯನ್ನು ನ್ಯಾಯಯುತವಾಗಿ ಮಾಡಿ ಲೋಕದಲ್ಲಿ ಶಾಂತಿ ಸ್ಥಾಪಿಸುವ ಮಾರ್ಗವನ್ನು ಅವಲಂಬಿಸಬೇಕಾಗಿತ್ತು. ದ್ವಿತೀಯ ಮಹಾಯುದ್ಧದ ನಂತರ ಲೋಕದ ರಾಷ್ಟ್ರಗಳು ಜಾಗತಿಕ ಶಾಂತಿ ಸ್ಥಾಪಿಸಲು ಪ್ರಯತ್ನಗಳನ್ನು ಕೈಗೊಂಡವು ಮತ್ತು ಸಂಯುಕ್ತ ರಾಷ್ಟ್ರ ಸಂಘವು ಸ್ಥಾಪಿಸಲ್ಪಟ್ಟಿತು. ಆದರೆ ಸಂಯುಕ್ತ ರಾಷ್ಟ್ರ ಸಂಘವನ್ನು ಸ್ಥಾಪಿಸಲು ಯಾವ ಭವ್ಯ ಉದ್ದೇಶಗಳನ್ನು ಗಮನದಲ್ಲಿಡಲಾಗಿತ್ತೋ ಆ ಉದ್ದೇಶಗಳನ್ನು ಈಡೇರಿಸಲು ಸಾಧ್ಯವಿಲ್ಲವೆಂದು ಸ್ವಲ್ಪ ಸಮಯದೊಳಗೆ ಸ್ಪಷ್ಟವಾಗಿ ತಿಳಿಯಿತು. ಇಂದು ಕೆಲವು ಸರಕಾರಗಳು ನೀಡುವ ಹೇಳಿಕೆಗಳಿಂದ ಅದು ಅದರ ಉದ್ದೇಶವನ್ನು ಈಡೇರಿಸುವುದರಲ್ಲಿ ವಿಫಲವಾಗಿದೆ ಎಂದು ಸಾಬೀತಾಗುತ್ತದೆ.

ಶಾಂತಿ ಸ್ಥಾಪನೆಗೋಸ್ಕರ ಅಂತರ್‍ರಾಷ್ಟ್ರೀಯ ಸಂಬಂಧದ ಬಗ್ಗೆ ಇಸ್ಲಾಮ್ ನ್ಯಾಯಪಾಲನೆ ಮಾಡುವ ಬಗೆ ಹೇಗೆ? ಪವಿತ್ರ ಖುರ್‌ಆನ್‌ನಲ್ಲಿ ಸರ್ವಶಕ್ತನಾದ ದೇವನು ನಮ್ಮ ಜನಾಂಗೀಯ ವ್ಯತ್ಯಾಸಗಳು ನಮ್ಮನ್ನು ಗುರುತಿಸುವ ವಿಧಾನ ಎಂದು ಹೇಳಿ ಅದರಿಂದ ಒಂದು ಜನಾಂಗಕ್ಕೆ ಇನ್ನೊಂದು ಜನಾಂಗದ ಮೇಲೆ ಯಾವುದೇ ಶ್ರೇಷ್ಠತೆ ಇರುವುದಿಲ್ಲ ಎಂದು ಹೇಳಿರುವನು.

ಪವಿತ್ರ ಖುರ್‌ಆನಿನ ವಚನ ಹೀಗಿದೆ:

**"ಓ ಮನುಷ್ಯರೇ, ನಾವು ನಿಮ್ಮನ್ನು ಗಂಡು ಮತ್ತು ಹೆಣ್ಣಿನಿಂದ ಸೃಷ್ಟಿಸಿದೆವು. ನೀವು ಪರಸ್ಪರ ಗುರುತಿಸಲ್ಪಡಲಿಕ್ಕಾಗಿ ನಿಮ್ಮನ್ನು ಕುಲಗಳನ್ನಾಗಿಯೂ ಗೋತ್ರಗಳನ್ನಾಗಿಯೂ ಮಾಡಿರುವೆವು. ನಿಮ್ಮ ಪೈಕಿ ಹೆಚ್ಚು ಸಾತ್ವಿಕನಾರೋ ಖಂಡಿತವಾಗಿಯೂ ಆತನೇ ಅಲ್ಲಾಹನ ದೃಷ್ಟಿಯಲ್ಲಿ ಅತ್ಯಂತ ಗೌರವಾರ್ಹನು. ದಿಟವಾಗಿಯೂ ಅಲ್ಲಾಹನು ಸರ್ವಜ್ಞನೂ ಎಲ್ಲ ಅರಿತವನೂ ಆಗಿದ್ದಾನೆ." (ಪವಿತ್ರ ಖುರ್‌ಆನ್ 49:14)**

ಎಲ್ಲಾ ಮನುಷ್ಯರು ಸಮಾನವಾಗಿ ಜನಿಸಿರುವರು ಎಂದು ಪವಿತ್ರ ಖುರ್‌ಆನ್ ಹೇಳುತ್ತದೆ. ಇಸ್ಲಾಮಿನ ಪವಿತ್ರ ಪ್ರವಾದಿ(ಸ) ತಾನು ನೀಡಿದ ಅಂತಿಮ ಪ್ರವಚನದಲ್ಲಿ ಹೀಗೆಂದರು:

**"ಮುಸ್ಲಿಮರು ಯಾವಾಗಲೂ ಹೀಗೆ ನೆನಪಿಟ್ಟುಕೊಳ್ಳಬೇಕು. ಅರಬಿಯು ಅರಬಿಯೇತರನಿಗಿಂತ ಶ್ರೇಷ್ಠನಲ್ಲ. ಅರಬಿಯೇತರನು ಅರಬಿಗಿಂತ ಶ್ರೇಷ್ಠನೂ ಅಲ್ಲ. ಬಿಳಿ ವರ್ಣದವನು ಕಪ್ಪು ವರ್ಣದವನಿಗಿಂತ ಶ್ರೇಷ್ಠನಲ್ಲ. ಕಪ್ಪು ವರ್ಣದವನು ಬಿಳಿ ವರ್ಣದವನಿಗಿಂತಲೂ ಶ್ರೇಷ್ಠನಲ್ಲ."**

ಇಸ್ಲಾಮ್ ಧರ್ಮದ ಪ್ರಕಾರ ಎಲ್ಲಾ ಜನಾಂಗಗಳ ಜನರು ಮತ್ತು ಎಲ್ಲಾ ಗುಂಪುಗಳ ಜನರು ಸರ್ವಸಮಾನರಾಗಿದ್ದಾರೆ. ಪ್ರತಿಯೊಂದು ಜನಾಂಗಕ್ಕೆ ಯಾವುದೇ ಪೂರ್ವಗ್ರಹವಿಲ್ಲದೆ, ತಾರತಮ್ಯವಿಲ್ಲದೆ ಸಮಾನ ಹಕ್ಕುಗಳನ್ನು ನೀಡಬೇಕು. ವಿವಿಧ ಗಂಪುಗಳ ಮತ್ತು ವಿವಿಧ ಜನಾಂಗಗಳ ಮಧ್ಯೆ ಸೌಹಾರ್ದಕ್ಕೆ ಮತ್ತು ಶಾಂತಿ ಸ್ಥಾಪನೆಗೆ ಅಸ್ತಿಭಾರ ಹಾಕುವ ಸುವರ್ಣ ತತ್ವ ಇದಾಗಿದೆ.

ಆದರೆ ನಾವು ಇಂದಿನ ಲೋಕದಲ್ಲಿ ಶಕ್ತಿಶಾಲಿ ಮತ್ತು ಶಕ್ತಿಹೀನ ದೇಶಗಳ ಮಧ್ಯೆ ಭಿನ್ನಾಭಿಪ್ರಾಯಗಳನ್ನೂ ಪರಸ್ಪರ ಬೇರ್ಪಡುವಿಕೆಯನ್ನೂ ಕಾಣುತ್ತೇವೆ. ಉದಾಹರಣೆಗೆ, ಸಂಯುಕ್ತರಾಷ್ಟ್ರ ಸಂಘದಲ್ಲಿ ಕೆಲವು ದೇಶಗಳಿಗೆ ವಿಶೇಷಾಧಿಕಾರಗಳಿವೆ. ಸಂಯುಕ್ತರಾಷ್ಟ್ರ ಸಂಘದ ಸೆಕ್ಯುರಿಟಿ ಕೌನ್ಸಿಲ್‌ನಲ್ಲಿ (ಭದ್ರತಾ ಮಂಡಳಿಯಲ್ಲಿ) ಕೆಲವು ಸ್ಥಿರ ಸದಸ್ಯತ್ವ ಹೊಂದಿದ ದೇಶಗಳು ಮತ್ತು ಕೆಲವು ತಾತ್ಕಾಲಿಕ ಸದಸ್ಯತ್ವ ಹೊಂದಿದ ದೇಶಗಳಿವೆ. ಈ ತಾರತಮ್ಯತೆ ಆಂತರಿಕ ಆತಂಕಗಳಿಗೂ ನಿರಾಶೆಗಳಿಗೂ ಹೇತುವಾಗಿದೆ ಮತ್ತು ಕೆಲವು ದೇಶಗಳು ಈ ಅಸಮಾನತೆ ಬಗ್ಗೆ ಪ್ರತಿಭಟಿಸುವುದರ ಕುರಿತು ನಾವು ಆಗಾಗ ವರದಿಗಳನ್ನು ಆಲಿಸುತ್ತೇವೆ. ಇಸ್ಲಾಮ್ ಪರಿಪೂರ್ಣ ನ್ಯಾಯಪಾಲನೆ ಮತ್ತು ಸಮಾನತೆಯನ್ನು ಉಪದೇಶಿಸುತ್ತಿದೆ. ಪವಿತ್ರ ಖುರ್‌ಆನ್ ಅಧ್ಯಾಯ 5 ವಚನ 3ರಲ್ಲಿ **ಹಗೆತನದಲ್ಲಿ ಮಿತಿಮೀರಿ ಹೋದವರ ವಿರುದ್ಧ ಕೂಡ ಅನ್ಯಾಯದಿಂದ ವರ್ತಿಸಬಾರದೆಂದು ಉಪದೇಶಿಸಲಾಗಿದೆ. ಸತ್ಕರ್ಮಗಳಲ್ಲಿ ಮತ್ತು ಅಲ್ಲಾಹನ ಆಜ್ಞೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವುದರಲ್ಲಿ ಪರಸ್ಪರ ಸಹಕರಿಸಬೇಕೆಂದೂ ಅನ್ಯಾಯ ಮತ್ತು ಪಾಪಕರ್ಮ ಮಾಡುವುದರಲ್ಲಿ ಅನ್ಯೋನ್ಯ ಸಹಕರಿಸಬಾರದೆಂದೂ** ಖುರ್‌ಆನ್ ಉಪದೇಶಿಸುತ್ತದೆ.

ಸಹಜವಾಗಿ ಉದ್ಭವಿಸುವ ಒಂದು ಪ್ರಶ್ನೆ ಏನೆಂದರೆ, ಇಸ್ಲಾಮ್ ಆವಶ್ಯಪಡುವ ನ್ಯಾಯಪಾಲನೆಯ ಮಾನದಂಡವೇನು? ಪವಿತ್ರ ಖುರ್‌ಆನ್ ಅಧ್ಯಾಯ 4 ವಚನ 136ರಲ್ಲಿ ಹೀಗೆ ಹೇಳಲಾಗಿದೆ: **ನಿಮ್ಮ ವಿರುದ್ಧ ಅಥವಾ ನಿಮ್ಮ ಮಾತಾಪಿತರ ವಿರುದ್ಧ ಅಥವಾ ನಿಮಗೆ ಪ್ರಿಯರಾದವರ ವಿರುದ್ಧ ಸಾಕ್ಷ್ಯ ಹೇಳಬೇಕಾದ ಆವಶ್ಯಕತೆ ಉಂಟಾದರೂ ನೀವು ಪರಿಪೂರ್ಣವಾದ ನ್ಯಾಯನಿಷ್ಠೆಯಿಂದಲೂ ಸತ್ಯಪೂರ್ಣವಾಗಿಯೂ ಸಾಕ್ಷ್ಯ ಹೇಳಬೇಕು.**

ಶಕ್ತಿಶಾಲಿಗಳಾದ ಶ್ರೀಮಂತ ದೇಶಗಳು ಬಡ ಬಲಹೀನ ದೇಶಗಳ ಹಕ್ಕುಗಳನ್ನು ಅಪಹರಿಸಿ ತಮ್ಮ ಸ್ವಂತ ಹಕ್ಕುಗಳನ್ನು ರಕ್ಷಿಸಬಾರದು ಮತ್ತು ಬಡದೇಶಗಳೊಂದಿಗೆ ಅನ್ಯಾಯದಿಂದ ವರ್ತಿಸಬಾರದು. ಇನ್ನೊಂದು ಕಡೆ ಬಡ ಬಲಹೀನ ದೇಶಗಳು ತಮಗೆ ಸಂದರ್ಭ ಸಿಗುವಾಗ ಶಕ್ತಿಶಾಲಿ ಶ್ರೀಮಂತ ದೇಶಗಳಿಗೆ ಹಾನಿಯನ್ನುಂಟುಮಾಡಲು ಪ್ರಯತ್ನಿಸಬಾರದು. ಎರಡು ಪಕ್ಷಗಳ ದೇಶಗಳು ನ್ಯಾಯಪಾಲನೆಯ ತತ್ವಗಳನ್ನು ಸಂಪೂರ್ಣವಾಗಿ ಪಾಲಿಸುವವರಾಗಬೇಕು. ದೇಶಗಳ ಮಧ್ಯೆ ಶಾಂತಿ ಸಂಬಂಧ ಸ್ಥಾಪಿಸಲು ಇದು ಅತ್ಯಂತ ಮಹತ್ವಪೂರ್ಣವಾದುದಾಗಿದೆ.

ದೇಶಗಳ ಮಧ್ಯೆ ಶಾಂತಿ ಸ್ಥಾಪನೆಗೊಳ್ಳಲು ಆವಶ್ಯಕವಾದ ಇನ್ನೊಂದು ತತ್ವವನ್ನು ಪವಿತ್ರ ಖುರ್‌ಆನ್ ಅಧ್ಯಾಯ 15 ವಚನ 89ರಲ್ಲಿ ವಿವರಿಸಿದೆ. **ಅನ್ಯರ ಸಂಪತ್ತನ್ನು ಅಸೂಯೆಯಿಂದ ದಿಟ್ಟಿಸಿ ನೋಡಬಾರದೆಂದು** ಪವಿತ್ರ ಖುರ್‌ಆನ್ ಈ ವಚನದಲ್ಲಿ ಆದೇಶಿಸಿದೆ. ಆದುದರಿಂದ ಯಾವುದೇ ದೇಶ ಇನ್ನೊಂದು ದೇಶಕ್ಕೆ ಸಹಾಯ ನೀಡುವ ನೆವನದಿಂದ ಅದರ ಸಂಪನ್ಮೂಲಗಳನ್ನು ಅನ್ಯಾಯವಾಗಿ ಅಪಹರಿಸಬಾರದು. ತಾಂತ್ರಿಕ ಸಹಕಾರ ನೀಡುವ ಕಾರಣ ನೀಡಿ ಅನ್ಯ ದೇಶಗಳೊಂದಿಗೆ ಅನ್ಯಾಯದ ವಾಣಿಜ್ಯ ಒಪ್ಪಂದಗಳನ್ನು ಮಾಡಬಾರದು. ಪರಿಣಿತರ ಸೇವೆ ನೀಡುವ ಮೂಲಕ ಅಭಿವೃದ್ಧಿ ಹೊಂದುತ್ತಿರುವ ಅನ್ಯ ದೇಶಗಳ ನೈಸರ್ಗಿಕ ಸಂಪತ್ತನ್ನು ತಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಬಾರದು. ವಿದ್ಯಾಭ್ಯಾಸ ಕಡಿಮೆ ಇರುವ ದೇಶಗಳ ಸರಕಾರಗಳಿಗೆ ಮತ್ತು ಜನರಿಗೆ ಅವರ ನೈಸರ್ಗಿಕ ಸಂಪನ್ಮೂಲಗಳನ್ನು ಸರಿಯಾಗಿ ಬಳಸುವುದು ಹೇಗೆ ಎಂದು ಕಲಿಸಿಕೊಡುವುದು ಸಹ ಆವಶ್ಯಕವಾಗಿದೆ.

ಎಲ್ಲಾ ಜನಾಂಗಗಳು ಮತ್ತು ಸರಕಾರಗಳು ಯಾವಾಗಲೂ ತಮಗಿಂತ ಕಡಿಮೆ ಸಂಪನ್ಮೂಲಗಳನ್ನು ಹೊಂದಿದವರ ಸೇವೆ ಮಾಡಬೇಕು ಮತ್ತು ಸಹಾಯ ಒದಗಿಸಬೇಕು. ಆದರೆ ರಾಷ್ಟ್ರೀಯ ಲಾಭ ಪಡೆಯಲು ಅಥವಾ ಸ್ವಾರ್ಥ ಹಿತಾಸಕ್ತಿಗೋಸ್ಕರ ಈ ನೆರವು ನೀಡಬಾರದು. ಕಳೆದ ಆರು ಅಥವಾ ಏಳು ದಶಕಗಳಲ್ಲಿ ಸಂಯುಕ್ತ ರಾಷ್ಟ್ರ ಸಂಘ ಬಡದೇಶಗಳ ಅಭಿವೃದ್ಧಿಗೋಸ್ಕರ ಅನೇಕ ಕಾರ್ಯ ಯೋಜನೆಗಳನ್ನು ರೂಪಿಸಿದೆ. ಇದಕ್ಕೋಸ್ಕರ ಅಭಿವೃದ್ಧಿ ದೇಶಗಳ ನೈಸರ್ಗಿಕ ಸಂಪನ್ಮೂಲಗಳನ್ನು ಕಂಡು ಹಿಡಿಯಲಾಗಿದೆ. ಆದರೆ ಈ ಎಲ್ಲಾ ಪ್ರಯತ್ನಗಳನ್ನು ಮಾಡಿದ್ದರೂ ಬಡ ದೇಶಗಳಲ್ಲಿ ಒಂದು ಕೂಡ ಅಭಿವೃದ್ಧಿ ಹೊಂದಿದ ದೇಶದ ಹಂತವನ್ನು ತಲಪಲಿಲ್ಲ. ಒಂದು ಕಾರಣ, ಅಭಿವೃದ್ಧಿಶೀಲ ದೇಶಗಳ ಅನೇಕ ಸರಕಾರಗಳ ವಿಶಾಲವಾದ ಭ್ರಷ್ಟತೆಯಾಗಿದೆ. ನಾನು ಖೇದಕರವಾಗಿ ಹೇಳಲು ಬಯಸುವುದೇನೆಂದರೆ, ಅಭಿವೃದ್ಧಿ ಹೊಂದಿದ ದೇಶಗಳು ಇಂತಹ ಭ್ರಷ್ಟ ಸರಕಾರ ಹೊಂದಿದ ದೇಶಗಳೊಂದಿಗೆ ತಮ್ಮ ಸ್ವಾರ್ಥ ಸಾಧನೆಗೋಸ್ಕರ ತಮ್ಮ ಸಂಬಂಧವನ್ನು ಮುಂದುವರಿಸಿವೆ. ವಾಣಿಜ್ಯ ಒಪ್ಪಂದಗಳೂ ಅಂತರ್ರಾಷ್ಟ್ರೀಯ ಸಹಾಯನಿಧಿ ಮೊದಲಾದುವು ಮುಂದುವರಿಯುತ್ತಾ ಇವೆ. ಇದರ ಪರಿಣಾಮವಾಗಿ ಆ ದೇಶಗಳಲ್ಲಿರುವ ಬಡ ಜನರ ನಿರಾಶೆಗಳು ಮತ್ತು ಅಸಮಾಧಾನ ಹೆಚ್ಚುತ್ತಾ ಹೋಗುತ್ತಿವೆ. ಇದರಿಂದ ಆ ದೇಶಗಳೊಳಗೆ ವಿದ್ರೋಹ ಮತ್ತು ಆಂತರಿಕ ಗಲಭೆಗೊಂದಲಗಳು ಮುಂದುವರಿಯುತ್ತಾ ಇವೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಬಡ ಜನತೆ ಎಷ್ಟು ಕಂಗೆಟ್ಟು ಹೋಗಿರುವರೆಂದರೆ, ಅವರು ತಮ್ಮ ದೇಶಗಳ ನಾಯಕರ ವಿರುದ್ಧ ಮಾತ್ರವಲ್ಲ ಮಹಾಶಕ್ತಿ ರಾಷ್ಟ್ರಗಳ ವಿರುದ್ಧ ಸಹ ದಂಗೆ ಎದ್ದಿದ್ದಾರೆ. ಅವರು ತೀವ್ರವಾದ ಗುಂಪುಗಳ ಹಿಡಿತಕ್ಕೊಳಗಾಗಿದ್ದಾರೆ. ತೀವ್ರವಾದಿ ಗುಂಪುಗಳು ಅಸಮಾಧಾನಗೊಂಡ ಜನರ ಮೇಲೆ ಪ್ರಭಾವ ಬೀರಿ ತಮ್ಮ ಗುಂಪಿಗೆ ಸೇರಿಸಿಕೊಂಡು ತಮ್ಮ ದ್ವೇಷಭರಿತ ತತ್ವಗಳನ್ನು ಬೆಂಬಲಿಸುವಂತೆ ಮಾಡಿದ್ದಾರೆ. ಇದರ ಅಂತಿಮ ಪರಿಣಾಮವಾಗಿ ಲೋಕದಲ್ಲಿ ಶಾಂತಿಯು ನಾಶಗೊಳಿಸಲ್ಪಟ್ಟಿದೆ.

ಇಸ್ಲಾಮ್ ಶಾಂತಿ ಸ್ಥಾಪನೆಯ ವಿವಿಧ ಮಾರ್ಗಗಳನ್ನು ನಮ್ಮ ಗಮನಕ್ಕೆ ತಂದಿದೆ. ಅದು ಪರಿಪೂರ್ಣ ನ್ಯಾಯಪಾಲನೆಯನ್ನು ಆವಶ್ಯಪಡುತ್ತದೆ. ಸತ್ಯವಾದ ಸಾಕ್ಷ್ಯ ನೀಡಬೇಕೆಂದು ಅದು ಆವಶ್ಯಪಡುತ್ತದೆ. ಅನ್ಯರ ಸಂಪತ್ತನ್ನು ದಿಟ್ಟಿಸಿ ನೋಡಬಾರದೆಂದು ಅದು ಆವಶ್ಯಪಡುತ್ತದೆ. ಅಭಿವೃದ್ಧಿ ಹೊಂದಿದ ದೇಶಗಳು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಬದಿಗಿರಿಸಬೇಕೆಂದೂ ಕಡಿಮೆ ಅಭಿವೃದ್ಧಿ ಹೊಂದಿದ ದೇಶಗಳಿಗೆ ಸ್ವಾರ್ಥ ರಹಿತವಾಗಿ ನೆರವು ನೀಡಬೇಕೆಂದೂ ಆವಶ್ಯಪಡುತ್ತದೆ. ಈ ಎಲ್ಲಾ ನಿಬಂಧನೆಗಳನ್ನು ಪಾಲಿಸಿದರೆ ನೈಜ ಶಾಂತಿಯು ಸ್ಥಾಪಿತವಾಗುವುದು.

ಈ ಎಲ್ಲಾ ಕ್ರಮಗಳನ್ನು ಕೈಗೊಂಡ ನಂತರ ಸಹ ಯಾವುದಾದರೂ ದೇಶ ಮಿತಿಮೀರಿ ವರ್ತಿಸಿ ಇನ್ನೊಂದು ದೇಶವನ್ನು ಆಕ್ರಮಿಸುವುದಾದರೆ ಮತ್ತು ಅನ್ಯಾಯದಿಂದ ಆ ದೇಶದ ಸಂಪನ್ಮೂಲಗಳನ್ನು ಸ್ವಾಧೀನಪಡಿಸುವುದಾದರೆ ಆಗ ಬೇರೆ ದೇಶಗಳು ಈ ದೌರ್ಜನ್ಯವನ್ನು ತಡೆಗಟ್ಟಲು ಮುಂದಾಗಬೇಕು. ಆದರೆ ಅವು ಯಾವಾಗಲೂ ನ್ಯಾಯಪಾಲನೆ ಮಾಡುವುದು ಆವಶ್ಯಕವಾಗಿದೆ.

ಪವಿತ್ರ ಖುರ್‌ಆನ್ ಅಧ್ಯಾಯ 49 ವಚನ 10ರಲ್ಲಿ ಇದರ ಬಗ್ಗೆ ವಿವರಿಸಲಾಗಿದೆ. **ಎರಡು ದೇಶಗಳು ಪರಸ್ಪರ ಹೋರಾಟಕ್ಕಿಳಿದರೆ ಉಳಿದ ದೇಶಗಳು ಅವುಗಳ ಮಧ್ಯೆ ಮಾತುಕತೆ ನಡೆಸಿ ಅವು ಪರಸ್ಪರ ರಾಜಿಯಾಗುವಂತೆ ಮಾಡಬೇಕು. ಆದರೆ ಒಂದು ಪಕ್ಷದವರು ರಾಜಿ ಪ್ರಸ್ತಾಪಗಳನ್ನು ಅಂಗೀಕರಿಸದೆ ಯುದ್ಧವನ್ನು ಮುಂದುವರಿಸಲು ಬಯಸಿದರೆ ಆಗ ಉಳಿದ ದೇಶಗಳು ಒಟ್ಟಿಗೆ ಸೇರಿ ಆಕ್ರಮಣಗಾರರನ್ನು ತಡೆಯಬೇಕು. ಆಕ್ರಮಣಕಾರಿ ದೇಶವು ಸೋಲಿಸಲ್ಪಟ್ಟು ಪರಸ್ಪರ ಸಂಧಾನಕ್ಕೆ ಸಿದ್ಧವಾದರೆ ಆಗ ಎಲ್ಲಾ ದೇಶಗಳು ಶಾಶ್ವತ ಶಾಂತಿಯನ್ನು ಸ್ಥಾಪಿಸುವಂತಹ ಒಪ್ಪಂದವನ್ನು ಮಾಡಬೇಕು. ಕಠಿಣ ಮತ್ತು ಅನ್ಯಾಯದ ಶರತ್ತುಗಳನ್ನು ವಿಧಿಸಬಾರದು. ಅವುಗಳಿಂದ ಯಾವುದಾದರೂ ದೇಶವು ನಿರ್ಬಂಧಿಸಲ್ಪಡಬಾರದು ಮತ್ತು ಆ ಕಾರಣದಿಂದ ಮುಂದೆ ಅಶಾಂತಿಯು ತಲೆದೋರಿ ಶಾಂತಿಭಂಗ ಉಂಟಾಗಬಹುದು.**

ಎರಡು ರಾಷ್ಟ್ರಗಳ ಮಧ್ಯೆ ಇರುವ ಸಮಸ್ಯೆಯನ್ನು ಬಗೆಹರಿಸಲು ಮೂರನೆಯ ಒಂದು ದೇಶ ಪ್ರಯತ್ನಿಸುವಾಗ ಅದು ನಿಷ್ಪಕ್ಷಪಾತಿಯಾಗಿಯೂ ಪ್ರಾಮಾಣಿಕವಾಗಿಯೂ ವರ್ತಿಸಬೇಕು. ಸಂಘರ್ಷಭರಿತ ಎರಡು ದೇಶಗಳಲ್ಲಿ ಒಂದು, ಮಧ್ಯಸ್ಥ ದೇಶದ ವಿರುದ್ಧ ಹೇಳಿಕೆ ನೀಡಿದರೂ ನಿಷ್ಪಕ್ಷತನದಿಂದ ವರ್ತಿಸಬೇಕು. ಅಂತಹ ಸಂದರ್ಭದಲ್ಲಿ ಮಧ್ಯಸ್ಥಿಕೆ ವಹಿಸುವ ದೇಶ ಕೋಪದಿಂದಲೂ ಪ್ರತೀಕಾರ ಭಾವನೆಯಿಂದಲೂ ಅನುಚಿತವಾಗಿಯೂ ವರ್ತಿಸಬಾರದು. ಪ್ರತಿಯೊಂದು ಪಕ್ಷಕ್ಕೆ ಅದರ ಹಕ್ಕುಗಳನ್ನು ನೀಡಬೇಕು.

ನ್ಯಾಯಪಾಲನೆಯ ಆವಶ್ಯಕತೆ ಏನೆಂದರೆ ರಾಜಿ ಪ್ರಸ್ತಾಪಗಳನ್ನು ನಡೆಸುವ ದೇಶಗಳು ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಈಡೇರಿಸಲು, ಜಗಳ ಮಾಡುವ ಎರಡು ದೇಶಗಳಿಂದಲೂ ಲಾಭ ಪಡೆಯಲು ಪ್ರಯತ್ನಿಸಬಾರದು. ಅವರು ಅನಾವಶ್ಯಕವಾಗಿ ಹಸ್ತಕ್ಷೇಪಮಾಡಬಾರದು

ಅಥವಾ ಅನುಚಿತ ಒತ್ತಡಗಳನ್ನು ಹೇರಬಾರದು. ಯಾವುದೇ ದೇಶದ ನೈಸರ್ಗಿಕ ಸಂಪತ್ತನ್ನು ಅಪಹರಿಸಲು ಪ್ರಯತ್ನಿಸಬಾರದು. ಅನಾವಶ್ಯಕ ಮತ್ತು ಅನುಚಿತ ನಿರ್ಬಂಧಗಳನ್ನು ಹೇರಬಾರದು. ಏಕೆಂದರೆ ಇದು ನ್ಯಾಯಸಮ್ಮತವಲ್ಲ ಮತ್ತು ಅದರಿಂದ ದೇಶಗಳ ಮಧ್ಯೆ ಸಂಬಂಧವು ಉತ್ತಮ ಹೊಂದಲಾರದು.

ಸಮಯದ ಕೊರತೆಯ ಕಾರಣ ನಾನು ಈ ಅಂಶಗಳನ್ನು ಬಹಳ ಸಂಕ್ಷಿಪ್ತವಾಗಿ ವಿವರಿಸಿದ್ದೇನೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಲೋಕದಲ್ಲಿ ಶಾಂತಿ ಸ್ಥಾಪಿತವಾಗಬೇಕೆಂದು ನಾವು ಬಯಸುವುದಾದರೆ, ನಾವು ನಮ್ಮ ವೈಯುಕ್ತಿಕ ಮತ್ತು ದೇಶೀಯ ಹಿತಾಸಕ್ತಿಗಳನ್ನು ಹೆಚ್ಚು ಉತ್ತಮವಾದುದಕ್ಕೋಸ್ಕರ ಬದಿಗಿರಿಸಬೇಕು. ನಾವು ಪರಸ್ಪರ ಸಂಬಂಧಗಳನ್ನು ಸಂಪೂರ್ಣವಾಗಿ ನ್ಯಾಯನಿಷ್ಠೆಯ ಮೂಲಕ ಸ್ಥಾಪಿಸಬೇಕು. ಹೀಗೆ ಮಾಡದಿದ್ದರೆ ನಿಮ್ಮಲ್ಲಿ ಕೆಲವರು ನನ್ನೊಂದಿಗೆ ಹೀಗೆ ಸಹಮತ ಹೊಂದುವಿರಿ: ಕೆಲವು ದೇಶಗಳು ಪರಸ್ಪರ ಒಗ್ಗೂಡಿ ಸಂಯುಕ್ತ ಸಂಘಟನೆಗಳನ್ನು ರೂಪಿಸುವುವು–ಅಥವಾ ಹಾಗೆ ಸಂಯುಕ್ತ ಸಂಘಟನೆಗಳು ಈಗಾಗಲೇ ರೂಪುಗೊಳ್ಳಲು ತೊಡಗಿವೆ ಎಂದೇ ಹೇಳುವೆನು. ಆದುದರಿಂದ ಲೋಕದಲ್ಲಿ ಅಸ್ತವ್ಯಸ್ತತೆ ಹೆಚ್ಚುತ್ತಾ ಹೋಗುವುದು ಅಸಂಭಾವ್ಯವೇನೂ ಅಲ್ಲ. ಅದರ ಮೂಲಕ ಭಯಾನಕ ನಾಶವು ಸಂಭವಿಸುವುದು. ಇಂತಹ ನಾಶ ಮತ್ತು ಯುದ್ಧದ ಪರಿಣಾಮಗಳು ಖಂಡಿತವಾಗಿಯೂ ಅನೇಕ ಪೀಳಿಗೆಗಳ ತನಕ ವ್ಯಾಪಿಸುವುದು. ಲೋಕದ ಅತ್ಯಂತ ದೊಡ್ಡ ಶಕ್ತಿಶಾಲಿ ರಾಷ್ಟ್ರವಾದ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ನೈಜ ನ್ಯಾಯಪಾಲನೆಯ ಪ್ರಕಾರ ನಾನು ಪ್ರಸ್ತಾಪಿಸಿದ ಉತ್ತಮ ಉದ್ದೇಶದಿಂದ ವರ್ತಿಸಬೇಕು. ಹೀಗೆ ವರ್ತಿಸಿದರೆ ಲೋಕವು ನೀವು ಶಾಂತಿ ಸ್ಥಾಪನೆಗೋಸ್ಕರ ಮಾಡಿದ ಪ್ರಯತ್ನಗಳನ್ನು ಯಾವಾಗಲೂ ಮೆಚ್ಚುಗೆಯಿಂದ ನೆನಪಿಸುವುದು. ಹೀಗೆ ವಾಸ್ತವಿಕವಾಗಿಯೂ ಸಂಭವಿಸಲಿ ಎಂದು ನಾನು ಪ್ರಾರ್ಥಿಸುತ್ತೇನೆ.

ನಿಮಗೆ ಕೃತಜ್ಞತೆಗಳು. ನಿಮಗೆ ಪುನಃ ಕೃತಜ್ಞತೆಗಳು. ನಮ್ಮ ಸಂಪ್ರದಾಯ ಪ್ರಕಾರ ಒಂದು ಕಾರ್ಯಕ್ರಮದ ಕೊನೆಯಲ್ಲಿ ನಾವು ಮೌನ ಪ್ರಾರ್ಥನೆ ಮಾಡುತ್ತೇವೆ. ನಾನು ಮೌನ ಪ್ರಾರ್ಥನೆ ಮಾಡುವೆನು. ಅಹ್ಮದಿಯರು ನನ್ನನ್ನು ಅನುಸರಿಸುವರು. ನಮ್ಮ ಅತಿಥಿಗಳಾದ ನೀವೆಲ್ಲರೂ ನಿಮ್ಮ ಸ್ವಂತ ರೀತಿಯಲ್ಲಿ ಪ್ರಾರ್ಥಿಸಬಹುದು.

**(The Review of Religions,**
**ಸಪ್ಟೆಂಬರ್ 2012 ಸಂಚಿಕೆಯಿಂದ.**
**ಭಾಷಾಂತರ : ಎಮ್. ಉಬೈದುಲ್ಲಾ)**

## Statement about ownership and other particulars about the Newspaper ·Yugarashmi Quarterly

(Form IV See Rule 8)

| | | |
|---|---|---|
| 1. Place of Publication | : | Mangalore |
| 2. Period of its Publication | : | Quarter'y |
| 3. Printer's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 4. Publisher's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 5. Editor's Name | : | Muhammad Yusuf |
| Whether citizen of India | : | Yes |
| Address | : | 10-23-1008/1, 1st Floor , Ansari Road, Bunder, Mangalore - 575 001 |
| 6. Name and address of individuals who own the newspaper and partners or shareholders holding more than one percent of the capital | : | Jamath Ahmadiyya "Darussalam" Near Railway Crossing, Pandeshwar, Mangalore - 575 001 |

I, Muhammad Yusuf hereby declare that the particulars given above are true to the best of my knowledge and belief.

Sd/-

Date : 1-6-2013

**Muhammad Yusuf**

# ಇಸ್ಲಾಮ್ ಭೀಕರವಾದವನ್ನು ಪ್ರೋತ್ಸಾಹಿಸುವುದಿಲ್ಲ

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ V
(ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ಸರ್ವೋನ್ನತ ನೇತಾರ)

ಜರ್ಮನಿಯಲ್ಲಿ 2012 ಜೂನ್ ದಿನಾಂಕ 2 ರಂದು ಅಹ್ಮದಿಯಾ ವಾರ್ಷಿಕ ಸಮ್ಮೇಳನಕ್ಕೆ ಆಗಮಿಸಿದ ಅಹ್ಮದಿಯೇತರ ಗಣ್ಯರನ್ನು ಸಂಬೋಧಿಸಿ ಮಾಡಿದ ಭಾಷಣ. ಜರ್ಮನಿ, ಬಲ್ಗೇರಿಯಾ, ಮೆಸಿಡೋನಿಯಾ, ಅಲ್‌ಬೇನಿಯಾ, ಕೋಸೋವ್ರೋ, ಬೋಸ್ನಿಯಾ ಎಂಡ್ ಮೊಂಟೆನೆಗ್ರೋ, ಫ್ರಾನ್ಸ್, ಇರಾನ್, ಅಫ್‌ಘಾನಿಸ್ತಾನ, ಟ್ಯೂನಿಸ್, ಮೊರಾಕೋ, ಸ್ಪೈನ್, ಪೋಲೇಂಡ್, ಘಾನ, ಇಟಲಿ, ಸಿರಿಯಾ, ಹಂಗೇರಿ, ಐಸ್‌ಲೇಂಡ್ ಮತ್ತು ಮಾಲ್ಟಾ ದೇಶಗಳಿಗೆ ಸೇರಿದ ಆರುನೂರು ಅತಿಥಿಗಳನ್ನು ಸಂಬೋಧಿಸಿ ಈ ಭಾಷಣ ಮಾಡಲಾಗಿದೆ.

ಸಾಂಪ್ರದಾಯಿಕ ಪ್ರಾರ್ಥನೆಗಳ ನಂತರ ಹಝ್ರತ್ ಖಲೀಫ ಹೀಗೆ ಹೇಳಿದರು:

ಹಿಂದಿನ ವರ್ಷಗಳ ಹಾಗೆ ಇಂದು ಸಹ ಜರ್ಮನಿಯ ನಮ್ಮ ಸಂಘಟನೆಯ ವಾರ್ಷಿಕ ಸಮ್ಮೇಳನಕ್ಕೆ ಆಗಮಿಸಿದ ಅಹ್ಮದಿಯೇತರ ಅತಿಥಿಗಳನ್ನು ನಾನು ಸ್ವಾಗತಿಸುತ್ತೇನೆ. ಅಹ್ಮದಿಯೇತರರಾದ ನಮ್ಮ ಸ್ನೇಹಿತರಿಗೋಸ್ಕರ ವ್ಯವಸ್ಥೆಗೊಳಿಸಲಾದ ಈ ಸಭೆಗೆ ಆಗಮಿಸಿದುದಕ್ಕಾಗಿ ನಾನು ನಿಮಗೆ ಕೃತಜ್ಞತೆ ಅರ್ಪಿಸುತ್ತೇನೆ. ನೀವು ಇಲ್ಲಿಗೆ ಆಗಮಿಸಿದುದು ನಿಮಗೆ ಧರ್ಮದ ಬಗ್ಗೆ ಇರುವ ಆಸಕ್ತಿಯನ್ನು ಪ್ರಕಟಿಸುತ್ತದೆ. ಇದು ವಿಶಿಷ್ಟವಾಗಿ ಮೆಚ್ಚಬೇಕಾದುದಾಗಿದೆ. ಏಕೆಂದರೆ ಇಂದಿನ ಕಾಲದಲ್ಲಿ ಲೋಕದಲ್ಲಿ ಧರ್ಮದ ಬಗ್ಗೆ ಆಸಕ್ತಿ ಹೊಂದಿದವರು ಕಡಿಮೆಯಾಗುತ್ತಾ ಇದ್ದಾರೆ. ಜರ್ಮನಿ ದೇಶವು ಕ್ರೈಸ್ತರ ದೇಶವೆಂದು ಗಣಿಸಲ್ಪಡುತ್ತಿದೆ ಮತ್ತು ಬಹುಸಂಖ್ಯಾತರಾದ ಜನರು ತಮ್ಮನ್ನು ಕ್ರೈಸ್ತ ಮತಸ್ಥರೆಂದು ಹೇಳಿಕೊಳ್ಳುತ್ತಾ ಇದ್ದರೂ ಕೆಲವು ಅಂಕಿ ಅಂಶಗಳ ಪ್ರಕಾರ ಅಂದಾಜು ಶೇಕಡಾ 13ರಷ್ಟು ಜನರು ಮಾತ್ರ ನಿಯತವಾಗಿ ಚರ್ಚ್‌ಗಳಿಗೆ ಹೋಗುತ್ತಾರೆ ಅಥವಾ ಕ್ರೈಸ್ತಧರ್ಮವನ್ನು ಅನುಷ್ಠಿಸುತ್ತಾರೆ. ವಾಸ್ತವಿಕವಾಗಿ ಈ ಸಂಖ್ಯೆ ಕೂಡ ಕ್ರಮೇಣ ಕುಗ್ಗುತ್ತಾ ಹೋಗುತ್ತಿದೆ. ಆದುದರಿಂದ ಧರ್ಮದ ಬಗ್ಗೆ ಆಸಕ್ತಿ ಬಹಳ ಕಡಿಮೆ ಇದೆ ಎಂದು ಸ್ಪಷ್ಟವಾಗುತ್ತಿದೆ. ಇಂದು ಲೋಕದಲ್ಲಿ ದೇವನ ಅಸ್ತಿತ್ವದ ಬಗ್ಗೆ ನಂಬಿಕೆ ಇಲ್ಲದವರು ಬಹಳ ದೊಡ್ಡ ಸಂಖ್ಯೆಯಲ್ಲಿದ್ದಾರೆ. ಅವರು ದೇವನ ಅಸ್ತಿತ್ವವನ್ನೇ ತಿರಸ್ಕರಿಸುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ನೀವು ಪೂರ್ಣವಾಗಿ ಧಾರ್ಮಿಕವಾಗಿರುವ ಸಮಾರಂಭಕ್ಕೆ ಆಗಮಿಸಿ ಇಸ್ಲಾಮ್ ಧರ್ಮದ ಬಗ್ಗೆ ತಿಳಿಯಲು ಪ್ರಯತ್ನಿಸುತ್ತಿರುವುದು ನೀವು ಧರ್ಮದ ಬಗ್ಗೆ ಹೊಂದಿರುವ ಆಸಕ್ತಿಯನ್ನು ಮಾತ್ರವಲ್ಲ, ನಿಮ್ಮ ಸೌಹಾರ್ದ ಭಾವನೆಯನ್ನೂ ನಿಮ್ಮ ವಿಶಾಲ ಹೃದಯವನ್ನೂ ಬಹಿರಂಗಪಡಿಸುತ್ತದೆ. ಈ ಪ್ರಾಸ್ತಾವಿಕ ಮಾತುಗಳ ನಂತರ ನಾನು ನನ್ನ ಭಾಷಣದ ಮುಖ್ಯ ವಿಷಯವಾದ ಇಸ್ಲಾಮಿನ ನೈಜ ತತ್ವಗಳ ಬಗ್ಗೆ ಪ್ರಸ್ತಾಪಿಸುವೆನು.

ನೀವು, ನಿಮ್ಮ ಅಹ್ಮದಿ ಸ್ನೇಹಿತರಿಂದ ನಮ್ಮ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಸ್ಲಾಮಿನ ಒಂದು ಪಂಗಡವೆಂದು ತಿಳಿದಿರಬಹುದು. ನಾವು ನಂಬುವುದೇನೆಂದರೆ, ಒಂದು ಧರ್ಮವನ್ನು ದೇವನಿಂದ ನೇಮಿಸಲ್ಪಟ್ಟ ಪ್ರವಾದಿ ಸ್ಥಾಪಿಸಿದ ನಂತರ ಕಾಲವು ದಾಟಿ ಹೋದ ಹಾಗೆ ಧಾರ್ಮಿಕ ಅನುಷ್ಠಾನದಲ್ಲಿ ಅವನತಿಯು ಪ್ರಾರಂಭವಾಗುತ್ತದೆ. ಈ ರೀತಿ ಧರ್ಮದ ಬಹುಸಂಖ್ಯಾತ ಜನರು ಧರ್ಮದ ಮೂಲ ತತ್ವಗಳಿಂದ ದೂರ ಸರಿದು ಹೋಗಲು ತೊಡಗುತ್ತಾರೆ. ಈ ನೈತಿಕ ಅಧಃಪತನವನ್ನು ವೀಕ್ಷಿಸುವ ಸರ್ವಶಕ್ತನಾದ ದೇವನು ಇದನ್ನು ತಡೆಗಟ್ಟಲು ತಾನು ಆಯ್ಕೆ ಮಾಡಿದ ತನ್ನ ಪ್ರತಿನಿಧಿಯನ್ನು ಮಾನವರಿಗೆ ಮಾರ್ಗದರ್ಶಕನನ್ನಾಗಿ ಮಾಡಿ ಕಳುಹಿಸುವುದು ದೇವನ ನಡೆವಳಿಕೆ ಯಾಗಿದೆ. ದೇವನಿಂದ ಆಯ್ಕೆ ಮಾಡಲಾದ ಮಹಾನುಭಾವರು ಒಂದು ಹೊಸ ಮತ್ತು ಪರಿಷ್ಕರಿಸಿದ ನಿಯಮಸಂಹಿತೆ ತರುತ್ತಾರೆ ಅಥವಾ ತನಗೆ ಹಿಂದೆ ಆಗಮಿಸಿದ ಪ್ರವಾದಿ ತಂದ ತತ್ವೋಪದೇಶಗಳನ್ನು ಪುನಶ್ಚೇತನಗೊಳಿಸಿ ಪುನಃ ಸ್ಥಾಪಿಸುತ್ತಾರೆ. ಒಂದು ಮುಖ್ಯ ಉದಾಹರಣೆ, ಪ್ರವಾದಿ ಮೋಶೆ(ಅ) ಅವರ ನಂತರ ಅಂದಾಜು 1400 ವರ್ಷಗಳ ನಂತರ ಪ್ರವಾದಿ ಯೇಸು(ಅ) ದೇವನಿಂದ ಕಳುಹಿಸಲ್ಪಟ್ಟರು. ಪ್ರವಾದಿ ಈಸಾ ಮಸೀಹರು(ಅ) ಮೂಸಾ ಪ್ರವಾದಿಯ(ಅ) ನೈಜ ಮತ್ತು ಪರಿಶುದ್ಧ ತತ್ವಗಳನ್ನು ಉಪದೇಶಿಸಿ ದಾರಿ ತಪ್ಪಿ ಹೋದ ಜನರಿಗೆ ಮಾರ್ಗದರ್ಶನ ನೀಡಿದರು.

ಇದು ಯಾವಾಗಲೂ ದೇವನು ಜಾರಿಗೊಳಿಸಿದ ತನ್ನ ನಡೆವಳಿಕೆಯಾಗಿದೆ. ದೇವನು ಇದನ್ನು ಕೊನೆಗೊಳಿಸಿಲ್ಲ. ವಾಸ್ತವಿಕವಾಗಿ ನಾವು ನಂಬುವುದೇನೆಂದರೆ, ಮನುಷ್ಯರು ಒಂದು ಪರಿಪೂರ್ಣ ಧಾರ್ಮಿಕ ನಿಯಮ ಸಂಹಿತೆಯನ್ನು ಅಂಗೀಕರಿಸಲು ಮತ್ತು ಮನವರಿಕೆ ಮಾಡಿಕೊಳ್ಳಲು ಶಕ್ತರಾಗಿರುವಂತಹ ಪ್ರಜ್ಞೆಯನ್ನು ಗಳಿಸಿರುವರೆಂದು ನಿರ್ಧರಿಸಿದಾಗ ಅಲ್ಲಾಹನು ಪವಿತ್ರ ಪ್ರವಾದಿ ಮುಹಮ್ಮದ್‌ರನ್ನು(ಸ) ಪವಿತ್ರ ಖುರ್‌ಆನ್ ಎಂಬ ಪರಿಪೂರ್ಣ ನಿಯಮ ಸಂಹಿತೆಯೊಂದಿಗೆ ಕಳುಹಿಸಿದನು. ಪವಿತ್ರ ಖುರ್‌ಆನ್ ತನ್ನ ಉಪದೇಶಗಳೊಂದಿಗೆ ಧರ್ಮವು ತನ್ನ ಪರಿಪೂರ್ಣತೆಯ ಶಿಖರವನ್ನು ತಲಪಿದೆ ಎಂದು ಸ್ವತಃ ಪ್ರಸ್ತಾಪಿಸಿದೆ. ಪವಿತ್ರ ಖುರ್‌ಆನ್ ಅಧ್ಯಾಯ 15 ವಚನ 10ರಲ್ಲಿ ಸರ್ವಶಕ್ತನಾದ ಅಲ್ಲಾಹನು ಹೀಗೆ ಹೇಳಿದ್ದಾನೆ:

"ದಿಟವಾಗಿಯೂ ನಾವೇ ಈ ಉಪದೇಶವನ್ನು ಅವತೀರ್ಣ ಗೊಳಿಸಿದ್ದು; ಖಂಡಿತವಾಗಿಯೂ ನಾವೇ ಅದನ್ನು ಸಂರಕ್ಷಿಸುವೆವು."

ಈ ವಾಗ್ದಾನ ಈಡೇರಿದೆ. ಪವಿತ್ರ ಖುರ್‌ಆನ್ 1400 ವರ್ಷಗಳ ಹಿಂದೆ ಹೇಗೆ ಇದ್ದಿತೋ ಹಾಗೆಯೇ ಈಗಲೂ ಅದರ ಮೂಲವಚನಗಳು ಸಂರಕ್ಷಿಸಲ್ಪಟ್ಟಿವೆ. ಪುಣ್ಯ ಪ್ರವಾದಿ ಮುಹಮ್ಮದರಿಗೆ(ಸ) ಅವತೀರ್ಣವಾದ ನೈಜ ವಚನಗಳೇ ಈಗಲೂ ಸಹ ಪವಿತ್ರ ಖುರ್‌ಆನ್‌ನಲ್ಲಿ ಸಂರಕ್ಷಿಸಲ್ಪಟ್ಟಿವೆ. ಪವಿತ್ರ ಖುರ್‌ಆನ್ ದೇವವಚನಗಳಾಗಿ ಸಂರಕ್ಷಿಸಲ್ಪಟ್ಟದ್ದು ಹೇಗೆಂದರೆ ಪವಿತ್ರ ಖುರ್‌ಆನಿನ ಯಾವುದಾದರೂ ಒಂದು ಭಾಗ ಅವತೀರ್ಣ ಗೊಂಡಾಗ ಪ್ರವಾದಿ(ಸ) ಅದನ್ನು ತನ್ನ ಶಿಷ್ಯರಿಗೆ ಪಠಿಸಿ ಹೇಳುತ್ತಿದ್ದರು. ಶಿಷ್ಯರು ಅದನ್ನು ಪರಿಪೂರ್ಣವಾಗಿ ನೆನಪಿನಲ್ಲಿರಿಸುತ್ತಿದ್ದರಲ್ಲದೆ ಅವತೀರ್ಣಗೊಂಡ ರೀತಿಯಲ್ಲಿ ಬರೆದಿಡುತ್ತಿದ್ದರು.



ಯಾವುದೇ ವಿದ್ವಾಂಸ, ಮಹಾಪುರುಷ ಅಥವಾ ಸುಧಾರಕ ಪವಿತ್ರ ಖುರ್‌ಆನಿನ ಮೂಲ ಪಾಠದಲ್ಲಿ ಹಸ್ತಕ್ಷೇಪ ಮಾಡಲು ಇಚ್ಛಿಸಲಿಲ್ಲ ಮತ್ತು ಧೈರ್ಯ ತೋರಿಸಲೂ ಇಲ್ಲ. ಹೀಗಿದ್ದರೂ ದುರದೃಷ್ಟಕರವಾಗಿ ಕೆಲವು ವಿಮರ್ಶಕರು ಪವಿತ್ರ ಖುರ್‌ಆನಿನ ಅಧಿಕೃತತೆಯನ್ನು ಪ್ರಶ್ನಿಸುತ್ತಾರೆ. ಒಂದು ಪುಸ್ತಕ ಇತ್ತೇಚೆಗೆ ಪ್ರಕಟವಾಗಿದೆ. ಅವರಲ್ಲಿ ಹೀಗೆ ಹೇಳಲಾಗಿದೆ: ಮುಸ್ಲಿಮರು ಒಗ್ಗೂಡಿ ಪವಿತ್ರ ಖುರ್‌ಆನಿನ "ಪರಿಪೂರ್ಣ ರೂಪವನ್ನು" ತೀರ್ಮಾನಿಸಿದುದು 1924ರಲ್ಲಿ ಮಾತ್ರ ವಾಗಿದೆ. ಇದು ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ವಿರುದ್ಧ ಮಾಡಲಾಗುವ ಅತ್ಯಂತ ಸುಳ್ಳು ಪ್ರಚಾರವಾಗಿದೆ. ಲೋಕದಲ್ಲಿ ಅನೇಕ ಹಳೆಯ ಮತ್ತು ಚೆನ್ನಾಗಿ ಸ್ಥಾಪಿತವಾದ ಗ್ರಂಥಾಲಯಗಳಲ್ಲಿ ನೂರಾರು ವರ್ಷಗಳ ಹಿಂದಿನ ಪವಿತ್ರ ಖುರ್‌ಆನಿನ ಮೂಲ ಪಾಠಗಳನ್ನು ಕಾಣಬಹುದಾಗಿದೆ. ಆ ಪ್ರತಿಗಳೊಂದಿಗೆ ಇಂದಿನ ಪವಿತ್ರ ಖುರ್‌ಆನ್ ಪ್ರತಿಗಳನ್ನು ಹೋಲಿಸಿ ನೋಡಿದರೆ ಒಂದು ಚಿಕ್ಕ ಚುಕ್ಕಿ ಅಥವಾ ಅಕ್ಷರ ಬದಲಾಯಿಸಲ್ಪಟ್ಟದ್ದನ್ನು ಕಾಣಲಾರಿರಿ. ಪವಿತ್ರ ಖುರ್‌ಆನ್ ಈಗ ಸಹ ತನ್ನ ಮೂಲ ರೂಪದಲ್ಲಿರುವ ಬಗ್ಗೆ. ಅನೇಕ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞರು (Orientalists) ಮತ್ತು ಚರಿತ್ರೆಗಾರರು ಬಹಿರಂಗವಾಗಿ ಬರೆದು ಅಂಗೀಕರಿಸಿದ್ದಾರೆ. ಪವಿತ್ರ ಖುರ್‌ಆನ್ ಮೂಲದಲ್ಲಿ ಹೇಗಿತ್ತೋ ಹಾಗೆಯೇ ಈಗಲೂ ಸಂಪೂರ್ಣವಾಗಿ ಸಂರಕ್ಷಿಸಲ್ಪಟ್ಟಿರುವುದು ಅದರ ಅತ್ಯಂತ ಮಹತ್ವಪೂರ್ಣವಾದ ವೈಶಿಷ್ಟ್ಯ ವಾಗಿದೆ. ಅಲ್ಲಾಹನು ಸ್ವತಃ ಅದನ್ನು ಸಂರಕ್ಷಿಸುವುದಾಗಿ ವಾಗ್ದಾನ ನೀಡಿರುವುದರಿಂದ ಅದರಲ್ಲಿ ಅಡಕವಾದ ಸತ್ಯಪೂರ್ಣವಾದ ನೈಜ ತತ್ವಗಳು ಯಾವಾಗಲೂ ಮೇಲುಗೈ ಪಡೆಯುವುದೆಂದೂ ರಕ್ಷಿಸಲ್ಪಡುವು ದೆಂದೂ ಸ್ಪಷ್ಟವಾಗುತ್ತದೆ. ಇದರಿಂದ ತಿಳಿದು ಬರುವುದೇನೆಂದರೆ ಪವಿತ್ರ ಖುರ್‌ಆನಿನ ತತ್ವಗಳನ್ನು ದುರ್ವ್ಯಾಖ್ಯಾನ ಗೊಳಿಸಿ ಅವುಗಳನ್ನು ಸಂದರ್ಭಕ್ಕೆ ವಿರುದ್ಧವಾಗಿ ತಪ್ಪಾಗಿ ಜನರ ಮುಂದಿರಿಸುವಾಗ ಅಲ್ಲಾಹನು ತನ್ನ ಪ್ರತಿನಿಧಿಯನ್ನು ಲೋಕಕ್ಕೆ ಕಳುಹಿಸಿ ಪವಿತ್ರ ಖುರ್‌ಆನಿನ ನೈಜವೂ ಸುಂದರವೂ ಆದ ತತ್ವಗಳನ್ನೂ ಅರ್ಥಗಳನ್ನೂ ಲೋಕದ ಜನರಿಗೆ ವಿವರಿಸಿ ಕೊಡುವನು.

ನಾನು ಇದರ ಮೊದಲು ಹೇಳಿದ ಹಾಗೆ ಪ್ರತಿಯೊಂದು ಧರ್ಮ, ಕಾಲ ದಾಟಿ ಹೋದಾಗ ಅವನತಿ ಹೊಂದುತ್ತದೆ ಎಂದೂ ಅದರ ಅನುಯಾಯಿಗಳು ಮೂಲ ವಿಶ್ವಾಸದಿಂದ ದೂರ ಸರಿದು ಹೋಗುತ್ತಾರೆಂದೂ ನಾವು ನಂಬುತ್ತೇವೆ. ಮಹಾನ್ ಪ್ರವಾದಿ ಮುಹಮ್ಮದ್[ಸ] ಸಹ ಇಸ್ಲಾಮ್ ಅಧಃಪತನ ಹೊಂದುವ ಬಗ್ಗೆ ಭವಿಷ್ಯ ನುಡಿದಿದ್ದರು. ಅವರು ಹೀಗೆ ಹೇಳಿದ್ದರು: ಒಂದು ಕಾಲಘಟ್ಟ ಮುಂದೆ ಹೇಗಿರುವುದೆಂದರೆ, ಆಗ ಮುಸ್ಲಿಮ್ ಮತಪಂಡಿತರೆಂದು ಹೇಳಿಕೊಳ್ಳುವವರು ಇಸ್ಲಾಮ್ ಧರ್ಮದ ಸತ್ಯ ತತ್ವಗಳಿಗೆ ವಿರುದ್ಧವಾದ ನಿಲುವನ್ನು ಹೊಂದಿದ ಕೀಳು ಜನರಾಗುವರು. ಅಂತಹ ಜನರು ಧರ್ಮತತ್ವಗಳ ಮೇಲೆ ತಮ್ಮ ಸ್ವಾರ್ಥ ಹಿತಾಸಕ್ತಿಗಳಿಗೆ ಆದ್ಯತೆ ನೀಡುವರು.

ಪ್ರವಾದಿ[ಸ] ಹೀಗೆ ಸಹ ಹೇಳಿದ್ದರು: ಅಂತಹ ಸಮಯದಲ್ಲಿ ಪವಿತ್ರ ಖುರ್‌ಆನಿನ ಶಬ್ದಾಕ್ಷರಗಳು ಯಾವುದೇ ಬದಲಾವಣೆ ಹೊಂದದೆ ಇದ್ದರೂ ಪವಿತ್ರ ಖುರ್‌ಆನನ್ನು ಸರಿಯಾಗಿ ಅರ್ಥ ಮಾಡಿ ಅನುಷ್ಠಾನಕ್ಕೆ ತರುವವರು ಬಹಳ ಕಡಿಮೆ ಸಂಖ್ಯೆಯಲ್ಲಿ ಇರುವರು. ಅಂತಹ ಕಾಲದ ಮಸ್‌ಜಿದ್‌ಗಳು ದೇವನ ನಿಷ್ಠಾಪೂರ್ಣ ಆರಾಧನೆ ಎಂಬ ಮೂಲ ಉದ್ದೇಶವನ್ನು ಈಡೇರಿಸಲಾರವು. ಅಂತಹ ಕಾಲಘಟ್ಟದಲ್ಲಿ, ಮೂಸಾ ಪ್ರವಾದಿಯ[ಅ] ಅನುಯಾಯಿಗಳಿಗೆ ಒಬ್ಬ ಮಸೀಹರನ್ನು ಅಲ್ಲಾಹನು ಕಳುಹಿಸಿದ ಹಾಗೆಯೇ ಪವಿತ್ರ ಪ್ರವಾದಿ ಮುಹಮ್ಮದರ[ಸ] ಸಮುಯದಾಯದಲ್ಲೂ ಒಬ್ಬ ಮಸೀಹರನ್ನು, ಮುಸ್ಲಿಮರನ್ನು ಸುಧಾರಣೆ ಮಾಡಲು ಮತ್ತು ಮುಸ್ಲಿಮೇತರರಿಗೆ ಇಸ್ಲಾಮಿನ ನೈಜ ತತ್ವಗಳನ್ನು ತಿಳಿಸಿಕೊಡಲು ಮಾತ್ರವಲ್ಲ, ಮುಸ್ಲಿಮರನ್ನು ಇಸ್ಲಾಮಿನ ನೈಜ ತತ್ವಗಳ ಕಡೆಗೆ ಮಾರ್ಗದರ್ಶನ ನೀಡಲು ಅಲ್ಲಾಹನು ಕಳುಹಿಸುವನು. ವಾಗ್ದತ್ತ ಮಸೀಹರು ಇಸ್ಲಾಮಿನ ನೈಜ ತತ್ವಗಳನ್ನೂ ಪವಿತ್ರ ಖುರ್‌ಆನಿನ ಅರ್ಥಗಳನ್ನೂ ಕಲಿಸಿ ಇಸ್ಲಾಮಿನ ವಿಭಿನ್ನ ಪಂಗಡಗಳನ್ನು ಒಗ್ಗೂಡಿಸಲು ಪ್ರಯತ್ನಿಸುವರು. ಈ ರೀತಿ ಅವರ ಆಗಮನದ ಉದ್ದೇಶ ನೈಜ ಇಸ್ಲಾಮನ್ನು ಲೋಕದಲ್ಲಿ ಸ್ಥಾಪಿಸಿ ಲೋಕವನ್ನು ಶಾಂತಿ, ಪ್ರೀತಿ ಮತ್ತು ಸಹಾನುಭೂತಿಯ ಧಾಮವನ್ನಾಗಿ ಮಾಡುವುದಾಗಿದೆ.

ನಾನು ಮೊದಲು ಹೇಳಿದಂತೆ, ಒಂದು ಪರಿಪೂರ್ಣ ಸಂದೇಶವನ್ನು ಮನವರಿಕೆ ಮಾಡಿಕೊಂಡು ಅನುಷ್ಠಾನಕ್ಕೆ ತರಲು ಮಾನವರು ಸಾಕಷ್ಟು ಉನ್ನತ ಬೆಳವಣಿಗೆಯ ಮಟ್ಟವನ್ನು ತಲಪಿ ಅವರು ಪ್ರಗತಿಯ ಉನ್ನತ ಶಿಖರವನ್ನು ತಲಪಿದಾಗ ಪರಿಪೂರ್ಣ ತತ್ವೋಪದೇಶಗಳನ್ನು ನೀಡಬಲ್ಲ ಒಬ್ಬ ಪ್ರವಾದಿಯನ್ನು ಅಲ್ಲಾಹನು ಕಳುಹಿಸಿದನು. ಸರ್ವಶಕ್ತನಾದ ಅಲ್ಲಾಹನು ಮಹಾನ್ ಪ್ರವಾದಿ ಮುಹಮ್ಮದರನ್ನು[ಸ] ಸಕಲ ಲೋಕಗಳಿಗೂ ಸಂದೇಶವಾಹಕನಾಗಿ ನೇಮಿಸಿ ಅವರಿಗೆ ಪವಿತ್ರ ಖುರ್‌ಆನನ್ನು ಅವತೀರ್ಣಗೊಳಿಸಿದನು. ಪುಣ್ಯ ಪ್ರವಾದಿಯನ್ನು ಸಂಬೋಧಿಸಿ ಅಲ್ಲಾಹನು ಹೀಗೆ ಹೇಳಿದನು:

"(ಓ ಪ್ರವಾದಿ) ಹೇಳು: 'ಓ ಮನುಷ್ಯರೇ, ದಿಟವಾಗಿಯೂ ನಾನು ನಿಮ್ಮೆಲ್ಲರೆಡೆಗೆ ಅಲ್ಲಾಹನ ಸಂದೇಶವಾಹಕನಾಗಿ ನಿಯೋಜಿತ ನಾಗಿದ್ದೇನೆ.' " (ಪವಿತ್ರ ಖುರ್‌ಆನ್ 7:159)

ಇನ್ನೊಂದು ವಚನದಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

"ಲೋಕದ ಎಲ್ಲಾ ಜನರಿಗೆ ಒಂದು ಅನುಗ್ರಹವಾಗಿಯೇ ನಾವು ನಿನ್ನನ್ನು ಕಳುಹಿಸಿದ್ದೇವೆ." (ಪವಿತ್ರ ಖುರ್‌ಆನ್ 21:108)

ಲೋಕದ ಎಲ್ಲಾ ಜನರಿಗೆ ಒಂದು ಅನುಗ್ರಹವಾಗಿ ಕಳುಹಿಸಲ್ಪಟ್ಟ ವ್ಯಕ್ತಿ ಮತ್ತು ಅವರ ಅನುಯಾಯಿಗಳು ಲೋಕದ ಯಾರಿಗೂ ಹಾನಿಯನ್ನುಂಟುಮಾಡುವವರೂ ಕಷ್ಟ ನೀಡುವವರೂ ಆಗಲಾರರು ಎನ್ನುವುದು ಸಹಜ ಸತ್ಯವೇ ಆಗಿರುತ್ತದೆ. ಈ ವಿಷಯಕ್ಕೆ ಸಂಬಂಧಿಸಿ ಕೆಲವು ಸಾರಿ ಕೇಳಲಾಗುವ ಪ್ರಶ್ನೆ ಹೀಗಿದೆ: ಪವಿತ್ರ ಪ್ರವಾದಿ ವಾಸ್ತವಿಕವಾಗಿಯೂ ಲೋಕದ ಎಲ್ಲಾ ಜನರಿಗೆ ಒಂದು ಅನುಗ್ರಹವಾಗಿದ್ದರೆ ಮತ್ತು ಇಸ್ಲಾಂ ಭೀಕರವಾದವನ್ನು ಉಪದೇಶಿಸುತ್ತಾ ಇಲ್ಲವಾದರೆ ಇಸ್ಲಾಮಿನ ಪ್ರಾರಂಭದ ಕಾಲಘಟ್ಟದಲ್ಲೂ ಬೇರೆ ಕಾಲಘಟ್ಟಗಳಲ್ಲೂ ಯುದ್ಧಗಳು ನಡೆದುದಾದರೂ ಏಕೆ? ಇಸ್ಲಾಮ್ ಶಾಂತಿಯ ಉಪದೇಶ ನೀಡುವ ಧರ್ಮವಾಗಿದ್ದರೆ ಇಂದು ಲೋಕದಲ್ಲಿ ತಥಾಕಥಿತ ಮುಸ್ಲಿಮ್ ಭೀಕರವಾದಿಗಳು ಮತ್ತು ಇತರ ತೀವ್ರವಾದಿಗಳು ಹೆಚ್ಚು ಹೆಚ್ಚಾಗಿ ಕ್ರೂರಿಗಳಾಗುತ್ತಾ ಇರುವುದಾದರೂ ಏಕೆ? ಅವರು ತಮ್ಮ ಕೃತ್ಯಗಳನ್ನು ಮತ್ತು ನಿಲುವನ್ನು ಇಸ್ಲಾಮ್ ಧರ್ಮ ಮತ್ತು ಪವಿತ್ರ ಖುರ್‌ಆನಿನ ಆಧಾರ ನೀಡಿ ಸಮರ್ಥಿಸಿಕೊಳ್ಳುವುದಾದರೂ ಹೇಗೆ?

ಈ ಪ್ರಶ್ನೆಗಳಿಗೆ ಉತ್ತರ ನೀಡಲು ನಾವು ಇಸ್ಲಾಮಿನ ಆದಿಕಾಲೀನ ಚರಿತ್ರೆಯನ್ನು ಮನವರಿಕೆ ಮಾಡಿಕೊಳ್ಳುವುದು ಆವಶ್ಯಕವಾಗಿದೆ. ಪೂರ್ವಗ್ರಹ ಪೀಡಿತ ಅನ್ಯಾಯಗಾರರಾದ ಚರಿತ್ರೆಗಾರರು ಪವಿತ್ರ ಪ್ರವಾದಿಯವರ ನಂತರ ನೂರಾರು ವರ್ಷಗಳು ಕಳೆದ ನಂತರ ಕಾಣಿಸಿಕೊಂಡು ನೀಡಿದ ಸಾಕ್ಷ್ಯಗಳನ್ನು ಉಪಯೋಗಿಸಬಾರದು. ಇಂತಹ ಚರಿತ್ರೆಗಳನ್ನು ಬಿಟ್ಟು ಇಸ್ಲಾಮಿಗೆ ಸಂಬಂಧಿಸಿ ಮೂಲ ಸಾಕ್ಷ್ಯಾಧಾರಗಳನ್ನು ಬಳಸಿದ ಮುಸ್ಲಿಮ್ ಚರಿತ್ರೆಗಾರರ ಗ್ರಂಥಗಳನ್ನು ವಿಶ್ಲೇಷಿಸಿ ಉಪಯೋಗಿಸಬೇಕು. ಇಂತಹ ಚರಿತ್ರೆಗಾರರು ರಚಿಸಿದ ಚರಿತ್ರೆಯ ಗ್ರಂಥಗಳನ್ನು ಅನಂತರದ ನಿಷ್ಪಕ್ಷಮತಿಗಳಾದ ಲೇಖಕರು ಪರಾಂಬರಿಸಿ ಅವುಗಳನ್ನು ಬೆಂಬಲಿಸಿ ಬರೆದಿದ್ದಾರೆ. ಆದುದರಿಂದ ಇಸ್ಲಾಮಿನ ಆರಂಭಕಾಲದ ವಾಸ್ತವಿಕ ಸನ್ನಿವೇಶಗಳನ್ನು ಮನವರಿಕೆ ಮಾಡಿಕೊಳ್ಳಲು ಇಸ್ಲಾಮಿನ ಅಧಿಕೃತವೂ ವಸ್ತುನಿಷ್ಠವೂ ಆದ ಸತ್ಯ ಚರಿತ್ರೆಯನ್ನು ಪರಿಶೀಲಿಸುವುದು ಅತ್ಯಾವಶ್ಯಕವಾಗಿದೆ.

ಇಸ್ಲಾಮಿನ ಬಗ್ಗೆ ಸತ್ಯಸಂಧರಾದ ಚರಿತ್ರೆಯನ್ನು ಅಧ್ಯಯನ ಮಾಡುವಾಗ ನಮಗೆ ಹೀಗೆ ತಿಳಿಯುತ್ತದೆ: ಇಸ್ಲಾಮಿನ ಆರಂಭದ ಕಾಲಘಟ್ಟದಲ್ಲಿ ಅನೇಕ ಮುಸ್ಲಿಮರನ್ನು ಬರ್ಬರತೆಯಿಂದಲೂ ಕ್ರೂರವಾಗಿಯೂ ಥಳಿಸಲಾಯಿತು. ಅವರ ವಿಶ್ವಾಸದ ಕಾರಣದಿಂದ ಹಿಂಸಾಚಾರಗಳಿಗೆ ಗುರಿಪಡಿಸಲಾಯಿತು. ಪುರುಷರನ್ನೂ ಮಹಿಳೆಯರನ್ನೂ ಮಕ್ಕಳನ್ನೂ ಅವಿಶ್ವಾಸಿಗಳು ದಾರುಣ ಹಿಂಸಾಚಾರಗಳಿಗೆ ಗುರಿಪಡಿಸಿದರು. ಕೆಲವು ಮುಸ್ಲಿಮರನ್ನು ಉರಿಯುತ್ತಿರುವ ಕೆಂಡದ ಮೇಲೆ ಮಲಗಿಸಲಾಗುತ್ತಿತ್ತು. ಬೇರೆ ಕೆಲವರನ್ನು ಬಿಸಿಲಿನ ಬೇಗೆಯಿಂದ ಬೆಚ್ಚಗಾದ ಮರಳಿನ ಮೇಲೆ ಮಲಗಿಸಿ ಅವರ ದೇಹದ ಮೇಲೆ ಕಲ್ಲುಗಳನ್ನು ಇರಿಸಲಾಗುತ್ತಿತ್ತು. ಕೆಲವು ಮುಸ್ಲಿಮರ ಕಾಲುಗಳನ್ನು ಇಕ್ಕಡೆಗಳಿಗೆ ಎಳೆದು ಅವರ ದೇಹ ಗಳನ್ನು ಸೀಳಲಾಗುತ್ತಿತ್ತು. ಪವಿತ್ರ ಪ್ರವಾದಿ ಮತ್ತು ಅವರ ಕುಟುಂಬ ಹಾಗೂ ಶಿಷ್ಯರನ್ನು ಒಂದು ಕಣಿವೆ ಪ್ರದೇಶದಲ್ಲಿ ಎರಡೂವರೆ ವರ್ಷಗಳ ಕಾಲ ಇರಿಸಿ ಅವರಿಗೆ ಮಕ್ಕದವರೊಂದಿಗೆ ಸಂಪರ್ಕವನ್ನು ಕಡಿದಿರಿಸಲಾಯಿತು. ಅಲ್ಲಿ ಅವರಿಗೆ ಆಹಾರ, ನೀರು ಮತ್ತಿತರ ಸಾಮಗ್ರಿಗಳು ದೊರಕದಾಯಿತು. ಅವರು ಅನೇಕ ದಿನ ಹಸಿವೆಯಿಂದಲೂ ಬಾಯಾರಿಕೆಯಿಂದಲೂ ಬಳಲುತ್ತಿದ್ದರು. ಆಗ ಮುಸ್ಲಿಮ್ ಮಕ್ಕಳು ನಿರಂತರವಾಗಿ ಅಳುತ್ತಾ ತಮ್ಮ ಕಷ್ಟವನ್ನು ಬಹಿರಂಗಪಡಿಸುತ್ತಾ ಇದ್ದರು. ಹೀಗಿದ್ದರೂ ಅವಿಶ್ವಾಸಿಗಳು ಅವರ ಬಗ್ಗೆ ಯಾವುದೇ ರೀತಿಯ ಅನುಕಂಪ ಹೊಂದಲಿಲ್ಲ. ಇಂತಹ ಹಿಂಸಾಚಾರಗಳಿಗೆ ಗುರಿಯಾದ ಮುಸ್ಲಿಮರು ಕೆಲವು ಸಾರಿ ಅವಿಶ್ವಾಸಿಗಳ ವಿರುದ್ಧ ಸೆಟೆದು ನಿಂತು ಹೋರಾಡಲು ಅನುಮತಿಯನ್ನು ಪವಿತ್ರ ಪ್ರವಾದಿಯವರಿಂದ(ಸ) ಅಪೇಕ್ಷಿಸುತ್ತಿದ್ದರು. ಆದರೆ ಪವಿತ್ರ ಪ್ರವಾದಿ(ಸ) ಅವರಿಗೆ ಅನುಮತಿ ಎಂದೂ ನೀಡದೆ ಸಹನೆಯಿಂದಿರಲು ಉಪದೇಶಿಸುತ್ತಾ ಇದ್ದರು. ಒಬ್ಬನು ತನ್ನ ಪರಿಸ್ಥಿತಿ ನಿರಾಶದಾಯಕವಾಗಿದೆ, ತನಗೆ ಮೃತ್ಯು ಸನ್ನಿಹಿತವಾಗಿದೆ ಎಂದು ತಿಳಿಯುವಾಗ ಅವನು ತನ್ನ ಶತ್ರುವನ್ನು ಎದುರಿಸಿ ಸಾಯಲು ಬಯಸುವುದು ಸಹಜವಾಗಿದೆ. ಹೀಗಿದ್ದರೂ ಪವಿತ್ರ ಪ್ರವಾದಿಯವರು(ಸ) ತನ್ನ ಅನುಯಾಯಿಗಳಿಗೆ ಅವರು ಶತ್ರುಗಳಿಂದ ಅತ್ಯಂತ ಕಷ್ಟಕ್ಕೊಳ ಪಟ್ಟಿದ್ದರೂ ಸಹನೆದೋರಲು ಉಪದೇಶಿಸಿದರು. ಸರ್ವಶಕ್ತನಾದ ದೇವನು ತನಗೆ ಶತ್ರುಗಳ ವಿರುದ್ಧ ಹೋರಾಡಲು ಅನುಮತಿ ನೀಡಿಲ್ಲ; ಆದುದರಿಂದ ಸಹನೆದೋರಬೇಕೆಂದು ಶಿಷ್ಯರಿಗೆ ಪವಿತ್ರ ಪ್ರವಾದಿ(ಸ) ಉಪದೇಶಿಸಿದರು. ಇಟೆಲಿಯ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞೆಯಾಗಿದ್ದ ಲೌರ ವೇಕ್ಯ ವಾಗ್ಲಿಯೇರಿ ಈ ಬಗ್ಗೆ ಹೀಗೆ ಹೇಳಿದ್ದಾರೆ:

"ಖುರೈಶ್‌ಗೋತ್ರದ ಅಪಹಾಸ್ಯಗಳಿಗೂ ಹಿಂಸಾಚಾರಗಳಿಗೂ ಮುಹಮ್ಮದ್ ಪಾತ್ರರಾಗಿದ್ದರು."

ಹಲವಾರು ವರ್ಷಗಳ ಕಾಲ ಹಿಂಸಾಚಾರಗಳಿಗೆ ಗುರಿಯಾದ ಮುಸ್ಲಿಮರಲ್ಲಿ ಬಹುಸಂಖ್ಯಾತ ಜನರು ಮಕ್ಕದಿಂದ ವಲಸೆಹೋದರು. ಅನಂತರ ಸ್ವಲ್ಪ ಸಮಯ ದಾಟಿಹೋದಾಗ ಪವಿತ್ರ ಪ್ರವಾದಿ ಮುಹಮ್ಮದ್(ಸ) ಶಿಷ್ಯರೊಂದಿಗೆ ಮದೀನಕ್ಕೆ ವಲಸೆ ಹೋದರು. ಮಕ್ಕದಿಂದ ಹೊರಟುಹೋದ ನಂತರ ಕೂಡ ಮುಸ್ಲಿಮರು ಶಾಂತಿಯಿಂದ ಜೀವಿಸಲು ಮಕ್ಕದ ಅವಿಶ್ವಾಸಿಗಳು ಬಿಡಲಿಲ್ಲ. ಅಂದಾಜು ಎರಡು ವರ್ಷಗಳ ನಂತರ ಮಕ್ಕದ ಅವಿಶ್ವಾಸಿಗಳು ಮದೀನದ ಕಡೆಗೆ ಹೊರಟು ಮುಸ್ಲಿಮರನ್ನು ದುರಾಕ್ರಮಣ ಮಾಡಲು ತೊಡಗಿದರು. ಅವರು ಎಲ್ಲಾ ಮುಸ್ಲಿಮರನ್ನು ಮತ್ತು ಇಸ್ಲಾಮ್ ಧರ್ಮವನ್ನು ಸಂಪೂರ್ಣವಾಗಿ ನಾಶಮಾಡಲು ಉದ್ದೇಶಿಸಿದ್ದರು. ಅವಿಶ್ವಾಸಿಗಳ ಸೈನ್ಯ ಬಹಳ ದೊಡ್ಡದಾಗಿದ್ದು ಬಿಲ್ಲು ಬಾಣಗಳನ್ನೂ ಇತರ ಆಯುಧಗಳನ್ನೂ ಧಾರಾಳವಾಗಿ ಹೊಂದಿತ್ತು. ಅವರೆದುರಿಗೆ ಅಂದಾಜು 300 ಮುಸ್ಲಿಮರು ಇದ್ದು ಅವರ ಆಯುಧಗಳು ಮತ್ತು ಇತರ ಸಾಮಗ್ರಿಗಳು ಬಹಳ ಕಮ್ಮಿಯಾಗಿದ್ದವು. ಅವಿಶ್ವಾಸಿಗಳ ಮತ್ತು ಮುಸ್ಲಿಮರ ಸಂಪನ್ಮೂಲಗಳ ಮಧ್ಯೆ ಬಹಳ ದೊಡ್ಡ ಅಂತರವಿದ್ದರೂ ಅಲ್ಲಾಹನು ಮುಸ್ಲಿಮರಿಗೆ ಶತ್ರುಗಳನ್ನು ಎದುರಿಸಿ ಪ್ರತಿರೋಧಾತ್ಮಕ ಯುದ್ಧ ನಡೆಸಲು ಮೊದಲ ಬಾರಿ ಅನುಮತಿ ನೀಡಿದನು. ಈ ಅನುಮತಿ ಪವಿತ್ರ ಖುರ್‌ಆನಿನ ಅಧ್ಯಾಯ 22 ವಚನ 40–41ರಲ್ಲಿ ಹೀಗೆ ನೀಡಲಾಗಿದೆ:

**"ಯಾರ ವಿರುದ್ಧ ಯುದ್ಧ ಹೂಡಲಾಗಿದೆಯೋ ಅವರಿಗೆ ಪ್ರತಿ ಯುದ್ಧ ಮಾಡುವ ಅನುಮತಿ ಇದೆ; ಏಕೆಂದರೆ ಅವರು ಆಕ್ರಮಣಕ್ಕೊಳಗಾಗಿದ್ದಾರೆ. ನಿಶ್ಚಯವಾಗಿಯೂ ಅವರಿಗೆ ಸಹಾಯ ನೀಡಲು ಅಲ್ಲಾಹನಿಗೆ ಸಾಮರ್ಥ್ಯವಿದೆ.**

**" 'ಅಲ್ಲಾಹನೇ ನಮ್ಮ ಪ್ರಭು' ಎಂದು ಹೇಳಿದ ಮಾತ್ರಕ್ಕೆ ಅವರನ್ನು ಅನ್ಯಾಯವಾಗಿ ಅವರ ಮನೆಗಳಿಂದ ಹೊರಗೆ ಅಟ್ಟಲಾಯಿತು. ಅಲ್ಲಾಹನು ಅವರಲ್ಲಿ ಕೆಲವರನ್ನು (ಅವರು ಎಸಗುವ ದೌರ್ಜನ್ಯಗಳನ್ನು) ಬೇರೆ ಕೆಲವರ ಮೂಲಕ ತಡೆಯದಿರುತ್ತಿದ್ದರೆ ಸನ್ಯಾಸಿ ಮಠಗಳೂ ಇಗರ್ಜಿಗಳೂ ಯಹೂದಿ ಮಂದಿರಗಳೂ ಮಸ್‌ಜಿದ್‌ಗಳೂ ನಿರ್ನಾಮವಾಗುತ್ತಿದ್ದುವು. ಅವುಗಳಲ್ಲಿ**

**ದೇವನಾಮ ಹೆಚ್ಚು ಹೆಚ್ಚಾಗಿ ಸ್ಮರಿಸಲ್ಪಡುತ್ತದೆ. ತನಗೆ ನೆರವು ನೀಡುವವರಿಗೆ ಅಲ್ಲಾಹನು ಖಂಡಿತವಾಗಿಯೂ ನೆರವಾಗುತ್ತಾನೆ. ನಿಶ್ಚಯವಾಗಿಯೂ ಅಲ್ಲಾಹನು ಸರ್ವಸಮರ್ಥನೂ ಪ್ರತಾಪಶಾಲಿಯೂ ಆಗಿದ್ದಾನೆ."**

ಪವಿತ್ರ ಖುರ್‌ಆನಿನ, ಮೇಲೆ ಉಲ್ಲೇಖಿಸಿದ ವಚನಗಳಿಂದ ಸ್ಪಷ್ಟವಾಗುವುದೇನೆಂದರೆ, ವಿರೋಧಿಗಳ ವಿರುದ್ಧ ಹೋರಾಡಲು ಮುಸ್ಲಿಮರಿಗೆ ಅನುಮತಿ ದೊರೆತದ್ದು ಅತ್ಯಂತ ಕಠಿಣ ಪರಿಸ್ಥಿತಿಯಲ್ಲಾಗಿತ್ತು. ಈ ಅನುಮತಿ ಕೂಡ ಕೆಲವು ಶರತ್ತುಗಳಿಗನುಸಾರವಾಗಿ ನೀಡಲಾಗಿದೆ. ಅಲ್ಲಾಹನು ಮೊದಲನೆಯದಾಗಿ ಹೇಳಿದುದೇನೆಂದರೆ, ಶತ್ರುಗಳ ದೌರ್ಜನ್ಯ ಮಿತಿ ಮೀರಿದೆ ಮತ್ತು ಮುಸ್ಲಿಮರನ್ನು ಅವರ ಮನೆಗಳಿಂದ ಹೊರಗೆ ಅಟ್ಟಲಾಗಿದೆ. ಅವರು ವಲಸೆ ಹೋದ ನಂತರ ಕೂಡ ಅವರನ್ನು ಶಾಂತಿಯಿಂದ ಜೀವಿಸಲು ಬಿಡಲಿಲ್ಲ, ಮುಸ್ಲಿಮರನ್ನು ಸಂಪೂರ್ಣವಾಗಿ ನಾಶಮಾಡಲು ವಿರೋಧಿಗಳು ಅವರನ್ನು ಬೆನ್ನಟ್ಟಿದರು. ಅವರು ಮಾಡಿದ 'ಅಪರಾಧ' ಅವರು ಏಕದೇವನನ್ನು ನಂಬಿ ಅವನನ್ನು ಆರಾಧಿಸಲು ತೊಡಗಿದುದಾಗಿದೆ. ಎರಡನೆಯದಾಗಿ ಈ ವಚನಗಳು ಸ್ಪಷ್ಟಪಡಿಸುವುದೇನೆಂದರೆ, ಈ ಅನುಮತಿ ನೀಡಿದುದು ಮುಸ್ಲಿಮರನ್ನು ಸಂರಕ್ಷಿಸಲು ಮಾತ್ರವಲ್ಲ, ಇತರ ಎಲ್ಲಾ ಧರ್ಮಗಳ ಅನುಯಾಯಿಗಳನ್ನು ಸಹ ಸಂರಕ್ಷಿಸಿ ಅವರಿಗೆ ಭದ್ರತೆ ನೀಡಲಿಕ್ಕಾಗಿದೆ.

ಚರಿತ್ರೆ ನಮಗೆ ತಿಳಿಸುವುದೇನೆಂದರೆ, ಪವಿತ್ರ ಪ್ರವಾದಿಯ[ಸ] ನಂತರ ಇಸ್ಲಾಮಿನ ನೇತೃತ್ವವಹಿಸಿದ ಪ್ರಥಮ ನಾಲ್ವರು ಖಲೀಫರು (ಅವರನ್ನು ಖುಲಾಫಾವುರ್ರಾಶಿದೀನ್ – ನೇರಮಾರ್ಗಾವಲಂಬಿಗಳಾದ ಖಲೀಫರು ಎನ್ನುತ್ತಾರೆ) ಪವಿತ್ರ ಪ್ರವಾದಿಯ ಉಪದೇಶಗಳನ್ನು ಅನುಷ್ಠಾನಕ್ಕೆ ತಂದರು ಮತ್ತು ಪವಿತ್ರ ಖುರ್‌ಆನಿನ ಉಪದೇಶಗಳನ್ನು ತಮ್ಮ ಮಾರ್ಗಸೂಚಿಯನ್ನಾಗಿ ಪ್ರತಿಯೊಬ್ಬ ಖಲೀಫ ತಮ್ಮ ಖಿಲಾಫತ್ ಕಾಲಾವಧಿಯಲ್ಲಿ ಮಾಡಿಕೊಂಡಿದ್ದರು. ಅವರ ಪೈಕಿ ಯಾರೂ ಯುದ್ಧವನ್ನು ಪ್ರಾರಂಭಿಸಲಿಲ್ಲ. ಅವರು ಕೇವಲ ಆತ್ಮಸಂರಕ್ಷಣೆಗೋಸ್ಕರ ಯುದ್ಧ ಮಾಡಿದರು. ಅನಂತರ ಮುಸ್ಲಿಮ್ ರಾಜರು ಮತ್ತು ಆಡಳಿತಾಧಿಕಾರಿಗಳು ನಡೆಸಿದ ಯುದ್ಧಗಳಲ್ಲಿ ಯಾವುದೂ ಧಾರ್ಮಿಕ ಯುದ್ಧವಾಗಿರಲಿಲ್ಲ. ರಾಜಕೀಯ ಭಿನ್ನಾಭಿಪ್ರಾಯಗಳ ಕಾರಣದಿಂದಲೂ ರಾಜ್ಯ ವಿಸ್ತಾರದ ಆಶೆಯಿಂದಲೂ ಆ ಯುದ್ಧಗಳನ್ನು ಮುಸ್ಲಿಮ್ ರಾಜರು ನಡೆಸಿದರು. ಈಗ ಸಹ ಲೋಕದಲ್ಲಿ ರಾಜಕೀಯ ಕಾರಣದಿಂದ ಯುದ್ಧಗಳು ನಡೆಸಲ್ಪಡುತ್ತಿವೆಯೇ ಹೊರತು ಧಾರ್ಮಿಕ ಕಾರಣಗಳಿಂದಲ್ಲ. ಈಗ ಭೀಕರವಾದಿ ಮತ್ತು ತೀವ್ರವಾದಿ ಗುಂಪುಗಳು ತಮ್ಮ ದ್ವೇಷಕೃತ್ಯಗಳನ್ನು ನ್ಯಾಯೀಕರಿಸಲು ತಮ್ಮನ್ನು ಇಸ್ಲಾಮಿನೊಂದಿಗೆ ಸಂಬಂಧ ಹೊಂದಿರುವುದಾಗಿ ಹೇಳಿಕೊಳ್ಳುತ್ತಿವೆ ಮತ್ತು ಅವರ ಸಂಖ್ಯೆ ವರ್ಧಿಸುತ್ತಾ ಇದೆ. ಮುಸ್ಲಿಮರು ಬಹುಸಂಖ್ಯಾತರಾಗಿರುವ ಕೆಲವು ದೇಶಗಳಲ್ಲಿ ಅಸ್ತವ್ಯಸ್ತತೆಯೂ ದಂಗೆ ದೊಂಬಿಗಳೂ ಹೆಚ್ಚುತ್ತಾ ಇವೆ. ಬೇರೆ ಕೆಲವು ಮುಸ್ಲಿಮ್ ದೇಶಗಳ ಧೋರಣೆಗಳು ಅನ್ಯಾಯಭರಿತವಾಗಿವೆ. ಇವೆಲ್ಲಾ ಗುಂಪುಗಳು ತಮ್ಮನ್ನು ಇಸ್ಲಾಮಿನೊಂದಿಗೆ ಸಂಬಂಧಿಸಿದುದಾಗಿ ಹೇಳುತ್ತಾ ಇದ್ದರೂ ಅವರಲ್ಲಿ ಯಾರೊಬ್ಬರಿಗೂ ಸತ್ಯಸಂಧವಾದ ಇಸ್ಲಾಮ್ ತತ್ವೋಪದೇಶಗಳೊಂದಿಗೆ ಯಾವ ಸಂಬಂಧವೂ ಇಲ್ಲ.

ಇದರ ಮೊದಲು ನಾನು ಹೇಳಿದ ಹಾಗೆ ನಾವು ನಂಬುವುದೇನೆಂದರೆ, ಎಲ್ಲಾ ಧರ್ಮಗಳಲ್ಲೂ ದೀರ್ಘಕಾಲ ದಾಟಿ ಹೋದ ನಂತರ ಬಲಹೀನತೆಗಳೂ ಹೊಸ ಆಚಾರಗಳೂ ತಲೆದೋರಿ ಧರ್ಮದ ನೈಜತತ್ವಗಳ ಬಗ್ಗೆಯೂ ಅನುಷ್ಠಾನ ಕರ್ಮಗಳಲ್ಲೂ ಅವು ಪ್ರತಿಬಿಂಬಿಸಲು ತೊಡಗುತ್ತವೆ. ಇಂತಹ ಬಲಹೀನತೆಗಳೂ ದುರಾಚಾರಗಳೂ ಮುಸ್ಲಿಮರಲ್ಲೂ ವ್ಯಾಪಿಸಿದುವು. ಆದುದರಿಂದ ಸರ್ವಶಕ್ತನಾದ ಅಲ್ಲಾಹನು ಲೋಕಕ್ಕೆ ಮಾರ್ಗದರ್ಶನ ನೀಡಲು ವಾಗ್ದತ್ತ ಮಸೀಹರನ್ನು ಕಳುಹಿಸಿದನು. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರನ್ನು[ಅ] ಅಲ್ಲಾಹನು ವಾಗ್ದತ್ತ ಮಸೀಹರನ್ನಾಗಿ ಮಾಡಿ ಲೋಕದ ಎಲ್ಲರಿಗೂ ಮಾರ್ಗದರ್ಶನ ನೀಡಲು ಕಳುಹಿಸಿರುವನು ಎಂದು ಅಹ್ಮದೀ ಮುಸ್ಲಿಮರಾದ ನಾವು ನಂಬುತ್ತೇವೆ. ವಾಗ್ದತ್ತ ಮಸೀಹರು ಆಗಮಿಸಿ, ಇಸ್ಲಾಮಿನ ವಿರುದ್ಧ ಮಾಡಲಾಗುವ ಎಲ್ಲಾ ದೋಷಾರೋಪಗಳನ್ನು ಖಂಡಿಸಿದರು ಮತ್ತು ಇಸ್ಲಾಮಿನ ವಾಸ್ತವಿಕವೂ ಸುಂದರವೂ ಆದ ಉಪದೇಶಗಳನ್ನು ಲೋಕದ ಮುಂದೆ ಇರಿಸಿದರು. ಅವರು ಮುಸ್ಲಿಮರೊಂದಿಗೆ ಬಹಿರಂಗವಾಗಿ ಪವಿತ್ರ ಪ್ರವಾದಿ ಮುಹಮ್ಮದ್[ಸ] ಭವಿಷ್ಯ ನುಡಿದ ಮಸೀಹ್ ಮತ್ತು ಮಹ್‌ದೀ ತಾನೆಂದೂ ತನ್ನನ್ನು ಅಲ್ಲಾಹನು ನೇಮಿಸಿರುವನೆಂದೂ ಹೇಳಿದರು. ತನ್ನನ್ನು ಅಂಗೀಕರಿಸಬೇಕೆಂದೂ ತಾನು ಇಸ್ಲಾಮಿನ ನಿಜವಾದ ಉಪದೇಶಗಳ ಕಡೆಗೆ ಮಾರ್ಗದರ್ಶನ ನೀಡುವುದಾಗಿಯೂ ಅವರು ಹೇಳಿದರು.

ಅಲ್ಲಾಹನು ತನ್ನನ್ನು ನೇಮಿಸಿದುದೇಕೆಂದು ವಾಗ್ದತ್ತ ಮಸೀಹ್[ಅ] ಬಹಿರಂಗಪಡಿಸಿದರು. ಮೊದಲನೆಯದಾಗಿ, ಅವರು ತನ್ನನ್ನು ಅಲ್ಲಾಹನು ಕಳುಹಿಸಿದುದು ಜನರೆಲ್ಲರೂ ದೇವನಿಗೆ ಸಮೀಪರಾಗುವಂತೆ ಮಾಡಲು ಮತ್ತು ದೇವನ ಅಪರಿಮಿತ ಕಾರುಣ್ಯದ ಮೂಲಕ ನೀಡಿದ ಅಸಂಖ್ಯಾತ ಅನುಗ್ರಹಗಳಿಗೋಸ್ಕರ ದೇವನಿಗೆ ಕೃತಜ್ಞತೆ ಸೂಚಿಸುವಂತೆ ಮಾಡಲಿಕ್ಕೆಂದು ಹೇಳಿದರು. ಅವರು ಜನರೊಂದಿಗೆ ದೇವನ ಸಾಮೀಪ್ಯಗಳಿಸುವ ಏಕಮಾತ್ರ ಮಾರ್ಗ ದೇವನನ್ನು ಆರಾಧಿಸಬೇಕೆಂಬ ಕರ್ತವ್ಯ ನಿರ್ವಹಿಸುವ ಮೂಲಕವಾಗಿದೆ ಎಂದು ಪದೇ ಪದೇ ಹೇಳುತ್ತಾ ಇದ್ದರು. ಇಸ್ಲಾಮಿನ ಶತ್ರುಗಳು ಧಾರ್ಮಿಕ ಯುದ್ಧಗಳನ್ನು ಇಸ್ಲಾಮಿನ ವಿರುದ್ಧ ಈಗ ಮಾಡುವುದಿಲ್ಲವಾದುದರಿಂದ ಧಾರ್ಮಿಕ ಯುದ್ಧ ಕೊನೆಗೊಂಡಿದೆ ಎಂದು ಅವರು ಹೇಳಿದರು. ಈ ಕಾಲಘಟ್ಟದಲ್ಲಿ ಖಡ್ಗವನ್ನು ಪ್ರಯೋಗಿಸುವುದಕ್ಕೆ ಬದಲಾಗಿ ಇಸ್ಲಾಮಿನ ಶತ್ರುಗಳು ವಿವಿಧ ರೀತಿಯ ಸಂಪರ್ಕ ಮಾಧ್ಯಮ ಮಾರ್ಗಗಳನ್ನು ಇಸ್ಲಾಮಿನ ವಿರುದ್ಧ ಸುಳ್ಳು ಪ್ರಚಾರ ಮಾಡಲು ಮತ್ತು ಅದನ್ನು ನಾಶಮಾಡಲು ಬಳಸುತ್ತಾ ಇದ್ದಾರೆ. ಆದುದರಿಂದ ಇಸ್ಲಾಮಿನ ನೈಜ ತತ್ವಗಳನ್ನು ಲೋಕದಾದ್ಯಂತ ಪ್ರಚಾರ ಮಾಡುವುದು ಆವಶ್ಯಕವಾಗಿದೆ ಎಂದು ಅವರು ಹೇಳಿದರು. ಇಸ್ಲಾಮಿನ ಆಧುನಿಕ ಕಾಲದ ಶತ್ರುಗಳನ್ನು ಖಂಡಿಸಲಿರುವ ಮಾರ್ಗ ಇದೇ ಆಗಿದೆ. ತನ್ನೊಂದಿಗೆ ಸಂಬಂಧ ಸ್ಥಾಪಿಸಿದ ಮುಸ್ಲಿಮರು ಮಾತ್ರ ಇಸ್ಲಾಮಿನ ನೈಜ ಸೌಂದರ್ಯವನ್ನು ಲೋಕದ ಮುಂದೆ ಪ್ರದರ್ಶಿಸಬಲ್ಲರೆಂದು ವಾಗ್ದತ್ತ ಮಸೀಹರು ಹೇಳಿದರು.

ವಾಗ್ದತ್ತ ಮಸೀಹರ ಆಗಮನದ ಇನ್ನೊಂದು ಮುಖ್ಯ ಉದ್ದೇಶ, ಮನುಷ್ಯರು ಪರಸ್ಪರ ತಮ್ಮ ಜವಾಬ್ದಾರಿಗಳೇನೆಂದು ಮನವರಿಕೆ ಮಾಡಿಕೊಂಡು ಅವುಗಳನ್ನು ಈಡೇರಿಸಿಕೊಡುವ ಬಗ್ಗೆ ಜನರಿಗೆ ಮಾರ್ಗದರ್ಶನ ಮಾಡುವುದಾಗಿದೆ. ಮನುಷ್ಯರು ಪರಸ್ಪರ ಹಕ್ಕುಗಳನ್ನು ಈಡೇರಿಸಿಕೊಡುವ ಮೂಲಕವೇ ಸಮಾಜದಲ್ಲಿಯೂ ಲೋಕದಾದ್ಯಂತವೂ ಶಾಂತಿಯು ಸ್ಥಾಪಿಸಲ್ಪಡುವುದು. ಈ ಎಲ್ಲಾ ಉದ್ದೇಶಗಳೂ ಉಪದೇಶಗಳೂ ಪವಿತ್ರ ಖುರ್‌ಆನಿನ ತತ್ವೋಪದೇಶಗಳಿಗೆ ಅನುಸಾರವಾಗಿಯೇ ಇವೆ. ಇದು ನಿಜವಾದ ಜಿಹಾದ್ ಆಗಿದೆ. ಮನುಷ್ಯನು ತನ್ನನ್ನು ಸುಧಾರಣೆ ಮಾಡಿಕೊಳ್ಳಲು ಆಂತರಿಕ ಹೋರಾಟ ನಡೆಸುವುದು, ದೇವನೊಂದಿಗೆ ನಿಕಟ ಸಂಬಂಧ ಸ್ಥಾಪನೆ ಮಾಡುವುದು, ಅನ್ಯರ ಹಕ್ಕುಗಳನ್ನು ಈಡೇರಿಸಿಕೊಡುವುದು ಈ ಜಿಹಾದ್‌ನಲ್ಲಿ ಒಳಗೊಂಡಿದೆ. ವಾಗ್ದತ್ತ ಮಸೀಹರು ಪ್ರಚಾರ ಮಾಡಿದ ಉಪದೇಶ ಮತ್ತು ಮಾರ್ಗದರ್ಶನ ಇದೇ ಆಗಿದೆ. ನಮ್ಮ ಜಮಾಅತಿಗೆ ಸೇರಿದ ಪ್ರತಿಯೊಬ್ಬರು ಈ ಉಪದೇಶಗಳನ್ನು ಆರಂಭ ಕಾಲದಿಂದ ಇಂದಿನ ಕಾಲದವರೆಗೆ ಅನುಸರಿಸುತ್ತಾ ಜೀವಿಸುತ್ತಾ ಇದ್ದಾರೆ. ಅಲ್ಲಾಹನ

ಅನುಗ್ರಹದಿಂದ ಅಹ್ಮದೀ ಮುಸ್ಲಿಮರು ಯಾವಾಗಲೂ ಈ ಉಪದೇಶಗಳನ್ನು ಪ್ರಚಾರ ಮಾಡಿ ಅನುಷ್ಠಾನಕ್ಕೆ ತರುತ್ತಿದ್ದಾರೆ. ಆದುದರಿಂದ ಯಾರಾದರೂ ಇಸ್ಲಾಮಿನ ತತ್ವಗಳ ಪ್ರತ್ಯಕ್ಷ ಅನುಷ್ಠಾನ ರೂಪವನ್ನು ಕಾಣಲು ಬಯಸುವುದಾದರೆ ಅವರು ಅಹ್ಮದಿಯಾ ಜಮಾಅತಿನ ಕಡೆಗೆ ನೋಡಬೇಕು.

ಪವಿತ್ರ ಖುರ್‌ಆನ್ ಆರಂಭದಿಂದ ಅದರ ಅಂತ್ಯ ಭಾಗದ ತನಕ ಮಾನವರಿಗೆ ಮಾರ್ಗದರ್ಶನಗಳನ್ನೊಳಗೊಂಡಿದೆ. ಅದರಲ್ಲಿ ನೂರಾರು ಆಜ್ಞೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಬಹುತೇಕ ಆಜ್ಞೆಗಳು ದೇವನ ಆರಾಧನೆಯ ಹಕ್ಕುಗಳ ಬಗ್ಗೆ, ದೇವನ ಸೃಷ್ಟಿಗಳ ಹಕ್ಕುಗಳ ಬಗ್ಗೆ, ಲೋಕದಲ್ಲಿ ಶಾಂತಿ, ಪ್ರೀತಿ ಮತ್ತು ಸೌಹಾರ್ದ ಸ್ಥಾಪಿಸುವ ಬಗ್ಗೆಯಾಗಿವೆ.

ನಾನು ಇದರ ಮೊದಲು ವಿವರಿಸಿದ ಹಾಗೆ, ಯುದ್ಧ ಮಾಡಲು ಅನುಮತಿ ನೀಡಿದಾಗ ಅದನ್ನು ಕೇವಲ ಕೆಲವು ಕಠಿಣ ಪರಿಸ್ಥಿತಿಗಳಿಗೆ ಸೀಮಿತಗೊಳಿಸಲಾಗಿತ್ತು. ಅದರ ಉದ್ದೇಶ ಆತ್ಮಸಂರಕ್ಷಣೆ ಮತ್ತು ದೀರ್ಘಕಾಲೀನ ಶಾಂತಿ ಸ್ಥಾಪಿಸುವುದಾಗಿತ್ತು. ಇಸ್ಲಾಮ್ ಸ್ಪಷ್ಟವಾಗಿ ಹೀಗೆ ಸಹ ಹೇಳಿದೆ: ಶಾಂತಿಯು ಸ್ಥಾಪಿಸಲ್ಪಟ್ಟಾಗ ಸೋಲಿಸಲ್ಪಟ್ಟ ಪಕ್ಷವನ್ನು ಸುಲಿಗೆ ಮಾಡಬಾರದು. ಅನ್ಯಾಯದಿಂದ ಅವರ ಸಂಪನ್ಮೂಲ ಗಳನ್ನು ಸ್ವಾಧೀನಪಡಿಸಿಕೊಳ್ಳಬಾರದು. ಸಮಾಜದಲ್ಲಿ ಶಾಂತಿ ಸ್ಥಾಪನೆಗೋಸ್ಕರ ಪವಿತ್ರ ಖುರ್‌ಆನಿನ ಅಧ್ಯಾಯ 49 ವಚನ 13ರಲ್ಲಿ ಇನ್ನೊಂದು ಆಜ್ಞೆ ನೀಡಲಾಗಿದೆ. ಸತ್ಯವಿಶ್ವಾಸಿಗಳು ಸಂಶಯ ಪಡಬಾರದೆಂದೂ ಕೆಲವು ಸಂಶಯಗಳು ಪಾಪಕರವಾಗಿವೆ ಎಂದೂ ಹೇಳಲಾಗಿದೆ. ಪವಿತ್ರ ಖುರ್‌ಆನಿನ, ಮೇಲೆ ಉಲ್ಲೇಖಿಸಿದ ವಚನದ ಮುಂದಿನ ಭಾಗದಲ್ಲಿ ಪರಸ್ಪರ ಗೂಢಚಾರಿಕೆ ಮಾಡಬಾರದೆಂದೂ ಪರಸ್ಪರ ದೂಷಿಸಬಾರದೆಂದೂ ಆಜ್ಞಾಪಿಸಲಾಗಿದೆ. ಮೇಲಿಂದ ಮೇಲೆ ನೋಡಿದರೆ ಇದು ಚಿಕ್ಕ ಸಾಮಾನ್ಯ ವಿಷಯವೆಂದು ತೋರಬಹುದು. ಆದರೆ ಈ ಉಪದೇಶಗಳನ್ನು ಸರಿಯಾಗಿ ಅನುಸರಿಸಿದರೆ ಇದು ಸಮಾಜದಲ್ಲೆಲ್ಲಾ ಶಾಂತಿಯನ್ನು ಚಿಕ್ಕಮಟ್ಟದಲ್ಲೂ ವಿಶಾಲವಾಗಿಯೂ ಸ್ಥಾಪಿಸಲು ಸಹಕಾರಿಯಾಗುವುದು.

ಚಿಕ್ಕ ಮಟ್ಟದ ಬಗ್ಗೆ ಹೇಳುವುದಾದರೆ, ಮನೆಯ ಕುಟುಂಬಗಳು ಸಮಾಜದ ಇಟ್ಟಿಗೆಗಳಾಗಿವೆ. ನಾವು ಇಂದಿನ ಸಮಾಜವನ್ನು ನೋಡುವಾಗ ಲೋಕದ ಎಲ್ಲಾ ಕಡೆಗಳಲ್ಲೂ ವಿವಾಹಗಳು ಮುರಿಯುತ್ತಾ ಹೋಗುತ್ತಿರುವುದಾಗಿ ಕಾಣುತ್ತೇವೆ. ಇದಕ್ಕೆ ಮೂಲ ಕಾರಣ ಪತಿ-ಪತ್ನಿಯರ ಮಧ್ಯೆ ಮೂಡುವ ಸಂಶಯವಾಗಿದೆ ಅಥವಾ ಪರದೂಷಣೆ ಯಾಗಿದೆ. ವಿಶಾಲಮಟ್ಟದ ಬಗ್ಗೆ ಹೇಳುವುದಾದರೆ, ಸಂಶಯಗಳು ಮತ್ತು ಅನ್ಯರ ಬಗ್ಗೆ ತಪ್ಪು ಯೋಚನೆಗಳು ವಿವಿಧ ಗುಂಪುಗಳ ಮಧ್ಯೆ ಅಥವಾ ದೇಶಗಳ ಮಧ್ಯೆ ಸಂಬಂಧಗಳು ಕೆಟ್ಟು ಹೋಗಲು ಕಾರಣಗಳಾಗಿವೆ.

ಪವಿತ್ರ ಖುರ್‌ಆನ್ ಪ್ರತಿಪಾದಿಸುವ ಇನ್ನೊಂದು ವಿಷಯ ಪರಸ್ಪರ ಹಕ್ಕುಗಳನ್ನು ಈಡೇರಿಸುವ ಬಗ್ಗೆಯಾಗಿದೆ. ಪವಿತ್ರ ಖುರ್‌ಆನ್ ಅಧ್ಯಾಯ 83 ವಚನ 2-4ರಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ: ಅನ್ಯರ ಹಕ್ಕುಗಳನ್ನು ಅಪಹರಿಸುವವರು ಮತ್ತು ತಮ್ಮ ಕೊಡುಕೊಳ್ಳುವ ವ್ಯವಹಾರದಲ್ಲಿ ಅನ್ಯಾಯ ಮಾಡುವವರು ಶಪಿಸಲ್ಪಡುವರು ಮತ್ತು ನಾಶಗೊಳಿಸಲ್ಪಡುವರು. ಕೆಲವರು ಜನರಿಂದ ಅಳೆದು ಪಡೆಯುವಾಗ ಪೂರ್ಣವಾಗಿ ಪಡೆಯುತ್ತಾರೆ. ಆದರೆ ಅವರು ಅಳೆದು ಅಥವಾ ತೂಕಮಾಡಿ ಕೊಡುವಾಗ ಕಡಿಮೆ ಕೊಡುತ್ತಾರೆ. ಇಂತಹ ಜನರು ಶಪಿಸಲ್ಪಡುವರು. ಪವಿತ್ರ ಖುರ್‌ಆನ್ ಕೆಲವು ವಾಕ್ಯಗಳಲ್ಲಿ ತಪ್ಪು ವರ್ತನೆ ಮತ್ತು ದೌರ್ಜನ್ಯವನ್ನು ಖಂಡಿಸಿ ಜನರ ಜೀವನ, ಗೌರವ ಮತ್ತು ಘನತೆಯನ್ನು ಕಾಪಾಡಲು ಅಸ್ತಿಭಾರವನ್ನು ಹಾಕಿದೆ. ಉದಾಹರಣೆಗೆ, ಒಬ್ಬನನ್ನು ಹಿಂಸಾಚಾರಕ್ಕೆ ಗುರಿಪಡಿಸಿದರೆ ಅಥವಾ ಅನುಚಿತವಾಗಿ ಆತನೊಂದಿಗೆ ವರ್ತಿಸಿದರೆ, ಅವನು ಅದಕ್ಕೆ ಪ್ರತಿಕ್ರಿಯೆ ಯಾಗಿ ಸೇಡನ್ನು ತೀರಿಸಬಹುದಾಗಿದೆ. ಅವನು ಪ್ರತೀಕಾರ ಮಾಡುವಾಗ ಸುಲಭವಾಗಿ ಮಿತಿಮೀರಿ ವರ್ತಿಸಬಹುದು ಮತ್ತು ಅನ್ಯಾಯದಿಂದ ಸೇಡನ್ನು ತೀರಿಸಬಹುದು. ಆದುದರಿಂದ ಅಲ್ಲಾಹನು ಅಂತಹ ಕೆಟ್ಟ ಕೆಲಸಗಳನ್ನು ತಡೆಯಲಿಕ್ಕೋಸ್ಕರ ಆಜ್ಞಾಪಿಸುವುದೇನೆಂದರೆ, ಅನ್ಯರ ಹಕ್ಕುಗಳನ್ನು ಎಂದೂ ಅಪಹರಿಸಬಾರದು. ಏಕೆಂದರೆ ಹಕ್ಕುಗಳ ಅಪಹಾರದಿಂದುಂಟಾಗುವ ಪರಿಣಾಮ ಬಹಳ ತೀವ್ರವೂ ಅಪಾಯ ಕರವೂ ಆಗಿರುವುದು. ಪರಿಸ್ಥಿತಿಗಳು ಮಿತಿಮೀರಿ ಕೆಟ್ಟುಹೋಗುವುದನ್ನು ತಡೆಯಲು ಪವಿತ್ರ ಖುರ್‌ಆನ್ ಎಲ್ಲಾ ಗುಂಪಿನ ಜನರು ನ್ಯಾಯಪಾಲನೆ ಯನ್ನು ಮಾಡಬೇಕೆಂದೂ ಆಜ್ಞಾಪಿಸಿದೆ. ಎಲ್ಲರೂ ಕೊಡುಕೊಳ್ಳುವ ವ್ಯವಹಾರದಲ್ಲಿ ಸಮಾನವಾಗಿ ವರ್ತಿಸಬೇಕು. ಈ ಉಪದೇಶಗಳ ಮೂಲಕ ಬಡವರ ಮತ್ತು ನಿರ್ಗತಿಕರ ಹಕ್ಕುಗಳನ್ನು ಪವಿತ್ರ ಖುರ್‌ಆನ್ ಸಂರಕ್ಷಿಸಿದೆ. ಎಲ್ಲರೊಂದಿಗೂ ಸರಿಯಾಗಿಯೂ ನ್ಯಾಯಪೂರ್ಣ ವಾಗಿಯೂ ವರ್ತಿಸಲು ಅದು ಆಜ್ಞಾಪಿಸಿದೆ. ಈ ಉಪದೇಶಗಳನ್ನು ಅನುಷ್ಠಾನಕ್ಕೆ ತಂದರೆ ಬಡವರು ತಮ್ಮ ಸ್ವಂತ ಕಾಲುಗಳ ಮೇಲೆ ನಿಲ್ಲಲು ಶಕ್ತರಾಗುವರು ಮತ್ತು ಆತ್ಮಾಭಿಮಾನ ಗಳಿಸಿ ಗೌರವದಿಂದ ಬಾಳಲು ಸಾಧ್ಯವಾಗುವುದು.

ಪವಿತ್ರ ಪ್ರವಾದಿಯ ಶಿಷ್ಯರು ಈ ಉಪದೇಶಗಳನ್ನು ತಮ್ಮ ಜೀವಿತದಲ್ಲಿ ಅನುಷ್ಠಾನಕ್ಕೆ ತಂದರು. ಒಂದು ಉದಾಹರಣೆ ಹೀಗಿದೆ: ಪವಿತ್ರ ಪ್ರವಾದಿ ಮುಹಮ್ಮದರು(ಸ) ಜೀವಿಸಿರುವಾಗ ಒಬ್ಬ ಮುಸ್ಲಿಮ್ ತನ್ನ ಕುದುರೆಯನ್ನು ಇನ್ನೂರು ದೀನಾರ್‌ಗೆ ಮಾರಾಟಮಾಡಲು ಬಯಸಿದರು. ಅದನ್ನು ಖರೀದಿ ಮಾಡಲು ಬಂದ ಇನ್ನೊಬ್ಬ ಮುಸ್ಲಿಮ್ ಹೀಗೆಂದರು: ಈ ಕುದುರೆಯ ಬೆಲೆಯನ್ನು ಇನ್ನೂರು ದೀನಾರೆಂದು ನಿಗದಿ ಪಡಿಸಿದುದು ಅದರ ವಾಸ್ತವಿಕ ಬೆಲೆಗಿಂತ ಬಹಳ ಕಡಿಮೆಯಾಗಿದೆ. ಅದರ ವಾಸ್ತವಿಕ ಬೆಲೆ ಐನೂರು ದೀನಾರ್ ಆಗಿದೆ. ಆದುದರಿಂದ ನನ್ನಿಂದ ಐನೂರು ದೀನಾರ್ ಪಡೆದು ಕುದುರೆಯನ್ನು ನನಗೆ ನೀಡಿರಿ. ಆದರೆ ಕುದುರೆಯ ಮಾಲಿಕ ಇದರ ಲಾಭ ಪಡೆಯಲು ಇಚ್ಛಿಸಲಿಲ್ಲ. ನನ್ನ ಕುದುರೆಯ ಬೆಲೆ ಇನ್ನೂರು ದೀನಾರ್ ಎಂದು ಪುನರಾವರ್ತಿಸಿ ಹೇಳತೊಡಗಿದರು. ಈ ಜಗಳ ಅವರು ತಮ್ಮ ಸ್ವಂತ ಹಕ್ಕುಗಳನ್ನು ಕಾಪಾಡಲಿಕ್ಕೋಸ್ಕರವಾಗಿರದೆ ಅದಕ್ಕೆ ವಿರುದ್ಧವಾಗಿತ್ತು. ಅವರು ಅನ್ಯರ ಹಕ್ಕುಗಳನ್ನು ಈಡೇರಿಸಲು ತಮ್ಮ ಲಾಭವನ್ನು ಕಳೆದುಕೊಳ್ಳಲು ಸಿದ್ಧರಾಗಿದ್ದರು. ಪ್ರಾಮಾಣಿಕತೆಯ ಇಂತಹ ಉದಾಹರಣೆಗಳು ಇಂದಿನ ಕಾಲದಲ್ಲಿ ಬಹಳ ವಿರಳವಾಗಿಯೇ ಇರುತ್ತವೆ. ಇಂದಿನ ಕಾಲದ ಉದಾಹರಣೆ ಹೇಗಿರುತ್ತದೆ ಎಂದರೆ ಒಂದು ವಸ್ತುವಿನ ವಾಸ್ತವಿಕ ಬೆಲೆ ಹತ್ತು ಯುರೋ ಆಗಿದ್ದರೆ ಅದನ್ನು ಬಹಳ ಮನೋಹರವಾಗಿ ಪ್ಯಾಕ್ ಮಾಡಿ ಜಾಹೀರಾತು ನೀಡಿ ಅದನ್ನು ಐವತ್ತು ಯುರೋಗೆ ಮಾರಾಟ ಮಾಡಲು ಪ್ರಯತ್ನಿಸುವರು. ಈ ರೀತಿ ಜನರಿಗೆ ವಸ್ತುಗಳು ನ್ಯಾಯಬೆಲೆಗೆ ದೊರಕುವುದಿಲ್ಲ. ಆದುದರಿಂದ ನ್ಯಾಯಪಾಲನೆ ಆಗುವುದಿಲ್ಲ.

ಭೂಸ್ವತ್ತುಗಳ ಮಾರಾಟದ ಬಗ್ಗೆ ಹೇಳುವುದಾದರೆ, ಭೂ ಆಸ್ತಿಗಳಿಗೂ ಕಟ್ಟಡಗಳಿಗೂ ಅಪರಿಮಿತ ಬೆಲೆ ಹೇರಲಾಗುತ್ತದೆ. ಈ ಕಾರಣದಿಂದ, ವಾಸಿಸುವ ಮನೆಗಳ ಬೆಲೆ ಬಹಳ ಹೆಚ್ಚಾಗಿದೆ. ಈ ಅವಾಸ್ತವಿಕ ಮೌಲ್ಯ ನಿರ್ಣಯವನ್ನು ಬೆಂಬಲಿಸಲು ಅನೇಕ ವರ್ಷ ಗಳಿಂದ ಬ್ಯಾಂಕುಗಳು ಸಾಲ ನೀಡುತ್ತಾ ಬಂದು ತಮ್ಮ ಲಾಭಾಂಶವನ್ನು ವರ್ಧಿಸಲು ಪ್ರಯತ್ನಿಸುತ್ತಾ ಇವೆ. ಆದರೆ ಇಂತಹ ಅವಾಸ್ತವಿಕ ಆರ್ಥಿಕ ವ್ಯವಸ್ಥೆ ದೀರ್ಘಕಾಲ ಬಾಳಲಾರದು. ಕೆಲವು ವರ್ಷಗಳ ಹಿಂದೆ

ಆರ್ಥಿಕ ಬಿಕ್ಕಟ್ಟು ತಲೆದೋರಿದಾಗ ಸಾಲ ಪಡೆದು ಮನೆ ಖರೀದಿಸಿದ ಮನೆಮಾಲಿಕರು ತಾವು ಖರೀದಿಸಿದ ಮನೆ ತಮ್ಮದಲ್ಲ ಎಂದು ವಾಸ್ತವಿಕವಾದ ಕಹಿ ಅನುಭವಕ್ಕೆ ಗುರಿಯಾದರು. ಸಾವಿರಗಟ್ಟಲೆ ಮನೆಗಳು ಬ್ಯಾಂಕುಗಳಿಂದಲೂ ಸಾಲ ನೀಡಿದವರಿಂದಲೂ ಸ್ವಾಧೀನ ಗೊಳಿಸಲ್ಪಟ್ಟವು. ಈ ರೀತಿ ಅನೇಕ ವ್ಯಾಪಾರಿಗಳೂ ಮನೆಮಾಲಿಕರೂ ತಮ್ಮ ಸ್ವತ್ತುಗಳನ್ನು ಕಳೆದುಕೊಂಡರು. ಅವರ ಗೌರವ ಮತ್ತು ಸಂಪತ್ತು ಕ್ಷಣದಲ್ಲಿ ಅಳಿಸಿಹೋದವು. ಯುರೋಪಿನಲ್ಲಿ ಆರ್ಥಿಕ ಬಿಕ್ಕಟ್ಟಿನ ಕಾರಣದಿಂದ ಕೆಲವು ದೇಶಗಳು ತೀರಿಸಲಾಗದ ಸಾಲದಿಂದ ಬಾಧಿತವಾಗಿವೆ ಮತ್ತು ದಿವಾಳಿತನಕ್ಕೆ ತಲಪಿವೆ. ಈ ಪರಿಸ್ಥಿತಿಗೆ ಮೂಲಕಾರಣ ಅವಾಸ್ತವಿಕ ಮೌಲ್ಯ ನಿರ್ಧಾರ ಮತ್ತು ಅಪರಿಮಿತ ಬೆಲೆಗಳೂ ಆಗಿವೆ. ಅನೇಕ ಆರ್ಥಿಕ ಶಾಸ್ತ್ರಜ್ಞರು ಈ ಬಿಕ್ಕಟ್ಟಿನ ಸ್ಥಿತಿಯನ್ನು ಅಧ್ಯಯನ ಮಾಡಿದ್ದಾರೆ. 1932ರ ಆರ್ಥಿಕ ಬಿಕ್ಕಟ್ಟಿನ ಕಾಲದ ಸ್ಥಿತಿಗೆ ಈಗಿನ ಆರ್ಥಿಕ ಸ್ಥಿತಿ ಸಮಾನವಾಗಿದೆ ಎಂದು ಅವರು ನಿರ್ಧರಿಸಿದ್ದಾರೆ. ಆಗಿನ ಕಾಲದ ವಿಶಿಷ್ಟ ಪರಿಸ್ಥಿತಿಗಳ ಕಾರಣ ದ್ವಿತೀಯ ಮಹಾಯುದ್ಧ ಪ್ರಾರಂಭವಾಯಿತು. ಆದುದರಿಂದ ಇಂದಿನ ಆರ್ಥಿಕ ಮತ್ತು ವಾಣಿಜ್ಯ ಬಿಕ್ಕಟ್ಟು ಅವಾಸ್ತವಿಕ ಮೌಲ್ಯನಿರ್ಧಾರದಿಂದಲೂ ವಾಣಿಜ್ಯ ಶಕ್ತಿಗಳ ಕಾರಣದಿಂದಲೂ ಉದ್ಭವಿಸಿದ್ದು ಇನ್ನೊಂದು ಮಹಾಯುದ್ಧ ಪ್ರಾರಂಭವಾಗಲು ಇವು ಕಾರಣವಾಗಬಲ್ಲವು ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಆದುದರಿಂದ ಯಾವುದೇ ವಿಷಯವನ್ನು ನಿಸ್ಸಾರವೆಂದೂ ಸಾಮಾನ್ಯವೆಂದೂ ಪರಿಗಣಿಸದೆ ಅತ್ಯಂತ ಜಾಗರೂಕತೆಯಿಂದ ವಿಶ್ಲೇಷಿಸಬೇಕು.

ಜಾಗತಿಕ ಶಾಂತಿಯನ್ನು ಸ್ಥಾಪಿಸಲು ಇಸ್ಲಾಮ್ ನೀಡುವ ಇನ್ನೊಂದು ಮುಖ್ಯ ಸಲಹೆ ಏನೆಂದರೆ ಎರಡು ಮುಸ್ಲಿಮ್ ದೇಶಗಳು ಹೋರಾಡಲು ತೊಡಗಿದರೆ ಅಥವಾ ಅವರಲ್ಲಿ ಯಾವುದಾದರೂ ವಿಷಯದ ಬಗ್ಗೆ ವಿವಾದ ಉಂಟಾದರೆ ಬೇರೆ ದೇಶಗಳು ಒಟ್ಟಿಗೆ ಸೇರಿ ಹೋರಾಡುವ ದೇಶಗಳು ರಾಜಿ ಒಪ್ಪಂದ ಮಾಡಿಕೊಳ್ಳಲು ಪ್ರಯತ್ನಿಸಬೇಕು. ಪರಸ್ಪರ ಹೋರಾಡುವ ದೇಶಗಳು ರಾಜಿ ಸಂಧಾನಕ್ಕೆ ಒಪ್ಪಿದರೆ, ಆದರೆ ಅನಂತರ ಒಂದು ದೇಶ ಒಪ್ಪಂದಕ್ಕೆ ಭಂಗ ಉಂಟುಮಾಡಿದರೆ ಅಥವಾ ಶಾಂತಿಯ ಯೋಜನೆಯನ್ನು ಧಿಕ್ಕರಿಸಿದರೆ ಆಗ ಇತರ ದೇಶಗಳು ಆಕ್ರಮಣಕಾರಿ ದೇಶವನ್ನು ಎದುರಿಸಬೇಕು. ಆಕ್ರಮಣ ಬಾಧಿತ ದೇಶವು ಶಾಂತಿಗಳಿಸುವಂತೆ ಮಾಡಬೇಕು. ಆಕ್ರಮಣಕಾರಿ ದೇಶ ಆಕ್ರಮಿಸಲ್ಪಟ್ಟ ದೇಶದಿಂದ ಹಿಂದೆ ಸರಿದು ತನ್ನ ತಪ್ಪನ್ನು ಒಪ್ಪಿ ಶಾಂತಿ ಪಾಲನೆ ಮಾಡುವುದಾಗಿ ಭರವಸೆ ನೀಡಿದರೆ ಆ ದೇಶದ ವಿರುದ್ಧ ಪ್ರತೀಕಾರ ಮಾಡಬಾರದು ಮತ್ತು ಅನುಚಿತವಾದ ನಿಬಂಧನೆಗಳಿಗೆ ಒಳಪಡಿಸಬಾರದು. ಇಂತಹ ಸಂದರ್ಭಗಳಲ್ಲಿ ಪಾಲಿಸಬೇಕಾದ ಮೂಲಭೂತ ತತ್ವ ನ್ಯಾಯಪಾಲನೆಯಾಗಿದೆ. ಪವಿತ್ರ ಖುರ್‌ಆನಿನ ಅಧ್ಯಾಯ 49 ವಚನ 10 ಮೇಲಿನ ಮಾರ್ಗದರ್ಶನ ನೀಡಿದೆ. ಆದರೆ ಈ ಮಾರ್ಗದರ್ಶನ ಮುಸ್ಲಿಮರಿಗೆ ಮಾತ್ರ ಅನ್ವಯಿಸುತ್ತದೆ ಎಂದು ಗಣಿಸಬಾರದು. ಸತ್ಯವಾದ ವಿಷಯವೇನೆಂದರೆ, ಎಲ್ಲಾ ದೇಶಗಳು ಈ ನಿಯಮಗಳನ್ನು ಪಾಲಿಸುವುದಾದರೆ ದೇಶಗಳ ಮಧ್ಯೆ ಇರುವ ಸಮಸ್ಯೆಗಳು ಹೆಚ್ಚಾಗುವ ಬದಲಾಗಿ ಕಡಿಮೆಯಾಗುವುವು. ದುರದೃಷ್ಟಕರವಾಗಿ ಈ ನಿಯಮಗಳನ್ನು ಪ್ರಥಮ ಮಹಾಯುದ್ಧದ ಮೊದಲು ಮತ್ತು ನಂತರ ಪಾಲಿಸದುದರಿಂದ ದ್ವಿತೀಯ ಮಹಾಯುದ್ಧವು ಪ್ರಾರಂಭಗೊಂಡಿತು. ಆ ಯುದ್ಧದ ಕಾಲದಲ್ಲೂ ಈ ನಿಯಮಗಳನ್ನು ಪಾಲಿಸಲಿಲ್ಲ ಮತ್ತು ನ್ಯಾಯಪಾಲನೆಯ ಆವಶ್ಯಕತೆಗಳು ಈಡೇರಲಿಲ್ಲ, ನಮ್ಮ ಹಿಂದಿನ ಕಾಲದ ಚರಿತ್ರೆಯನ್ನು ವೀಕ್ಷಿಸುವಾಗ ತೃತೀಯ ಮಹಾಯುದ್ಧಕ್ಕೆ ಅಸ್ತಿಭಾರ ಹಾಕಲಾಗುತ್ತಿದೆ ಎಂದು ಸ್ಪಷ್ಟವಾಗುತ್ತದೆ.

ದ್ವಿತೀಯ ಮಹಾಯುದ್ಧದ ನಂತರ ಜರ್ಮನಿ ಸ್ವತಃ ಅನ್ಯಾಯಕ್ಕೆ ಗುರಿಯಾಗಿ ಅದನ್ನು ಎರಡು ದೇಶಗಳಾಗಿ ಒಡೆದು ಹಾಕಲಾಗಿತ್ತು. ಜರ್ಮನ್ ಜನಾಂಗ ತನ್ನ ತಪ್ಪನ್ನು ಮನವರಿಕೆ ಮಾಡಿಕೊಂಡು ಒಂದು ದೇಶವಾಗಿ ಒಗ್ಗೂಡಿದುದು ದೇವನ ಬಹಳ ದೊಡ್ಡ ಅನುಗ್ರಹವಾಗಿದೆ. ಆ ಮೂಲಕ ದೌರ್ಜನ್ಯದ ಶೃಂಖಲೆ ಕೊನೆಗೊಂಡಿತು. ಹೀಗಿದ್ದರೂ ಕೆಲವು ನಿರ್ಬಂಧಗಳನ್ನು ಬಾಹ್ಯ ಶಕ್ತಿಗಳಿಂದ ಹೇರಲಾಗಿದೆ ಎನ್ನುವುದು ದುರದೃಷ್ಟಕರವಾಗಿದೆ. ಜರ್ಮನಿ ಮಾತ್ರವಲ್ಲ, ಬೇರೆ ಕೆಲವು ದೇಶಗಳು ಸಹ ಈ ರೀತಿ ಕಷ್ಟಕ್ಕೊಳಗಾಗಿವೆ. ಉದಾಹರಣೆಗೆ, ಸಂಯುಕ್ತ ರಾಷ್ಟ್ರ ಸಂಘದಲ್ಲಿ ನಿರ್ಧಾರ ಕೈಗೊಳ್ಳುವ ಬಗ್ಗೆ ಎಲ್ಲಾ ದೇಶಗಳಿಗೂ ಸಮಾನ ಹಕ್ಕುಗಳಿಲ್ಲ. ಇಂತಹ ಅನ್ಯಾಯಗಳು ಮತ್ತು ಅಸಮಾನತೆಗಳು ಲೋಕದಾದ್ಯಂತ ಹರಡುತ್ತಾ ಇವೆ ಮತ್ತು ವಿವಿಧ ಜನಾಂಗಗಳಲ್ಲೂ ದೇಶಗಳಲ್ಲೂ ಅಸಮಾಧಾನ ವ್ಯಾಪಿಸುತ್ತಾ ಇದೆ. ಜಾಗತಿಕ ಆರ್ಥಿಕ ಬಿಕ್ಕಟ್ಟಿನಿಂದ ಬಳಲುತ್ತಿರುವ ದೇಶಗಳಿಗೆ ಈ ಆತಂಕಗಳು ಹೆಚ್ಚು ಒತ್ತಡ ನೀಡುತ್ತಿವೆ. ಈ ರೀತಿ ಲೋಕವು ಇನ್ನೊಂದು ಮಹಾಯುದ್ಧದ ಕಡೆಗೆ ಒಯ್ಯಲ್ಪಡುತ್ತಿದೆ. ದ್ವಿತೀಯ ಮಹಾಯುದ್ಧದಲ್ಲಿ ಸಾಂಪ್ರದಾಯಿಕ ಆಯುಧಗಳನ್ನೇ ಬಹಳ ಮಟ್ಟಿಗೆ ಬಳಸಲಾಯಿತು. ಹೀಗಿದ್ದರೂ ಕೆಲವು ಅಂದಾಜುಗಳ ಪ್ರಕಾರ ಕನಿಷ್ಠ ಎಂಟು ಮಿಲಿಯ ಜರ್ಮನರು ಕೊಲ್ಲಲ್ಪಟ್ಟರು. ಅವರಲ್ಲಿ 2 ರಿಂದ 2.5 ಮಿಲಿಯ ತನಕ ಕೊಲ್ಲಲ್ಪಟ್ಟವರು ನಾಗರಿಕರಾಗಿದ್ದರು. ದ್ವಿತೀಯ ಮಹಾಯುದ್ಧದಲ್ಲಿ ಲೋಕದಲ್ಲಿ ಮೃತರಾದ ಜನರ ಸಂಖ್ಯೆ 70 ರಿಂದ 80 ಮಿಲಿಯ ತನಕವೆಂದು ಅಂದಾಜಿಸಲಾಗಿದೆ.

ಇಂದಿನ ಕಾಲದ ಲೋಕದ ಸ್ಥಿತಿ ಹೆಚ್ಚು ಅಪಾಯಕರವಾಗಿದೆ. ಚಿಕ್ಕದೇಶಗಳು ಕೂಡ ಅಣು ಅಸ್ತ್ರಗಳನ್ನು ಹೊಂದಿವೆ. ಇಂತಹ ದೇಶಗಳ ನಾಯಕರು ಸಾಕಷ್ಟು ಬುದ್ಧಿವಂತಿಕೆ ಇಲ್ಲದವರೂ ಯುದ್ಧಪ್ರಿಯರೂ ಆಗಿದ್ದು ತಮ್ಮ ಕೆಲಸಗಳಿಂದುಂಟಾಗುವ ಪರಿಣಾಮಗಳ ಬಗ್ಗೆ ಮನವರಿಕೆ ಮಾಡಿಕೊಳ್ಳದವರೂ ಆಗಿದ್ದಾರೆ. ಆದುದರಿಂದ ಇನ್ನೊಂದು ಮಹಾಯುದ್ಧ ಪ್ರಾರಂಭವಾಗುವುದಾದರೆ ಅದರ ಪರಿಣಾಮಗಳು ಅತ್ಯಂತ ದಾರುಣವಾಗುವುವು ಮತ್ತು ಊಹಾತೀತವಾಗುವುವು. ಆದುದರಿಂದ ಅಹ್ಮದಿಯಾ ಮುಸ್ಲಿಮ್ ಜಮಾಅತಿಗೆ ಸೇರಿದ ನಾವು ಲೋಕದ ಇಂದಿನ ಪರಿಸ್ಥಿತಿಯ ಕಾರಣದಿಂದ ಅತ್ಯಂತ ಆತಂಕಭರಿತರಾಗಿದ್ದೇವೆ. ಏಕೆಂದರೆ ಲೋಕವು ಒಂದು ಜಾಗತಿಕ ವಿಪತ್ತಿನಿಂದ ಆವರಿಸಲ್ಪಡುತ್ತಿರುವಂತೆ ಕಾಣಿಸುತ್ತದೆ. ಮಾನವರಿಗೋಸ್ಕರ ನಮ್ಮ ಕಳಕಳಿ ಮತ್ತು ಪ್ರೀತಿಯು ಪವಿತ್ರ ಖುರ್‌ಆನಿನ ಉಪದೇಶಗಳನ್ನು ಮತ್ತು ಪವಿತ್ರ ಪ್ರವಾದಿ ಮುಹಮ್ಮದರ(ಸ) ಪರಿಪೂರ್ಣ ಮಾದರಿಯನ್ನು ನಾವು ಅನುಸರಿಸುತ್ತಾ ಇರುವುದರಿಂದಾಗಿದೆ.

ನಾನು ಇದರ ಮೊದಲು ಹೇಳಿದ ಹಾಗೆ ಇಸ್ಲಾಮಿನ ಉಪದೇಶಗಳು ಸಾರ್ವಲೌಕಿಕವಾಗಿವೆ ಮತ್ತು ಜೀವಿತದ ಎಲ್ಲಾ ವಿಭಾಗಗಳಿಗೂ ಅನ್ವಯಿಸುವಂತಹದ್ದಾಗಿವೆ. ಮನೆಯ ಕುಟುಂಬದಿಂದ ಪ್ರಾರಂಭಿಸಿ ಸಮಾಜಕ್ಕೆ ತಲಪಿ ಅದು ದೇಶಗಳ ಹಕ್ಕುಗಳ ಬಗ್ಗೆಯೂ ಅಂತರ್‍ರಾಷ್ಟ್ರೀಯ ಸಂಬಂಧಗಳ ವ್ಯವಸ್ಥೆಯ ಬಗ್ಗೆಯೂ ಮಾರ್ಗದರ್ಶನ ನೀಡುತ್ತದೆ. ನನಗೆ ಭಾಷಣ ಮಾಡಲು ದೊರೆತ ಸಮಯದ ಮಿತಿಗನುಸಾರವಾಗಿ ನಾನು ಕೆಲವು ಉದಾಹರಣೆಗಳನ್ನು ಮಾತ್ರ ನೀಡಿರುವೆನು. ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರು ಎಲ್ಲಾ ಜನರಿಗೆ, ಅವರಿಗೆ ಸಲ್ಲಬೇಕಾದ ಹಕ್ಕುಗಳನ್ನು ನೀಡಬೇಕೆಂಬ ಭಾವನೆಯನ್ನು ಅಹ್ಮದಿಯರಲ್ಲಿ ತುಂಬಿರುವರು. ಆದುದರಿಂದ ಪರಸ್ಪರ ಹಕ್ಕುಗಳನ್ನು ಸಂರಕ್ಷಿಸಲು ನಾವು ತೀವ್ರವಾಗಿ ಪ್ರಯತ್ನ ಮಾಡುತ್ತೇವೆ. ಮಾತ್ರವಲ್ಲ ಅನ್ಯರು ಸಹ ಹೀಗೆ ವರ್ತಿಸಲು ಪ್ರೋತ್ಸಾಹಿಸುತ್ತೇವೆ. ಇತ್ತೀಚೆಗೆ ಲೋಕದಲ್ಲಿ

## ಪಾಕಿಸ್ತಾನ ಸರಕಾರದ ಶ್ವೇತ ಪತ್ರಕ್ಕೆ ಉತ್ತರ:

# ಅಹ್ಮದಿಯಾ ಮುಸ್ಲಿಮ್ ಜಮಾಅತ್ ಬ್ರಿಟಿಷರು ನೆಟ್ಟ ಗಿಡವೇ?

**ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್ ಸಾಹೇಬ್**
**ಅಹ್ಮದಿಯಾ ಜಮಾಅತಿನ ಚತುರ್ಥ ಖಲೀಫ**

ಇದರ ಮೊದಲು ವಾಗ್ದಾನ ಮಾಡಿದ ಪ್ರಕಾರ ನಾನು ಪಾಕಿಸ್ತಾನ ಸರಕಾರದ ತಥಾಕಥಿತ ಶ್ವೇತ ಪತ್ರದಲ್ಲಿ ಸೂಚಿಸಲಾದ ಆಕ್ಷೇಪಗಳಲ್ಲಿ ಪ್ರತಿಯೊಂದಕ್ಕೆ ಉತ್ತರ ನೀಡುವೆನು.

ನಾನು ಹಿಂದಿನ ವಾರ ನೀಡಿದ ಜುಮುಅ ಖುತುಬದಲ್ಲಿ ಪವಿತ್ರ ಖುರ್‌ಆನ್ ಅಧ್ಯಾಯ 41 ವಚನ 44 ಉಲ್ಲೇಖಿಸಿದ್ದೆನು. ಅದರಲ್ಲಿ ಅಲ್ಲಾಹನು ಹಝ್ರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೊಡನೆ ಹೀಗೆ ಹೇಳುತ್ತಾನೆ:

**"ನಿನಗಿಂತ ಮುಂಚೆ ಬಂದ ಸಂದೇಶವಾಹಕರೊಡನೆ ಹೇಳಿದ್ದು ಹೊರತು ಬೇರೇನನ್ನೂ ನಿನ್ನೊಡನೆ ಹೇಳಲಾಗಿಲ್ಲ."**

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಆಕ್ಷೇಪಿಸುವ ಶತ್ರುಗಳು ಯಾವುದೇ ಹೊಸ ವಿಷಯವನ್ನು ಹೇಳುವುದಿಲ್ಲ. ಅವರು ತಮಗಿಂತ ಮೊದಲು ಪ್ರವಾದಿಗಳನ್ನು ಆಕ್ಷೇಪಿಸಿದ ಶತ್ರುಗಳು ಮಾಡಿದ ಆಕ್ಷೇಪಗಳನ್ನೇ ನಕಲು ಮಾಡಿ ಹೇಳುತ್ತಾರೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗಿಂತ ಮೊದಲು ಆಗಮಿಸಿದ ಪ್ರವಾದಿಗಳ ವಿರುದ್ಧ ಯಾವ ಆಕ್ಷೇಪಗಳನ್ನು ಶತ್ರುಗಳು ಮಾಡಿದ್ದರೋ ಅವೇ ಆಕ್ಷೇಪಗಳನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಶತ್ರುಗಳು ಮಾಡುತ್ತಾರೆ. ಪ್ರತಿಯೊಂದು ಕಾಲಘಟ್ಟದಲ್ಲಿ ಆಗಮಿಸುವ ಪ್ರವಾದಿ ಆಕ್ಷೇಪಿಸಲ್ಪಡುತ್ತಾರೆ ಎಂಬುದು ಸ್ಥಿರವಾಗಿರುವ ಒಂದು ನಿಯಮವಾಗಿದೆ. ಪುರಾತನ ಆಕ್ಷೇಪಗಳನ್ನೇ ಪದೇ ಪದೇ ಪುನರಾವರ್ತಿಸಲಾಗುತ್ತಿದೆ. ಎಲ್ಲರಿಗಿಂತಲೂ ಮೊದಲು ಆಗಮಿಸಿದ ಪ್ರವಾದಿ ವಿರುದ್ಧ ಮಾಡಲಾದ ಆಕ್ಷೇಪ ವಿವರ ನಮಗೆ ತಿಳಿದಿಲ್ಲ. ಆ ಆಕ್ಷೇಪ ಮೊತ್ತಮೊದಲು ಮಾಡಿದುದಾಗಿರಬಹುದು. ಅನಂತರ ಇದು ಯಾವಾಗಲೂ ರೂಢಿಯಾಗಿ ಜಾರಿಗೊಂಡಿತು. ಅದರ ಕಡೆಗೆ ಪವಿತ್ರ ಖುರ್‌ಆನ್ ಸೂಚಿಸುತ್ತಾ ಇದೆ. ನಾನು ಈ ಖುತುಬದ ಪ್ರಾರಂಭದಲ್ಲಿ ಪಠಿಸಿದ ಪವಿತ್ರ ಖುರ್‌ಆನಿನ ವಚನದಲ್ಲಿ ಒಂದು ನಿರ್ದಿಷ್ಟ ಆಕ್ಷೇಪದ ಬಗ್ಗೆ ಪ್ರಸ್ತಾಪಿಸಲಾಗಿದೆ. ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ನಿರಾಕರಿಸುವವರು ಮಾಡುವ ಒಂದು ಆಕ್ಷೇಪದ ಬಗ್ಗೆ ಹೀಗೆ ಪವಿತ್ರ ಖುರ್‌ಆನ್ ಪ್ರಸ್ತಾಪಿಸುತ್ತದೆ:

**"ಅವಿಶ್ವಾಸಿಗಳು ಹೇಳುತ್ತಾರೆ: 'ಇದು ಅವನು ಸೃಷ್ಟನೆ ಮಾಡಿದ ಒಂದು ಸುಳ್ಳೇ ಆಗಿದೆ. ಅದಕ್ಕೆ ಬೇರೊಂದು ಜನಾಂಗ ಅವನಿಗೆ ಸಹಾಯ ಮಾಡಿದೆ.' ಹಾಗೆ ಅವರು ಅನ್ಯಾಯವೆಸಗಿದ್ದಾರೆ ಹಾಗೂ ಸುಳ್ಳನ್ನು ಹೇಳಿದ್ದಾರೆ." (25:5)**

ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಗೆ ಅರಬಿಯೇತರ ಜನಾಂಗ ಸಹಾಯ ಮಾಡುತ್ತಿರುವುದಾಗಿ ಅವಿಶ್ವಾಸಿಗಳು ಆಕ್ಷೇಪಿಸುವುದಾಗಿ ಪವಿತ್ರ ಖುರ್‌ಆನಿನ ಬೇರೆ ಒಂದು ಕಡೆಯಲ್ಲಿ ಸಹ ಉಲ್ಲೇಖಿಸಲಾಗಿದೆ. ಈ ಆಕ್ಷೇಪಕ್ಕೆ ಉತ್ತರವಾಗಿ ಪವಿತ್ರ ಖುರ್‌ಆನಿನಲ್ಲಿ ಹೀಗೆ ಹೇಳಲಾಗಿದೆ:

ಒಬ್ಬ ಅರಬಿಯೇತರನು ಪ್ರವಾದಿಗೆ ಸಹಾಯ ಮಾಡುತ್ತಾನಾದರೆ ಮತ್ತು ಬರೆದು ಕೊಡುತ್ತಾನಾದರೆ ಮತ್ತು ಒಬ್ಬ ಅರಬಿಯೇತರನ

---

ಶಾಂತಿಯನ್ನು ಸ್ಥಾಪಿಸುವ ಕಾರ್ಯಕ್ರಮದ ಒಂದು ಭಾಗವಾಗಿ ನಾನು ಅನೇಕ ಜಾಗತಿಕ ನಾಯಕರಿಗೆ ಪತ್ರಗಳನ್ನು ಬರೆದಿರುವೆನು ಮತ್ತು ಈ ಕಾಲಘಟ್ಟದಲ್ಲಿ ಶಾಂತಿ ಸ್ಥಾಪಿಸುವ ಆವಶ್ಯಕತೆಗಳ ಕಡೆಗೆ ಅವರ ಗಮನ ಸೆಳೆದಿರುವೆನು. ಪೋಪ್ ಬೆನಡಿಕ್ಟ್‌ರಿಗೂ ಇಸ್ರಾಯೇಲ್ ಮತ್ತು ಇರಾನಿನ ರಾಷ್ಟ್ರನಾಯಕರಿಗೂ ಪ್ರೆಸಿಡೆಂಟ್ ಒಬಾಮರಿಗೂ ಪತ್ರಗಳನ್ನು ಬರೆದಿರುವೆನು. ಜರ್ಮನಿಯ ಚಾನ್ಸಲರ್‌ರಿಗೂ ಇನ್ನಿತರ ರಾಷ್ಟ್ರನಾಯಕರಿಗೂ ಪತ್ರಗಳನ್ನು ಬರೆದಿರುವೆನು. ಈ ಪತ್ರಗಳನ್ನು ಅವರು ಶ್ರದ್ಧಾಪೂರ್ವಕವಾಗಿ ಓದುವ ರೆಂದು ನಾನು ಆಶಿಸಿ ಪ್ರಾರ್ಥಿಸುತ್ತೇನೆ. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಿ ಲೋಕವನ್ನು ನಾಶದಿಂದ ರಕ್ಷಿಸಲು ಅವರು ತಮ್ಮ ಪಾತ್ರವನ್ನು ವಹಿಸುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ. ಅವರು ನಮ್ಮನ್ನು ಯುದ್ಧದ ಕಡೆಗೊಯ್ಯದೆ ಶಾಂತಿಯ ಕಡೆಗೆ ಒಯ್ಯುವವರಾಗಲಿ ಎಂದು ನಾನು ಆಶಿಸಿ ಪ್ರಾರ್ಥಿಸುತ್ತೇನೆ.

ಇದಕ್ಕೆ ಸಂಬಂಧಿಸಿ ನಾನು ನಿಮ್ಮೆಲ್ಲರೊಂದಿಗೆ ಅಪೇಕ್ಷಿಸುವುದೇನೆಂದರೆ, ನ್ಯಾಯಪಾಲನೆ ಮಾಡಲು ಮತ್ತು ಜನರೆಲ್ಲರಿಗೂ ಅವರವರ ಹಕ್ಕುಗಳನ್ನು ಒದಗಿಸಿಕೊಡಲು ನೀವೆಲ್ಲರೂ ಪ್ರಯತ್ನಿಸಬೇಕು. ಮತ್ತು ಆ ಮೂಲಕ ಲೋಕವನ್ನು ನಾಶದಿಂದ ರಕ್ಷಿಸಬೇಕು.

ಅತ್ಯಂತ ಮುಖ್ಯ ಮಾರ್ಗ ನಮ್ಮ ಸೃಷ್ಟಿಕರ್ತನನ್ನು ಗುರುತಿಸುವುದಾಗಿದೆ. ಒಬ್ಬನು ತನ್ನ ಸೃಷ್ಟಿಕರ್ತನನ್ನು ಗುರುತಿಸುವಾಗ ಸಹಜವಾಗಿ ಸೃಷ್ಟಿಕರ್ತನ ಸೃಷ್ಟಿಗಳ ಬಗ್ಗೆ ಪ್ರೀತಿ ಅವನ ಹೃದಯದೊಳಗೆ ತುಂಬುತ್ತದೆ. ದೇವನ ಅನುಗ್ರಹದಿಂದ ಅಹ್ಮದಿಯರಾದ ನಾವು ದೇವನೊಂದಿಗೆ ಸಂಬಂಧವನ್ನು ಸ್ಥಾಪಿಸಿ ಅವನಿಗೆ ಭಯಪಡುತ್ತಾ ನಾವು ಇಸ್ಲಾಮಿನ ಉಪದೇಶಗಳನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತೇವೆ. ಆದುದರಿಂದ ನಾವು ಮಾನವರ ಬಗ್ಗೆ ತುಂಬಾ ಪ್ರೀತಿಯನ್ನು ಹೊಂದಿದ್ದೇವೆ. ಈ ಕಾರಣದಿಂದ ನಾವು ಯಾವಾಗಲೂ "ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ" ಎಂದು ಘೋಷಿಸುತ್ತೇವೆ. ಈ ಉದ್ದೇಶವನ್ನು ಸಾಧಿಸಲು ನಾವು ಅಲ್ಲಾಹನ ನೆರವು ಕೋರುತ್ತಾ ನಮ್ಮ ಪ್ರಯತ್ನಗಳನ್ನು ಅನುಗ್ರಹಿಸಬೇಕೆಂದು ಬೇಡಿಕೊಳ್ಳುತ್ತಾ ಇರುತ್ತೇವೆ. ಕೊನೆಯದಾಗಿ, ನೀವು ಇಲ್ಲಿಗೆ ಬಂದು ನನ್ನ ಭಾಷಣವನ್ನು ಆಲಿಸುತ್ತಾ ಇದ್ದುದಕ್ಕಾಗಿ ನಿಮಗೆ ಇನ್ನೊಮ್ಮೆ ಹೃತ್ಪೂರ್ವಕವಾಗಿ ಕೃತಜ್ಞತೆ ಅರ್ಪಿಸುತ್ತೇನೆ. ಅಲ್ಲಾಹನು ನಿಮಗೆ ಅನುಗ್ರಹ ನೀಡಲಿ. ನಿಮಗೆ ಬಹಳ ಧನ್ಯವಾದಗಳು.

**(Review of Religions ಒಕ್ಟೋಬರ್ 2012 ಸಂಚಿಕೆಯಿಂದ**
**ಭಾಷಾಂತರ : A, ಅಬ್ದುಸ್ಸಲಾಮ್)**

ಸಹಾಯದಿಂದ ಪ್ರವಾದಿತ್ವದ ವಾದ ಮಾಡಲಾಗಿದ್ದರೆ ಅವರು ತಂದ ಗ್ರಂಥದಲ್ಲಿ ಯಾವುದೇ ಅರಬಿಯೇತರ ಪ್ರಭಾವ ಏಕೆ ಕಾಣಿಸುವುದಿಲ್ಲ? ಅರಬಿಯೇತರರ ಸಹಾಯದಿಂದ ರಚಿಸಲಾದ ಗ್ರಂಥದಲ್ಲಿ ಬಳಸಲಾದ ಸ್ವಚ್ಛ ಅರಬಿ ಭಾಷೆ ಅರಬಿಯೇತರರ ಭಾಷೆಗಿಂತ ಸಂಪೂರ್ಣ ವಿಭಿನ್ನವಾಗಿರಲು ಹೇಗೆ ಸಾಧ್ಯವಾಯಿತು?

## ಹೊಸ ಸಂಶೋಧಕರ ನಿರಾಧಾರ ಆರೋಪ

ಈಗಿನ ಕಾಲಘಟ್ಟದಲ್ಲಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ (ಮಸೀಹ್ ಮೌಊದ್) ಅಲೈಹಿಸ್ಸಲಾಮರ ವಿರುದ್ಧ ಮಾಡಲಾದ ಆಕ್ಷೇಪಗಳನ್ನು ಪವಿತ್ರ ಖುರ್‌ಆನಿನ ವಚನಗಳ ಬೆಳಕಿನಲ್ಲಿ ನೋಡುವುದಾದರೆ ಹಿಂದಿನ ಕಾಲದವರು ಮಾಡಿದಂತಹ ಆಕ್ಷೇಪಗಳೇ ಅವುಗಳಾಗಿವೆ. ಹಿಂದೆ ಆಗಮಿಸಿದ ಪ್ರವಾದಿಗಳ ವಿರುದ್ಧ ಮಾಡಿರದ ಒಂದು ಹೊಸ ಆಕ್ಷೇಪ ಕೂಡ ಅವುಗಳಲ್ಲಿ ಇಲ್ಲ. ಹಲವು ಕಡೆ ಹಝ್ರತ್ ಮುಹಮ್ಮದ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ವಿರುದ್ಧ ಮಾಡಲಾದ ಆಕ್ಷೇಪಗಳನ್ನೇ ಹಝ್ರತ್ ಪೈಗಂಬರರ ಸತ್ಯವಂತನಾದ ಪ್ರೇಮಿಯೂ ಪರಿಶುದ್ಧ ಸೇವಕನೂ ಆಗಿರುವ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಪುನರಾವರ್ತಿಸಲಾಗುತ್ತಿದೆ. ಪಾಕಿಸ್ತಾನ ಸರಕಾರ ಪ್ರಕಟಿಸಿದ ತಥಾಕಥಿತ ಶ್ವೇತ ಪತ್ರದಲ್ಲಿ ಅಹ್ಮದಿಯಾ ಜಮಾಅತ್ ಬಗ್ಗೆ, ಅದು ಬ್ರಿಟಿಷರು ಸ್ವತಃ ನೆಟ್ಟ ಗಿಡ, ವಾಗ್ದತ್ತ ಮಸೀಹರು ಬ್ರಿಟಿಷರು ನೇಮಿಸಿದ ಪ್ರವಾದಿ ಎಂದು ಬಹಳ ಒತ್ತಿ ಹೇಳಲಾಗಿದೆ. ಶ್ವೇತಪತ್ರದಲ್ಲಿ ಹೀಗೆ ಬರೆಯಲಾಗಿದೆ.

“ಅಹ್ಮದಿಯಾ ಜಮಾಅತ್ ಬ್ರಿಟಿಷರು ಸ್ವತಃ ನೆಟ್ಟ ಗಿಡವೆಂದು ನವೀನ ಸಂಶೋಧಕರು ಸಾಬೀತುಗೊಳಿಸಿರುವರು. ಬ್ರಿಟಿಷ್ ಸರಕಾರದ ಹಿತಾಸಕ್ತಿಗಳನ್ನು ಸಂರಕ್ಷಿಸಲು ಗಿಡವನ್ನು ನೆಡಲಾಗಿದೆ.”

ನವೀನ ಸಂಶೋಧಕರು ಯಾರೆಂಬುದರ ಬಗ್ಗೆ ಮತ್ತು ಅವರ ಸಂಶೋಧನೆಯ ವರದಿ ಏನೆಂಬುದರ ಬಗ್ಗೆ ಯಾವ ಪ್ರಸ್ತಾಪವನ್ನೂ ನಾವು ಶ್ವೇತಪತ್ರದಲ್ಲಿ ಕಾಣುವುದಿಲ್ಲ. ಪಾಶ್ಚಿಮಾತ್ಯ ಜಗತ್ತು ಮತ್ತು ವಿದ್ಯಾಭ್ಯಾಸ ಗಳಿಸಿದ ಇತರ ಜನರು ಸಮ್ಮತಿಸುವ ರೀತಿಯಲ್ಲಿ ಭಾಷಾಪ್ರಯೋಗ ನಡೆಸಿ ಊಹಾಪೋಹದ ಒಂದು ಆಕ್ಷೇಪವನ್ನು ಸೃಜಿಸಿ ಪ್ರಸ್ತಾಪಿಸಲಾಗಿದೆ. “ನವೀನ ಸಂಶೋಧಕರು ಸಾಬೀತು ಗೊಳಿಸಿರುವರು” ಎಂದು ಹೇಳಿ ಬಹಳ ದೊಡ್ಡ ಸಂಶೋಧನೆ ನಡೆಸಲಾಗಿದೆ ಎಂದು ಸೂಚಿಸಲಾಗಿದೆ.

## ಶ್ವೇತ ಪತ್ರ ಪ್ರಕಟಿಸಿದ ವಿಚಿತ್ರ ಸಂಶೋಧನೆ

ಈ ವಿಷಯಕ್ಕೆ ಸಂಬಂಧಿಸಿ ಶ್ವೇತ ಪತ್ರದಲ್ಲಿ The Arrival of British Empire in India: Cited by Ajami Israil ಎಂಬ ಪುಸ್ತಕದಲ್ಲಿ ಹೀಗೆ ಬರೆದುದಾಗಿ ಉಲ್ಲೇಖಿಸಲಾಗಿದೆ: ಬ್ರಿಟಿಷರು ಪಾರ್ಲಿಮೆಂಟಿನಲ್ಲಿ ಹೀಗೆ ಠರಾವು ಮಂಡಿಸಿ ಅಂಗೀಕರಿಸಿದರು: “ಹಿಂದೂಸ್ತಾನವನ್ನು ತಮ್ಮ ವಶದಲ್ಲಿರಿಸಲು ಅಲ್ಲಿ ಒಬ್ಬ ಸುಳ್ಳು ಪ್ರವಾದಿಯನ್ನು ನೇಮಿಸಿ ಝಿಲ್ಲೀ ನಬಿ ಎಂದು ಹೆಸರಿಸಬೇಕು.”

ಈ ಉಲ್ಲೇಖದ ಪ್ರಕಾರ ಝಿಲ್ಲೀ ನಬಿ ಎಂಬುದು ಬ್ರಿಟಿಷರು ಬಳಸಿದ ಪದಪ್ರಯೋಗವಾಗಿದೆ. ಝಿಲ್ಲೀ ನಬಿಯನ್ನು ನೇಮಿಸಿ ಮುಸ್ಲಿಮರನೆಲ್ಲ ತಮ್ಮ ಸ್ವಾಧೀನಕ್ಕೆ ತರಬೇಕೆಂದು ಅವರು ಉದ್ದೇಶಿಸಿದ್ದರು ಎಂದು ಸೂಚಿಸಲಾಗಿದೆ.

ಕೆಲವು ವರ್ಷಗಳ ಹಿಂದೆ ನಾನು ವಕ್ಫೇ ಜದೀದ್ ಕಾರ್ಯ ಕರ್ತನಾಗಿದ್ದಾಗ ಲಂಡನ್ ಮಸ್‌ಜಿದ್ ಇಮಾಮರಿಗೆ ಹೀಗೆ ಬರೆದೆ: "ಪುಸ್ತಕದಲ್ಲಿ ಬರೆದಿದೆ ಎನ್ನಲಾದುದು ಅಪ್ಪಟ ಸುಳ್ಳಾಗಿದೆ. ಹೀಗಿದ್ದರೂ ಆ ಪುಸ್ತಕದಲ್ಲಿ ಹೀಗೆ ಬರೆದಿದೆಯೋ ಎಂದು ನೋಡಬೇಕು. ಅಥವಾ ಅದರಲ್ಲಿ ಬರೆದಿರುವುದನ್ನು ಹಸ್ತಕ್ಷೇಪ ನಡೆಸಿ ಬಳಸಲಾಗಿದೆಯೇ ಎಂದು ನೋಡಬೇಕು." ಲಂಡನ್ ಮಸ್‌ಜಿದಿನ ಇಮಾಮರು ಹೀಗೆ ಉತ್ತರ ಬರೆದರು: "ಈ ಹೆಸರನ್ನು ಹೊಂದಿದ ಯಾವ ಪುಸ್ತಕವೂ ಇಲ್ಲ."

ನಾನು ಇಮಾಮರಿಗೆ ಹೀಗೆ ಪುನಃ ಬರೆದೆನು: "ನೀವು ಇನ್ನಷ್ಟು ಸಂಶೋಧನೆ ನಡೆಸಿರಿ. ಮುದ್ರಣಾಲಯದಲ್ಲಿ ವಿಚಾರಿಸಿರಿ." ಈ ಪತ್ರಕ್ಕೆ ಉತ್ತರವಾಗಿ ಇಮಾಮರು ಹೀಗೆ ಬರೆದರು: "ನಾವು ಬಹಳ ಸಂಶೋಧನೆ ನಡೆಸಿದೆವು. ಆ ಪುಸ್ತಕ ಮುದ್ರಣಗೊಳಿಸಲಾಯಿತು ಎಂದು ಹೇಳಲಾದ ಮುದ್ರಣಾಲಯವೇ ಅಲ್ಲಿ ಇಲ್ಲ."

ಈ ವಿಷಯಕ್ಕೆ ಸಂಬಂಧಿಸಿ ಬ್ರಿಟಿಷ್ ಮ್ಯೂಸಿಯಂ ಮತ್ತು ಬೇರೆ ಮುಖ್ಯ ಸಂಸ್ಥೆಗಳೊಂದಿಗೆ ಸಂಪರ್ಕ ಸ್ಥಾಪಿಸಿ ವಿಚಾರಿಸಿದಾಗ, “ಆ ಹೆಸರಿನ ಪುಸ್ತಕವಾಗಲಿ ಆ ಹೆಸರಿನ ಮುದ್ರಣಾಲಯವಾಗಲಿ ಇಲ್ಲ. ಈ ಹೆಸರಿನ ಪುಸ್ತಕದ ಬಗ್ಗೆಯಾಗಲಿ ಮುದ್ರಣಾಲಯದ ಬಗ್ಗೆಯಾಗಲಿ ಯಾವ ಪ್ರಸ್ತಾಪವೂ ಎಲ್ಲಿಯೂ ಇಲ್ಲ. ಆದುದರಿಂದ ಅದರಲ್ಲಿ ಇದೆ ಎಂದು ಹೇಳಲಾದ ಉಲ್ಲೇಖದ ಬಗ್ಗೆ ಸ್ಪಷ್ಟೀಕರಣ ನೀಡಲಾರೆವು” ಎಂದು ತಿಳಿಸಿದರು.

ಇದು ಪಾಕಿಸ್ತಾನ ಸರಕಾರದ ನವೀನ ಸಂಶೋಧಕರ ಸಂಶೋಧನೆಯ ರೀತಿ. ಅವರ ಹೇಳಿಕೆ ಬಗ್ಗೆ ಸಂಶೋಧನೆ ಎಂದು ಹೇಳುವುದು ನಾಚಿಕೆಗೇಡಾಗಿದೆ.

ಪಾಕಿಸ್ತಾನ ಸರಕಾರ ಇದನ್ನು ನವೀನ ಸಂಶೋಧನೆ ಎಂದು ಹೆಸರಿಸಿ ಲೋಕದ ಮುಂದೆ ಬಹಳ ಹೆಮ್ಮೆಯಿಂದ ಇರಿಸಿದೆ. ಅದರಲ್ಲಿ ಅನೇಕ ಕಡೆ ಸುಳ್ಳು ಆರೋಪ ಮತ್ತು ಪರಿಹಾಸ ಮಾಡಲಾಗಿದೆ. ಅವರು ಬರೆದುದರ ಸಂಕ್ಷಿಪ್ತ ವಿವರ ಹೀಗಿದೆ: ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಆಂಗ್ಲೇಯರನ್ನು ಮಿತಿಮೀರಿ ಹೊಗಳಿರುವರು ಮತ್ತು ಅವರನ್ನು ಮೆಚ್ಚಿಸಿರುವರು. ಒಂದು ಸಂದರ್ಭದಲ್ಲಿ ಅಹ್ಮದಿಯಾ ಜಮಾಅತಿನ ಸ್ಥಾಪಕರು ಬರೆದುದು ಮುದ್ರಿತವಾಗಿ ಪ್ರಕಟಗೊಳಿಸಲಾಗಿದ್ದು, ಅದರಲ್ಲಿ “ನಾನು (ಎಂದರೆ ಅಹ್ಮದಿಯಾ ಜಮಾಅತಿನ ಸ್ಥಾಪಕ) ಮತ್ತು ಅಹ್ಮದಿಯಾ ಜಮಾಅತ್ ಆಂಗ್ಲೇಯರು ಸ್ವತಃ ನೆಟ್ಟ ಗಿಡ” ಎಂದು ಬರೆದಿದ್ದಾರೆ. ಇವೆರಡು ವಿಷಯಗಳ ಬಗ್ಗೆ ನಾನು ಕೆಲವು ಸತ್ಯಾಂಶಗಳನ್ನು ನಿಮ್ಮ ಮುಂದೆ ಇರಿಸಲು ಬಯಸುತ್ತೇನೆ.

## ಸಿಖ್ಖರ ಆಡಳಿತೆಯಲ್ಲಿ ಮುಸ್ಲಿಮರ ದಾರುಣ ಸ್ಥಿತಿ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಾಸ್ತವಿಕವಾಗಿಯೂ ಆಂಗ್ಲೇಯರನ್ನು ಹೊಗಳಿದ್ದರು ಎಂದು ನಾನು ಮೊದಲನೆಯ ವಿಷಯದ ಬಗ್ಗೆ ಹೇಳಲು ಬಯಸುತ್ತೇನೆ. ಆದರೆ ಅವರು ಆಂಗ್ಲೇಯರನ್ನು ಹೊಗಳಿದ ಸಂದರ್ಭಗಳಲ್ಲಿ ಯಾವಾಗಲೂ ಹೀಗೆ ಬರೆದಿರುವರು: ನಾನು ಆಂಗ್ಲೇಯ ಸರಕಾರವನ್ನು ಹೊಗಳುವುದೇ ಕೆಂದರೆ, ಹಿಂದೂಸ್ತಾನದ ಮುಸ್ಲಿಮರಿಗೆ ಮತ್ತು ಮುಖ್ಯವಾಗಿ ಪಂಜಾಬಿನ ಮುಸ್ಲಿಮರಿಗೆ ಎಂತಹ ದುಃಖಕರವಾದ ಅವಸ್ಥೆ ಉಂಟಾಗಿತ್ತೆಂದರೆ ಅವರು ಎಂತಹ ಕೆಟ್ಟ ಸ್ಥಿತಿಯಲ್ಲಿದ್ದರೆಂದರೆ ಅವರಿಗೆ ಯಾವುದೇ ಹಕ್ಕು ದೊರಕುತ್ತಿರಲಿಲ್ಲ. ಸಿಖ್ಖರು ಎಂತಹ ದೌರ್ಜನ್ಯಗಳಿಗೆ ಮುಸ್ಲಿಮರನ್ನು ಗುರಿಪಡಿಸಿದರೆಂದರೆ, ಅಂತಹ ದೌರ್ಜನ್ಯದ ರೂಪ ಬೇರೆಲ್ಲೂ ಕಾಣಿಸುತ್ತಿರಲಿಲ್ಲ, ಉರಿಯುತ್ತಿರುವ ಬೆಂಕಿಯ ಕುಂಡದಿಂದ ಮುಸ್ಲಿಮರನ್ನು ಆಂಗ್ಲೇಯ ಸರಕಾರ ಬಂದು ಹೊರಗೆ ತಂದು ರಕ್ಷಿಸಿತು. ನಮಗೆ ಎಲ್ಲಾ ರೀತಿಯ ಹಕ್ಕುಗಳನ್ನು ನೀಡಿತು. ಈ ಕಾರಣದಿಂದ

ನಾನು ಸರಕಾರವನ್ನು ಪ್ರಶಂಸಿಸಲು ನಿರ್ಬಂಧಿತನಾದೆನು. ಇದು ಪ್ರವಾದಿಗಳ ನಡೆವಳಿಕೆಯಾಗಿದೆಯಲ್ಲದೆ ಮಾನುಷಿಕ ಸೌಜನ್ಯತೆಯು ಸಹ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸಲು ಆವಶ್ಯಪಡುತ್ತದೆ. ಸಿಖ್ಖರ ಆಡಳಿತೆಯ ಕಾಲದಲ್ಲಿ ಮುಸ್ಲಿಮರು ಬಹಳ ಅಪಾಯದ ಸ್ಥಿತಿಯಲ್ಲಿದ್ದರು.

ಮೇಲೆ ಬರೆದುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದುದಾಗಿದೆ. ಮುಸ್ಲಿಮರಿಗಿಂತ ಹಿಂದುಗಳು ಸಿಖ್ಖರೊಂದಿಗೆ ಬಹಳ ಹೆಚ್ಚು ಸೌಹಾರ್ದ ಸಂಬಂಧ ಹೊಂದಿದ್ದರು. ಹಿಂದೂ ಸಂಶೋಧಕರು ಸಹ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೇಳಿಕೆಗಳನ್ನು ಬೆಂಬಲಿಸುವ ರೀತಿ ಬರೆದಿರುವರು.

ನಾನು ಇಂದು ನಿಮ್ಮ ಮುಂದೆ ಎರಡು ಉಲ್ಲೇಖಗಳನ್ನು ಇರಿಸಲು ಬಯಸುತ್ತೇನೆ. ಒಂದು ಉಲ್ಲೇಖ ಒಬ್ಬ ಹಿಂದೂ ಸಂಶೋಧಕರದು. ಇನ್ನೊಂದು ಅಹ್ಮದಿಯತೇತರನಾದ ಒಬ್ಬ ಮುಸ್ಲಿಮರದು. ಆ ಮೂಲಕ ಆ ಕಾಲದಲ್ಲಿ ಮುಸ್ಲಿಮರ ಸ್ಥಿತಿ ಹೇಗಿತ್ತೆಂದು ಮತ್ತು ಆಂಗ್ಲೇಯ ಸರಕಾರ ಮುಸ್ಲಿಮರನ್ನು ವಿಪತ್ತಿನಿಂದ ರಕ್ಷಿಸಿದ ಬಗ್ಗೆ ತಿಳಿಯುತ್ತದೆ.

ತುಲಸೀ ರಾಮ್ 1872ರಲ್ಲಿ ಪ್ರಕಟಿಸಿದ "ಶೇರೇ ಪಂಜಾಬ್" ಎಂಬ ಗ್ರಂಥದಲ್ಲಿ ಹೀಗೆ ಬರೆದಿದ್ದಾರೆ:

> "ಆರಂಭದಲ್ಲಿ ಸಿಖ್ಖರು ದರೋಡೆ ಮತ್ತು ಲೂಟಿ ಮಾಡುತ್ತಿದ್ದರು. ಅವರು ಕಂಡದ್ದನ್ನೆಲ್ಲಾ ಲೂಟಿ ಮಾಡಿ ತಂತಮ್ಮಲ್ಲಿ ಹಂಚಿಕೊಳ್ಳುತ್ತಿದ್ದರು. ಸಿಖ್ಖರು ಮುಸ್ಲಿಮರೊಂದಿಗೆ ಬಹಳ ಹಗೆತನವನ್ನು ಹೊಂದಿದ್ದರು. ಮುಸ್ಲಿಮರು ಅಝಾನ್ ಕರೆ ನೀಡುವುದನ್ನು ಅವರು ಅನುಮತಿಸುತ್ತಿರಲಿಲ್ಲ. ಅವರು ಮಸ್‌ಜಿದ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಅದರಲ್ಲಿ ಗ್ರಂಥ ಪಠಣವನ್ನು ತೊಡಗುತ್ತಿದ್ದರು. ಈ ಕ್ರಮವನ್ನು 'ಮೌತ್‌ಕಡಾ' ಎಂದು ಹೆಸರಿಸುತ್ತಿದ್ದರು. ಅವರು ಮದ್ಯಪಾನಿಗಳಾಗಿದ್ದರು. ಕೆಲವು ದೃಕ್‌ಸಾಕ್ಷಿಗಳು ಹೀಗೆ ಹೇಳಿದ್ದಾರೆ: ಸಿಖ್ಖರು ಎಲ್ಲಿಯಾದರೂ ಅನ್ಯಜಾತಿಯವರು ಉಪಯೋಗಿಸಿದ ಮಣ್ಣಿನ ಪಾತ್ರೆಯನ್ನು ಕಂಡರೆ ಅದರ ಮೇಲೆ ತಮ್ಮ ಪಾದರಕ್ಷೆಯಿಂದ ಐದು ಸಾರಿ ಹೊಡೆದು ಆ ಪಾತ್ರೆಯನ್ನು ಉಪಯೋಗಿಸುತ್ತಿದ್ದರು. ಐದು ಸಾರಿ ಪಾದರಕ್ಷೆಯಿಂದ ಹೊಡೆದರೆ ಅಂತಹ ಪಾತ್ರೆ ಪರಿಶುದ್ಧವಾಗುತ್ತದೆ ಎಂದು ಅವರು ಭಾವಿಸುತ್ತಿದ್ದರು."

ಇಂತಹ ಸಿಖ್ಖರ ಆಡಳಿತೆಯಲ್ಲಿ ಮುಸ್ಲಿಮರನ್ನು ದುರವಸ್ಥೆಯಿಂದ ಆಂಗ್ಲೇಯ ಸರಕಾರ ರಕ್ಷಿಸಿತು. ವಿವಿಧ ಚರಿತ್ರೆ ಗ್ರಂಥಗಳಲ್ಲಿ ಸಿಖ್ಖರ ಆಡಳಿತೆ ಬಗ್ಗೆ ಬಹಳ ದುಃಖಕರವಾದ ವಿವರಗಳು ದೊರಕುತ್ತವೆ. ಮುಹಮ್ಮದ್ ಜಅಫರ್ ಥಾನೇಸರಿ ಎಂಬವರ "ಸವಾನಿಹೆ ಅಹ್ಮದಿ" ಎಂಬ ಪುಸ್ತಕದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗಿಂತ ಮೊದಲು ಆಗಮಿಸಿದ ಮುಜದ್ದಿದ್ ಹಝ್ರತ್ ಸಯ್ಯಿದ್ ಅಹ್ಮದ್ ಬರೇಲವಿ ಹೀಗೆ ಹೇಳಿದುದಾಗಿ ಬರೆಯಲಾಗಿದೆ:

> "ನಾವು ಪಂಜಾಬಿನಲ್ಲಿ ಪ್ರಯಾಣ ಮಾಡುತ್ತಿದ್ದಾಗ ನೀರು ಕುಡಿಯಲು ಒಂದು ಬಾವಿಯ ಸಮೀಪಕ್ಕೆ ಹೋದೆವು. ಅಲ್ಲಿ ಕೆಲವು ಸಿಖ್ಖ್ ವನಿತೆಯರು ಬಾವಿಯಿಂದ ನೀರನ್ನು ಸೇದುತ್ತಿರುವುದಾಗಿ ನಾವು ಕಂಡೆವು. ನಮಗೆ ಅವರ ಪ್ರಾದೇಶಿಕ ಭಾಷೆ ತಿಳಿಯದ ಕಾರಣ ನಾವು ನಮ್ಮ ಬಾಯಿಗಳಿಗೆ ಕೈಗಳನ್ನು ಇರಿಸಿ ನಮಗೆ ನೀರು ಕುಡಿಯಲು ಕೊಡಿರಿ ಎಂದು ಸಂಜ್ಞೆಯಿಂದ ಸೂಚಿಸಿದೆವು. ಆಗ ಆ ವನಿತೆಯರು ಅತ್ತಿತ್ತ ನೋಡುತ್ತಾ ಪುಶ್ತು ಭಾಷೆಯಲ್ಲಿ ನಮ್ಮೊಂದಿಗೆ ಹೀಗೆ ಹೇಳಿದರು: ನಾವು ಅಫ್‌ಘಾನ್ ದೇಶದ ಇಂತಹ ಪ್ರದೇಶದ ಇಂತಹ ಊರಿನ ನಿವಾಸಿಗಳಾಗಿದ್ದೇವೆ. ಸಿಖ್ಖರು ನಮ್ಮನ್ನು ಬಲಾತ್ಕಾರ ದಿಂದ ಇಲ್ಲಿಗೆ ತಂದಿದ್ದಾರೆ." (ಸವಾನಿಹೆ ಅಹ್ಮದಿ – ಪುಟ 24)

ಹಝ್ರತ್ ಸಯ್ಯಿದ್ ಅಹ್ಮದ್ ಬರೇಲವಿಯವರ ಜೀವನ ಚರಿತ್ರೆಯಲ್ಲಿರುವ ಸಂಭವ ಮೇಲಿನದಾಗಿದೆ. ಎನ್‌ಸೈಕ್ಲೋಪೀಡಿಯಾ ಆಫ್ ಸಿಖ್ ಲಿಟರೇಚರ್‌ನಲ್ಲಿ ಸಿಖ್ಖರ ದೌರ್ಜನ್ಯಗಳ ಬಗ್ಗೆ ವಿವರಣೆಗಳಿವೆ. ಅವು ಹೃದಯಕ್ಕೆ ಅತ್ಯಂತ ನೋವುಂಟುಮಾಡುವವುಗಳಾಗಿವೆ. ಅದರಲ್ಲಿ ಬಹಳ ಸಂಖ್ಯೆಯಲ್ಲಿ ಮುಸ್ಲಿಮ್ ಮಹಿಳೆಯರನ್ನು ಪೀಡಿಸಿದ ಬಗ್ಗೆ, ಮಸ್‌ಜಿದ್‌ಗಳನ್ನು ನಾಶಗೊಳಿಸಿದ ಬಗ್ಗೆ, ಮಸ್‌ಜಿದ್‌ಗಳಲ್ಲಿ ಕತ್ತೆಗಳನ್ನು ಕಟ್ಟಿ ಹಾಕಿದ ಬಗ್ಗೆ, ಮುಸ್ಲಿಮರನ್ನು ಸಾಮೂಹಿಕವಾಗಿ ಹತ್ಯೆಗೈದ ಬಗ್ಗೆ, ಅಝಾನ್ ಕರೆ ನೀಡಿದವರನ್ನು ಹತ್ಯೆ ಮಾಡಿದ ಬಗ್ಗೆ ವಿವರಣೆಗಳನ್ನು ನೀಡಲಾಗಿದೆ.

## ಆಂಗ್ಲೇಯ ಸರಕಾರವನ್ನು ಪ್ರಶಂಸಿದುದರ ವಾಸ್ತವಿಕ ಕಾರಣವೇನು?

ಅದು ಎಂತಹ ಕಾಲಘಟ್ಟವಾಗಿತ್ತೆಂದರೆ ಮುಸ್ಲಿಮರನ್ನು ಸಿಖ್ಖರು ಎಲ್ಲಾ ಹಕ್ಕುಗಳಿಂದ ವಂಚಿತರನ್ನಾಗಿ ಮಾಡಿದ್ದರು. ನೀವು ನೋಡಿರಿ, ಅಝಾನ್ ಕರೆ ನೀಡುವುದನ್ನು ಈಗಲೂ ತಡೆಯಲಾಗುತ್ತಿದೆ. ಇದು ಈಗ ಹಳೆಯ ಸಂಭವವಾಗಿ ಉಳಿದಿಲ್ಲ. ಈಗ ಸಹ ಎಂತಹ ಜನರು ಹುಟ್ಟಿರುವರೆಂದರೆ, ಅವರಿಗೆ ಅಝಾನ್ ಶಬ್ದ ಸಹ ಅಸಹ್ಯವಾಗುತ್ತಿದೆ. ಇತ್ತೀಚೆಗೆ ಹಿಂದೂಸ್ತಾನದ ಒಬ್ಬ ಸಿಖ್ಖ್, ಪತ್ರಿಕೆಯಲ್ಲಿ ಒಂದು ಪತ್ರವನ್ನು ಪ್ರಕಟಿಸಿ ಹೀಗೆ ಬರೆದರು: "ಮುಸ್ಲಿಮರು ಸಿಖ್ಖರನ್ನು ನಿಂದಿಸುತ್ತಾ, 'ಮುಸ್ಲಿಮರು ಅಝಾನ್ ಕರೆ ನೀಡಿದಾಗ ನಿಮಗೆ ಭ್ರಷ್ಟತೆ ಬಾಧಿಸುತ್ತಿರುವುದಾಗಿ ಹೇಳಿ ಮುಸ್ಲಿಮರು ಅಝಾನ್ ಕರೆ ನೀಡುವುದನ್ನು ಬಲಾತ್ಕಾರದಿಂದ ತಡೆಗಟ್ಟುತ್ತಿದ್ದಂತಹ ಅಜ್ಞಾನಿಗಳಾಗಿರುವಿರಿ' ಎಂದು ಹೇಳುತ್ತಿದ್ದರು. ಈಗ ನಮ್ಮ ಹೃದಯಕ್ಕೆ ಸಮಾಧಾನ ದೊರಕಿದೆ. ಮುಸ್ಲಿಮರೇ ಮುಸ್ಲಿಮರ ಅಝಾನ್ ಕರೆಯನ್ನು ತಡೆದಿರುವರು. ಈಗ ನಾವು ಆ ದೋಷಾರೋಪದಿಂದ ಮುಕ್ತರಾದೆವು. ನಾವು ಪರಿಪೂರ್ಣ ವಾಗಿ ದೋಷಮುಕ್ತರಾದೆವು."

ಲೋಕದ ಜೀವಿತದಲ್ಲಿ ಇಂತಹ ಕಾಲಘಟ್ಟಗಳು ಬರುತ್ತಾ ಹೋಗುತ್ತಾ ಇರುತ್ತವೆ. ಅಜ್ಞಾನ ವರ್ಧಿಸುವಾಗ ಇಂತಹ ಕೃತ್ಯಗಳು ನಡೆಯುತ್ತವೆ.

ನಾವು ಈಗ ಚರ್ಚಿಸುವುದು ಸಿಖ್ಖರು ಬಹಳ ಕೆಟ್ಟ ಕೆಲಸ ಮಾಡಿದರು ಎಂಬುದರ ಬಗ್ಗೆ ಅಲ್ಲ. ನಾವು ಚರ್ಚಿಸುವುದು ಸಿಖ್ಖರ ದೌರ್ಜನ್ಯದಿಂದ ಮುಸ್ಲಿಮರನ್ನು ರಕ್ಷಿಸಿದ ಜನಾಂಗಕ್ಕೆ ಕೃತಜ್ಞತೆ ಅರ್ಪಿಸುವುದರ ಬಗ್ಗೆ ಆಗಿದೆ. ಹೀಗೆ ಕೃತಜ್ಞತೆ ಅರ್ಪಿಸದಿದ್ದರೆ ಅದು ಎಂತಹ ಮಾನವೀಯತೆ? ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಮಾಡಲಾಗುತ್ತಿರುವ ಆರೋಪ ಅವರು ಸ್ವತಃ ತನ್ನನ್ನು ಬ್ರಿಟಿಷರು ನೆಟ್ಟ ಗಿಡವೆಂದು ಹೇಳಿದರೆಂದಾಗಿದೆ. ಜಿಹಾದನ್ನು ರದ್ದುಗೊಳಿಸಲಿಕ್ಕಾಗಿ ಬ್ರಿಟಿಷರು ಅವರನ್ನು ನೇಮಿಸಿದರು ಎಂದು ಸಹ ಅವರ ಮೇಲೆ ಆಕ್ಷೇಪಿಸಲಾಗುತ್ತಿದೆ.

ಈ ಆಕ್ಷೇಪಗಳಿಗೆ ನಾನು ಕ್ರಮಾನುಸಾರವಾಗಿ ಉತ್ತರ ನೀಡುವೆನು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಹಳ ಸ್ಪಷ್ಟ ಶಬ್ದಗಳಲ್ಲಿ ಹೀಗೆ ಹೇಳಿದ್ದಾರೆ: ನಾನು ಯಾರನ್ನೂ ಮೆಚ್ಚಿಸಲಿಕ್ಕಾಗಿ ಹೊಗಳಲಿಲ್ಲ. ಇಸ್ಲಾಮೀ ಕರ್ತವ್ಯದ ಈಡೇರಿಸುವಿಕೆಗಾಗಿ ವಾಸ್ತವಿಕ ವಿಷಯವನ್ನು ಹೇಳಿರುವೆನು. ಇದರ ಹೊರತು ಬೇರೆ ಯಾವ ಕಾರಣವೂ ಇಲ್ಲ. ಅವರು ಹೀಗೆ ಹೇಳುತ್ತಾರೆ:

"ಅವಿವೇಕಿಗಳೇ ಆಲಿಸಿರಿ. ನಾನು ಈ ಸರಕಾರವನ್ನು ಹಾಗೇನೂ ಹೊಗಳುವುದಿಲ್ಲ. ವಾಸ್ತವಾಂಶವೇನೆಂದರೆ, ಇಸ್ಲಾಮ್ ಧರ್ಮ ಮತ್ತು ಧಾರ್ಮಿಕ ಆಚಾರಗಳ ಅನುಷ್ಠಾನದಲ್ಲಿ ಹಸ್ತಕ್ಷೇಪ ಮಾಡದಂತಹ ಮತ್ತು ತನ್ನ ಧರ್ಮವನ್ನು ಅಭಿವೃದ್ಧಿಗೊಳಿಸಲು ನಮ್ಮ ಮೇಲೆ ಖಡ್ಗ ಪ್ರಯೋಗ ನಡೆಸದಂತಹ ಸರಕಾರದ ವಿರುದ್ಧ ಧಾರ್ಮಿಕ ಯುದ್ಧ ನಡೆಸುವುದು ಪವಿತ್ರ ಖುರ್‌ಆನ್ ಪ್ರಕಾರ ನಿಷಿದ್ಧವಾಗಿದೆ. ಏಕೆಂದರೆ ಈ ಸರಕಾರ ಧಾರ್ಮಿಕ ಜಿಹಾದ್ ನಡೆಸುತ್ತಾ ಇಲ್ಲ." (ಕಿಶ್ತಿನೂಹ್ ಅಡಿಟಿಪ್ಪಣಿ – ರೂಹಾನಿ ಖಝಾಯಿನ್ – ಸಂಪುಟ 19 ಪುಟ 75)

"ನಾನು ಮಾಡಿದ ಸೇವೆಯ ಬಗ್ಗೆ ಸರಕಾರಿ ಅಧಿಕಾರಿಗಳೊಂದಿಗೆ ಪ್ರಸ್ತಾಪಿಸುವುದು ನನ್ನ ಪ್ರಕೃತಿ ಎಂದೂ ಬಯಸಲಿಲ್ಲ. ಏಕೆಂದರೆ, ಯಾವುದೇ ಬಹುಮಾನ ಪಡೆಯುವ ಆಶೆ ಹೊಂದದೆ ಸತ್ಯವನ್ನು ಹೇಳುವುದು ನನ್ನ ಕಡ್ಡಾಯ ಕರ್ತವ್ಯವಾಗಿ ನಾನು ಭಾವಿಸಿದೆನು." (ಕಿತಾಬುಲ್ ಬರಿಯ್ಯ, ರೂಹಾನಿ ಖಝಾಯಿನ್ – ಸಂಪುಟ 13 ಪುಟ 340)

## ಅಲ್ಲಾಮ ಇಖ್ಬಾಲ್ ಬ್ರಿಟಿಷರ ಕುರಿತು ಹಾಡಿದ ಸ್ತುತಿಗೀತೆ

ಮೇಲೆ ಹೇಳಿದುದು ಹಝ್ರತ್ ಮಸೀಹ್ ಮೌಊದರ ನಿಲುವಾಗಿವೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬ್ರಿಟಿಷರನ್ನು ಹೊಗಳಿದುದರಿಂದ ಅವರು ಬ್ರಿಟಿಷ್ ಏಜೆಂಟರೆಂದು ಸಾಬೀತಾಗುತ್ತದೆ ಎಂದು ಹೇಳುವವರ ಸ್ವಂತ ಸ್ಥಿತಿ ಹೇಗಿತ್ತೆಂದು ನೋಡಿರಿ. ಸರಕಾರಿ ಶ್ವೇತ ಪತ್ರದಲ್ಲಿ ಪ್ರಸ್ತಾಪಿಸಲಾದ ಬಹಳ ಮುಖ್ಯ ವ್ಯಕ್ತಿ ಅಲ್ಲಾಮ ಸರ್ ಮುಹಮ್ಮದ್ ಇಖ್ಬಾಲ್ ಆಗಿರುವರು. ಅವರು ಆ ಕಾಲಘಟ್ಟದಲ್ಲಿ ಬ್ರಿಟಿಷರ ಬಗ್ಗೆ ಏನು ಹೇಳುತ್ತಿದ್ದರು; ಏನು ಬರೆಯುತ್ತಿದ್ದರು; ಅವರ ಭಾವನೆಗಳು ಹೇಗಿದ್ದವು? ಮಹಾರಾಣಿ ವಿಕ್ಟೋರಿಯಾ ನಿಧನ ಹೊಂದಿದಾಗ ಅವರು ಒಂದು ಚರಮಗೀತೆಯಲ್ಲಿ ಹೀಗೆ ಹಾಡಿದರು:

ಮಯ್ಯಿತ್ ಉಠೀ ಹೈ ಶಾಹ್ ಕಿ ತಅ್‌ಝೀಮ್ ಕೆಲಿಯೆ
ಇಖ್ಬಾಲ್ ಉಡ್‌ಕೆ ಖಾಕ್ ಸಿರ್ ರಹ್ ಗುಝಾರ್ ಹೋ

ಮಹಾರಾಣಿಯ ಶವಪೆಟ್ಟಿಗೆಯು ಕೊಂಡೊಯ್ಯಲ್ಪಡುತ್ತಿದೆ. ಇಖ್ಬಾಲ್, ನೀನು ಎದ್ದು (ನಿನ್ನನ್ನು ಧೂಳನ್ನಾಗಿ ಮಾಡು)

ಅನಂತರ ಆ ಧೂಳನ್ನು ಶವ ಮೆರವಣಿಗೆಯ ದಾರಿಯಲ್ಲಿ ಹರಡಿ ಮಹಾರಾಣಿ ಬಗ್ಗೆ ಇರುವ ನಿನ್ನ ಗೌರವವನ್ನು ಸಲ್ಲಿಸು.

ಸೂರತ್ ವಹೀ ಹೈ ನಾಮ್ ಮೇಂ ರಖಾ ಹುವಾ ಹೈ ಕ್ಯಾ
ದೇತೇ ಹೈಂ ನಾಮ್ ಮಾಹೆ ಮುಹರ್ರಮ್ ಕಾ ಹಮ್ ತುಝೇ

ಹೆಸರಿನಲ್ಲೇನಿದೆ. ಈ ತಿಂಗಳು ಅದೇ ರೀತಿ ಇದೆ. ನಾವು ಈ ತಿಂಗಳನ್ನು (ದುಃಖಕರ) ಮುಹರ್ರಮ್ ಎಂದು ಹೆಸರಿಸುತ್ತೇವೆ.

ಇಖ್ಬಾಲ್ ಪ್ರಕಾರ, ಮಹಾರಾಣಿ ವಿಕ್ಟೋರಿಯಾ ನಿಧನ ಹೊಂದಿದ ತಿಂಗಳ ಹೆಸರು ಏನೇ ಆಗಿರಲಿ, ವಾಸ್ತವಿಕವಾಗಿ ಈ ತಿಂಗಳಲ್ಲಿ ಸಂಭವಿಸಿದುದು ಮುಹರ್ರಮ್ ತಿಂಗಳಲ್ಲಿ ಒಂದು ಸಾವಿರದ ನಾಲ್ಕು ನೂರು ವರ್ಷಗಳ ಹಿಂದೆ ಸಂಭವಿಸಿದ ಇಮಾಮ್ ಹುಸೈನರ ಹುತಾತ್ಮತೆಗೆ ಸಮವಾಗಿದೆ.

ಅಲ್ಲಾಮ ಇಖ್ಬಾಲ್ ಪುನಃ ಹೇಳುತ್ತಾರೆ:

ಕಹ್ತೇ ಹೈಂ ಆಜ್ ಈದ್ ಹುಯೀ ಹೈ ಹುವಾ ಕರೇ
ಇಸ್ ಈದ್ ಸೆ ತೋ ಮೌತ್ ಹೀ ಆಯೇ ಖುದಾ ಕರೇ

ಈ ದಿನ ಈದ್ ಎಂದು ಹೇಳುತ್ತಾರೆ. ಅದು ಹಾಗೆಯೇ ಆಗಲಿ. ಅದರ ಬಗ್ಗೆ ಯಾರಿಗೆ ಲಕ್ಷ್ಯವಿದೆ. ಈ ಈದ್ ಹಬ್ಬಕ್ಕಿಂತ ಈ ದಿನ ನಮಗೆ ಮೃತ್ಯು ಬಂದೆರಗಿದ್ದರೆ ಓ ದೇವಾ, ಎಷ್ಟು ಚೆನ್ನಾಗಿತ್ತು!

ಇದು ಮುಜಾಹಿದೆ ಮಿಲ್ಲತ್ (ಮುಸ್ಲಿಮ್ ಸಮುದಾಯದ ಹೋರಾಟಗಾರನಾದ) ಅಲ್ಲಾಮ ಇಖ್ಬಾಲರು ಹಾಡಿದ ಪದ್ಯಗಳಾಗಿವೆ. ಅವರನ್ನು ಅಹ್ಮದಿಯಾ ಜಮಾಅತಿನ ವಿರೋಧಿಗಳಲ್ಲಿ ಅಗ್ರಗಣ್ಯನೆಂದು ಗಣಿಸಲಾಗುತ್ತಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬ್ರಿಟಿಷರನ್ನು ಹೊಗಳಿದ್ದಾರೆಂದು ಹೇಳಿ, ಬ್ರಿಟಿಷರು ನೆಟ್ಟ ಗಿಡ ಅವರೆಂದು ಅಲ್ಲಾಮ ಇಖ್ಬಾಲ್ ಆಕ್ಷೇಪಿಸುತ್ತಿದ್ದರು.

ಅಲ್ಲಾಮ ಇಖ್ಬಾಲ್ ಮೇಲಿನ ಪದ್ಯದಲ್ಲಿ ಮುಂದುವರಿದು ಹೀಗೆ ಹಾಡುತ್ತಾರೆ:

ಅಯೆ ಹಿಂದ್ ತೇರೇ ಸರ್‌ಸೆ ಉಠಾ ಸಾಯೇ ಖುದಾ

ಓ ಹಿಂದೂಸ್ತಾನ, ನಿನ್ನ ತಲೆಯ ಮೇಲ್ಗಡೆಯಿಂದ ದೇವನ ದಯೆಯ ನೆರಳು ನೀಗಿಸಲ್ಪಟ್ಟಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬ್ರಿಟಿಷ್ ಸರಕಾರವನ್ನು "ಸಾಯಯೆ ಖುದಾ – ಅಲ್ಲಾಹನ ನೆರಳು" ಎಂದು ಹೇಳಿದುದಾಗಿ ಆಕ್ಷೇಪಿಸುತ್ತಾರೆ. ಆದರೆ ಸ್ವತಃ ಅಲ್ಲಾಮ ಇಖ್ಬಾಲ್ ಈ ಪದ್ಯದಲ್ಲಿ ಬ್ರಿಟಿಷ್ ರಾಣಿಯ ಬಗ್ಗೆ ಸಾಯಯೆ ಖುದಾ ಎಂದು ವರ್ಣಿಸಿದ್ದಾರೆ.

ಅಲ್ಲಾಮ ಇಖ್ಬಾಲ್ ಮುಂದುವರಿದು ಹಾಡುತ್ತಾರೆ:

ಎಕ್ ಗಮ್ ಗುಸಾರ್ ತೇರೇ ಮಕೀನೋ ಕೀ ಥೀ ಗಯೀ.

(ಓ ಹಿಂದೂಸ್ತಾನ) ನಿನ್ನ ನಿವಾಸಿಗಳ ದುಃಖಗಳಲ್ಲಿ ಸಹಾನುಭೂತಿ ತೋರುತ್ತಿದ್ದ ಒಬ್ಬಾಕೆ ಇದ್ದರು: ಅವರು ಹೊರಟುಹೋದರು.

ಹಿಲ್‌ತಾ ಹೈ ಜಿಸ್ ಸೆ ಅರ್‌ಶ್ ಯೇ ರೋನಾ ಉಸೀಕಾ ಹೈ
ಝೀನತ್ ಥೀ ಜಿಸ್ ಸೆ ತುಝ್‌ಕೋ ಜನಾಝ ಉಸೀಕಾ ಹೈ

ಆಕೆಗೋಸ್ಕರ ಪ್ರಲಾಪಿಸುವವರು ಅಳುವಾಗ ಅಲ್ಲಾಹನ ಅರ್‌ಶ್ ಸಹ ಅಲುಗಾಡುತ್ತದೆ. ಓ ಅಲ್ಲಾಹ್, ಯಾರು ನಿನಗೆ ಸೌಂದರ್ಯ ವಾಗಿದ್ದರೋ ಆ ಮಹತಿಯ ಶವಸಂಸ್ಕಾರ ಯಾತ್ರೆ ಇದಾಗಿದೆ.

(ಬಾಖಿಯಾತೆ ಇಖ್ಬಾಲ್. ಸಂಪಾದಕ : ಅಬ್ದುಲ್ ವಾಹಿದ್ ಮುಈನೀ ಎಂ. ಎ. ಪ್ರಕಾಶಕರು : ಆಯಿನಯೆ ಅದಬ್ ಅನಾರ್ಕಲಿ, ಲಾಹೋರು, ದ್ವಿತೀಯ ಮುದ್ರಣ)

## ಅಹ್ಲೆ ಹದೀಸ್ ಮತ್ತು ದೇವ್‌ಬಂದ್ ಮತಪಂಡಿತರ ದೃಷ್ಟಿಯಲ್ಲಿ ಬ್ರಿಟಿಷ್ ಸರಕಾರ

ಅಹ್ಲೆ ಹದೀಸ್ ಮತ್ತು ದೇವ್‌ಬಂದಿ ಪಂಗಡಗಳು ಇಂದು ಅಹ್ಮದಿಯಾ ಜಮಾಅತಿನ ವಿರೋಧಿಗಳಲ್ಲಿ ಮುಂದಾಗಿದ್ದಾರೆ. ಈಗ ಪಾಕಿಸ್ತಾನ ಸರಕಾರದ ಬಾಹುಗಳು ಮತ್ತು ಹಸ್ತಗಳು ಇವರೇ ಆಗಿದ್ದಾರೆ. ಈ ಪಂಗಡಗಳ ಹಿರಿಯ ಮತಪಂಡಿತ ಶಮ್ಸುಲ್ ಉಲಮಾ ಮೌಲಾನ ನಝೀರ್ ಅಹ್ಮದ್ ದೆಹ್ಲವಿ ಹೀಗೆ ಹೇಳುತ್ತಾರೆ:

"ಹಿಂದುವೋ ಮುಸ್ಲಿಮನೋ ಆಗಿರದ ಯಾವುದಾದರೂ ವಿದೇಶೀಯನು ಆಡಳಿತೆ ನಡೆಸುವುದು ಸಂಪೂರ್ಣ ಹಿಂದೂಸ್ತಾನಕ್ಕೆ ಹಿತಕರವಾಗಿದೆ. ಯುರೋಪಿಯನ್ ಆಗಿರುವ (ಬ್ರಿಟಿಷನೇ ಆಗಬೇಕೆಂದಿಲ್ಲ. ಯಾವುದಾದರೂ ಯುರೋಪಿಯನ್ ಜನಾಂಗದ) ದೊರೆಗಳಲ್ಲಿ ಒಬ್ಬನಾಗಿರಬೇಕು. ಆದರೆ ದೇವನ ಅಪರಿಮಿತವಾದ ಕರುಣೆ, ಬ್ರಿಟಿಷರೇ ಅರಸರಾಗಲಿ ಎಂದು ಆವಶ್ಯಪಟ್ಟಿತು." (ಮಜ್‌ಮೂಅ ಲೆಕ್ಚರ್ಸ್ ಮೌಲಾನ ನಝೀರ್ ಅಹ್ಮದ್ ದೆಹ್ಲವಿ. 1890ರಲ್ಲಿ ಪ್ರಕಟಿತ – ಪುಟ 4–5)

ಇದೇ ಮತಪಂಡಿತ ಹೀಗೆ ಸಹ ಹೇಳಿದರು:

"ಈ ಸರಕಾರ ದಬ್ಬಾಳಿಕೆ ನಡೆಸುತ್ತಿದೆಯೇ? ಅಯ್ಯೋ ಹಾಗೇನೂ ಇಲ್ಲ. ಈ ಸರಕಾರ ತಂದೆ ತಾಯಂದಿರಿಗಿಂತ ಹೆಚ್ಚು ವಾತ್ಸಲ್ಯ ವುಳ್ಳದ್ದಾಗಿದೆ."

"ನನಗೆ ತಿಳಿದ ವಿಷಯಗಳಿಗೆ ಅನುಸಾರವಾಗಿ ನಾನು ಹಿಂದೂಸ್ಥಾನದ ದೇಶೀಯ ರಾಜರ ಕಡೆಗೆ ದೃಷ್ಟಿ ಹಾಯಿಸಿದೆನು. ಬರ್ಮಾ, ನೇಪಾಲ, ಅಫ್‌ಘಾನಿಸ್ತಾನ, ಪರ್ಶಿಯಾ, ಈಜಿಪ್ಟ್ ಮತ್ತು ಅರಬ್ ದೇಶದ ದೊರೆಗಳ ಬಗ್ಗೆ ನಾನು ಯೋಚಿಸುತ್ತಾ ಹೋದೆನು. ಇಲ್ಲಿಂದ ಅಲ್ಲಿಯ ತನಕ ಇರುವ ದೊರೆಗಳಲ್ಲಿ ಒಬ್ಬನನ್ನು ಕೂಡ ಹಿಂದೂಸ್ತಾನದ ದೊರೆಯಾಗಿ ನೇಮಿಸಲು ಯೋಗ್ಯನಾಗಿ ನಾನು ಕಾಣಲಿಲ್ಲ. (ಎಂದರೆ ನಾನು ಒಬ್ಬನನ್ನು ದೊರೆಯಾಗಿ ನೇಮಿಸಲು ಬಯಸುವುದಾದರೆ ಯಾರನ್ನು ನೇಮಿಸಬೇಕೆಂಬುದರ ಬಗ್ಗೆ.) ದೊರೆ ಯಾಗಲು ಅಭ್ಯರ್ಥಿಗಳಾಗಿರುವ ಮತ್ತು ನಾನು ಅವರ ಮೌಲ್ಯಮಾಪನ ಮಾಡಬಲ್ಲ ಯಾವ ಗುಂಪು ಕೂಡ ಅಲ್ಲಿರಲಿಲ್ಲ. ಆಗ ನಾನು ತೀರ್ಮಾನಿಸಿದೆ – ಬ್ರಿಟಿಷರೇ ಹಿಂದೂಸ್ತಾನವನ್ನು ಆಳಲು ಅರ್ಹ ರಾಗಿದ್ದಾರೆ. ಅವರೇ ದೇಶದ ಆಡಳಿತೆಯನ್ನು ಮುಂದುವರಿಸಿಕೊಂಡು ಹೋಗಬೇಕು." (ಮೇಲಿನ ಗ್ರಂಥದಲ್ಲಿ ಪುಟ 19, 26)

## ಬ್ರಿಟಿಷರು "ಉಲುಲ್ ಅಮ್ರ್" (ಅಧಿಕಾರ ಹೊಂದಿದವರು)

"ಚಟ್ಟಾನ್" ಪತ್ರಿಕೆಯ ಸಂಪಾದಕ ಶೋರಿಶ್ ಕಾಶ್ಮೀರಿ ಹೀಗೆ ಹೇಳುತ್ತಾರೆ:

"ವಿಪತ್ತುಗಳ ಆ ಕಾಲದಲ್ಲಿ ಜಿಹಾದಿನ ರದ್ದುಗೊಳಿಸುವಿಕೆಯ ವ್ಯಾಖ್ಯಾನದೊಂದಿಗೆ 'ಅಲ್ಲಾಹನಿಗೆ ನೀವು ವಿಧೇಯರಾಗಿರಿ. ಅವನ ಸಂದೇಶವಾಹಕನಿಗೂ ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ' ಎಂಬ ಪವಿತ್ರ ಖುರ್‌ಆನ್ 4:60 ವಚನದಲ್ಲಿ ನಿಮ್ಮ ಅಧಿಕಾರಿಗಳಿಗೂ ಎಂದು ಹೇಳಿದುದರಿಂದ ಅದರಲ್ಲಿ ಬ್ರಿಟಿಷರು ಸೇರುತ್ತಾರೆಂದು ಹೇಳಿದವರಲ್ಲಿ ಪ್ರಸಿದ್ಧ ಸಾಹಿತಿ ಡಿಪ್ಟಿ ನಝೀರ್ ಅಹ್ಮದ್‌ರವರ ಹೆಸರು ಸಹ ಸೇರಿದೆ." ("ಅತಾಉಲ್ಲಾ ಶಾಹ್ ಬುಖಾರಿ" ಎಂಬ ಪುಸ್ತಕ – ಪುಟ 135)

## ಬ್ರಿಟಿಷ್ ಸರಕಾರ "ಅಭಿಮಾನಾರ್ಹ"

ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಎಂಬ ಅಹ್ಲೆ ಹದೀಸ್ ವಿದ್ವಾಂಸ ಏನು ಹೇಳಿದರೆಂದು ನೋಡೋಣ. ಅವರು ಬರೆದರು: "ರೂಮಿನ (ಇಸ್ತಾಂಬುಲ್‌ನ) ದೊರೆ ಒಬ್ಬ ಮುಸ್ಲಿಮ್ ಸುಲ್ತಾನರಾಗಿದ್ದಾರೆ. ಆದರೆ ಸಾರ್ವತ್ರಿಕ ಶಾಂತಿ, ಉತ್ತಮ ಆಡಳಿತೆ ವ್ಯವಸ್ಥೆಯ ದೃಷ್ಟಿಯಲ್ಲಿ (ಅವರ ಧರ್ಮ ಏನೆಂದು ನೋಡದೆ ಹೇಳುವುದಾದರೆ) ಬ್ರಿಟಿಷ್ ಸರಕಾರ ಸಹ ಮುಸ್ಲಿಮರಾದ ನಮಗೆ ಮತ್ತು ವಿಶಿಷ್ಟವಾಗಿ ಅಹ್ಲೆ ಹದೀಸ್ ಪಂಗಡಕ್ಕೆ ಕಡಿಮೆ ಹೆಮ್ಮೆ ಪಡುವಂತಹದೇನೂ ಅಲ್ಲ. ಶಾಂತಿ ಮತ್ತು ಸ್ವಾತಂತ್ರ್ಯದ ದೃಷ್ಟಿಯಲ್ಲಿ ಈಗ ಎಲ್ಲಾ ಮುಸ್ಲಿಮ್ ದೇಶಗಳಿಗಿಂತ (ರೂಮ್, ಇರಾನ್, ಖುರಾಸಾನ್) ಈ ದೇಶದ ಆಡಳಿತೆ ಹೆಚ್ಚು ಹೆಮ್ಮೆಪಡುವಂತಹದ್ದಾಗಿದೆ. ("ಇಶಾಅತುಸ್ಸುನ್ನ" – ಸಂಪುಟ 6, ಸಂಚಿಕೆ 10, ಪುಟ : 292–293)

ನಿನ್ನೆಯ ತನಕ ಈ ಪಂಗಡದ ಜನರ ಹೇಳಿಕೆ ಮೇಲಿನಂತೆ ಇತ್ತು. ಇದೇ ಮೌಲವಿ ಪುನಃ ಹೇಳುತ್ತಾರೆ:

"ಸಾರ್ವತ್ರಿಕ ಶಾಂತಿ ಮತ್ತು ಸ್ವಾತಂತ್ರ್ಯವಲ್ಲದೆ ಉತ್ತಮ ಆಡಳಿತೆ ವ್ಯವಸ್ಥೆಯ ಕಾರಣ ಬ್ರಿಟಿಷ್ ಸರಕಾರವನ್ನು ಹಿಂದೂಸ್ತಾನದ ಅಹ್ಲೆ ಹದೀಸ್ ಪಂಗಡ ಅನುಗ್ರಹವೆಂದು ಗಣಿಸುತ್ತದೆ. ಈ ಸರಕಾರದ ಪ್ರಜೆಗಳಾಗಿರುವುದನ್ನು ಇಸ್ಲಾಮೀ ಸರಕಾರಗಳ ಪ್ರಜೆಗಳಾಗುವುದಕ್ಕಿಂತ ಉತ್ತಮವೆಂದು ಗಣಿಸುತ್ತದೆ." ("ಇಶಾಅತುಸ್ಸುನ್ನ" – ಸಂಪುಟ 6, ಸಂಚಿಕೆ –10, ಪುಟ: 292–293)

ಇಂತಹ ಜನರು ಈಗ ಹೀಗೆ ಹೇಳುತ್ತಾರೆ: ಅಹ್ಮದಿಯರಿಗೆ ಮುಸ್ಲಿಮ್ ಸರಕಾರಗಳು ಇಷ್ಟವಿಲ್ಲದುದರಿಂದ ಅಹ್ಮದಿಯರು ಬ್ರಿಟಿಷ್ ಆಡಳಿತದ ರಾಜ್ಯದಲ್ಲಿ ಮೊಳಕೆಯೊಡೆದು ಬೆಳೆದರು ಮತ್ತು ಬ್ರಿಟಿಷ್ ಸರಕಾರವೇ ಶಾಶ್ವತವಾಗಿ ಆಡಳಿತೆ ನಡೆಸಲಿ ಎಂದು ಬಯಸಿದರು. ಆದರೆ ಹೀಗ ಹೇಳುವ ಜನರು ತಮ್ಮ ತಂದೆ ತಾತಂದಿರು ನಿನ್ನೆಯ ತನಕ "ಇಸ್ಲಾಮೀ ಸರಕಾರಗಳ ಪ್ರಜೆಗಳಾಗುವುದಕ್ಕಿಂತ ಉತ್ತಮ ಬ್ರಿಟಿಷ್ ಪ್ರಜೆಗಳಾಗುವುದು" ಎಂದು ಹೇಳುತ್ತಿದ್ದರು.

ನೀವು ನೋಡಿರಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬ್ರಿಟಿಷ್ ಸರಕಾರವನ್ನು ಹೊಗಳಲು ನೀಡಿದ ಕಾರಣ ಗಳು ಈ ಉಲ್ಲೇಖಗಳಲ್ಲಿ ಪ್ರಸ್ತಾಪಿಸಲ್ಪಟ್ಟಿಲ್ಲ. ಸಿಖ್ಖರ ದೌರ್ಜನ್ಯಗಳಿಂದ ರಕ್ಷಣೆ ದೊರೆಯಿತು. ಧಾರ್ಮಿಕ ಸ್ವಾತಂತ್ರ್ಯ ನೀಡಿದರು. ಈ ಕಾರಣದಿಂದ ನಾವು ಹೊಗಳುತ್ತೇವೆ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ. ಆದರೆ ಈ ಜನರು ಇಂತಹ ಕಾರಣಗಳನ್ನು ನೀಡದೆ ಬ್ರಿಟಿಷ್ ಸರಕಾರದ ಬಗ್ಗೆ ಉತ್ತಮ ಅಭಿಪ್ರಾಯ ಸೂಚಿಸುತ್ತಿದ್ದರು. ಅಹ್ಲೆ ಹದೀಸ್‌ಗೆ ಸೇರಿದ ಜನರು ಎಲ್ಲಿ ವಾಸಿಸಿದರೂ ಎಲ್ಲಿಗೆ ಹೋದರೂ (ಅರಬ್ ದೇಶ, ರೂಮ್ ಅಥವಾ ಬೇರೆಲ್ಲಿಗಾದರೂ ಹೋದರೂ) ಬ್ರಿಟಿಷರ ಹೊರತು ಬೇರೆ ಯಾವುದೇ ಸರಕಾರದ ಪ್ರಜೆಗಳಾಗಲು ಬಯಸುತ್ತಿರಲಿಲ್ಲ.

ಶಿಯಾ ಪಂಥದ ಜನರ ಬಗ್ಗೆ ಹೇಳುವುದಾದರೆ ಅವರು ಸಹ ಹೀಗೆಯೇ ಬರೆಯುತ್ತಿದ್ದರು. ಅಲ್ಲಾಮ ಅಲೀ ಹಾಯಿರಿಯ ಒಂದು ಉಲ್ಲೇಖ – ಮವ್‌ಇಝು ತಹ್‌ರೀಫೆ ಖುರ್‌ಆನ್, ಲಾಹೋರು (ಎಪ್ರಿಲ್ 1923 ಪುಟ 57–58) ಸಂಪಾದಕ ಮುಹಮ್ಮದ್ ರಝಿಯುರ್ರಝುವೀ ಅಲ್‌ಖುಮೀ ಇದರಲ್ಲಿ ಇದೇ ರೀತಿಯಲ್ಲಿ ಬ್ರಿಟಿಷ್ ಸರಕಾರವನ್ನು ಹೊಗಳಲಾಗಿದೆ.

## "ಬ್ರಿಟಿಷರ ಔದಾರ್ಯಪೂರ್ಣವಾದ ಒಂದು ನೋಟಕ್ಕೆ ಹಂಬಲ

ಮೌಲಾನ ಝಫರ್ ಅಲೀ ಖಾನ್ ಒಂದು ಕಾಲದಲ್ಲಿ ಅಹ್‌ರಾರ್

ಪಂಗಡದೊಂದಿಗೆ ಸೇರಿದ್ದರು. ಅನಂತರ ಅವರನ್ನು ದೇಶ ಮತ್ತು ಇಸ್ಲಾಮಿನ ವಿದ್ರೋಹಿ ಎಂದು ಹೇಳಲಾಯಿತು. ಅವರು ದೀರ್ಘಕಾಲೀನ ಅನುಭವದ ನಂತರ ಹೀಗೆ ಹೇಳಿದರು:

"ಮುಸ್ಲಿಮರು... ಈ ಸರಕಾರದ ಬಗ್ಗೆ (ಎಂದರೆ ಬ್ರಿಟಿಷ್ ಸರಕಾರದ ಬಗ್ಗೆ) ಒಂದು ಕ್ಷಣ ಕೂಡ ಕೆಟ್ಟದಾಗಿ ಯೋಚಿಸಲು ಸಾಧ್ಯವಿಲ್ಲ.... ದುರದೃಷ್ಟವಂತನಾದ ಯಾವನಾದರೂ ಮುಸ್ಲಿಮ್ ಈ ಸರಕಾರದ ವಿರುದ್ಧ ಉದ್ಧಟತನದಿಂದ ವರ್ತಿಸುವುದಾದರೆ ನಾವು ಉಚ್ಚ ಸ್ವರದಲ್ಲಿ ಹೇಳಲು ಬಯಸುತ್ತೇವೆ- ಆ ಮುಸ್ಲಿಮನು ಮುಸ್ಲಿಮನೇ ಅಲ್ಲ ಎಂದು." ("ಝುಮೀನ್‌ದಾರ್" ಪತ್ರಿಕೆ, ಲಾಹೋರು 11-11-1911)

ಬ್ರಿಟಿಷ್ ಸರಕಾರದ ವಿರುದ್ಧ ವರ್ತಿಸುವ ಮುಸ್ಲಿಮನು ಮುಸ್ಲಿಮನಾಗಿ ಉಳಿಯುವುದಿಲ್ಲ ಎಂಬ ತೀರ್ಪು ಹೇಗಿದೆ?

ಅವರು ಪುನಃ ಹೇಳುತ್ತಾರೆ:

"ನಮ್ಮ ಚಕ್ರವರ್ತಿ ಅರಸರ ಹಣೆಯ ಒಂದು ಹನಿ ಬೆವರಿಗೆ ಬದಲಾಗಿ ನಮ್ಮ ದೇಹದ ರಕ್ತ ಹರಿಸಲು ನಾವು ಸಿದ್ಧರಾಗಿದ್ದೇವೆ. ಹಿಂದೂಸ್ತಾನದ ಎಲ್ಲಾ ಮುಸ್ಲಿಮರ ಸ್ಥಿತಿ ಹೀಗೆಯೇ ಇದೆ." ("ಝುಮೀನ್‌ದಾರ್" ಪತ್ರಿಕೆ, ಲಾಹೋರು 23-11-1911)

ಮುಸ್ಲಿಮರ ಸ್ಥಿತಿ ಹೀಗಿದ್ದಾಗ ಇದನ್ನು ಬದಲಾಯಿಸಲು ಈ ಗಿಡವನ್ನು ಬ್ರಿಟಿಷರು ನೆಟ್ಟರೇ?

ಪುನಃ ಮೌಲಾನ ಝುಫರ್ ಅಲೀ ಖಾನ್ ಪದ್ಯದ ರೂಪದಲ್ಲಿ ಹೀಗೆ ಹಾಡಿದರು:

ಝುಕಾ ಫರ್‌ತೆ ಅಖೀದತ್ ಸೆ ಮೇರಾ ಸರ್
ಹುವಾ ಜಬ್ ತಝ್‌ಕಿರ ಕಿಂಗ್ ಎಂಪರರ್‌ಕಾ.

ಚಕ್ರವರ್ತಿ ಮಹಾರಾಜರ ಹೆಸರು ಪ್ರಸ್ತಾಪಿಸಲ್ಪಟ್ಟಾಗ
ನನ್ನ ತಲೆಯು ಆದರಪೂರ್ವಕವಾಗಿ ಬಾಗಿತು.

ಜಲಾಲತ್ ಕೋ ಹೈ ಕ್ಯಾ ಕ್ಯಾ ನಾಝ್ ಉಸ್‌ಪರ್
ಕೆ ಶಾಹಿನ್ ಶಾ ಹೈ ಓ ಬಹ್ರೋ ಬರ್ ಕಾ

ಅವರು ಭೂಮಿ ಮತ್ತು ಸಾಗರಗಳ ಚಕ್ರವರ್ತಿಯಾದುದರಿಂದ ವೈಭವಕ್ಕೆ ಎಷ್ಟೆಷ್ಟು ಅಭಿಮಾನವಿದೆ!

ಝುಹೇ ಖಿಸ್‌ಮತ್ ಜೋ ಹೋ ಇಕ್ ಗೋಶ ಹಾಸಿಲ್
ಹಮೇಂ ಉಸ್ ಕೀ ನಿಗಾಹೆ ಪೈಝ್ ಅಸರ್ ಕಾ

ಅವರ ಔದಾರ್ಯಪೂರ್ಣವಾದ ಒಂದಿಷ್ಟು ನೋಟದಿಂದ ನಾನು ಅನುಗ್ರಹೀತನಾದರೆ ನಾನೆಷ್ಟು ಭಾಗ್ಯಶಾಲಿ! ("ಝುಮೀನ್‌ದಾರ್" ಪತ್ರಿಕೆ, 19-10-1911)

## ಮುಸ್ಲಿಮ್ ಮತ ಪಂಡಿತರ ಕಾಪಟ್ಯಭರಿತ ವರ್ತನೆ

ಅಹ್ಮದಿಯಾ ಜಮಾಅತಿನ ವಿರುದ್ಧ ಹೆಚ್ಚು ಹೆಚ್ಚಾಗಿ ದೋಷಾರೋಪ ಮಾಡುವವರ ಸ್ವಂತ ಕೃತ್ಯಗಳು ಮೇಲೆ ವಿವರಿಸಿದಂತಿದ್ದವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹಿತಕಾರಿ ಸರಕಾರಕ್ಕೆ ಕೃತಜ್ಞತೆ ಅರ್ಪಿಸಿದುದು ಕೇವಲ ತಮ್ಮ ಸುಸ್ವಭಾವದ ಕಾರಣದಿಂದಲ್ಲ. ವಿರೋಧಿಗಳು ಸೃಷ್ಟಿಸಿದ ಬೇರೆ ಕಾರಣಗಳೂ ಇದ್ದುವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬ್ರಿಟಿಷರನ್ನು ಹೊಗಳುತ್ತಾರೆ ಮತ್ತು ಜಿಹಾದನ್ನು ನಿರಾಕರಿಸುತಾರೆ; ಆದರೆ ಈ ಸರಕಾರದ ವಿರುದ್ಧ ಜಿಹಾದ್ ಮಾಡಿ ಅದನ್ನು ನಾಶಗೊಳಿಸಬೇಕೆಂದು ಜನರೊಂದಿಗೆ ಮುಸ್ಲಿಮ್ ಮತಪಂಡಿತರು ಹೇಳಿ ಜನರನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ರೊಚ್ಚಿಗೆಬ್ಬಿಸುತ್ತಿದ್ದರು. ಇನ್ನೊಂದು ಕಡೆ ಅವರು ನಾನು ನಿಮಗೆ ಓದಿ ಹೇಳಿದಂತಹ ಹೊಗಳಿಕೆಗಳನ್ನು ಬರೆಯುತ್ತಿದ್ದರು. ಅವರು ಮೂರನೆಯದಾಗಿ ಬ್ರಿಟಿಷ್ ಸರಕಾರಕ್ಕೆ ರಹಸ್ಯವಾಗಿ ಮತ್ತು ಪ್ರಕಟವಾಗಿ ಅಪೇಕ್ಷೆಗಳ ಮೂಲಕ ಸಹ "ಈ ಮನುಷ್ಯ ಅತ್ಯಂತ ಅಪಾಯಕಾರಿ. ಅವನ ಮಾತುಗಳನ್ನು ನಂಬಬೇಡಿರಿ. ಈ ವ್ಯಕ್ತಿ ಇಮಾಮ್ ಮಹ್‌ದೀ ಎಂದು ವಾದಿಸುವ ರಕ್ತಪಿಪಾಸು ಮಹ್‌ದಿ ಆಗಿದ್ದಾನೆ; ಬ್ರಿಟಿಷ್ ಸರಕಾರವನ್ನು ಧ್ವಂಸ ಮಾಡಲು ಹೊರಟಿದ್ದಾನೆ" ಎಂದೆಲ್ಲಾ ಬರೆದು ತಿಳಿಸುತ್ತಿದ್ದರು. ಮುಸ್ಲಿಮ್ ಮತಪಂಡಿತರು ಒಂದು ಕಡೆ ಕಾಪಟ್ಯದಿಂದ ಮತ್ತು ದೌರ್ಜನ್ಯ ಭರಿತವಾಗಿ ಮುಸ್ಲಿಮರೊಂದಿಗೆ ಹೀಗೆ ಸುಳ್ಳು ಹೇಳುತ್ತಿದ್ದರು- "ಈ ವ್ಯಕ್ತಿ ಬ್ರಿಟಿಷರು ಸ್ವತಃ ನೆಟ್ಟಗಿಡವಾಗಿದ್ದಾನೆ." ಇನ್ನೊಂದು ಕಡೆ ಬ್ರಿಟಿಷ ಸರಕಾರಕ್ಕೆ ಹೀಗೆ ಸಂದೇಶ ತಲಪಿಸುತ್ತಿದ್ದರು: "ಈ ವ್ಯಕ್ತಿ ನಿಮ್ಮ ಜನಾಂಗದ ಶತ್ರುವಾಗಿದ್ದಾನೆ. ನಿಮ್ಮನ್ನು ನಾಶಮಾಡಲು ಅವನು ಹೊರಟಿದ್ದಾನೆ. ಆದುದರಿಂದ ಅವನನ್ನು ನಾಶಮಾಡಿರಿ."

ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ತನ್ನ ಪತ್ರಿಕೆ "ಇಶಾಅತುಸ್ಸುನ್ನ" ಸಂಪುಟ 6ರ ಅಡಿಟಿಪ್ಪಣಿಯಾಗಿ ಪುಟ 4ರಲ್ಲಿ ಹೀಗೆ ಬರೆದಿದ್ದಾರೆ: "ಅವನು (ಎಂದರೆ ಮಿರ್ಝಾ ಗುಲಾಮ್ ಅಹ್ಮದ್) ವಂಚಕನೆಂಬುದಕ್ಕೆ ಸಾಕ್ಷ್ಯಾಧಾರವೇನೆಂದರೆ, ಮುಸ್ಲಿಮೇತರ ಸರಕಾರದ ಜೀವಹಾನಿ ಮಾಡುವುದನ್ನು ಮತ್ತು ಅದರ ಸಂಪತ್ತನ್ನು ಲೂಟಿ ಮಾಡುವುದನ್ನು ಧರ್ಮವು ಅನುಮತಿಸುತ್ತದೆ ಎಂದು ಹೃದಯದಲ್ಲಿ ನಂಬುತ್ತಾನೆ."

ಮೌಲವಿಯ ಸಾಕ್ಷ್ಯಾಧಾರ ಹೇಗಿದೆ ಎಂದು ನೋಡಿರಿ: "ಹೃದಯದಲ್ಲಿ ನಂಬುತ್ತಾನೆ" ಎಂದು ಹೇಳುವುದಾದರೂ ಹೇಗೆ?

ಮೌಲವಿ ಹೀಗೆ ಮುಂದುವರಿಯುತ್ತಾರೆ: "ಆದುದರಿಂದ ಆತನನ್ನು ನಂಬುವುದು ಸರಿಯಲ್ಲ. ಆತನ ಬಗ್ಗೆ ಜಾಗರೂಕರಾಗಿರಬೇಕಾದುದು ಆವಶ್ಯಕವಾಗಿದೆ. ಹೀಗೆ ಮಾಡದಿದ್ದರೆ ಸೂಡಾನಿನ ಮಹ್‌ದಿಯಿಂದ ಉಂಟಾದ ಹಾನಿಗಿಂತ ಹೆಚ್ಚು ಹಾನಿ ಖಾದಿಯಾನಿನ ಮಹ್‌ದಿಯಿಂದ ತಲಪುವುದು ಸಂಭಾವ್ಯವಾಗಿದೆ."

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಹೃದಯದ ಆ ಚಿತ್ರವು ಈ ಜನರ ಹೃದಯಗಳಲ್ಲಿ ಈ ರೀತಿ ಪ್ರಕಾಶಿಸುತ್ತಿತ್ತು.

ಮುನ್‌ಶೀ ಮುಹಮ್ಮದ್ ಅಬ್ದುಲ್ಲಾ ಬ್ರಿಟಿಷ್ ಸರಕಾರವನ್ನು ಸಂಬೋಧಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಎಚ್ಚರಿಕೆ ನೀಡುತ್ತಾ ಹೀಗೆ ಬರೆದರು:

"ಪವಿತ್ರ ಖುರ್‌ಆನಿನ ಇಂತಹ ಬೇರೆ ವಚನಗಳನ್ನು ತನ್ನ ಶಿಷ್ಯರಿಗೆ ಓದಿ ಓದಿ ಹೇಳುತ್ತಾ ಸರಕಾರದ ವಿರುದ್ಧ ಯುದ್ಧ ಮಾಡಲು ಅವರನ್ನು ಸಿದ್ಧಗೊಳಿಸುತ್ತಿದ್ದಾನೆ." (ಶಹಾದತೆ ಖುರ್‌ಆನಿ - ಪುಟ 20, 1905ರಲ್ಲಿ ಮುದ್ರಿತ - ಇಸ್ಲಾಮಿಯಾ ಸ್ಟೀಮ್ ಪ್ರೆಸ್ ಲಾಹೋರ್‌ನಿಂದ ಪ್ರಕಾಶಿತ)

ಶತ್ರುಗಳ ಈ ಅಭಿಪ್ರಾಯಗಳ ಕಡೆಗೆ ಬಹಳ ಲಕ್ಷ್ಯ ನೀಡಲಾಯಿತು. ಆ ಕಾಲಘಟ್ಟದ ಏಕ ಇಂಗ್ಲಿಷ್ ಪತ್ರಿಕೆಯಾದ "ಸಿವಿಲ್ ಎಂಡ್ ಮಿಲಿಟರಿ ಗಜೆಟ್"ನ್ನು ಬಹಳ ಗೌರವಭಾವದಿಂದ ಕಾಣಲಾಗುತ್ತಿತ್ತು. ಅದು ಬಹಳ ದೀರ್ಘ ಕಾಲ ಪ್ರಕಟವಾಗುತ್ತಿತ್ತು. ಆ ಪತ್ರಿಕೆಯಲ್ಲಿ ಒಂದು ಸಂಪಾದಕೀಯ ಪ್ರಕಟವಾಯಿತು. ಅದರಲ್ಲಿ ಇಂಗ್ಲಿಷ್ ಸಮುದಾಯವನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸಲ್ಲಾಮರ ವಿರುದ್ಧ ಉತ್ತೇಜಿಸಲಾಗಿತ್ತು ಮತ್ತು ಸರಕಾರಕ್ಕೆ ಹೀಗೆ ಎಚ್ಚರಿಕೆ

ನೀಡಲಾಗಿತ್ತು: ಈ ವ್ಯಕ್ತಿ ಅತ್ಯಂತ ಅಪಾಯಕಾರಿಯಾಗಿದ್ದಾನೆ. ಅವನ ಮಾತುಗಳನ್ನು ನಂಬಬೇಡಿರಿ. ಅವನ ಸೌಹಾರ್ದಪ್ರಿಯತೆ ಕೇವಲ ಬಾಹ್ಯ ಪ್ರಕಟಣೆಯಾಗಿದೆ. ಅವನು ಬ್ರಿಟಿಷ್ ಸರಕಾರವನ್ನು ಧ್ವಂಸಗೊಳಿಸುವವನಾಗಿರುವನು.

## ಅಹ್ಮದಿಯಾ ಜಮಾಅತಿನ ವಿರುದ್ಧ ಬಹಿರಂಗ ವಂಚನೆ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸ್ವತಃ ತನ್ನನ್ನು ಬ್ರಿಟಿಷರು ನೆಟ್ಟ ಗಿಡವೆಂದು ಒಪ್ಪಿಕೊಂಡು ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸುವುದು ಎಂತಹ ವಂಚನೆ ಎಂದರೆ ಅದರ ಬಗ್ಗೆ ಆಶ್ಚರ್ಯವಾಗುತ್ತದೆ. ಈ ಜನರಿಗೆ ಅಲ್ಲಾಹನ ಬಗ್ಗೆ ಭಯವೇ ಇಲ್ಲ ಎಂದು ತೋರುತ್ತದೆ. ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನನ್ನು ಮತ್ತು ಅಹ್ಮದಿಯಾ ಜಮಾಅತನ್ನು ಬ್ರಿಟಿಷರು ಸ್ವತಃ ನೆಟ್ಟ ಗಿಡವೆಂದು ಒಪ್ಪಿಕೊಂಡಿದ್ದಾರೆ ಎಂಬ ಭಾವನೆ ಜನರಲ್ಲಿ ಉಂಟುಮಾಡಲು ಪ್ರಯತ್ನಿಸುತ್ತಿದ್ದಾರೆ. (ನಊಧು ಬಿಲ್ಲಾಹಿ ಮಿನ್ ಧಾಲಿಕ - ಹಾಗೆ ಹೇಳುವುದರಿಂದ ಅಲ್ಲಾಹನು ನಮ್ಮನ್ನು ರಕ್ಷಿಸಲಿ)

ಪಂಜಾಬಿನ ಲೆಫ್ಟಿನೆಂಟ್ ಗವರ್ನರ್ ಸರ್ ವಿಲ್ಯಂ ಮೇಕ್ ವರ್ತ್ ಯಂಗ್ ಬಹಳ ಮತಭ್ರಾಂತ ಕ್ರೈಸ್ತನಾಗಿದ್ದನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಕ್ರೈಸ್ತ ಧರ್ಮದ ವಿರುದ್ಧ ನಡೆಸುತ್ತಿದ್ದ ತೀವ್ರ ಸಮರವನ್ನು ಅವನು ಬಹಳ ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದನು. ಈ ಗವರ್ನರನಿಗೆ ಶತ್ರುಗಳು ಹೀಗೆ ದೂರು ಅರ್ಪಿಸಿದರು: ಮಿರ್ಝಾ ಗುಲಾಮ್ ಅಹ್ಮದ್ ಬ್ರಿಟಿಷ್ ಸರಕಾರದ ಮತ್ತು ಕ್ರೈಸ್ತ ಧರ್ಮದ ಕಠಿಣ ಶತ್ರುವಾಗಿದ್ದಾನೆ. ಅವನನ್ನು ಕೊಲ್ಲಬೇಕು.

ಇದರ ಬಗ್ಗೆ ವಿವರಿಸುತ್ತಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಬರೆದರು: "ನನಗೆ ನಿರಂತರವಾಗಿ ವರದಿಗಳು ಬರುತ್ತಾ ಇವೆ. ಕೆಲವು ಅಸೂಯೆಭರಿತರಾದ ಜನರು ನನ್ನ ಬಗ್ಗೆ ಕೆಟ್ಟ ಭಾವನೆಗಳನ್ನು ಹೊಂದಿದ್ದು ಧಾರ್ಮಿಕ ವಿಶ್ವಾಸಗಳಿಗೆ ಸಂಬಂಧಿಸಿದ ಭಿನ್ನಾಭಿಪ್ರಾಯ ಅಥವಾ ಬೇರೆ ಕಾರಣದಿಂದ ನನ್ನ ವಿರುದ್ಧ ಹಗೆತನವನ್ನೂ ಶತ್ರುತ್ವವನ್ನೂ ಹೊಂದಿದ್ದಾರೆ ಮತ್ತು ನನ್ನ ಸ್ನೇಹಿತರ ಶತ್ರುಗಳೂ ಆಗಿದ್ದಾರೆ. ನನ್ನ ವಿರುದ್ಧ ಮತ್ತು ನನ್ನ ಸ್ನೇಹಿತರ ವಿರುದ್ಧ ಸರಕಾರದ ಗೌರವಾನ್ವಿತ ಅಧಿಕಾರಿಗಳಿಗೆ ಅಸತ್ಯಭರಿತ ವರದಿಗಳನ್ನು ತಲಪಿಸುತ್ತಿದ್ದಾರೆ. ಅವರು ಪ್ರತಿದಿನ ಸೃಷ್ಟಿಸಿ ಹೇಳುತ್ತಿರುವ ಸುಳ್ಳು ವರದಿಗಳಿಂದ ಘನವೆತ್ತ ಸರಕಾರದ ಹೃದಯದಲ್ಲಿ ಸಂದೇಹಗಳು ತಲೆದೋರಿ ಎಲ್ಲಾ ರೀತಿಯ ಸೇವೆಗಳು.... ವ್ಯರ್ಥವಾಗಿ ನಾಶವಾಗಿ ಹೋಗದಿರಲಿ. (ಕಿತಾಬುಲ್ ಬರಿಯ್ಯ - ರೂಹಾನಿ ಖಝಾಯಿನ್, ಸಂಪುಟ 13, ಪುಟ 349)

## ಕುಟುಂಬ ಮಾಡಿದ ಸೇವೆಗಳು

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬ ಬ್ರಿಟಿಷ್ ಸರಕಾರಕ್ಕೋಸ್ಕರ ಮಾಡಿದ ಸೇವೆಗಳ ದೀರ್ಘ ಪಟ್ಟಿಯಲ್ಲಿ ಹೀಗೆ ಹೇಳಿರುವರು: "ಸಿಖ್ಖರ ವಿರುದ್ಧ ನಡೆಸಲಾದ ಯುದ್ಧಗಳಲ್ಲೂ ಬೇರೆ ಯುದ್ಧಗಳಲ್ಲೂ ನನ್ನ ಕುಟುಂಬ ನಿಮ್ಮ (ಎಂದರೆ ಬ್ರಿಟಿಷರ) ಸೇವೆ ಮಾಡಿದೆ. ಕುಟುಂಬ ಸ್ವತಃ ಖರ್ಚು ಮಾಡಿ ಸೈನಿಕರನ್ನು ಒದಗಿಸಿದೆ. ಈ ಎಲ್ಲಾ ವಿಷಯಗಳನ್ನು ಮರೆತು, ಇವು ನಿಮ್ಮ ಶತ್ರುಗಳ ಕುಟುಂಬದ ಕೆಲಸಗಳೆಂದೂ ಆ ಕುಟುಂಬ ನಿಮ್ಮನ್ನು ನಾಶಪಡಿಸುವುದೆಂದೂ ಹೇಗೆ ತಾನೆ ಹೇಳಬಲ್ಲಿರಿ?" ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಸಂದರ್ಭದಲ್ಲಿ ಬರೆದ ಲೇಖನಗಳಲ್ಲಿ ಅಹ್ಮದಿಯಾ ಜಮಾಅತನ್ನು ಎಲ್ಲಿಯೂ ಹೆಸರಿಸಲಿಲ್ಲ. ಇನ್ನೊಂದು ವಿಷಯ ವೇನೆಂದರೆ, ಶತ್ರುಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಬಗ್ಗೆ ಸರಕಾರಕ್ಕೆ ದೂರಿತ್ತಾಗ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬದವರೆಲ್ಲ ಅಹ್ಮದಿಯೇತರರೂ ಅವರ ವಿರೋಧಿಗಳೂ ಆಗಿದ್ದರು. ಈ ಕುಟುಂಬದ ಜನರು ಬೇರೆ ದೂರುಗಳ ಜೊತೆಗೆ ಹೀಗೆ ದೂರಿದರು: "ಮಿರ್ಝಾ ಗುಲಾಮ್ ಅಹ್ಮದರು ಎಂತಹ ವಾದ ಮಾಡಿರುವರೆಂದರೆ ನಾವು ಅದನ್ನು ಅಂಗೀಕರಿಸುವುದಿಲ್ಲ. ಅವರು ನಮ್ಮನ್ನು ಧಾರ್ಮಿಕ ದೃಷ್ಟಿಯಲ್ಲಿ ಲೋಕದಲ್ಲಿ ಹೀನಾಯಗೊಳಿಸುತ್ತಿರುವರು. ಅವರು ಸರಕಾರದ ದೃಷ್ಟಿಯಲ್ಲಿಯೂ ನಮ್ಮನ್ನು ಹೀನೈಸಿ ಸರಕಾರದ ವಿರೋಧವನ್ನು ಆಮಂತ್ರಿಸುತ್ತಿರುವರು."

ಈ ಹಿನ್ನೆಲೆಯಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಕುಟುಂಬದ ಹಿತಕ್ಕೋಸ್ಕರ ಸರಕಾರಕ್ಕೆ ಬರೆದರು. ತನ್ನ ಕುಟುಂಬದ ಹಿರಿಯರಿಗೆ ಸರಕಾರವು ಅವರ ಸೇವೆಯನ್ನೂ ನಿಷ್ಠೆಯನ್ನೂ ಪ್ರಶಂಸಿಸಿ ಬರೆದ ಪತ್ರಗಳ ಬಗ್ಗೆ ಪ್ರಸ್ತಾಪಿಸಿದರು. ಅವರು ಹೀಗೆ ಬರೆದರು:

"ಐವತ್ತು ವರ್ಷಗಳ ನಿರಂತರ ಅನುಭವದ ಮೂಲಕ ಈ ಕುಟುಂಬ ನಿಷ್ಠಾವಂತ ತ್ಯಾಗ ಮನೋಭಾವ ಹೊಂದಿದೆ ಎಂದು ಸಾಬೀತುಗೊಳಿಸಿದೆ. (ಇಲ್ಲಿ ಅಹ್ಮದಿಯಾ ಜಮಾಅತಿನ ಬಗ್ಗೆ ಪ್ರಸ್ತಾಪಿಸಿಲ್ಲ. ಕೇವಲ ಕುಟುಂಬದ ಬಗ್ಗೆ ಮಾತ್ರ ಪ್ರಸ್ತಾಪಿಸಲಾಗಿದೆ.) ಈ ಕುಟುಂಬದ ಬಗ್ಗೆ ಘನವೆತ್ತ ಸರಕಾರದ ಗೌರವಾನ್ವಿತ ಅಧಿಕಾರಿಗಳು ಯಾವಾಗಲೂ ಅಭಿಪ್ರಾಯ ಸೂಚಿಸುತ್ತಾ ತಮ್ಮ ಪತ್ರಗಳಲ್ಲಿ ಹೀಗೆ ಸಾಕ್ಷ್ಯ ನೀಡಿದ್ದಾರೆ: ಈ ಕುಟುಂಬ ಬಹಳ ಹಿಂದಿನ ಕಾಲದಿಂದಲೂ ಬ್ರಿಟಿಷ್ ಸರಕಾರದ ದೃಢವಾದ ಹಿತೈಷಿಗಳೂ ಸೇವಕರೂ ಆಗಿದ್ದಾರೆ. ಸ್ವತಃ ನೆಟ್ಟ ಈ ಗಿಡದ ಬಗ್ಗೆ ಅತ್ಯಂತ ಸೂಕ್ಷ್ಮವಾಗಿಯೂ ಜಾಗರೂಕತೆಯಿಂದಲೂ ಗಮನಿಸಿ ತಪಾಸಣೆ ನಡೆಸಬೇಕು." (ಕಿತಾಬುಲ್ ಬರಿಯ್ಯ - ರೂಹಾನಿ ಖಝಾಯಿನ್ ಸಂಪುಟ 13, ಪುಟ-350)

## ಬ್ರಿಟಿಷರನ್ನು ಹೊಗಳಿದುದಕ್ಕೆ ಅಹ್ಮದಿಯಾ ಜಮಾಅತಿನೊಂದಿಗೆ ಯಾವ ಸಂಬಂಧವೂ ಇಲ್ಲ

ವಾಸ್ತವಿಕ ವಿಷಯವೇನೆಂದರೆ, ಅಹ್ಮದಿಯಾ ಜಮಾಅತ್ ಸ್ಥಾಪಿತವಾದುದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಂದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪ್ರಸ್ತಾಪಿಸಿದುದು ತನ್ನ ಕುಟುಂಬದ ಸದಸ್ಯರ ಬಗ್ಗೆಯಾಗಿದೆ. ಅಹ್ಮದಿಯಾ ಜಮಾಅತ್ ಸ್ಥಾಪಿತವಾಗುವ ಮೊದಲು ತನ್ನ ಕುಟುಂಬದ ಜನರು ಮಾಡಿದ ಸೇವೆಯ ಬಗ್ಗೆ ಅವರು ಪ್ರಸ್ತಾಪಿಸಿದುದು. ಆ ಜನರಿಗೆ ಅಹ್ಮದಿಯಾ ಜಮಾಅತಿನೊಂದಿಗೆ ಯಾವ ಸಂಬಂಧವೂ ಇಲ್ಲ. ಪಾಕಿಸ್ತಾನ ಸರಕಾರದ ಶ್ವೇತ ಪತ್ರದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ನೀಡಿದ ಒಂದು ಸಾಕ್ಷ್ಯಧಾರ ಹೀಗೆಯೂ ಇತ್ತು - ಅವರ ಸಮೀಪದ ಸಂಬಂಧಿಕರು ಅವರ ಕಠಿಣ ಶತ್ರುಗಳಾಗಿದ್ದರೆಂದು. ಯಾವ ಕುಟುಂಬದ ಬಗ್ಗೆ ಸ್ವತಃ ನೆಟ್ಟಗಿಡವೆಂದು ಹೇಳಲಾಗಿದೆಯೋ ಅವರು ಇಂದಿನ ನುಡಿಗಟ್ಟಿನ ಪ್ರಕಾರ ಅಹ್ಲೆಸುನ್ನತ್ (ಸುನ್ನೀ) ಆಗಿದ್ದರು. (ಆದರೆ ವಾಸ್ತವಿಕ ಅಹ್ಲೆ ಸುನ್ನತ್ ಅಲ್ಲಾಹನ ಅನುಗ್ರಹದಿಂದ ನಾವೇ ಆಗಿದ್ದೇವೆ.) ಒಟ್ಟಾರೆ ಹೇಳುವುದಾದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ವಿರೋಧಿಸುತ್ತಿದ್ದ ಸುನ್ನೀ ಕುಟುಂಬದವರೊಂದಿಗೆ ಅವರು ಸಂಬಂಧವನ್ನು ಕಡಿದು ಹಾಕಿದ್ದರು. ಆ ಕುಟುಂಬವು ಅಹ್ಮದಿಯತಿನ ಕಾರಣ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ವಿರೋಧಿಸುತ್ತಿತ್ತು. ಆ ಕುಟುಂಬವು ಬ್ರಿಟಿಷರು ನೆಟ್ಟಗಿಡವಾಗಿತ್ತು, ಅದು ಹಾಗೆ ಆಗಿದ್ದರೆ ಹಾಗೆಯೇ ಆಗಿರಲಿ. ಅದರಿಂದ ನಮಗೆ ಯಾವ ವ್ಯತ್ಯಾಸವೂ ಉಂಟಾಗದು. ಅಹ್ಮದಿಯಾ

ಜಮಾಅತಿಗೆ ಆ ಕುಟುಂಬದೊಂದಿಗೆ ಯಾವ ಸಂಬಂಧವೂ ಇಲ್ಲ.

## ಬ್ರಿಟಿಷರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬಕ್ಕೆ ನೀಡಿದುದಾದರೂ ಏನು?

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬದೊಂದಿಗೆ ಬ್ರಿಟಿಷರ ಸಂಬಂಧ ಹೇಗಿತ್ತು? ಅದರ ಬಗ್ಗೆ ತಿಳಿದುಕೊಳ್ಳಿರಿ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತನ್ನ ಹಿರಿಯರ ಕುಟುಂಬದವರು ಬ್ರಿಟಿಷರಿಗೆ ಸೇವೆಯನ್ನು ಮಾಡಿ ಬ್ರಿಟಿಷ್ ಸರಕಾರದಿಂದ ಪ್ರಶಸ್ತಿ ಪತ್ರಗಳನ್ನು ಗಳಿಸಿದ ಬಗ್ಗೆ ಪ್ರಸ್ತಾಪಿಸಿ ತನ್ನ ಕುಟುಂಬವನ್ನು ಬ್ರಿಟಿಷರು ನೆಟ್ಟಗಿಡವೆಂದು ಹೇಳಿರುವವರಾದರೂ ಆ ಕುಟುಂಬ ಬ್ರಿಟಿಷರು ನೆಟ್ಟ ಗಿಡವಾದುದು ಹೇಗೆ? ಬ್ರಿಟಿಷರು ಮಾಡಿದ ಉಪಕಾರಗಳೇನು? ಎಂದು ನೋಡುವ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬ್ರಿಟಿಷರು ತನ್ನ ಕುಟುಂಬಕ್ಕೆ ಮಾಡಿದ ಯಾವುದೇ ಉಪಕಾರದ ಬಗ್ಗೆ ಪ್ರಸ್ತಾಪಿಸಿಲ್ಲ. ತನ್ನ ಕುಟುಂಬ ಮಾಡಿದ ಸೇವೆಯ ಬಗ್ಗೆ ಮಾತ್ರ ಹೇಳಿದ್ದಾರೆ. ಬ್ರಿಟಿಷರು ಮಾಡಿದ ಉಪಕಾರ ಏನಾಗಿತ್ತು? ಸಿಖ್ಖ್ ಸರಕಾರದಿಂದ ಬ್ರಿಟಿಷರು ಈ ಕುಟುಂಬವನ್ನು ರಕ್ಷಿಸಿದರು. ಇದೇ ಬ್ರಿಟಿಷರು ಮಾಡಿದ ಏಕಮಾತ್ರ ಉಪಕಾರ. ಸಿಖ್ಖರು ಈ ಕುಟುಂಬವನ್ನು ನಿರಂತರವಾಗಿ ಆಕ್ರಮಿಸಿ ಅದನ್ನು ಬಲಹೀನಗೊಳಿಸಿದ್ದರು. ಕೆಲವು ಸಾರಿ ಈ ಕುಟುಂಬವನ್ನು ಗಡಿಪಾರು ಮಾಡಲಾಗುತ್ತಿತ್ತು. ಈ ಕುಟುಂಬ ಅನೇಕ ವರ್ಷಗಳ ಕಾಲ ತನ್ನ ಊರನ್ನು ಬಿಟ್ಟು ಹೊರಗೆ ವಾಸಿಸಬೇಕಾಯಿತು. ಬ್ರಿಟಿಷ್ ಸರಕಾರದ ಕಾಲದಲ್ಲಿ ಶಾಂತಿಯ ಪರಿಸ್ಥಿತಿಯಲ್ಲಿ ಈ ಕುಟುಂಬ ಖಾದಿಯಾನಿಗೆ ಮರಳಿ ಬಂದು ವಾಸಿಸಲು ತೊಡಗಿತು. ಬ್ರಿಟಿಷರು ಮಾಡಿದ ಈ ಉಪಕಾರದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಪಿತೃ ಕುಟುಂಬವನ್ನು ಬ್ರಿಟಿಷರು ಸ್ವತಃ ನೆಟ್ಟ ಗಿಡವೆಂದು ಹೇಳಿದುದಾಗಿದೆ. ತನ್ನ ಪಿತೃ ಕುಟುಂಬ ಮಾಡಿದ ಸೇವೆಯ ಕಾರಣ ಯಾವುದಾದರೂ ಬಹುಮಾನ ಸಿಗಬೇಕಾಗಿತ್ತು ಎನ್ನುವುದು ವಾಸ್ತವಿಕವಾದುದಲ್ಲ. ಆದರೆ ಬ್ರಿಟಿಷರು ಈ ಕುಟುಂಬಕ್ಕೆ ಮಾಡಿದ ಉಪಕಾರಗಳ ಬಗ್ಗೆ ಸಹ ತಿಳಿದುಕೊಳ್ಳಿರಿ.

"ಪಂಜಾಬ್ ಚೀಫ್ಸ್" ಬ್ರಿಟಿಷ್ ಸರಕಾರ ಪ್ರಕಟಿಸಿದ ಪ್ರಸಿದ್ಧ ಗ್ರಂಥವಾಗಿದೆ. ಇದೊಂದು ಚಾರಿತ್ರಿಕ ದಾಖಲೆಯಾಗಿದೆ.

ಪಂಜಾಬನ್ನು ತನ್ನ ಸ್ವಾಧೀನಕ್ಕೆ ತಂದಾಗ ಬ್ರಿಟಿಷ್ ಸರಕಾರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪಿತೃ ಕುಟುಂಬದೊಂದಿಗೆ ವರ್ತಿಸಿದುದು ಹೇಗೆಂದು ಅದರಲ್ಲಿ ಉಲ್ಲೇಖಿಸಲ್ಪಟ್ಟಿದೆ.

ಪಂಜಾಬನ್ನು ಬ್ರಿಟಿಷ್ ಸರಕಾರ ವಶಪಡಿಸಿಕೊಂಡಾಗ ಈ ಕುಟುಂಬದ ಎಲ್ಲಾ ಜಹಗೀರುಗಳನ್ನು ರದ್ದುಗೊಳಿಸಿ ಕೇವಲ ಎರಡು ಮೂರು ಗ್ರಾಮಗಳ ಮಾಲಿಕಾನ ಹಕ್ಕು ನೀಡಿ ಗುಲಾಮ್ ಮುರ್ತಝ ಮತ್ತು ಅವರ ಸಹೋದರರಿಗೆ ಏಳುನೂರು ರೂಪಾಯಿಗಳ ವಾರ್ಷಿಕ ಪೆನ್‌ಶನ್ ನೀಡಲಾಯಿತು. ("ಚೀಫ್ ಆಂಡ್ ಫೇಮಲೀಸ್ ಆಫ್ ನೋಟ್ ಇನ್ ದಿ ಪಂಜಾಬ್")

(ಅನಂತರ ಇದನ್ನು ಕ್ರಮೇಣ ಕಡಿತಗೊಳಿಸಿ ರದ್ದುಗೊಳಿಸಿದ ಬಗ್ಗೆ ಈ ಪುಸ್ತಕದಲ್ಲಿ ಬರೆದಿಲ್ಲ.)

ಸ್ವತಃ ನೆಟ್ಟ ಗಿಡವಾದ ಕುಟುಂಬದ ಜೊತೆ ಬ್ರಿಟಿಷರ ಸಂಬಂಧ ಹಾಗಿತ್ತು! ಸಿಖ್ಖರೊಂದಿಗೆ ಯುದ್ಧ ಮಾಡುತ್ತಿರುವಾಗ ಸಿಖ್ಖರನ್ನು ಬಲಹೀನಗೊಳಿಸಲು ಬ್ರಿಟಿಷರು, ಊರು ಬಿಟ್ಟು ಹೋದ ಕುಟುಂಬವನ್ನು ಪುನಃ ಖಾದಿಯಾನಿಗೆ ಬಂದು ವಾಸಿಸಲು ಬಿಟ್ಟರು. ಈ ಒಂದು ಉಪಕಾರದ ಹೊರತು ಬ್ರಿಟಿಷರು ಈ ಕುಟುಂಬಕ್ಕೆ ಯಾವ ಉಪಕಾರವನ್ನೂ ಮಾಡಲಿಲ್ಲ. ಬ್ರಿಟಿಷರು ಮಾಡಿದ ಅಪಕಾರ ಸಹ ನೋಡಿರಿ. ಅವರು ಎಪ್ಪತ್ತು ಗ್ರಾಮಗಳ ಜಹಗೀರನ್ನು ಈ ಕುಟುಂಬದಿಂದ ಕಿತ್ತುಕೊಂಡರು. ಈ ಜಹಗೀರನ್ನು ಮರಳಿ ಪಡೆಯಲು ಈ ಕುಟುಂಬದ ಹಿರಿಯರು ಹಲವಾರು ವರ್ಷಗಳ ಕಾಲ ನ್ಯಾಯಾಲಯಗಳಲ್ಲಿ ಹೋರಾಟ ನಡೆಸಿ ತಮ್ಮ ಬಳಿಯಿದ್ದುದನ್ನೂ ಕಳೆದುಕೊಂಡರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ಪಿತರೊಂದಿಗೆ ನಿರಂತರವಾಗಿ ಹೇಳುತ್ತಿದ್ದರು: "ನೀವು ಈ ಮೊಕದ್ದಮೆಗಳನ್ನು ಬಿಟ್ಟುಬಿಡಿರಿ. ದೇವನೊಂದಿಗೆ ಸಂಬಂಧ ಸ್ಥಾಪಿಸಿರಿ. ನೀವು ಸರಕಾರದಿಂದ ಏನನ್ನೂ ಪ್ರತೀಕ್ಷಿಸಬೇಡಿರಿ. ನಿಮ್ಮ ಬಳಿ ಇರುವುದು ಕೂಡ ನಿಮ್ಮ ನ್ಯಾಯಾಲಯ ವ್ಯವಹಾರದಿಂದ ನಾಶವಾಗುವುದು. ಆದುದರಿಂದ ಮೊಕದ್ದಮೆ ಹೂಡುವುದನ್ನು ಬಿಟ್ಟುಬಿಡಿರಿ." ಆದರೆ ಅವರ ಪಿತರಿಗೆ ತಮ್ಮ ಸ್ವತ್ತು ತಮ್ಮ ಕೈಬಿಟ್ಟುಹೋದುದರಿಂದ ಎಂತಹ ದುಃಖವಾಗಿತ್ತೆಂದರೆ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಮಾತನ್ನು ಅಂಗೀಕರಿಸಲಿಲ್ಲ. ಇದರ ಪರಿಣಾಮವಾಗಿ ಅವರು ಹಿಂದೆ ಸಂಪಾದಿಸಿ ಜೋಡಿಸಿಟ್ಟ ಸಂಪತ್ತನ್ನು ಮೊಕದ್ದಮೆಗಳಲ್ಲಿ ಸೋತು ಕಳೆದುಕೊಂಡರು. ಬ್ರಿಟಿಷರು ಒಂದು ಗ್ರಾಮವನ್ನು ಕೂಡ ಮರಳಿಕೊಡಲಿಲ್ಲ.

## ಬ್ರಿಟಿಷರು ಮುಸ್ಲಿಮ್ ಮತಪಂಡಿತರಿಗೆ ಮಾಡಿದ ಉಪಕಾರಗಳು

ಅಹ್ಮದಿಯರ ವಿರುದ್ಧ ಬ್ರಿಟಿಷರು ನೆಟ್ಟಗಿಡವೆಂದು ಆಕ್ಷೇಪಿಸಿದ ಮುಸ್ಲಿಮ್ ಮತಪಂಡಿರು ಬ್ರಿಟಿಷರನ್ನು ಹೊಗಳಿದ ಬಗ್ಗೆ ನಾನು ಇದರ ಮೊದಲು ವಿವರಿಸಿದ್ದೇನೆ. ಅವರು ಬ್ರಿಟಿಷರನ್ನು ಹೊಗಳಿದುದು ನಿಷ್ಕಾರಣವಾಗಿಯಲ್ಲ. ಅವರು ಬ್ರಿಟಿಷರನ್ನು ಹೊಗಳಿದುದರಿಂದ ಅವರಿಗೆ ಬ್ರಿಟಿಷ್ ಸರಕಾರದಿಂದ ಜಹಗೀರುಗಳು ಲಭಿಸಿದುವು. ಮೌಲವಿ ಮುಹಮ್ಮದ್ ಹುಸೈನ್ ಬಟಾಲವಿ ಬ್ರಿಟಿಷರನ್ನು ಹೊಗಳಿದ ಕಾರಣ ನಾಲ್ಕು ಮುರಬ್ಬ (ನಾನೂರು ಎಕ್ರೆ) ಜಮೀನು ಬ್ರಿಟಿಷ್ ಸರಕಾರ ನೀಡಿತು. ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬಕ್ಕೆ ಒಂದು ಇಂಚು ಜಮೀನು ಕೂಡ ದೊರಕಲಿಲ್ಲ. ಅಹ್ಮದಿಯಾ ಜಮಾಅತಿಗೆ ಕೂಡ ಬ್ರಿಟಿಷರು ಯಾವ ಉಪಕಾರವನ್ನೂ ಮಾಡಲಿಲ್ಲ. ಬ್ರಿಟಿಷರು ಅಹ್ಮದಿಯಾ ಜಮಾಅತಿಗೆ ಒಂದು ಪೈಸೆಯಾದರೂ ನೀಡಿದ ಬಗ್ಗೆ ಅಥವಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಕುಟುಂಬಕ್ಕೆ ನೀಡಿದ ಬಗ್ಗೆ ಅಥವಾ ಯಾವುದಾದರೂ ಬಿರುದು ಪ್ರದಾನ ಮಾಡಿದ ಬಗ್ಗೆ ಲೋಕದಲ್ಲಿ ಯಾವ ವ್ಯಕ್ತಿಗೂ ಸಾಬೀತುಗೊಳಿಸಲು ಸಾಧ್ಯವಿಲ್ಲ.

ಅಲ್ಲಾಮ ಇಖ್ಬಾಲರಿಗೆ "ಸರ್" ಎಂಬ ಬಿರುದು ಲಭಿಸಿತು. ಮತಪಂಡಿತರು ಬಿರುದುಗಳನ್ನೂ ಭೂಸ್ವತ್ತನ್ನೂ ಗಳಿಸುತ್ತಾ ತಮ್ಮ ಆಶೆಗಳನ್ನು ಈಡೇರಿಸುತ್ತಾ ಇದ್ದರು. ಬ್ರಿಟಿಷ್ ಸರಕಾರದಿಂದ ವೇತನಗಳನ್ನೂ ಪಡೆಯುತ್ತಿದ್ದರು. ಇಂತಹ ಜನರು ಬ್ರಿಟಿಷರ ವಿರೋಧಿಗಳು ಹಾಗೂ ಪ್ರಥಮ ದರ್ಜೆಯ ಮುಜಾಹಿದ್‌ಗಳೆಂದು ಕರೆಯಲ್ಪಡುತ್ತಿದ್ದರು! ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜಮಾಅತ್ ಅಲ್ಲಾಹನಿಗೋಸ್ಕರ ಅತ್ಯಂತ ಹೆಚ್ಚು ತ್ಯಾಗ ಮಾಡುತ್ತಾ ಕೇವಲ ತಮ್ಮ ಸ್ವಂತ ಸಂಪತ್ತನ್ನು ಮಾತ್ರ ಬಳಸುತ್ತಿದೆ. ಸರಕಾರದಿಂದ ಒಂದು ಕಾಸನ್ನೂ ಪಡೆಯಲಿಲ್ಲ. ಹೀಗಿರುವಾಗ ಈ ಜಮಾಅತ್ ಬ್ರಿಟಿಷರು ಸ್ವತಃ ನೆಟ್ಟ ಗಿಡವಾಗುವುದು ಹೇಗೆ?

## ವಹ್ಹಾಬಿಗಳು ಬ್ರಿಟಿಷರು ನೆಟ್ಟಗಿಡವೆಂದು ಆರೋಪ

ಸತ್ಯಾಂಶವು ಎಂದೂ ಮರೆಯಾಗಿಯೇ ಇರುವುದಿಲ್ಲ. ಅಹ್ಮದಿಯಾ

ಜಮಾಅತಿನ ಶತ್ರುಗಳು ಸ್ವತಃ ಇದೇ ನುಡಿಗಟ್ಟನ್ನು, ಎಂದರೆ ಬ್ರಿಟಿಷರು ನೆಟ್ಟ ಗಿಡವೆಂಬ ನುಡಿಗಟ್ಟನ್ನು ತಮ್ಮದೇ ಪಂಗಡಗಳ ವಿರುದ್ಧ ಬಳಸಲು ತೊಡಗಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬ್ರಿಟಿಷರು ನೆಟ್ಟ ಗಿಡವೆಂದು ತಮ್ಮ ಜಮಾಅತ್ ಬಗ್ಗೆ ಹೇಳಿಯೇ ಇರಲಿಲ್ಲ. ಆದರೆ ಅಹ್ಮದಿಯಾ ಜಮಾಅತಿನ ಶತ್ರು ಪಂಗಡಗಳು ಪರಸ್ಪರ ಇದೇ ನುಡಿಗಟ್ಟನ್ನು ಬಳಸಲು ಪ್ರಾರಂಭಿಸಿರುವರು. ಇದು ಅಲ್ಲಾಹನ ಕಡೆಯಿಂದ ವಿಚಿತ್ರವಾದೊಂದು ಪ್ರತೀಕಾರವಾಗಿದೆ. "ಚಟ್ಟಾನ್" ಎಂಬ ಲಾಹೋರಿನ ಪತ್ರಿಕೆ 15-10-1960ರ ಸಂಚಿಕೆಯಲ್ಲಿ ಬರೇಲವಿ ಪಂಗಡದ ಬಗ್ಗೆ ಹೀಗೆ ಬರೆಯಿತು:

"ಬ್ರಿಟಿಷರನ್ನು (ಉಲುಲ್ ಅಮ್ರ್) ಅನುಸರಿಸಲು ಯೋಗ್ಯರಾದ ಅಧಿಕಾರಿಗಳು ಎಂದು ಫತ್ವ (ತೀರ್ಪು) ನೀಡಿ ಹಿಂದೂಸ್ತಾನವನ್ನು ದಾರುಲ್ ಇಸ್ಲಾಮ್ (ಇಸ್ಲಾಮೀ ಪ್ರದೇಶ) ಎಂದು ಹೇಳಿದ, ಬ್ರಿಟಿಷರು ಸ್ವತಃ ನೆಟ್ಟ ಈ ಗಿಡ ಅನಂತರ ಧಾರ್ಮಿಕ ಚಳುವಳಿಯಾಯಿತು."

ನೀವು ನೋಡಿರಿ, ಈ ಉಲ್ಲೇಖದಲ್ಲಿ ಒಬ್ಬ ವ್ಯಕ್ತಿಯನ್ನು ದೂಷಿಸಿ ಹೇಳಲಾಗಿದೆಯೋ ಅಥವಾ ಒಂದು ಜಮಾಅತಿನ ಬಗ್ಗೆಯೋ? ಇದರ ಬಗ್ಗೆ ಏನು ಸಂಶಯವಿದೆ?

ಈ ಪ್ರಸ್ತಾಪಕ್ಕೆ ಉತ್ತರವನ್ನು "ತೂಫಾನ್" ಪತ್ರಿಕೆಯ ಸಂಪಾದಕರು ಹೀಗೆ ನೀಡಿದರು:

"ಬ್ರಿಟಿಷರು ಬಹಳ ಜಾಗರೂಕತೆಯಿಂದಲೂ ಬಹಳ ಉಪಾಯ ದಿಂದಲೂ ನಜ್‌ದೀಯತ್ ಚಳುವಳಿಯನ್ನು (ಅದನ್ನು ಅಹ್ಲೆ ಹದೀಸ್ ಮತ್ತು ವಹ್ಹಾಬಿ ಎಂದು ಸಹ ಹೇಳುತ್ತಾರೆ) ಹಿಂದೂಸ್ತಾನದಲ್ಲಿಯೂ ಕೃಷಿ ಮಾಡಿದರು ಮತ್ತು ತಮ್ಮ ಕೈಗಳಿಂದಲೇ ಪೋಷಿಸಿ ಅದನ್ನು ಬಲಪಡಿಸಿದರು." ("ತೂಫಾನ್" ಪತ್ರಿಕೆ, ಮುಲ್ತಾನ್ 7-11-1962)

ನೋಡಿರಿ, ಎಷ್ಟೆಷ್ಟು ಬ್ರಿಟಿಷರು ಸ್ವತಃ ನೆಟ್ಟ ಗಿಡಗಳು ಮೊಳಕೆಯೊಡೆದವು!

## ಚಾರಿತ್ರಿಕ ಘಟನೆಗಳು ಸ್ವತಃ ಮಾತನಾಡುತ್ತವೆ

ದೋಷಾರೋಪಗಳನ್ನು ಹೊರಿಸುವ ಬಗ್ಗೆ ಹೇಳುವುದಾದರೆ ದೋಷಾರೋಪವನ್ನು ಸಾಕ್ಷ್ಯಾಧಾರ ಎಂದು ಪರಿಗಣಿಸಲು ಸಾಧ್ಯವಿಲ್ಲ. ನಮ್ಮ ವಿರುದ್ಧ ಮಾಡುವ ದೋಷಾರೋಪಗಳನ್ನು ನಾವು ಸಾಕ್ಷ್ಯಾಧಾರವಾಗಿ ಪರಿಗಣಿಸುವುದಿಲ್ಲ. ಅದೇ ರೀತಿ ವಿರೋಧಿಗಳ ಈ ಪಂಗಡಗಳು ಪರಸ್ಪರ "ಬ್ರಿಟಿಷರು ಸ್ವತಃ ನೆಟ್ಟಗಿಡ" ಎಂದು ಆಕ್ಷೇಪಿಸುವುದನ್ನು ನಾವು ಅರ್ಥಶೂನ್ಯವೆಂದು ಗಣಿಸುತ್ತೇವೆ. ಅವರ ಆಕ್ಷೇಪ ಸಾಬೀತಾಗಿದೆ ಎಂದು ನಾವು ನಂಬುವುದಿಲ್ಲ. ಆದರೆ ಚಾರಿತ್ರಿಕ ಘಟನೆಗಳಿಗೆ ಸ್ವಂತ ನಾಲಗೆ ಇರುತ್ತದೆ. ಅವು ಮಾತನಾಡಿದರೆ ನಾವು ಅವುಗಳನ್ನು ನಿಶ್ಚಯವಾಗಿಯೂ ಆಲಿಸಬೇಕಾಗುತ್ತದೆ. ದೇವ್‌ಬಂದಿ ಪಂಗಡದ ನದ್‌ವತುಲ್ ಉಲಮಾ ಸಂಸ್ಥೆಯ ಬಗ್ಗೆ ಚಾರಿತ್ರಿಕ ಸತ್ಯಗಳ ಮೂಲಕ ಅದನ್ನು ಬ್ರಿಟಿಷರು ಸ್ಥಾಪಿಸಿದರೆಂದು ಸಾಬೀತಾಗುತ್ತದೆ. ಬ್ರಿಟಿಷರೇ ಅಲ್ಲಿ ವೇತನ ನೀಡುತ್ತಿದ್ದರು. ಅದರಿಂದಲೇ ಮೌಲವಿಗಳು ಪೋಷಿಸಲ್ಪಟ್ಟರು. ಇಂತಹ ಮೌಲವಿಗಳು ಇಂದು ಬ್ರಿಟಿಷರ ಶತ್ರು ಗಳೆಂದೂ ಪ್ರಥಮ ಶ್ರೇಣಿಯ ಮುಜಾಹಿದ್ (ಹೋರಾಟಗಾರ)ರೆಂದೂ ಕರೆಯಲ್ಪಡುತ್ತಾರೆ. ನದ್‌ವತುಲ್ ಉಲಮಾ ಸಂಸ್ಥೆಯ ಅಸ್ತಿಭಾರವನ್ನು ಒಬ್ಬ ಬ್ರಿಟಿಷನು ನಿರ್ವಹಿಸಿದನು. ಈ ಸಂಸ್ಥೆಯ ಸ್ವಂತ ಪತ್ರಿಕೆಯಾದ 'ಅನ್ನದ್ವ'ದಲ್ಲಿ ಹೀಗೆ ಬರೆಯಲಾಗಿದೆ: "ಹಿಸ್ ಆನರ್ ಸಂಯುಕ್ತ ಸಂಸ್ಥಾನಗಳ ಲೆಫ್ಟಿನೆಂಟ್ ಗವರ್ನರ್ ಬಹದೂರರು ದಾರುಲ್ ಉಲೂಮ್ ನದ್ವತುಲ್ ಉಲಮಾದ ಅಸ್ತಿಭಾರ ಸ್ವತಃ ತಮ್ಮ ಕೈಗಳಿಂದ ಹಾಕಲು ಮಂಜೂರಾತಿ ನೀಡಿದರು. 28-11-1908ರಂದು ಈ ಸಮಾರಂಭ ಜರಗಿತು." ("ಅನ್ನದ್ವ" ಡಿಸೆಂಬರ್ 1908ರ ಸಂಪುಟ 5, ಸಂಚಿಕೆ 11 – ಪುಟ 2)

ಈ ಪತ್ರಿಕೆಯ ನಾಲ್ಕನೆಯ ಪುಟದಲ್ಲಿ ಅರಬಿ ಭಾಷೆಯ ಸ್ವಾಗತ ಭಾಷಣ ನೀಡಲಾಗಿದೆ. ಸರ್ ಜಾನ್ ಸ್ಕಾಟ್ K.C.S.I.E. ನದ್ವದ ಅಸ್ತಿಭಾರ ಹಾಕಬೇಕೆಂದು ಮಾಡಿದ ಅಪೇಕ್ಷೆಯನ್ನು ಅಂಗೀಕರಿಸಿ ದುದಕ್ಕಾಗಿ ಅವರಿಗೆ ಕೃತಜ್ಞತೆ ಅರ್ಪಿಸಿದ ಬಗ್ಗೆ ಬರೆಯಲಾಗಿದೆ:

ಈ ಸ್ವಾಗತ ಭಾಷಣದ ಮುಂದಿನ ಭಾಗ ಗಮನಾರ್ಹವಾಗಿದೆ. ಪ್ರಾಯಶಃ ಅವರ ಹೃದಯದಲ್ಲಿ ಹೀಗೆ ಸಂಶಯ ತೋರಿರಬೇಕು. ನದ್ವದ ಅಸ್ತಿಭಾರ ಒಬ್ಬ ಬ್ರಿಟಿಷ್ ಗವರ್ನರ್ ಹಾಕಿದನೆಂದು ತಿಳಿದರೆ ಮುಸ್ಲಿಮರು ಹೇಗೆ ಯೋಚಿಸುವರು? ಈ ಸಂಸ್ಥೆಯು ಮುಂದೆ ಏನಾಗುವುದು. ಇದರ ಉದ್ದೇಶ ಲಕ್ಷ್ಯಗಳೇನು ಎಂಬುದರ ಬಗ್ಗೆ ಯೋಚಿಸಿ ಅವರು ಅತ್ಯಂತ ದ್ರೋಹಕರವಾದ ಮಾತು ಹೇಳಿದರು. ಈ ಮಾತು ಮುಸ್ಲಿಮರ ಹೃದಯದ ಮೇಲೆ ಅಪಾಯಕರ ಆಕ್ರಮಣ ಎಂಬುದರ ಬಗ್ಗೆ ಅವರು ನಾಚಿಕೆಪಡಲಿಲ್ಲ. ಒಬ್ಬ ಬ್ರಿಟಿಷ್ ವ್ಯಕ್ತಿ ಅಸ್ತಿಭಾರ ಹಾಕುವುದನ್ನು ನ್ಯಾಯೀಕರಿಸಿ ಹೀಗೆ ಬರೆದರು:

"ಮುಸ್ಲಿಮರ ಧಾರ್ಮಿಕ ಪಾಠಶಾಲೆಯ ಅಸ್ತಿಭಾರ ಮುಸ್ಲಿಮೇತರ ನಿಂದ ಮೊದಲನೆಯ ಸಲ ಹಾಕಲಾಗುತ್ತಿದೆ. (ಮದೀನದ ಮಸ್‌ಜಿದ್ ನಬವಿಯ ಪ್ರವಚನ ವೇದಿಕೆಯನ್ನು ಒಬ್ಬ ಕ್ರೈಸ್ತ ಬಡಗಿ ನಿರ್ಮಿಸಿದ್ದನು.)"

ಅವರ ಪ್ರಕಾರ, ಮದೀನದ ಮಸ್‌ಜಿದಿನ ಮಿಂಬರ್ (ಪ್ರವಚನ ವೇದಿಕೆ) ಒಬ್ಬ ಕ್ರೈಸ್ತ ನಿರ್ಮಿಸಿರುವ ಕಾರಣ "ನದ್ವ"ದ ಅಸ್ತಿಭಾರ ಒಬ್ಬ ಕ್ರೈಸ್ತ ಹಾಕಿದುದರಿಂದ ಯಾವ ವ್ಯತ್ಯಾಸವೂ ಇಲ್ಲ.

ಕೊನೆಗೆ ಹೀಗೆ ಬರೆಯಲಾಗಿದೆ:

"ಈ ಪ್ರಸಿದ್ಧ ಮದ್‌ರಸ (ಧಾರ್ಮಿಕ ಪಾಠಶಾಲೆ) ಒಬ್ಬ ಬ್ರಿಟಿಷ್ ವ್ಯಕ್ತಿಯ ಔದಾರ್ಯದ ಫಲವಾಗಿ ನಿರ್ಮಿಸಲ್ಪಟ್ಟಿತು."
("ಅನ್ನದ್ವ" ಡಿಸೆಂಬರ್ 1908–ಪುಟ 7, ಸಂಪುಟ 5, ಸಂಚಿಕೆ 11)

ನೀವು ನೋಡಿರಿ, ಬ್ರಿಟಿಷರು ಸ್ವತಃ ನೆಟ್ಟ ಗಿಡವು "ನಾನು ಬ್ರಿಟಿಷರು ನೆಟ್ಟ ಗಿಡ" ಎಂದು ಹೇಗೆ ಒಪ್ಪಿಕೊಳ್ಳುತ್ತಾ ಇದೆ!

"ನದ್‌ವತುಲ್ ಉಲಮಾ" ಮುಸ್ಲಿಮರ ಉನ್ನತ ಶ್ರೇಣಿಯ ಧಾರ್ಮಿಕ ಪಾಠಶಾಲೆಯಾಗಿದೆ. ಅಹ್ಮದಿಯರನ್ನು ವಿರೋಧಿಸಲು ಹೊರಗೆ ಕಳುಹಿಸಲ್ಪಡುವ ಎಲ್ಲಾ ಮೌಲವಿಗಳು ಇಲ್ಲಿಂದಲೇ ಕಳುಹಿಸಲ್ಪಡುತ್ತಾರೆ. ಇಂದು ಪಾಕಿಸ್ತಾನದಲ್ಲಿ ಈ ನಜ್‌ದೀ ಪಂಗಡದ ಇಸ್ಲಾಂ ಅಚ್ಚೊತ್ತಲ್ಪಡುತ್ತದೆ. ಇದೇ ಪಂಗಡವನ್ನು ಮೇಲೆ ತರಲಾಗುತ್ತಿದೆ. ನದ್ವದ ಈ ಗುಂಪನ್ನು ಅಹ್ಲೆ ಹದೀಸ್ ಎಂದು ಸಹ ಕರೆಯುತ್ತಾರೆ. ಎರಡು ಪಂಗಡಗಳು ಆಗಿದ್ದರೂ ಅವು ಮೂಲತಃ ಒಂದೇ ರೀತಿ ವರ್ತಿಸುತ್ತವೆ.

"ಅನ್ನದ್ವ" ಪತ್ರಿಕೆ 1908ರ ಜುಲೈ ತಿಂಗಳ ಸಂಚಿಕೆ 5, ಪುಟ 1 ರಲ್ಲಿ ಹೀಗೆ ಬರೆಯಲಾಗಿದೆ:

"ನದ್‌ವತುಲ್ ಉಲಮಾ ರಾಜಕೀಯದಿಂದ ಸಂಪೂರ್ಣವಾಗಿ ಬೇರೆಯಾಗಿದ್ದರೂ ಅದರ ಸ್ಥಾಪನೆಯ ಮೂಲ ಉದ್ದೇಶ ಪ್ರಬುದ್ಧರಾದ ವಿದ್ವಾಂಸರನ್ನು ತಯಾರು ಮಾಡುವುದಾಗಿದೆ. ಇಂತಹ ವಿದ್ವಾಂಸರ ಆವಶ್ಯಕ ಕರ್ತವ್ಯ ಸರಕಾರದ ಅನುಗ್ರಹದ ಬಗ್ಗೆ ಮನವರಿಕೆ ಮಾಡಿಕೊಡುವುದು ಮತ್ತು ಸರಕಾರಕ್ಕೆ ವಿಧೇಯತೆ ತೋರಿಸುವ ವಿಚಾರವನ್ನು ಹರಡುವುದಾಗಿದೆ."

ಇದನ್ನು ಇಂಗ್ಲಿಷ್ ಭಾಷೆಯಲ್ಲಿ Cat is out of bag (ಬೆಕ್ಕು ಚೀಲದಿಂದ ಹೊರಗೆ ಬಂತು) ಎನ್ನುತ್ತಾರೆ. ಇದು ವಹ್ಹಾಬಿ, ಅಹ್ಲೆ

ಹದೀಸ್ ಪಂಗಡಗಳ ನಿಜವಾದ ಸ್ಥಿತಿಯಾಗಿದೆ. ಅವರು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಗ್ಗೆ ಎಂತೆಂತಹ ಸುಳ್ಳು ಸೃಜಿಸಿ ಹೇಳುತ್ತಾರೆ! ಅವರು ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತು ಅಹ್ಮದಿಯಾ ಜಮಾಅತ್ ವಿರುದ್ಧ ಆಕ್ರಮಣ ಮಾಡುತ್ತಾರೆ. ಆದರೆ ತಮ್ಮ ಅಂತರಂಗವನ್ನು ಮರೆಮಾಡುತ್ತಾರೆ. ಅವರು ಸ್ವತಃ ತಮ್ಮ ಉದ್ದೇಶಲಕ್ಷ್ಯಗಳನ್ನು ಸ್ಪಷ್ಟವಾಗಿ ಹೇಳಿದರು. ಅವರ ಮದ್‌ರಸದ ಅಸ್ತಿಭಾರ ಹಾಕಿದುದು ಯಾರೆಂದು ಸ್ವತಃ ಹೇಳಿದರು. ಇವೆಲ್ಲಾ ಸಾಕ್ಷ್ಯಾಧಾರಗಳು ಚಾರಿತ್ರಿಕವಾಗಿ ದಾಖಲಾಗಿವೆ. ಯಾವುದೇ ಅಹ್ಮದಿ ಇದರಲ್ಲಿ ಹಸ್ತಕ್ಷೇಪ ನಡೆಸಿಲ್ಲ. ಅಹ್ಮದಿ ಪ್ರತ್ಯೇಕ ಅಭಿಪ್ರಾಯ ಸೂಚಿಸುವ ಅಗತ್ಯವೂ ಇಲ. ನಜ್‌ದೀ ಚಳುವಳಿಗೆ ನಿರಂತರವಾಗಿ ಬ್ರಿಟಿಷರ ಸಹಾಯ ದೊರಕುತ್ತಿತ್ತು ಎಂಬುದು ಚಾರಿತ್ರಿಕ ಸತ್ಯವಾಗಿದೆ. ಅವರು ಮಾಡಿದ ಒಪ್ಪಂದಗಳು ಚರಿತ್ರೆಯ ಪುಸ್ತಕಗಳಲ್ಲಿ ಮುದ್ರಿತವಾಗಿ ಈಗಲೂ ಇವೆ. ಅವುಗಳ ಮೂಲಪ್ರತಿಗಳು ಲಂಡನಿನ ಲೈಬ್ರರಿಗಳಲ್ಲಿ ಈಗಲೂ ಇವೆ. ಅವುಗಳಲ್ಲಿ ನೀವು ಹೀಗೆ ನೋಡಬಹುದು: ಬ್ರಿಟಿಷರು ಒಪ್ಪಂದ ಮಾಡಿ ಅಹ್ಲೆ ಹದೀಸ್ ಎಂದರೆ ವಹ್ಹಾಬಿ ಚಳುವಳಿ ಮತ್ತು ಇಂದಿನ ಸೌದಿ ಸರಕಾರದ ಮೂಲ ಸ್ಥಾಪಕರ ಮಧ್ಯೆ ಒಂದು ಸಂಬಂಧ ಸ್ಥಾಪಿಸಿದರು ಮತ್ತು ಜಿಹಾದಿನ ಒಂದು ಚಳುವಳಿಯನ್ನು ಜಾರಿಗೊಳಿಸಿದರು. ಈ ಜಿಹಾದಿನ ಚಳುವಳಿ ಬ್ರಿಟಿಷರ ವಿರುದ್ಧವಾಗಿರಲಿಲ್ಲ. ಏಕೆಂದರೆ ಬ್ರಿಟಿಷರು ಅವರ ಯಜಮಾನರಾಗಿದ್ದರು. ವಾರ್ಷಿಕ ಐದು ಸಾವಿರ ಪೌಂಡ್ ನೆರವಾಗಿ ಬ್ರಿಟಿಷರು ನೀಡುತ್ತಿದ್ದರು. ಈ ಚಳುವಳಿ ಯಾರ ವಿರುದ್ಧವಾಗಿತ್ತು? ಅದು ತುರ್ಕಿ ದೇಶದ ಮುಸ್ಲಿಮ್ ಸರಕಾರದ ವಿರುದ್ಧವಾಗಿತ್ತು. ಈ ರೀತಿ ನಜ್‌ದೀ ಚಳುವಳಿ ಬ್ರಿಟಿಷರ ಸಹಾಯದಿಂದ ಸೌದಿ ಅರೇಬಿಯಾದಲ್ಲಿ ಸ್ಥಾಪಿಸಲ್ಪಟ್ಟಿತು. ಅನಂತರ ಹಿಂದೂಸ್ತಾನದಲ್ಲಿಯೂ ಈ ಚಳುವಳಿಯ ಗಿಡವನ್ನು ನೆಡಲಾಯಿತು. ಈ ಚಳುವಳಿ ಪಾಕಿಸ್ತಾನವನ್ನು ಈಗ ತನ್ನ ಸ್ವಾಧೀನಕ್ಕೊಳಪಡಿಸಲು ಕನಸು ಕಾಣುತ್ತಾ ಇದೆ. ಈ ಪಂಗಡದ ಜನರು ಬರೇಲವಿ ಪಂಗಡವನ್ನು ಬ್ರಿಟಿಷರು ನೆಟ್ಟ ಗಿಡವೆಂದು ಹೇಳುತ್ತಾರೆ. ಅಹ್ಮದಿಯರನ್ನೂ ಬ್ರಿಟಿಷರು ನೆಟ್ಟ ಗಿಡವೆಂದು ಹೇಳುತ್ತಾರೆ. ಕೆಲವು ಸಾರಿ ಅವರು ಶಿಯಾ ಪಂಥದವರನ್ನು ಬೆನ್ನಟ್ಟುತ್ತಾರೆ. ಈಗ ಪಾಶ್ಚಿಮಾತ್ಯ ದೇಶಗಳ ಗೂಢ ಕಾರಸ್ಥಾನದ ಫಲವಾಗಿ ಪಾಕಿಸ್ತಾನದ ಸೈನ್ಯದ ಮೂಲಕ ಪಾಕಿಸ್ತಾನದಲ್ಲಿ ಈ ಪಂಗಡವನ್ನು ಶಾಶ್ವತವಾಗಿ ಅಧಿಕಾರದಲ್ಲಿರಿಸಲಾಗುತ್ತಿದೆ. ಸಾಮಾನ್ಯ ಮುಸ್ಲಿಮರು ತಮ್ಮೊಂದಿಗೆ ಯಾವ ರೀತಿ ವ್ಯವಹಾರ ನಡೆಯುತ್ತಿದೆ ಎಂದು ಅರಿತುಕೊಳ್ಳುವುದಿಲ್ಲ. ನಿನ್ನೆ ಬ್ರಿಟಿಷರು ನೆಟ್ಟ ಗಿಡವಾಗಿದ್ದವರು ಈಗ ಸಹ ಬ್ರಿಟಿಷರು ನೆಟ್ಟ ಗಿಡವಾಗಿದ್ದಾರೆ. ಯಾರಿಗೆ ಬ್ರಿಟಿಷರೊಂದಿಗೆ ಯಾವ ಸಂಬಂಧವೂ ಇರಲಿಲ್ಲವೋ ಅವರು ಇಂದು ಸಹ ಯಾವುದೇ ಸಂಬಂಧವನ್ನು ಹೊಂದಿಲ್ಲ.

## ದೇವ್‌ಬಂದಿ ಮತ್ತು ಅಹ್ಲೆ ಹದೀಸ್ ನಿಜವಾದ 'ಬ್ರಿಟಿಷರು ಸ್ವತಃ ನೆಟ್ಟ ಗಿಡ'

ಪಾಕಿಸ್ತಾನದ ನಾಗರಿಕರಿಗೆ ಅಹ್ಮದಿಯಾ ಜಮಾಅತಿನ ನಿಜ ಸ್ವರೂಪದ ಬಗ್ಗೆ ತಿಳಿಸಿಕೊಡಬೇಕಾಗಿದೆ. ನೀವು ಅಹ್ಮದಿಯತನ್ನು ಸರಿಯಾಗಿ ನೋಡಿರಿ. ನೀವು ಕೇವಲ ಆಕ್ಷೇಪಗಾರರ ಆಕ್ಷೇಪಗಳನ್ನು ಅಂಗೀಕರಿಸಬೇಡಿರಿ. ಏಕೆಂದರೆ ಆಕ್ಷೇಪಿಸುವವರು ಯಾರನ್ನೂ ಆಕ್ಷೇಪಿಸದೆ ಬಿಟ್ಟಿಲ್ಲ. ನೀವು ಚಾರಿತ್ರಿಕ ಸತ್ಯಗಳ ಕಡೆಗೆ ನೋಡುವುದಾದರೆ, ಚಾರಿತ್ರಿಕ ಸತ್ಯಗಳು ನಿಮಗೆ ಸ್ಪಷ್ಟವಾಗಿ ಹೀಗೆ ಹೇಳುತ್ತದೆ: ಇಂದು ಬ್ರಿಟಿಷರು ಸ್ವತಃ ನೆಟ್ಟ ಗಿಡವಾಗಿ ಯಾರಾದರೂ ಇರುವುದಾದರೆ ಅವರು ದೇವ್‌ಬಂದಿಗಳೂ ಅಹ್ಲೆ ಹದೀಸ್‌ಗಳೂ ಆಗಿದ್ದಾರೆ. ಎಂದರೆ ಸೌದಿ ಅರೇಬಿಯಾದಲ್ಲಿ ನಜ್‌ದೀ ಸರಕಾರ ಸ್ಥಾಪನೆಗೆ ನೆರವಾದ ಅಹ್ಲೆ ಹದೀಸಿನ ಒಂದು ವಿಭಾಗ–ಅವರನ್ನು ವಹ್ಹಾಬಿ ಎಂದು ಸಹ ಹೇಳುತ್ತಾರೆ. ಈ ಪಂಗಡ ಬ್ರಿಟಿಷರಿಂದ ನೆರವನ್ನು ಪಡೆದು ಒಂದು ಸರಕಾರವನ್ನು ಸ್ಥಾಪಿಸುವುದರಲ್ಲಿ ಜಯಶಾಲಿಯಾಯಿತು. ಇದೊಂದು ಚಾರಿತ್ರಿಕ ಸತ್ಯವಾಗಿದೆ.

ಈ ಪಂಗಡವನ್ನು ಧಾರ್ಮಿಕ ದೃಷ್ಟಿಯಲ್ಲಿ ಬ್ರಿಟಿಷರು ನೆಟ್ಟ ಗಿಡ ಎಂದು ಹೇಳುವುದು ವಿವೇಕಕ್ಕೆ ಯೋಜಿಸದುದೂ ನ್ಯಾಯರಹಿತವೂ ಆಗಿದೆ. ಮೇಲಿನ ವಾಸ್ತವಿಕ ಘಟನೆಗಳು ನಡೆದಿದ್ದರೂ ಅವರನ್ನು ಬ್ರಿಟಿಷರು ನೆಟ್ಟ ಗಿಡವೆಂದು ನಾನು ಕರೆಯುವುದಿಲ್ಲ. ಕಾರಣವೇನೆಂದರೆ, ಇದೊಂದು ಸ್ವತಂತ್ರ ಧಾರ್ಮಿಕ ಚಳುವಳಿಯಾಗಿತ್ತು. ಅದರಿಂದ ಲಾಭ ಪಡೆದು ಸರಕಾರವನ್ನು ಸ್ಥಾಪಿಸಲಾಯಿತು. ಆ ಸರಕಾರ ಬ್ರಿಟಿಷರ ರಕ್ಷಣೆಗೊಳಪಟ್ಟಿತ್ತು. ಅದರೊಂದಿಗೆ ಮಾಡಿಕೊಂಡ ಒಪ್ಪಂದ ಪ್ರಕಾರ ಸೌದಿ ಸರಕಾರದ ವಿದೇಶ ನೀತಿ ಸ್ವತಂತ್ರವಾಗಿರಬಾರದೆಂದೂ ನೀವು ನಮ್ಮ ವಿದೇಶ ನೀತಿಗೆ ಶೇಕಡಾ ನೂರರಷ್ಟು ವಿಧೇಯರಾಗಿರಬೇಕೆಂದೂ ಶರ್ತ ವಿಧಿಸಲಾಗಿತ್ತು. ಆಂತರಿಕ ಆಡಳಿತದಲ್ಲಿ ನೀವು ಸ್ವತಂತ್ರರಾಗಿರುವಿರಿ ಎಂದು ವಿಧಿಸಲಾಗಿತ್ತು. ಈ ಒಪ್ಪಂದದ ಪ್ರಕಾರ ನಾವು ನಿಮಗೆ ಇಷ್ಟು ಆಯುಧಗಳನ್ನು ನೀಡುವೆವು. ಇಷ್ಟು ಸಾವಿರ ಪೌಂಡು ಹಣ ನೀಡುವೆವು. ಇವುಗಳು ನಮ್ಮ ನಿಮ್ಮ ಹಕ್ಕುಗಳಾಗಿವೆ ಎಂದು ಬರೆಯಲಾಗಿತ್ತು.

ಈ ಪಂಗಡದ ಜನರು ಸಹನೆಯಿಲ್ಲದೆ ಏನೆಲ್ಲಾ ತಪ್ಪು ಕೆಲಸ ಮಾಡುತ್ತಾರೆ. ಆದರೆ ನಾವು ಆ ರೀತಿ ವರ್ತಿಸಬಾರದು. ನಾವು ಅವರಿಗೆ ಉತ್ತರ ನೀಡುವಾಗ ಕೂಡ ನ್ಯಾಯಯುತವಾಗಿ ವರ್ತಿಸಬೇಕು. ಈ ಜನರು ಸ್ವತಃ ಒಪ್ಪಿಕೊಳ್ಳುತ್ತಾರಾದರೂ ಅನ್ಯ ಜನಾಂಗದ ಜನರು ಈ ರೀತಿ ಪಂಗಡಗಳನ್ನು ಸ್ಥಾಪಿಸುವುದಿಲ್ಲ ಎಂದು ತಿಳಿದುಕೊಳ್ಳಬೇಕು. ಈ ಪಂಗಡಕ್ಕೆ ತನ್ನದೇ ಆದ ಒಂದು ಚರಿತ್ರೆ ಇದೆ. ಮೌಲಾನ ಮುಹಮ್ಮದ್ ಬಿನ್ ಅಬ್ದುಲ್ ವಹ್ಹಾಬರು ಶಿರ್ಕ್ ಅಥವಾ ಬಹು ದೇವಾರಾಧನೆ ವಿರುದ್ಧ ಜಿಹಾದ್ ಪ್ರಾರಂಭಿಸಿದ್ದರು. ಅದರ ಬಗ್ಗೆ ಒತ್ತುಕೊಡುತ್ತಾ ಅವರು ಇನ್ನೊಂದು ತುದಿಗೆ ತಲಪಿದರು. ವಹ್ಹಾಬಿ ಪಂಥಕ್ಕೆ ಒಂದು ಕಾಲಘಟ್ಟದಲ್ಲಿ ಬ್ರಿಟಿಷರ ನೆರವು ದೊರಕಿದ ಕಾರಣ ಅವರನ್ನು ಬ್ರಿಟಿಷರು ನೆಟ್ಟ ಗಿಡವೆಂದು ಹೇಳುವುದು ಸರಿಯಾಗಲಾರದು. ಧಾರ್ಮಿಕವಾಗಿ ಅವರು ಸ್ವತಂತ್ರರಾಗಿದ್ದಾರೆ. ಆದರೆ ಬ್ರಿಟಿಷರು ಅವರಿಂದ ನಿಶ್ಚಯವಾಗಿಯೂ ಲಾಭ ಪಡೆದರು. ಇಂದು ಸಹ ಅವರಿಂದ ಲಾಭ ಪಡೆಯಲಾಗುತ್ತಿದೆ. ನಿನ್ನೆಯೂ ಪಡೆಯಲಾಗುತ್ತಿತ್ತು. ಕಾಂಗ್ರೆಸ್ ಚಳುವಳಿಯ ಕಾಲದಲ್ಲಿ ಹಿಂದೂಗಳೂ ಅವರಿಂದ ಲಾಭ ಪಡೆದರು. ಅಹ್ಲೆಹದೀಸ್ ಮತ್ತು ವಹ್ಹಾಬಿಗಳು ನಿಶ್ಚಯವಾಗಿಯೂ ಬ್ರಿಟಿಷರ ಉಪಕರಣವಾಗಿದ್ದರು. ಈಗ ಸಹ ಅವರು ಉಪಕರಣವಾಗಿದ್ದಾರೆ. ಅದೇ ಗೂಢತಂತ್ರಗಳು, ಅದೇ ಜನರು ಅನ್ಯರ ಉಪಕರಣಗಳಾಗುತ್ತಿದ್ದಾರೆ. ಆದರೆ ಅವರ ಧಾರ್ಮಿಕ ವಿಶ್ವಾಸದ ಅಸ್ತಿಭಾರ ಬ್ರಿಟಿಷರು ಹಾಕಿದರು ಎಂದು ಹೇಳುವುದು ತಪ್ಪಾಗಿದೆ.

## ಅಹ್ಮದಿಯಾ ಜಮಾಅತ್ ಅಲ್ಲಾಹನೇ ಸ್ವತಃ ನೆಟ್ಟ ಗಿಡವಾಗಿದೆ

ಈಗ ನೋಡಬೇಕಾದುದೇನೆಂದರೆ, ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ವಾಸ್ತವಿಕವಾಗಿ ತನ್ನ ಪೂರ್ವಿಕ ಕುಟುಂಬವನ್ನು ಬ್ರಿಟಿಷರು ಸ್ವತಃ ನೆಟ್ಟ ಗಿಡವೆಂದು ಹೇಳಿದ್ದರು; ಅಹ್ಮದಿಯಾ ಜಮಾಅತ್ ಬಗ್ಗೆ ಹಾಗೆ ಹೇಳಿಲ್ಲ ಎಂದಾದರೆ ಇದಕ್ಕಿರುವ ಸಾಕ್ಷ್ಯಾಧಾರವೇನು? ಏಕೆಂದರೆ ಕೆಲವು ಜನರು ಹೇಳುತ್ತಾರೆ. "ಸ್ವತಃ ನೆಟ್ಟ ಗಿಡವೆಂಬ ಉಲ್ಲೇಖ ಇರುವಾಗ ನೀವು ಹೇಳುತ್ತಿರುವಿರಿ ಅದರಲ್ಲಿ ಕುಟುಂಬದ ಬಗ್ಗೆ ಹೇಳಲಾಗಿದೆ ಎಂದು. ಆದರೆ ನಾವು ಹೇಳುವುದು ಇದರಲ್ಲಿ ಕುಟುಂಬ, ಅಹ್ಮದಿಯಾ ಜಮಾಅತ್ ಮತ್ತು ಅದರ ಸ್ಥಾಪಕರು ಸೇರಿದ್ದಾರೆ." ಆದುದರಿಂದ ಖಂಡಿತವಾದ ಸಾಕ್ಷ್ಯಾಧಾರದ ಆವಶ್ಯಕತೆ ಇದೆ. ಅಹ್ಮದಿಯಾ ಜಮಾಅತ್ ಯಾರ ಕೈಯಿಂದ ನೆಡಲ್ಪಟ್ಟಿತು

ಎಂದು ತಿಳಿಯಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ವತಃ ಏನು ಹೇಳುತ್ತಾರೆ, ಅದನ್ನು ನಿಮ್ಮ ಮುಂದೆ ಇರಿಸುತ್ತೇನೆ. ಅವರು ಹೇಳುತ್ತಾರೆ:

"ಲೋಕವು ನನ್ನನ್ನು ಗುರುತಿಸುವುದಿಲ್ಲ. ಆದರೆ ಯಾರು ನನ್ನನ್ನು ಕಳುಹಿಸಿರುವನೋ ಅವನಿಗೆ ನಾನು ಯಾರೆಂದು ತಿಳಿದಿದೆ. ನನ್ನ ನಾಶವನ್ನು ಬಯಸುವುದು ಆ ಜನರ ತಪ್ಪು ಮತ್ತು ಸಂಪೂರ್ಣ ದುರದೃಷ್ಟವಾಗಿದೆ. ನಾನು ಯಾವ ಮರವಾಗಿರುವೆನು ಎಂದರೆ ಅದನ್ನು ವಾಸ್ತವಿಕ ಮಾಲಿಕನು (ಅಲ್ಲಾಹನು) ನೆಟ್ಟಿರುವನು... ಓ ಜನರೇ, ನನ್ನೊಂದಿಗೆ ಆ ಕೈ ಇದೆ: ಅದು ಕೊನೆಗಾಲದ ತನಕ ನನ್ನೊಂದಿಗೆ ನಿಷ್ಠೆಯಿಂದ ಇರುವುದು. ನಿಮ್ಮ ಪುರುಷರು, ನಿಮ್ಮ ಮಹಿಳೆಯರು, ನಿಮ್ಮ ತರುಣರು, ನಿಮ್ಮ ವೃದ್ಧರು, ನಿಮ್ಮ ಚಿಕ್ಕವರು, ನಿಮ್ಮ ದೊಡ್ಡವರು ಒಟ್ಟಿಗೆ ಸೇರಿ ನನ್ನ ನಾಶಕ್ಕೋಸ್ಕರ ಬೇಡಿಕೊಂಡು ಪ್ರಾರ್ಥಿಸುತ್ತಾ ಸಾಷ್ಟಾಂಗ ಪ್ರಣಾಮ ಮಾಡುತ್ತಾ ಮಾಡುತ್ತಾ ತಮ್ಮ ಮೂಗುಗಳು ಸವೆದು ಹೋದರೂ ಕೈಗಳು ಮರಗಟ್ಟಿ ಹೋದರೂ ಸರ್ವಶಕ್ತನು ನಿಮ್ಮ ಪ್ರಾರ್ಥನೆಗಳನ್ನು ಖಂಡಿತವಾಗಿಯೂ ಅಂಗೀಕರಿಸಲಾರನು. ತನ್ನ ಉದ್ದೇಶಲಕ್ಷ್ಯವನ್ನು ಈಡೇರಿಸುವ ತನಕ ಅವನು ನಿಂತು ಬಿಡಲಾರನು.... ನೀವು ನಿಮ್ಮ ಜೀವಗಳ ಮೇಲೆ ದೌರ್ಜನ್ಯ ಮಾಡಬೇಡಿರಿ. ಸುಳ್ಳುಗಾರರ ಮುಖ ಬೇರೆಯಾಗಿರುತ್ತದೆ, ಸತ್ಯವಾದಿಗಳ ಮುಖ ಬೇರೆಯಾಗಿರುತ್ತದೆ. ಅಲ್ಲಾಹನು ಯಾವುದೇ ವಿಷಯವನ್ನು ತೀರ್ಮಾನಿಸದೆ ಬಿಡುವುದಿಲ್ಲ.... ಯಾವ ರೀತಿ ಸರ್ವಶಕ್ತನು ತನ್ನಿಂದ ನೇಮಿಸಲ್ಪಟ್ಟವರ ಮತ್ತು ಅವರನ್ನು ನಿರಾಕರಿಸಿದವರ ಮಧ್ಯೆ ಕೊನೆಗೆ ಒಂದು ದಿನ ತೀರ್ಮಾನ ಮಾಡಿದ ಹಾಗೆ ಅವನು ಈಗ ಸಹ ತೀರ್ಮಾನ ಮಾಡುವನು. ದೇವನಿಂದ ನೇಮಿಸಲ್ಪಟ್ಟವರು ಆಗಮಿಸುವುದಕ್ಕೆ ಒಂದು ಕಾಲವಿರುತ್ತದೆ ಮತ್ತು ಅವರು ನಿರ್ಗಮಿಸುವುದಕ್ಕೆ ಒಂದು ಕಾಲ ನಿಗದಿಯಾಗಿರುತ್ತದೆ. ನೀವು ತಿಳಿದು ಕೊಳ್ಳಿರಿ, ನಾನು ಅಕಾಲದಲ್ಲಿ ಆಗಮಿಸಲಿಲ್ಲ ಮತ್ತು ಅಕಾಲದಲ್ಲಿ ನಿರ್ಗಮಿಸಲಾರೆನು. ನೀವು ಸರ್ವಶಕ್ತನೊಂದಿಗೆ ಹೋರಾಡಬೇಡಿರಿ. ನನ್ನನ್ನು ನಾಶ ಮಾಡಲು ನಿಮಗೆ ಸಾಧ್ಯವಾಗದು." (ತುಹ್‌ಫಯೆ ಗೋಲ್ಡವಿಯಾ – ರೂಹಾನಿ ಖಝಾಯಿನ್ – ಸಂಪುಟ 17, ಪುಟ 49–50)

ಬ್ರಿಟಿಷರು ಸ್ವತಃ ನೆಟ್ಟ ಗಿಡ ಎಂಬ ಆರೋಪ ಮತ್ತು ಬ್ರಿಟಿಷರನ್ನು ಹೊಗಳಿದುದಕ್ಕೆ ಸಂಬಂಧಿಸಿ ಅಹ್ಮದಿಯಾ ಜಮಾಅತ್ ಸ್ಪಷ್ಟವಾಗಿ ತಿಳಿಯಬೇಕಾದುದೇನೆಂದರೆ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಅಹ್ಮದಿಯಾ ಜಮಾಅತ್ ಬಗ್ಗೆ ಬ್ರಿಟಿಷರು ಸ್ವತಃ ನೆಟ್ಟ ಗಿಡ ಎಂದು ಎಲ್ಲಿಯೂ ತುಸು ಮಾತ್ರವಾದರೂ ಸೂಚಿಸಿಲ್ಲ. ಅವರು ಯಾವ ಕುಟುಂಬದ ಬಗ್ಗೆ ಪ್ರಸ್ತಾಪಿಸಿದರೋ ಅದು ಸುನ್ನೀ ಮತ್ತು ಅಹ್ಲೆ ಹದೀಸ್ ಜನರನ್ನೊಳಗೊಂಡ ಮಿಶ್ರ ಕುಟುಂಬವಾಗಿತ್ತು. ಆ ಕುಟುಂಬದ ಬಗ್ಗೆ ಸಹ ಅದರ ಕೌಟುಂಬಿಕ ಸ್ಥಿತಿಯನ್ನು ಗಮನದಲ್ಲಿರಿಸಿ ಬ್ರಿಟಿಷರು ನೆಟ್ಟ ಗಿಡ ಎಂದು ಹೇಳಿದರೇ ಹೊರತು ಅವರ ಧಾರ್ಮಿಕ ವಿಶ್ವಾಸಗಳನ್ನು ಆಧಾರವಾಗಿಟ್ಟುಕೊಂಡು ಅಲ್ಲ. ಆ ಕುಟುಂಬಕ್ಕೆ ಸಹ ಬ್ರಿಟಿಷರಿಂದ ಒಂದಿಷ್ಟು ಸಾಂಪತ್ತಿಕ ಸಹಾಯ ಲಭಿಸಿರಲಿಲ್ಲ ಎಂದು ಶೇಕಡಾ ನೂರಕ್ಕೆ ನೂರರಷ್ಟು ಖಂಡಿತವಾಗಿ ಸಾಬೀತಾಗಿದೆ. ಬ್ರಿಟಿಷ್ ಸರಕಾರ ಅವರ ಭೂಸ್ವತ್ತನ್ನು ಅಪಹರಿಸಿದುದು ಸಾಬೀತಾಗಿದೆ. ಆರೋಪ ಮಾಡುವವರ ಸ್ಥಿತಿ ಹೇಗಿದೆ ಎಂದರೆ ಅವರ ನಾಲಗೆ ಹತೋಟಿ ಇಲ್ಲದೆ ಚಲಿಸುತ್ತಾ ಇರುತ್ತದೆ. ಅವರಿಗೆ ದೇವಭಯವಿಲ್ಲ. ಅವರು ಅಹ್ಮದಿಯಾ ಜಮಾಅತನ್ನು ಮಾತ್ರವಲ್ಲ ಬೇರೆ ಪಂಗಡಗಳನ್ನೂ ಪರಸ್ಪರ ಇದೇ ರೀತಿ ಆಕ್ಷೇಪಿಸುತ್ತಾರೆ. ಅವರಿಗೆ ಬ್ರಿಟಿಷರು ಸ್ವತಃ ನೆಟ್ಟ ಗಿಡ ಎಂಬ ನುಡಿಗಟ್ಟು ಎಷ್ಟು ಪ್ರಿಯಕರವಾಗಿದೆ ಎಂದರೆ ಅವರು ಸ್ವತಃ ಹೇಳುತ್ತಾರೆ – ನಮ್ಮ ಅಸ್ತಿಭಾರವನ್ನು ಬ್ರಿಟಿಷರು ಹಾಕಿದರು ಎಂದು. ಇದು ಎಂತಹ ಚಾರಿತ್ರಿಕ ಸತ್ಯಗಳೆಂದರೆ ಅದನ್ನು ಬದಲಾಯಿಸಲು ಸಾಧ್ಯವಾಗದು. ಅವರು ತಮ್ಮ ಜೀವಿತ ಮತ್ತು ತಮ್ಮ ಸಂಸ್ಥೆಯ ಸ್ಥಾಪನೆಯ ಉದ್ದೇಶಲಕ್ಷ್ಯಗಳನ್ನು ವಿವರಿಸುತ್ತಾರೆ ಮತ್ತು ಅವುಗಳನ್ನು ಅಂಗೀಕರಿಸುತ್ತಾ ಸಾಗುತ್ತಾರೆ.

ಯಾವ ಪಂಗಡವನ್ನು ಬ್ರಿಟಿಷರು ಯಾವಾಗಲೂ ತಮ್ಮ ಉದ್ದೇಶ ಸಾಧನೆಗೋಸ್ಕರ ಬಳಸಿದರೋ ಮತ್ತು ಅವರಿಗೆ ಸಾಂಪತ್ತಿಕ ಸಹಾಯ ನೀಡಿ ಕೆಲವು ಚಾರಿತ್ರಿಕ ಕೆಲಸಗಳನ್ನು ಮಾಡಿಸಿದರೋ ಅದೇ ಪಂಗಡವನ್ನು ಈಗ ಪಾಕಿಸ್ತಾನದಲ್ಲಿ ಅಧಿಕಾರಕ್ಕೆ ತರಲಾಗುತ್ತಿದೆ. ಅವರಿಗಿಂತ ಬಹುಸಂಖ್ಯಾತರಾದ ಇತರ ಪಂಗಡಗಳೊಂದಿಗೆ ಯಾವ ರೀತಿ ವರ್ತಿಸಲಾಗುತ್ತಿದೆ ಎಂಬುದು ಆ ಪಂಗಡಗಳ ಪ್ರಜ್ಞೆಗೆ ಬರದ ಹಾಗೆ ನೋಡಿಕೊಳ್ಳಲಾಗುತ್ತಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ವಿರುದ್ಧ ಎಷ್ಟು ಕೊಳಕೆಸೆಯಲಾಗುತ್ತಿದೆ ಎಂದರೆ ಜನರು ಕೇವಲ ಒಂದೇ ಕಡೆಗೆ ನೋಡುತ್ತಿದ್ದಾರೆ. ಅವರಿಗೆ ಬೇರೆ ಯಾವ ರೂಪವೂ ಕಾಣಿಸುವುದಿಲ್ಲ. ಪ್ರತಿಯೊಂದು ಅಪಾಯ, ಪ್ರತಿಯೊಂದು ದೌರ್ಜನ್ಯ ಅಹ್ಮದಿಯರಿಂದ ಸಂಭವಿಸುತ್ತದೆ ಎಂದು ಅವರು ಭಾವಿಸುತ್ತಾರೆ. ಇದೊಂದೇ ಅಪಾಯವಿದೆ. ಬೇರೆ ಯಾವ ಅಪಾಯವೂ ಇಲ್ಲ ಎಂದು ಅವರು ಭಾವಿಸುತ್ತಾರೆ. ಸುಳ್ಳು ಸುಳ್ಳಾಗಿ ಎಬ್ಬಿಸಲಾಗುವ ಬೊಬ್ಬೆಗಳ ಕಾರಣ ಜನರು ತಮ್ಮ ಸ್ಥಿತಿಯ ಬಗ್ಗೆ ಅಜ್ಞಾತರಾಗಿದ್ದಾರೆ. ತಮ್ಮ ವಿರುದ್ಧ ಎಂತಹ ಗೂಢತಂತ್ರಗಳು ನಡೆಯುತ್ತಿವೆ ಎಂದು ಅವರು ಅರ್ಥಮಾಡಿಕೊಳ್ಳುವುದಿಲ್ಲ. ತಮಗೇನಾಗಲಿದೆ ಎಂದು ಅವರು ತಿಳಿಯದವರಾಗಿದ್ದಾರೆ. ಈ ಸ್ಥಿತಿ ಹೀಗೆಯೇ ಮುಂದುವರಿದರೆ ಸ್ವಲ್ಪ ಸಮಯದ ನಂತರ ಪಾಕಿಸ್ತಾನಿ ಸೈನ್ಯದ ಬಲದಿಂದ ಒಂದು ಧಾರ್ಮಿಕ ಪಂಗಡ ಪಾಕಿಸ್ತಾನದ ಮೇಲೆ ಶಾಶ್ವತ ಅಧಿಕಾರಕ್ಕೆ ಬರುವುದು. ಅದರ ನಂಬಿಕೆಗಳೇ "ಇಸ್ಲಾಮ್" ಎಂದು ಹೆಸರಿಸಲ್ಪಡುವುದು. ಅವರ ನಂಬಿಕೆಗಳಿಗೆ ವಿರುದ್ಧವಾದ ವಿಶ್ವಾಸಗಳನ್ನು ಯಾವುದಾದರೂ ರೀತಿಯಲ್ಲಿ ದೂಷಿಸಲಾಗುವುದು.

ಶಿಯಾ ಪಂಥದವರೊಂದಿಗೆ ಅಲ್ಲಿ ಹೇಗೆ ವರ್ತಿಸಲಾಯಿತು ಎಂಬುದು ನಿಮಗೆ ತಿಳಿದಿದೆ. ಅವುಗಳ ಬಗ್ಗೆ ವರ್ತಮಾನ ಪತ್ರಿಕೆಗಳಲ್ಲಿ ವರದಿಗಳು ಬಂದಿವೆ. ಅಲ್ಲಿ ರಹಸ್ಯವಾಗಿ ಏನೆಲ್ಲಾ ಯೋಜನೆಗಳನ್ನು ಸಿದ್ಧಪಡಿಸಲಾಗುತ್ತಿದೆ ಎಂಬುದು ಅವರಿಗೆ ಚೆನ್ನಾಗಿ ಗೊತ್ತಿದೆ. ನಾನು ನಿಮಗೆ ಹೇಳಲು ಬಯಸುತ್ತೇನೆ. ಶಿಯಾ ಪಂಥದವರೂ ಶಾಂತಿಯಲ್ಲಿ ಇರಲಾರರು. ತಾವು ಸಮಾಧಾನದಿಂದಿರಬಹುದೆಂದು ಅವರು ಯೋಚಿಸುವುದಾದರೆ ಅವರ ಯೋಚನೆ ತಪ್ಪಾಗಿರುವುದು.

## ಬರೇಲವಿ ಪಂಥದವರಿಗೆ ಒಂದು ಮುನ್ನೆಚ್ಚರಿಕೆ

ಬರೇಲವಿಗಳಿಗೆ ಸಂಬಂಧಿಸಿ ಏನು ನಡೆಯುತ್ತಿದೆ ಎಂದು ಸಹ ನಿಮಗೆ ತಿಳಿದಿದೆ. ಪತ್ರಿಕೆಗಳಲ್ಲಿ ಅದರ ಬಗ್ಗೆ ವರದಿಗಳು ಬರುತ್ತಿವೆ. ಪಾಕಿಸ್ತಾನದ ಅಧ್ಯಕ್ಷರು ತನ್ನ ಒಂದು ಹೇಳಿಕೆಯಲ್ಲಿ "ಇಲ್ಲಿ ಮುಶ್ರಿಕ್‌ಗಳಿಗೆ (ಬಹುದೇವಾರಾಧಕರಿಗೆ) ಯಾವುದೇ ಸ್ಥಳವಿಲ್ಲ" ಎಂದು ಹೇಳಿರುತ್ತಾರೆ. ಬರೇಲವಿ ಮತ್ತು ದೇವ್‌ಬಂದಿಗಳ ಹಾಗೂ ನಜ್‌ದಿಗಳ ಮತ್ತು ಬರೇಲವಿಗಳ ಮೂಲ ಜಗಳ ಇದೇ ವಿಷಯದ ಬಗ್ಗೆಯಾಗಿದೆ. ಬರೇಲವಿಗಳು, "ನಮ್ಮನ್ನು ಮುಶ್ರಿಕ್ ಎಂದು ಹೇಳುತ್ತಾರೆ. ಆದರೆ ನಾವು ಮುಶ್ರಿಕ್ ಅಲ್ಲ" ಎಂದು ಹೇಳಿ ತಮ್ಮ ವಿರೋಧಿಗಳನ್ನು ಮುಶ್ರಿಕೆಂದು ಸಾಬೀತುಗೊಳಿಸಲು ಪ್ರಯತ್ನಿಸುತ್ತಾರೆ. ಪ್ರೆಸಿಡೆಂಟರು ಹೇಳಿದ ಮಾತು ಬಾಯಿಯಿಂದ ತಾನಾಗಿಯೇ ಹೊರಟದ್ದೇನೂ ಅಲ್ಲ. ಯೋಚಿಸಿ ತಯಾರುಪಡಿಸಲಾದ ಯೋಜನೆ ಪ್ರಕಾರ ಮುಂದಿನ ಧೋರಣೆಯನ್ನು ಪ್ರಕಟಿಸಿದ ಅರ್ಥಪೂರ್ಣವಾದ ಹೇಳಿಕೆ ಅದಾಗಿದೆ. ಅಹ್ಮದಿಯರನ್ನು

ಪ್ರತ್ಯೇಕಿಸಿ ಅಹ್ಮದಿಯರಿಗೆ ಇಲ್ಲಿ ಯಾವುದೇ ಸ್ಥಳವಿಲ್ಲ ಎಂದು ಹೇಳುವುದರೊಂದಿಗೆ "ಮುಶ್ರಿಕ್‌ಗಳಿಗೂ ಇಲ್ಲಿ ಸ್ಥಳವಿಲ್ಲ" ಎಂದು ಹೇಳಲಾಗಿದೆ.

ಚಾರಿತ್ರಿಕ ಹಿನ್ನೆಲೆಯನ್ನು ಪರಿಶೀಲಿಸಿದಾಗ ತಿಳಿಯುವುದೇನೆಂದರೆ, ಸೌದಿ ಅರೇಬಿಯಾದಲ್ಲಿ ನಜ್‌ದೀ (ವಹ್ಹಾಬಿ) ಸರಕಾರ ಸ್ಥಾಪಿಸಲು ಸಹ ಇದೇ ಚರ್ಚೆ ಜಾರಿಗೊಳಿಸಲ್ಪಟ್ಟಿತ್ತು. ಅರಬ್ ದೇಶವನ್ನು ಆಳುತ್ತಿದ್ದ ತುರ್ಕೀ ಸರಕಾರದ ವಿರುದ್ಧ ಮುಸ್ಲಿಮರು ಹೋರಾಡಲು ಇದೇ ತಂತ್ರವನ್ನು ಬ್ರಿಟಿಷರು ಪ್ರಯೋಗಿಸಿದರು. ತುರ್ಕೀ ಸರಕಾರದಿಂದ ನೇಮಿಸಲ್ಪಟ್ಟ ಆಡಳಿತಗಾರರು ಮುಶ್ರಿಕರೆಂದೂ ಅವರು ಮುಶ್ರಿಕ್ ತುರ್ಕೀ ಸರಕಾರವನ್ನು ಬೆಂಬಲಿಸುವವರೆಂದೂ ಹೇಳಿ ಮುಸ್ಲಿಮರು ಪರಸ್ಪರ ಹೋರಾಡುವಂತೆ ಮಾಡಿದರು. ನಜ್‌ದಿಗಳು ಅದನ್ನು ಶಿರ್ಕ್ ವಿರುದ್ಧ ಜಿಹಾದ್ ಎಂದು ಘೋಷಿಸಿದರು. ಬ್ರಿಟಿಷರು ಅವರನ್ನು ತಮ್ಮ ಲಾಭಕ್ಕೋಸ್ಕರ ಬಳಸಿದರು. ಮುಸ್ಲಿಮರ ಬೃಹತ್ತಾದೊಂದು ಸಾಮ್ರಾಜ್ಯಕ್ಕೆ (ಉಸ್ಮಾನಿಯಾ ಸಾಮ್ರಾಜ್ಯಕ್ಕೆ) ಎಂತಹ ಹೊಡೆತ ನೀಡಿದರೆಂದರೆ ಅನಂತರ ಮಧ್ಯಪೂರ್ವ ದೇಶಗಳಲ್ಲಿ ಇಂಗ್ಲೆಂಡ್ ಮತ್ತು ಫ್ರಾನ್ಸಿನ ಪ್ರವೇಶ ಸಹಜ ಪರಿಣಾಮವಾಯಿತು. ತುರ್ಕೀ ಸಾಮ್ರಾಜ್ಯ ಎಂದರೆ ಉಸ್ಮಾನಿಯಾ ಸಾಮ್ರಾಜ್ಯ ಅಧಃಪತನ ಹೊಂದದೆ ಇರುತ್ತಿದ್ದರೆ ಮಧ್ಯಪೂರ್ವ ದೇಶಗಳಲ್ಲಿ ಇಂಗ್ಲೆಂಡ್ ಅಥವಾ ಯುರೋಪಿನ ದೇಶಗಳು ಪ್ರವೇಶಿಸುವ ಪ್ರಶ್ನೆಯೇ ಉದಿಸುತ್ತಿರಲಿಲ್ಲ. ಈಗ ಸಹ ಒಂದು ಭಯಾನಕ ಗೂಢತಂತ್ರ ಇಸ್ಲಾಮೀ ಲೋಕದ ವಿರುದ್ಧ ಮಹಾಶಕ್ತಿ ರಾಷ್ಟ್ರಗಳಿಂದ ಜಾರಿಯಲ್ಲಿದೆ. ಈ ಪಾಶ್ಚಿಮಾತ್ಯ ಮಹಾಶಕ್ತಿ ರಾಷ್ಟ್ರಗಳು ಪರಸ್ಪರ ತಮ್ಮ ಸ್ವಾರ್ಥ ಹಿತಾಸಕ್ತಿಗಳನ್ನು ಪರಸ್ಪರ ಬದಲಾಯಿಸಿಕೊಳ್ಳುತ್ತಿರುತ್ತಾರೆ. ಮಧ್ಯಪೂರ್ವ ದೇಶಗಳನ್ನು ಕೆಲವೊಮ್ಮೆ ಬ್ರಿಟಿಷರು ತಮ್ಮ ಜವಾಬ್ದಾರಿಗೆ ಒಳಪಡಿಸುತ್ತಾರೆ. ಕೆಲವೊಮ್ಮೆ ಅಮೇರಿಕ ಆ ಕೆಲಸ ನಿರ್ವಹಿಸುತ್ತದೆ. ಬೇರೆ ಕೆಲವು ಸಲ ಅನ್ಯದೇಶಗಳ ಮೂಲಕ ತಮ್ಮ ಗೂಢ ತಂತ್ರಗಳನ್ನು ಈಡೇರಿಸುತ್ತಾರೆ. ಆದರೆ ಅವರೆಲ್ಲರ ಮೂಲಭೂತ ಸ್ವಾರ್ಥ ಹಿತಾಸಕ್ತಿಗಳು ಸಮಾನವಾಗಿವೆ.

## ಇಸ್ಲಾಮೀ ಲೋಕ ವಿದೇಶ ಶಕ್ತಿಗಳ ಗೂಢತಂತ್ರಗಳಿಗೆ ಬಲಿಯಾಗುತ್ತಿದೆ

ಅಹ್ಲೆ ಹದೀಸ್ ಮತ್ತು ದೇವ್‌ಬಂದಿ ಪಂಗಡಗಳನ್ನು ಹಿಂದೆ ಉಪಯೋಗಿಸಿದ ಶಕ್ತಿಗಳು ಈಗಲೂ ಉಪಯೋಗಿಸುತ್ತಾ ಇವೆ. ಆದರೆ ನಾವು ನಮ್ಮ ಏಕದೇವನ ಬಗ್ಗೆ ಪೂರ್ಣ ಭರವಸೆ ಹೊಂದಿದ್ದೇವೆ, ಅವನೆಂದೂ ನಮ್ಮನ್ನು ಕೈಬಿಟ್ಟಿಲ್ಲ. ಅವನ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಹೀಗೆ ಹೇಳಿದರು: "ಅವನು ತನ್ನ ನಿಷ್ಠಾವಂತ ಕೈಗಳಿಂದ ನನಗೆ ಸಹಾಯ ನೀಡಿದನು. ಆ ನಿಷ್ಠಾವಂತ ಕೈಗಳು ನನ್ನನ್ನು ಎಂದೂ ಬಿಟ್ಟುಹೋಗಲಾರದು."

ಆದರೆ ಸರಳತೆ ಮತ್ತು ಅಜ್ಞತೆಯ ಕಾರಣದಿಂದ ಅಹ್ಮದಿಯಾ ಜಮಾಅತನ್ನು ವಿರೋಧಿಸುವುದರಲ್ಲಿ ಹುಚ್ಚರನ್ನಾಗಿ ಮಾಡಲ್ಪಟ್ಟವರ ಸ್ಥಿತಿ ಏನು? ವಾಸ್ತವಿಕವಾಗಿ ಆಕ್ರಮಣವನ್ನು ತಮ್ಮ ಮೇಲೆಯೇ ನಡೆಸಲಾಗುತ್ತಿದೆ ಎಂಬುದರ ಬಗ್ಗೆ ಅವರಿಗೆ ಪ್ರಜ್ಞೆ ಇಲ್ಲ. ಇಂತಹ ಜನರ ಸುರಕ್ಷತೆ ಬಗ್ಗೆ ಯಾವ ಖಾತರಿಯನ್ನೂ ನೀಡಲು ಸಾಧ್ಯವಿಲ್ಲ. ಆದುದರಿಂದ ಈ ಸಮುದಾಯಕ್ಕೋಸ್ಕರ ಪ್ರಾರ್ಥಿಸಿರಿ. ಅವರಿಗೆ ಅಲ್ಲಾಹನು ಪ್ರಜ್ಞೆಯನ್ನೂ ವಿವೇಕವನ್ನೂ ದಯಪಾಲಿಸಲಿ.

ಇಸ್ಲಾಮಿನ ಹೆಸರಿನಲ್ಲಿ ವಿದೇಶೀ ಶಕ್ತಿಯು ನಡೆಸುವ ಗೂಢತಂತ್ರವು ಮುಸ್ಲಿಮ್ ದೇಶಗಳಲ್ಲಿ ಜಯಗಳಿಸುವುದಾದರೆ ಅದು ಬಹಳ ದೊಡ್ಡ ದುಃಖಕರ ದೌರ್ಜನ್ಯವಾಗುವುದು ಮತ್ತು ಅದರ ಹಿಡಿತದಿಂದ ಮುಸ್ಲಿಮ್ ದೇಶಗಳು ಎಂದೂ ಹೊರಗೆ ಬರಲು ಶಕ್ತರಾಗಲಾರವು. ಇಂತಹ ಘಟನೆಗಳು ಟರ್ಕಿಯಲ್ಲೂ ಇಂಡೋನೇಶಿಯಾದಲ್ಲೂ ಮಲೇಶಿಯಾದಲ್ಲೂ ಸೂಡಾನಿನಲ್ಲೂ ಘಟಿಸಿವೆ. ನೀವು ನಿಮ್ಮ ಸುತ್ತಮುತ್ತಲೂ ನೋಡುವುದಾದರೆ, ಎಲ್ಲಾ ಕಡೆಗಳಲ್ಲೂ ಇಸ್ಲಾಮಿನ ಹೆಸರು ಹೇಳಿ ಕೆಲವು ಶಕ್ತಿರಾಷ್ಟ್ರಗಳು ತಮ್ಮ ಸ್ವಾರ್ಥ ಹಿತಕಾರಿ ಸರಕಾರಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಿವೆ. ರಶ್ಯ ದೇಶದ ಬಗ್ಗೆ ಹೇಳುವುದಾದರೆ, ಅದು ಸಹ ಈ ವಿಷಯದಲ್ಲಿ ಇತರರಿಗಿಂತ ಹಿಂದೆ ಏನೂ ಅಲ್ಲ. ಪೌರ್ವಾತ್ಯ ಶಕ್ತಿಗಳು ಸಹ ತಮ್ಮ ಶಕ್ತಿ ಪ್ರಭಾವವಿರುವಲ್ಲಿ ಇಸ್ಲಾಮಿನ ಹೆಸರಲ್ಲಿ ಸರಕಾರಗಳನ್ನು ಸ್ಥಾಪಿಸುತ್ತವೆ. ಅನಂತರ ಆ ದೇಶದ ಜನತೆ ಆ ಸರಕಾರದ ಹಿಡಿತದಿಂದ ಬಿಡುಗಡೆ ಹೊಂದುವುದೇ ಇಲ್ಲ.

ಆದುದರಿಂದ ಪ್ರಾರ್ಥಿಸಿರಿ. ಅಲ್ಲಾಹನು ತನ್ನ ಅನುಗ್ರಹದಿಂದ ಮುಸ್ಲಿಮ್ ಸರಕಾರಗಳನ್ನು ತಪ್ಪು ಕೆಲಸ ಮಾಡುವ ಜನರಿಂದ ಪಾರುಮಾಡಲಿ ಮತ್ತು ಮುಸ್ಲಿಮ್ ಸಮುದಾಯಕ್ಕೆ ರಕ್ಷಣೆ ದೊರೆಯುವಂತಾಗಲಿ. ಗೂಢತಂತ್ರಗಳನ್ನು ಅಲ್ಲಾಹನು ತನ್ನ ಅನುಗ್ರಹದಿಂದ ವಿಫಲಗೊಳಿಸಲಿ.

ನಮಗೆ ದೊರಕುವ ವರದಿಗಳಿಂದ ತಿಳಿಯುವುದೇನೆಂದರೆ, ಪಾಕಿಸ್ತಾನದ ಜನತೆ ಈಗ ಅಹ್ಮದಿಯಾ ಜಮಾಅತ್ ಕಡೆಗೆ ನೋಡುತ್ತಿದ್ದಾರೆ. ಏಕೆಂದರೆ ಅವರು ತಮ್ಮ ಎಲ್ಲಾ ಕುತಂತ್ರಗಳು ವ್ಯರ್ಥವಾಗಿವೆ ಎಂದು ಕಾಣುತ್ತಿದ್ದಾರೆ. ಅವರು ಈಗ ನಿಮ್ಮ ಕಡೆಗೆ ನೋಡುತ್ತಾ ಇದ್ದಾರೆ. ಅನೇಕ ಅಹ್ಮದಿಯೇತರ ಪ್ರಜ್ಞಾವಂತರಾದ ಜನರು ಹೇಳುತ್ತಾರೆ: ಈಗ ನಮಗೆ ಇಷ್ಟು ಬೋಧೋದಯವಾಗಿದೆ. ಹಿಂದೆ ಯಾರಾದರೂ ಅಹ್ಮದಿಯಾ ಜಮಾಅತನ್ನು ವಿರೋಧಿಸಿದಾಗ ಅವರು ಜಯಶಾಲಿಗಳಾಗಲಿಲ್ಲ. ಈಗ ಸಹ ಹಾಗೆ ಆಗಲಿ ಎಂದು ಪ್ರಾರ್ಥಿಸುತ್ತೇವೆ. ಏಕೆಂದರೆ ದೌರ್ಜನ್ಯಗಾರರಾದ ಜನರ ಹಿಡಿತದಿಂದ ಪಾರಾಗಲು ನಮಗೆ ಯಾವ ಶಕ್ತಿಯೂ ಇಲ್ಲ. ನಿಮ್ಮ ಕಾರಣದಿಂದಾದರೂ ನಮಗೆ ಬಿಡುಗಡೆ ದೊರೆಯುವಂತಾಗಲಿ. ಬಂಧಿತರಾದ ನಮಗೆ ನಿಮ್ಮ ಕಾರಣದಿಂದ ಬಿಡುಗಡೆ ದೊರೆಯುವುದಾದರೆ ಇದೊಂದು ರಕ್ಷಣೆ ಪಡೆಯುವ ಮಾರ್ಗವಾಗುವುದು. ಇದರ ಹೊರತು ಅನ್ಯ ಮಾರ್ಗ ಕಾಣಿಸುವುದಿಲ್ಲ.

ನಮ್ಮಲ್ಲಿ ಯಾವುದೇ ಶಕ್ತಿ ಇಲ್ಲ. ನಾವು ಅತ್ಯಂತ ಬಲಹೀನ ಜಮಾಅತಾಗಿದ್ದೇವೆ. ನಮಗೆ ರಾಜಕೀಯದೊಂದಿಗೆ ಸಂಬಂಧವಿಲ್ಲ. ನಾವು ಎಂದಾದರೂ ರಾಜಕೀಯಕ್ಕೆ ಸಂಬಂಧಿಸಿದ ಜಗಳಗಳಲ್ಲಿ ಭಾಗವಹಿಸಲಿಲ್ಲ.

ಸರಕಾರದ ವಿರುದ್ಧ ಎದ್ದೇಳುವುದು ಮತ್ತು ಚಳುವಳಿ ನಡೆಸುವುದು ಅಥವಾ ವಿದ್ರೋಹಕರ ಕೆಲಸ ಮಾಡುವುದು ನಮ್ಮ ಪ್ರಕೃತಿಯಲ್ಲಿಯೇ ಇಲ್ಲ. ನಾವು ಅನುಸರಿಸುವ ಉಪದೇಶಗಳಲ್ಲಿ ಈ ವಿಷಯಗಳು ಪ್ರವೇಶ ಪಡೆದಿಲ್ಲ. ನಮಗೆ ಪೂರ್ಣ ಭರವಸೆ ಇದೆ ಮತ್ತು ನಮಗೆ ತಿಳಿದಿದೆ – ನಮ್ಮ ದೇವನು ನಮ್ಮನ್ನು ಎಂದೂ ಬಿಟ್ಟುಬಿಡಲಾರನು. ನಮ್ಮ ಶತ್ರುಗಳನ್ನು ಯಾವಾಗಲೂ ಹೀನಾಯಗೊಳಿಸುವನು. ಯಾರೆಲ್ಲಾ ಅಹ್ಮದಿಯಾ ಜಮಾಅತಿನ ಮೇಲೆ ಕೈ ಎತ್ತಿದರೋ ಆ ಕೈಗಳು ಶಾಶ್ವತವಾಗಿ ಕಡಿದು ಹಾಕಲ್ಪಟ್ಟವು. ಆದುದರಿಂದ ಪ್ರಾರ್ಥಿಸಿರಿ. ಅಲ್ಲಾಹನು ನಮ್ಮ ಮೂಲಕ ದೇಶಕ್ಕೆ ಸಂರಕ್ಷಣೆ ನೀಡಲಿ ಮತ್ತು ಮುಸ್ಲಿಮ್ ಲೋಕದ ವಿರುದ್ಧ ನಡೆಸಲಾಗುವ ಗೂಢತಂತ್ರಗಳು ಶಾಶ್ವತವಾಗಿ ಕೊನೆಗೊಳ್ಳಲಿ. ಇಸ್ಲಾಮಿನ ಹೆಸರಿನಲ್ಲಿ ಸ್ವಾರ್ಥಕ್ಕಾಗಿ ತಮ್ಮ ಸರಕಾರಗಳ ಅಧಿಕಾರವನ್ನು ಹೆಚ್ಚು ಆಳವಾಗಿಯೂ ಹೆಚ್ಚು ವಿಶಾಲವಾಗಿಯೂ ಹೆಚ್ಚು ಸ್ಥಿರವಾಗಿಯೂ ಸ್ಥಾಪಿಸಲು ಪ್ರಯತ್ನಿಸುತ್ತಾ ಇರುವ ಮಹಾಶಕ್ತಿ ರಾಷ್ಟ್ರಗಳು ಜಯಶಾಲಿಗಳಾಗದಂತೆ ಮಾಡಿ ಅಲ್ಲಾಹನು ನಮ್ಮನ್ನು ಅವರ ಹಿಡಿತಕ್ಕೊಳಗಾಗುವುದರಿಂದ ರಕ್ಷಣೆಯನ್ನು ನೀಡುವವನಾಗಲಿ. ಆಮೀನ್.

**(1–2–1985ರಂದು ಶುಕ್ರವಾರ ಮಾಡಿದ ಪ್ರವಚನ)**

# ಹಿಂದೂಸ್ಥಾನದಲ್ಲಿ ಯೇಸು ಕ್ರಿಸ್ತರು : ಜಾಗತಿಕ ಸಾಹಿತ್ಯ ಕೃತಿಗಳ ಬಗ್ಗೆ ವಿಮರ್ಶೆ (1899–1999)

*ಲೇಖಕರು : ತಾಹಿರ್ ಇಯ್‌ಜಾಝ್ (ಕ್ಯಾಲಿಫೋರ್ನಿಯಾ, ಯು.ಎಸ್.ಎ.) ಮತ್ತು ಖಮರ್ ಇಯ್‌ಜಾಝ್ ಪಿಎಚ್.ಡಿ. (ಟೊರೊಂಟೋ, ಕೆನಡ)*

ಯೇಸುಕ್ರಿಸ್ತರು ಶಿಲುಬೆಯನ್ನೇರಿದ ನಂತರದ ಅವರ ಜೀವಿತದ ಬಗ್ಗೆ ಚಾರಿತ್ರಿಕ ವಿವರಣೆಗಳನ್ನು ಉಲ್ಲೇಖಿಸಿ 1899ರಿಂದ 1999ರ ತನಕ ಜಗತ್ತಿನಾದ್ಯಂತ ಪ್ರಕಟವಾದ ಗ್ರಂಥಗಳಲ್ಲಿ ಆಯ್ಕೆ ಮಾಡಿದ ಕೆಲವು ಪುಸ್ತಕಗಳ ವಿಮರ್ಶೆ ಈ ಕೆಳಗೆ ಕೊಡಲಾಗಿದೆ. ಯೇಸು ಕ್ರಿಸ್ತರು ಹಿಂದೂಸ್ಥಾನಕ್ಕೆ ಬಂದು ಇಲ್ಲಿಯೇ ಮೃತರಾದುದರ ಬಗ್ಗೆ ಸಾಕ್ಷ್ಯಗಳನ್ನು ನೀಡುವ ಗ್ರಂಥಗಳನ್ನು ವಿಶಿಷ್ಟವಾಗಿ ಆಯ್ಕೆ ಮಾಡಲಾಗಿದೆ.

## 1. ಮಸೀಹ್ ಹಿಂದೂಸ್ಥಾನ್ ಮೇ (ಯೇಸು ಕ್ರಿಸ್ತರು ಭಾರತದಲ್ಲಿ)

*ಲೇಖಕ : **ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್**(ಅ)*
*ಖಾದಿಯಾನ್, ಹಿಂದೂಸ್ಥಾನ.*
*ಬರೆಯಲಾದ ವರ್ಷ : 1899*

ಯೇಸುಕ್ರಿಸ್ತರು ಭಾರತಕ್ಕೆ ವಲಸೆ ಬಂದುದರ ಬಗ್ಗೆ ಸಮಗ್ರವೂ ಪಂಡಿತೋಚಿತವಾಗಿಯೂ ಬರೆಯಲಾದ ಪ್ರಥಮ ಗ್ರಂಥ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರವರು(ಅ) ರಚಿಸಿದ "ಮಸೀಹ್ ಹಿಂದೂಸ್ಥಾನ್ ಮೇ" ಎಂಬ ಗ್ರಂಥವಾಗಿದೆ. ಈ ಗ್ರಂಥ 1899ರಲ್ಲಿ ಬರೆಯಲಾಗಿದ್ದರೂ ಅದನ್ನು ಲೇಖಕರು ನಿಧನ ಹೊಂದಿ ಸ್ವಲ್ಪ ಸಮಯದ ನಂತರ 1908ರಲ್ಲಿ ಪ್ರಕಟಿಸಲಾಯಿತು. ಈ ಗ್ರಂಥದಲ್ಲಿ ಬೈಬಲಿನ ಹೊಸ ಒಡಂಬಡಿಕೆಯಿಂದ ಸಾಕ್ಷ್ಯಗಳನ್ನು ಉಲ್ಲೇಖಿಸಿ ಯೇಸು ಕ್ರಿಸ್ತರು ಶಿಲುಬೆಯಿಂದ ಇಳಿಸಲ್ಪಟ್ಟಾಗ ಮೃತರಾಗಿರಲಿಲ್ಲವೆಂದೂ ಅವರು ಪ್ರಜ್ಞಾಶೂನ್ಯರಾಗಿದ್ದರೆಂದೂ ಅವರ ಶಿಷ್ಯರು ಅವರನ್ನು ಶುಶ್ರೂಷಿಸಿ ಆರೋಗ್ಯವಂತರನ್ನಾಗಿ ಮಾಡಿದರೆಂದೂ ಪ್ರತಿಪಾದಿಸಲಾಗಿದೆ. ಯೇಸು ಕ್ರಿಸ್ತರ ಗಾಯಗಳನ್ನು ಗುಣಪಡಿಸಲು ತಯಾರಿಸಲಾದ ಮರ್‌ಹಮೇ ಈಸಾ (ಯೇಸು ಕ್ರಿಸ್ತರ ಮುಲಾಮು) ಎಂಬ ಲೇಪನದ ಬಗ್ಗೆ ಪುರಾತನ ವೈದ್ಯಕೀಯ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದ್ದು ಆ ಗ್ರಂಥಗಳ ಒಂದು ದೀರ್ಘ ಪಟ್ಟಿಯನ್ನು ಈ ಗ್ರಂಥದಲ್ಲಿ ನೀಡಲಾಗಿದೆ. ಯೇಸು ಕ್ರಿಸ್ತರು ಶಿಲುಬೆಯಿಂದ ಜೀವಂತವಾಗಿ ಇಳಿಸಲ್ಪಟ್ಟು ಗಾಯಗಳಿಗೆ ಚಿಕಿತ್ಸೆ ಪಡೆದ ಬಗ್ಗೆ ಇದೊಂದು ಪೌರ್ವಾತ್ಯ ಸಾಕ್ಷ್ಯವಾಗಿದೆ. ಯೇಸು ಕ್ರಿಸ್ತರು ಸ್ವಾಭಾವಿಕವಾಗಿ ಮೃತರಾದರೆಂಬುದರ ಬಗ್ಗೆ ಪವಿತ್ರ ಖುರ್‌ಆನ್ ಮತ್ತು ಹದೀಸುಗಳ ಸಾಕ್ಷ್ಯಾಧಾರಗಳನ್ನು ನೀಡಲಾಗಿದೆ. ಇಸ್ಲಾಮಿನ ಪುರಾತನ ಚರಿತ್ರೆ ಗ್ರಂಥವಾದ ರೌಝುತ್ತುಸ್ಸಫಾದಿಂದ ಮುಖ್ಯವಾಗಿ ಉಲ್ಲೇಖಗಳನ್ನು ನೀಡಿ ಯೇಸು ಕ್ರಿಸ್ತರು ಪೂರ್ವದ ಕಡೆಗೆ ಪ್ರಯಾಣಗೈದ ಬಗ್ಗೆ ವಿವರಿಸಲಾಗಿದೆ.

ಈ ಗ್ರಂಥದಲ್ಲಿ ಪ್ರತಿಪಾದಿಸಲಾದ ಒಂದು ಮುಖ್ಯ ವಿಷಯ ಇಸ್ರಾಯೇಲ್ ದೇಶದ ತಪ್ಪಿಸಿಕೊಂಡ ಗೋತ್ರಗಳು ಅಫ್‌ಘಾನಿಸ್ಥಾನ, ಕಾಶ್ಮೀರ ಮತ್ತು ಪಶ್ಚಿಮ ಚೈನದಲ್ಲಿ ಹರಡಿ ಹೋಗಿರುವ ಬಗ್ಗೆಯಾಗಿದೆ. ಈ ಗೋತ್ರಗಳಿಗೆ ಯೇಸು ಕ್ರಿಸ್ತರು ಉಪದೇಶ ನೀಡಲಿಕ್ಕಿದ್ದಿತು. ಹೊಸ ಒಡಂಬಡಿಕೆಯಲ್ಲಿ ಇವರನ್ನು ತಪ್ಪಿಸಿಕೊಂಡ ಕುರಿಗಳೆಂದು ಪ್ರಸ್ತಾಪಿಸಿದ್ದು ಅವರನ್ನು ಒಗ್ಗೂಡಿಸುವುದು ಯೇಸುಕ್ರಿಸ್ತರ ಆಗಮನೋದ್ದೇಶವಾಗಿತ್ತು ಎಂದು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) ಪ್ರತಿಪಾದಿಸಿರುತ್ತಾರೆ.

ಲೇಖಕರು ಈ ಗ್ರಂಥವನ್ನು ಒಂದು ಸುದೀರ್ಘ ಗ್ರಂಥದ ಪ್ರಥಮ ಭಾಗವನ್ನಾಗಿ ಬರೆದು ಇದನ್ನು ಇನ್ನಷ್ಟು ವಿಸ್ತಾರವಾಗಿ ಬರೆಯಲುದ್ದೇಶಿಸಿದ್ದರು. ಅಫ್‌ಘಾನಿಸ್ತಾನ, ಕಾಶ್ಮೀರ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಗೆ ಮೂವರ ಒಂದು ನಿಯೋಗವನ್ನು ಕಳುಹಿಸಿ ಹೆಚ್ಚು ಸಾಕ್ಷ್ಯಗಳನ್ನು ತನ್ನ ಗ್ರಂಥಕ್ಕಾಗಿ ಸಂಗ್ರಹಿಸುವ ಅವರ ಯೋಜನೆ ದುರದೃಷ್ಟಕರವಾಗಿ ಕಾರ್ಯಗತವಾಗಲಿಲ್ಲ.

ಯೇಸುಕ್ರಿಸ್ತರು ವಲಸೆ ಬಂದ ಬಗ್ಗೆ ಮತ್ತು ಅವರ ಸಮಾಧಿ ಬಗ್ಗೆ ಹಝ್ರತ್ ಅಹ್ಮದರ(ಅ) ಶಿಷ್ಯರು ಸಂಗ್ರಹಿಸಿದ ಸಾಕ್ಷ್ಯಗಳು ಮಸೀಹ್ ಹಿಂದೂಸ್ಥಾನ್ ಮೇ ಎಂಬ ಗ್ರಂಥದಲ್ಲಿ ಅಳವಡಿಸಲ್ಪಟ್ಟಿಲ್ಲವಾದರೂ ಇತರ ಗ್ರಂಥಗಳಲ್ಲಿ ಉಲ್ಲೇಖಿಸಲ್ಪಟ್ಟಿವೆ.

ಹಝ್ರತ್ ಅಹ್ಮದರ(ಅ) ಶಿಷ್ಯ ಮೌಲವಿ ಅಬ್ದುಲ್ ಕರೀಮ್(ರ) ಹೀಗೆ ಬರೆದಿದ್ದಾರೆ: ಹಝ್ರತ್ ಅಹ್ಮದ್‌ರಿಗೆ ಬಂದ ಒಂದು ಪತ್ರದಲ್ಲಿ ಅಫ್‌ಘಾನಿಸ್ತಾನದ ಜಲಾಲಾಬಾದ್‌ನಲ್ಲಿ ಒಂದು ವೇದಿಕೆ ಇರುವುದಾಗಿಯೂ ಅದು ಪ್ರವಾದಿ ಯೂಝ್ ಆಸಫರ ವೇದಿಕೆ ಎಂದು ಕರೆಯಲ್ಪಡುತ್ತಿದೆ ಎಂದೂ ಬರೆಯಲಾಗಿತ್ತು. ಸ್ಥಳೀಯ ಸಾಂಪ್ರದಾಯಿಕ ವಿಶ್ವಾಸದ ಪ್ರಕಾರ ಎರಡು ಸಾವಿರ ವರ್ಷಗಳ ಹಿಂದೆ ಆ ಪ್ರವಾದಿ ಅಲ್ಲಿಗೆ ಶಾಮ್ ದೇಶದಿಂದ ಬಂದುದಾಗಿದೆ. ಅಫ್‌ಘಾನ್ ಸರಕಾರ ಈ ಸ್ಥಳಕ್ಕೆ ಒಂದು ಜಹಗೀರನ್ನು ಸಹ ದತ್ತಿಯಾಗಿ ನೀಡಿದೆ. (ಅಲ್‌ಹಕಮ್ – ಸಂಪುಟ 3, ಸಂಚಿಕೆ 24 – 1899)

ಹಝ್ರತ್ ಅಹ್ಮದರ(ಅ) ಇನ್ನೊಬ್ಬ ಶಿಷ್ಯರಾಗಿದ್ದ ಹಝ್ರತ್ ನೂರುದ್ದೀನ್(ರ) ಕಾಶ್ಮೀರದಲ್ಲಿ ದೀರ್ಘಕಾಲ ವಾಸಿಸುತ್ತಿದ್ದರು. ಅವರು ಯೂಝ್ ಆಸಫ್ ಗೋರಿಯ ಬಗ್ಗೆ, ಅದು ವಾಸ್ತವಿಕವಾಗಿ ಪ್ರವಾದಿ ಈಸಾ ಮಸೀಹರ ಗೋರಿಯಾಗಿದೆ ಎಂದು ಅಲ್ಲಿನ ನಿವಾಸಿಗಳಲ್ಲಿ ಐನೂರು ಜನರು ಸಹಿ ಹಾಕಿ ನೀಡಿದ ಹೇಳಿಕೆಯನ್ನು ದಾಖಲಿಸಿದ್ದರು. ಗೋರಿಯ ಬಗ್ಗೆ ಹೆಚ್ಚಿನ ಮಾಹಿತಿ ಗಳಿಸಲು ಕಳುಹಿಸಲ್ಪಟ್ಟ ಮೌಲವಿ ಅಬ್ದುಲ್ಲಾ, ಅಲ್ಲಿ ತಪಾಸಣೆ ನಡೆಸಿ ಆ ಗೋರಿಯಲ್ಲಿ ದಫನುಗೊಳಿಸಲ್ಪಟ್ಟ ಪ್ರವಾದಿಯ ಬಗ್ಗೆ ಅಲ್ಲಿನ ಜನರ ಸಾಂಪ್ರದಾಯಿಕ ವಿಶ್ವಾಸಗಳ ಬಗ್ಗೆ ದೀರ್ಘವಾದೊಂದು ಪತ್ರವನ್ನು ಬರೆದಿದ್ದರು.

"ಮಸೀಹ್ ಹಿಂದೂಸ್ತಾನ್ ಮೇ" ಎಂಬ ಗ್ರಂಥ ಈ ವಿಷಯದ ಬಗ್ಗೆ ರಚಿಸಲಾದ ಶ್ರೇಷ್ಠ ಕೃತಿಯಾಗಿದೆ. ಹಝ್ರತ್ ಅಹ್ಮದರ(ಅ) ಶಿಷ್ಯರಿಗೂ ಈ ವಿಷಯದ ಬಗ್ಗೆ ಆಸಕ್ತಿಹೊಂದಿದ ಪಾಶ್ಚಿಮಾತ್ಯ ವಿದ್ವಾಂಸರಿಗೂ ಹೆಚ್ಚಿನ ಅಧ್ಯಯನಕ್ಕೆ ಮೂಲಾಧಾರವಾದ ಗ್ರಂಥ ಇದಾಗಿದೆ.

## 2. IF JESUS DID NOT DIE UPON CROSS? A STUDY IN EVIDENCE

*Author : **JUDGE E. B. DOCKER,** London, 1920*

## ಇಫ್ ಜೀಸಸ್ ಡಿಡ್ ನೋಟ್ ಡೈ ಅಪೋನ್ ಕ್ರೋಸ್? ಏ ಸ್ಟಡೀ ಇನ್ ಇವಿಡೆನ್ಸ್ *(ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗದಿದ್ದರೆ? ಸಾಕ್ಷ್ಯಾಧಾರಗಳ ಅಧ್ಯಯನ)*

*ಲೇಖಕ: **ಜಡ್ಜ್ ಈ.ಬಿ.ಡೋಕರ್,** ಲಂಡನ್ 1920*

ಆಸ್ಟ್ರೇಲಿಯಾದ ನ್ಯಾಯಾಧೀಶರಾದ ಲೇಖಕರು ಸುವಾರ್ತೆಗಳ ಸಾಕ್ಷ್ಯಗಳನ್ನು ವಿಮರ್ಶಿಸಿ ಬರೆದ ಗ್ರಂಥ ಇದಾಗಿದೆ. ಈ ಗ್ರಂಥವನ್ನು ದುರದೃಷ್ಟಕರವಾಗಿ ಪುನರ್ ಮುದ್ರಿಸಿಲ್ಲವಾದುದರಿಂದ ಇದರ ಪ್ರತಿಗಳು ಅನೇಕ ಕಡೆಗಳಲ್ಲಿ ದೊರಕುವುದಿಲ್ಲ. ಬ್ರಿಟನಿನ ದೊಡ್ಡ ಗ್ರಂಥಾಲಯವಾದ ಆಕ್ಸ್‌ಫರ್ಡ್ ಯುನಿವರ್ಸಿಟಿ ಗ್ರಂಥಾಲಯ ಸಹಿತ ಅನೇಕ ಗ್ರಂಥಾಲಯಗಳಲ್ಲಿ ಇದರ ಪ್ರತಿ ಲಭ್ಯ. ಲೇಖಕರು ಎಲ್ಲಾ ಸಾಕ್ಷ್ಯಾಧಾರಗಳನ್ನು ವಿಮರ್ಶಿಸಿ, ಯೇಸುಕ್ರಿಸ್ತರು ಅಬೋಧಾವಸ್ಥೆಯನ್ನು ಹೊಂದಿದರೆಂಬ ಸಿದ್ಧಾಂತವನ್ನೂ ಅವರು ಪಾಲೆಸ್ತೀನ್‌ನಿಂದ ವಲಸೆ ಹೋದರೆಂಬುದನ್ನೂ ಅನುಮೋದಿಸುತ್ತಾರೆ. ಅವರು ಬರೆದುದನ್ನು ಜೆ.ಡಿ. ಶಮ್ಸ್‌ರವರು ಬರೆದ WHERE DID JESUS DIE? (ಯೇಸು ಎಲ್ಲಿ ಮಡಿದರು?) ಎಂಬ ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಅದು ಹೀಗಿದೆ:

> "ನಾನು ಇದರ ಮೊದಲು ಸೂಚಿಸಿದ ದಂತಕಥೆಯ ಬಗ್ಗೆ ಇಲ್ಲಿ ಪ್ರಸ್ತಾಪಿಸಬೇಕಾಗಿದೆ. EAST AND WEST (ಈಸ್ಟ್ ಎಂಡ್ ವೆಸ್ಟ್) ಎಂಬ ಪತ್ರಿಕೆಯಲ್ಲಿ ಕೆಲವು ವರ್ಷಗಳ ಹಿಂದೆ ಇದರ ಆಧುನಿಕ ರೂಪವನ್ನು ಪ್ರಕಟಿಸಲಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಅದರಲ್ಲಿ ಹೀಗೆ ಹೇಳಲಾಗಿದೆ: ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲ. ಒಂದು ಅದ್ಭುತ ಲೇಪನದ ಚಿಕಿತ್ಸೆ ಮೂಲಕ ಅವರ ಗಾಯಗಳು ನಲ್ವತ್ತು ದಿವಸಗಳಲ್ಲಿ ಗುಣ ಹೊಂದಿದವು. ಇಸ್ರಾಯೇಲ್ ಮನೆತನದ ತಪ್ಪಿಸಿಕೊಂಡ ಗೋತ್ರಗಳಿಗೆ ಉಪದೇಶಿಸಲು ಅವರು ಹಿಂದೂಸ್ತಾನಕ್ಕೆ ಹೋಗಿ ಕೊನೆಗೆ ಕಾಶ್ಮೀರದಲ್ಲಿ ಮೃತರಾದರು. ಅಲ್ಲಿ ಒಂದು ಗೋರಿ ಅವರದೆಂದು ಇಂದು ಸಹ ಬೊಟ್ಟು ಮಾಡಿ ತೋರಿಸಲ್ಪಡುತ್ತಿದೆ.
>
> "ಈ ವಿಷಯಕ್ಕೆ ಸಂಬಂಧಿಸಿ ಅದರ ವಾಸ್ತವಿಕತೆಯನ್ನು ಸ್ಥಾಪಿಸುವ ಯಾವುದಾದರೂ ಸಾಕ್ಷ್ಯಾಧಾರದ ಬಗ್ಗೆ ನನಗೆ ಅರಿವಿಲ್ಲದಿದ್ದರೂ ಇದು ಅಸಂಬದ್ಧವಾಗಲಿ, ಅಸಂಭಾವ್ಯವಾಗಲಿ ಅಲ್ಲ. ಅಫ್‌ಘಾನಿಸ್ತಾನ ಮತ್ತು ಬೆಕ್ಟ್ರಿಯದಲ್ಲಿ ಹೀಬ್ರೂ ಗೋತ್ರಗಳಿಗೆ ಹೋಲಿಕೆ ಇರುವುದರ ಬಗ್ಗೆ ಯಾವುದೇ ತಪ್ಪುಗ್ರಹಿಕೆ ಉಂಟಾಗದಂತಹ ಗೋತ್ರಗಳು ಇಂದು ಸಹ ಇವೆ ಎಂದು ಅನ್ಯ ಮೂಲಗಳಿಂದ ತಿಳಿದಿರುತ್ತದೆ. ಹೊಸ ಒಡಂಬಡಿಕೆಯಲ್ಲಿರುವ ಅನೇಕ ಉಲ್ಲೇಖಗಳು ಈ ಕಥೆಯನ್ನು ದೃಢೀಕರಿಸುವುದಿಲ್ಲವಾದರೂ ಅವುಗಳು ಈ ಕಥೆಗೆ ಕನಿಷ್ಠ ಪಕ್ಷ ಅನುರೂಪವಾಗಿವೆ. ಯೇಸು ಕ್ರಿಸ್ತರು ನಲ್ವತ್ತು ದಿನಗಳ ತನಕ ದೇವರ ರಾಜ್ಯದ ಬಗ್ಗೆ ಶಿಷ್ಯರಿಗೆ ಉಪದೇಶಗಳನ್ನು ನೀಡಿದ ಬಳಿಕ (ಅಪೋಸ್ತಲರ ಕೃತ್ಯಗಳು 1:3 ನೋಡಿರಿ) ಜುದೇಯ ಅಥವಾ ಗಲಿಲಾಯದಲ್ಲಿ ಇನ್ನು ಹೆಚ್ಚು ಕಾಲ ನಿಲ್ಲುವುದು ತನ್ನ ಭದ್ರತೆಗೆ ಹಾನಿಕರವೆಂದು ಮನವರಿಕೆ ಮಾಡಿಕೊಂಡು ಇಸ್ರಾಯೇಲ್ ಮನೆತನದ ತಪ್ಪಿಸಿಕೊಂಡ ಕುರಿಗಳಿಗೆ ದೇವರಾಜ್ಯದ ಸಂದೇಶ ತಲಪಿಸಲು ನಿರ್ಧರಿಸಿದರು ಎಂದು ಊಹಿಸುವುದು ಅಸಂಬದ್ಧ ವಾದುದೇನೂ ಅಲ್ಲ." (ಪುಟ 71)

ಲೇಖಕರು ಪುನಃ ಹೇಳುತ್ತಾರೆ:

> "ಇಸ್ರಾಯೇಲ್ ಮನೆತನದ ತಪ್ಪಿಸಿಕೊಂಡ ಗೋತ್ರಗಳಿಗೆ ಆ ದೂರ ಪ್ರದೇಶಗಳಲ್ಲಿ ಉಪದೇಶಿಸಿದ ನಂತರ ಯೇಸು ಕ್ರಿಸ್ತರು ಶ್ರೀನಗರದಲ್ಲಿ ಮಡಿದಿರಬಹುದು ಮತ್ತು ಈಗ ಅವರ ಹೆಸರನ್ನು ಹೊಂದಿರುವ ಗೋರಿಯಲ್ಲಿ ದಫನುಗೊಳಿಸಲ್ಪಟ್ಟಿರಬಹುದು."
>
> (ಪುಟ 77)

## 3. DUG JESUS PA KORSET? (DID JESUS DIE ON THE CROSS?)

*Author : **Dr. HUGO TOLL,** Sweden 1928*

## ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೆ?

*ಲೇಖಕ : **ಡಾ॥ ಹ್ಯುಗೋ ಟೋಲ್,** ಸ್ವೀಡನ್, 1928*

ಸ್ವೀಡನ್ ನಿವಾಸಿಯಾದ ಡಾಕ್ಟರ್ ಹ್ಯುಗೋ ಟೋಲ್, ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾದರೋ ಎಂಬ ಬಗ್ಗೆ ವೈದ್ಯಕೀಯ ದೃಷ್ಟಿಯಿಂದ ವಿಸ್ತೃತ ಅಧ್ಯಯನ ನಡೆಸಿದ್ದರು. ಶಿಲುಬೆಗೇರಿಸಲ್ಪಡುವ ಘಟನೆ ಬಗ್ಗೆ ಅವರು ಪುನರ್ ಪರಿಶೋಧನೆ ನಡೆಸಿದರು. ಯೇಸು ಕ್ರಿಸ್ತರಿಗೆ ನೀಡಿದ ಶಿಕ್ಷೆಯ ಬಗ್ಗೆ ಅವರು ಕೂಲಂಕಷವಾಗಿ ಅಧ್ಯಯನ ಮಾಡಿದರು. ಆರೋಗ್ಯವಂತ ಯುವಕನೊಬ್ಬನು ಅಷ್ಟು ಕಡಿಮೆ ಕಾಲಾವಧಿ ಶಿಕ್ಷೆಯನ್ನು ಅನುಭವಿಸಿ ಸಾಯುವುದು ಅಸಾಧಾರಣವಾಗಿದೆ ಎಂದು ಅವರು ಹೇಳಿದರು. ಶಿಲುಬೆಗೇರಿಸುವಿಕೆ ಎಂಬ ರೋಮನ್ ಶಿಕ್ಷೆಯ ವಿಧಾನ ಪ್ರಕಾರ ಶಿಲುಬೆಗೇರಿಸಲ್ಪಟ್ಟವರು ಸಾಮಾನ್ಯವಾಗಿ ಕೆಲವು ದಿನಗಳ ನಂತರ ಬಳಲಿಕೆ, ಹಸಿವು ಮತ್ತು ಹಿಂಸ್ರ ಪಕ್ಷಿಗಳ ಆಕ್ರಮಣದಿಂದ ಮೃತರಾಗುತ್ತಿದ್ದರು. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಪ್ರಜ್ಞಾಶೂನ್ಯರಾಗಿರಬಹುದು. ಯೇಸು ಕ್ರಿಸ್ತರು ಬಾಯಾರಿಕೆಯಿಂದ ಬಳಲಿ ಹುಳಿರಸವನ್ನು ತೆಗೆದುಕೊಂಡ ಮೇಲೆ "ತೀರಿತು" ಎಂದು ಮಹಾಧ್ವನಿಯಲ್ಲಿ 'ಮೃತರಾಗುವ' ಮೊದಲು ಉಚ್ಚರಿಸಿದುದು ಅವರು ಪ್ರಜ್ಞಾಶೂನ್ಯರಾದರೆಂಬುದನ್ನು ಸೂಚಿಸುತ್ತದೆ. ಯೇಸು ಕ್ರಿಸ್ತರ ಶರೀರವನ್ನು ರೋಮನ್ ಸೈನಿಕನು ಈಟಿಯಿಂದ ತಿವಿದಾಗ ರಕ್ತವೂ ನೀರೂ ಹೊರಹೊಮ್ಮಿದುದಾಗಿ ಯೋಹಾನನ ಸುವಾರ್ತೆ ತಿಳಿಸುತ್ತದೆ. ಆಗ ಯೇಸು ಕ್ರಿಸ್ತರ ಹೃದಯ ಬಡಿಯುತ್ತಿತ್ತೆಂದು ಇದರಿಂದ ಸಾಬೀತಾಗುತ್ತದೆಂದು ಡಾ॥ ಟೋಲ್ ಹೇಳುತ್ತಾರೆ.

ಯೇಸು ಕ್ರಿಸ್ತರು ಮೃತರಾದ ಹಾಗೆ ತೋರಿಕೆ ಆಗಿತ್ತು ಎಂದು ಒಪ್ಪಿಕೊಳ್ಳುವುದಾದರೆ ಬೈಬಲಿನಲ್ಲಿ ವಿವರಿಸಲಾದ ಘಟನೆಗಳ ಬಗ್ಗೆ ಸಹಜವಾದ ವಿವರಣೆ ನೀಡಲು ಸಾಧ್ಯ. ಅವರು ಗಾಯಗೊಂಡವರಾಗಿ ನೋವನ್ನು ಎಷ್ಟು ಅನುಭವಿಸುತ್ತಿದ್ದರೆಂದರೆ ಮಗ್ದಲದ ಮರಿಯಳು ಅವರನ್ನು ಸ್ಪರ್ಶಿಸದಂತೆ ತಡೆದರು.

ಶಿಲುಬೆಯ ಸಂಭವದ ನಂತರ ಯೇಸು ಕ್ರಿಸ್ತರು ಅನಾಮಿಕ ಜೀವಿತ ನಡೆಸಿದರೆಂಬ ವಾದವನ್ನು ಡಾಕ್ಟರ್ ಟೋಲ್

ಅನುಮೋದಿಸುತ್ತಾರೆ. ಇದೇ ಕಾರಣದಿಂದ ಅವರು ಆ ಪ್ರದೇಶದಿಂದ ಹೊರಗೆ ಹೋದರು. ಡಾಕ್ಟರ್ ಟೋಲ್ ಹೀಗೆ ಸಹ ಹೇಳುತ್ತಾರೆ: ಪೂರ್ವ ದೇಶಗಳಲ್ಲಿ ಅಹ್ಮದಿಯಾ ಎಂಬ ಒಂದು ಸಮುದಾಯ ಯೇಸುಕ್ರಿಸ್ತರು ಶಿಲುಬೆಯಿಂದ ಜೀವಸಹಿತ ಇಳಿದು ಕಾಶ್ಮೀರಿಗೆ ವಲಸೆ ಹೋದರೆಂದು ನಂಬುತ್ತಿದೆ.

### 4. ಖಬ್‌ರೆ ಮಸೀಹ್

*ಲೇಖಕ :* ***ಮುಫ್ತೀ ಮುಹಮ್ಮದ್ ಸಾದಿಖ್***
*ಖಾದಿಯಾನ್, ಹಿಂದೂಸ್ತಾನ, 1936*

ಈ ಗ್ರಂಥದ ಲೇಖಕರು ಹಝ್ರತ್ ಅಹ್ಮದರ(ಅ) ಶಿಷ್ಯರಾಗಿದ್ದರು. ಅವರು ಮತಪ್ರಚಾರಕರಾಗಿಯೂ ಅಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು. ಅವರು ಹೀಬ್ರೂ ಭಾಷೆಯಲ್ಲಿ ಪಾರಂಗತರಾಗಿದ್ದರು. ಅವರು ಉರ್ದು ಭಾಷೆಯಲ್ಲಿ ಬರೆದ ಪುಸ್ತಕದಲ್ಲಿ ಯೇಸು ಕ್ರಿಸ್ತರು ಕಾಶ್ಮೀರದಲ್ಲಿ ಮೃತರಾದ ಬಗ್ಗೆ ಮತ್ತು ಅವರ ಗೋರಿಯ ಬಗ್ಗೆ ವಿವರಿಸಿದ್ದಾರೆ. ಅವರು 1925ರಲ್ಲಿ ಕಾಶ್ಮೀರಕ್ಕೆ ಹೋಗಿ ಮೂರು ವರ್ಷಗಳ ಕಾಲ ಸಂಶೋಧನೆ ನಡೆಸಿದರು. ಅವರು ಹಳೆಯ ಹೀಬ್ರೂ ಭಾಷೆಯ ಶಾಸನಗಳನ್ನು ಮತ್ತು ಹಳೆಯ ಯಹೂದಿ ಗೋರಿಗಳ ಬಗ್ಗೆ ವಿವರಣೆ ನೀಡಿದುದು ಗಮನಾರ್ಹ ವಿಷಯವಾಗಿದೆ. ಅವರ ಗ್ರಂಥದಲ್ಲಿ ಪುರಾವಸ್ತು ವಿಜ್ಞಾನಕ್ಕೆ ಸಂಬಂಧಿಸಿದ ಹದಿನೆಂಟು ಸ್ಥಳಗಳನ್ನು ವಿವರಿಸಲಾಗಿದೆ. ಕಾಶ್ಮೀರದ ಜನರು ವಾಸ್ತವಿಕವಾಗಿ ಇಸ್ರಾಯೇಲ್ ಬುಡಕಟ್ಟಿಗೆ ಸೇರಿದವರ ಸಂತಾನ ಪರಂಪರೆಯವರೆಂದು ಸಾಬೀತುಗೊಳಿಸಲು ಹೆಚ್ಚು ಒತ್ತು ನೀಡಲು ಅವರು ಕಾಶ್ಮೀರೀ ಭಾಷೆಯ ಶಬ್ದಗಳನ್ನು ಅರ್ಥ ಸಹಿತ ನೀಡಿದ್ದು ಅವುಗಳು ಹೀಬ್ರೂ ಭಾಷೆಯ ಶಬ್ದಗಳಿಗೆ ಹೋಲಿಕೆ ಹೊಂದಿರುವುದನ್ನು ತೋರಿಸಿಕೊಟ್ಟಿರುವರು.

ಅವರು ತನ್ನ ಗ್ರಂಥದ ಒಂದು ಅಧ್ಯಾಯದಲ್ಲಿ ಯೂಝ್ ಆಸಫರ ಗೋರಿಯ ವಿವರಣೆ ನೀಡಿರುವರು. ಆ ಗೋರಿ ಹಝ್ರತ್ ಈಸಾರವರದೆಂದು ಅಲ್ಲಿನ ಜನರ ಪಾರಂಪರಿಕ ವಿಶ್ವಾಸದ ಬಗ್ಗೆ ಸಂಕ್ಷಿಪ್ತವಾಗಿ ಬರೆದಿರುವರು.

ದುರದೃಷ್ಟಕರವಾಗಿ ಈ ಗ್ರಂಥ ಇಂಗ್ಲಿಷ್‌ಗೆ ಭಾಷಾಂತರ ಗೊಳಿಸಲ್ಪಟ್ಟಿಲ್ಲ. ಆದರೆ ಕೆಲವು ವರ್ಷಗಳ ಮುಂಚೆ, ಅವರು ಬರೆದ ಹೀಬ್ರೂ ಮತ್ತು ಕಾಶ್ಮೀರಿ ಭಾಷೆಗಳ ಶಬ್ದಗಳನ್ನು ಇಂಗ್ಲಿಷ್ ಲಿಪಿಯಲ್ಲಿ ಬರೆಯಲಾಗಿದೆ. (ಅದು ಪ್ರಕಟಗೊಂಡಿಲ್ಲ.)

### 5. WHERE DID JESUS DIE?

*Author :* ***J. D. SHAMS,*** *Qadian, India, 1945*

### ಯೇಸು ಎಲ್ಲಿ ಮಡಿದರು?

*ಲೇಖಕ : ಜೆ. ಡಿ. ಶಮ್ಸ್, ಖಾದಿಯಾನ್, ಹಿಂದೂಸ್ತಾನ, 1945*

ಲೇಖಕರು ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಪ್ರಮುಖ ಮತಪ್ರಚಾರಕರಾಗಿದ್ದರು. ಅವರು ಲಂಡನ್ ಮಸ್‌ಜಿದಿನ ಇಮಾಮರಾಗಿ ಕಾರ್ಯನಿರತರಾಗಿದ್ದಾಗ ಈ ಗ್ರಂಥವನ್ನು ಬರೆದರು. ಗ್ರಂಥದ ಪ್ರಥಮ ಭಾಗದಲ್ಲಿ ಶಿಲುಬೆಗೆ ಸಂಬಂಧಿಸಿ ಸುವಾರ್ತೆಗಳ ವರದಿಗಳನ್ನು ವಿಮರ್ಶಿಸಿ ಸುವಾರ್ತೆಗಳಲ್ಲಿರುವ ವೈರುಧ್ಯಗಳನ್ನು ಸ್ಪಷ್ಟಪಡಿಸಲಾಗಿದೆ. ಟ್ಯೂರಿನಿನ ಶವವಸ್ತ್ರದ ಬಗ್ಗೆ ಒಂದು ಚಿಕ್ಕ ಅಧ್ಯಾಯದಲ್ಲಿ ವಿವರಿಸಲಾಗಿದೆ. ಶವವಸ್ತ್ರದಲ್ಲಿರುವ ರಕ್ತದ ಕಲೆಗಳ ಬಗ್ಗೆ ಅಧ್ಯಯನ ನಡೆಸಿದ ಜರ್ಮನ್ ವಿಜ್ಞಾನಿಗಳ ತಂಡವು ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿರಲಿಲ್ಲ ಎಂಬ ನಿರ್ಧಾರಕ್ಕೆ ಬಂದ ಬಗ್ಗೆ ವಿವರಿಸಲಾಗಿದೆ. ಈ ಗ್ರಂಥದ 8 ಮತ್ತು 9ನೇ ಅಧ್ಯಾಯಗಳಲ್ಲಿ ಸಂತ ಪೌಲನು ಯೇಸುಕ್ರಿಸ್ತರ ಮೂಲ ಉಪದೇಶಗಳಿಗೆ ವಿಗ್ರಹಾರಾಧಕ ತತ್ವಗಳನ್ನು ಕಲಬೆರಕೆ ಮಾಡಿ ಒಂದು ಹೊಸ ಗುಂಪನ್ನು ಯೇಸುಕ್ರಿಸ್ತರ ಆದಿಕಾಲೀನ ಅನುಯಾಯಿಗಳಲ್ಲಿ ಸೃಷ್ಟಿಸಿದುದರ ಬಗ್ಗೆ ವಿವರಿಸಲಾಗಿದೆ. ಇಸ್ರಾಯೇಲ್ ಗೋತ್ರಗಳ ಜನರು ಅಫ್‌ಘಾನಿಸ್ಥಾನ ಮತ್ತು ಕಾಶ್ಮೀರದಲ್ಲಿ ವಾಸಿಸುತ್ತಿರುವ ಬಗ್ಗೆ ನರವಂಶ ಶಾಸ್ತ್ರ ಮತ್ತು ಚಾರಿತ್ರಿಕ ಸಾಕ್ಷ್ಯಾಧಾರಗಳನ್ನು ವಿಮರ್ಶಿಸಲಾಗಿದ್ದು ಅದರಲ್ಲಿ ಯೇಸುಕ್ರಿಸ್ತರ ಗೋರಿಯ ಬಗ್ಗೆ "ಇಕ್‌ಮಾಲುದ್ದೀನ್" ಎಂಬ ಚರಿತ್ರೆಯ ಗ್ರಂಥದ ಆಧಾರ ನೀಡಲಾಗಿದೆ. ಯೇಸು ಕ್ರಿಸ್ತರ ಗೋರಿಗೆ ಸಂಬಂಧಿಸಿದ ಅಧ್ಯಾಯದ ಕೊನೆಗೆ ಬರೆಹ ಮೂಲಕ ದೊರೆತ ಸಾಂಪ್ರದಾಯಿಕ ಸಾಕ್ಷ್ಯಗಳನ್ನು ಮತ್ತು ಜನರ ಹೇಳಿಕೆಗಳನ್ನು ದಾಖಲಿಸಲಾಗಿದೆ. ಯೂಝ್ ಆಸಫ್ ಎಂಬ ಹೆಸರು ಈಸಾ ಮಸೀಹರೊಂದಿಗೆ ಸಂಬಂಧ ಹೊಂದಿರುವ ಬಗ್ಗೆ ಗೋರಿಯ ಮೇಲ್ವಿಚಾರಕರ ಹೇಳಿಕೆಗಳನ್ನೂ ದಾಖಲಿಸಲಾಗಿದೆ. ಗ್ರಂಥದ ಲೇಖಕರಾದ ಮೌಲಾನ ಜಲಾಲುದ್ದೀನ್ ಶಮ್ಸ್‌ರವರು, ಅಂದಾಜು ಇನ್ನೂರು ವರ್ಷಗಳ ಹಿಂದೆ ಬರೆಯಲ್ಪಟ್ಟ "ತಾರೀಖೆ ಆಝಮಿ" ಎಂಬ ಗ್ರಂಥದ ಉಲ್ಲೇಖ ನೀಡಿರುತ್ತಾರೆ. ಅದರಲ್ಲಿ ಯೂಝ್ ಆಸಫ್ ವಿದೇಶದಿಂದ ಎರಡು ಸಾವಿರ ವರ್ಷಗಳ ಹಿಂದೆ ಆಗಮಿಸಿದ ಒಬ್ಬ ಪ್ರವಾದಿ ಎಂದು ಬರೆಯಲಾಗಿದೆ.

ಮೌಲಾನ ಶಮ್ಸ್‌ರವರು, "ಈ ಗೋರಿಯ ಬಗ್ಗೆ ಪುರಾವಸ್ತುಗಳಿಗೆ ಸಂಬಂಧಿಸಿದ ಸಂಶೋಧನೆ ನಡೆಸಿದರೆ ಶಿಲಾ ಲಿಖಿತಗಳೂ ಇನ್ನಿತರ ದಾಖಲೆಗಳೂ ದೊರಕಬಲ್ಲವು" ಎಂದು ತನ್ನ ಗ್ರಂಥದಲ್ಲಿ ಕೊನೆಯದಾಗಿ ಸೂಚಿಸಿದ್ದಾರೆ.

### 6. JESUS IN HEAVEN ON EARTH

*Author :* ***KHWAJA NAZIR AHMAD,***
*Lahore, Pakistan, 1952*

### ಜೀಸಸ್ ಇನ್ ಹೆವನ್ ಆನ್ ಅರ್ಥ್ (ಯೇಸು ಕ್ರಿಸ್ತರು ಭೂಲೋಕದ ಸ್ವರ್ಗದಲ್ಲಿ)

*ಲೇಖಕ : ಖ್ವಾಜಾ ನಝೀರ್ ಅಹ್ಮದ್.*
*ಲಾಹೋರು, ಪಾಕಿಸ್ತಾನ, 1952*

ಪಾಕಿಸ್ತಾನದ ಒಬ್ಬ ನ್ಯಾಯಾವಾದಿಯಾಗಿದ್ದ ಲೇಖಕರು ಕಾಶ್ಮೀರದಲ್ಲಿ ವಿಸ್ತೃತವಾಗಿ ಯಾತ್ರೆ ನಡೆಸಿದ ನಂತರ ಈ ಗ್ರಂಥವನ್ನು ರಚಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿ ಪ್ರಾಯಶಃ ಇದು ಅತ್ಯಂತ ಹೆಚ್ಚು ವಿವರಣೆ ನೀಡುವ ಗ್ರಂಥವಾಗಿದ್ದು ನಾನೂರಕ್ಕಿಂತಲೂ ಹೆಚ್ಚು ಪುಟಗಳನ್ನು ಹೊಂದಿದೆ. ಈ ಗ್ರಂಥ ಐದು ಭಾಗಗಳನ್ನು ಹೊಂದಿದೆ. ಪ್ರಥಮ ಭಾಗದಲ್ಲಿ ಯಹೂದಿ, ಬಹುದೈವಾರಾಧಕ, ಕ್ರೈಸ್ತ ಮತ್ತು ಇಸ್ಲಾಮೀ ಮೂಲಗಳಿಂದ ದೊರೆತ ಸಾಕ್ಷ್ಯಾಧಾರಗಳನ್ನು ವಿಮರ್ಶಿಸಲಾಗಿದೆ. ಗ್ರಂಥದ ಎರಡನೆಯ ಭಾಗದಲ್ಲಿ ಯೇಸು ಕ್ರಿಸ್ತರ ಜನನ, ಸುತದೇವ ಸಿದ್ಧಾಂತ, ತ್ರಿತ್ವ ಸಿದ್ಧಾಂತ ಇವುಗಳ ಬಗ್ಗೆ ವಿವರಿಸಲಾಗಿದೆ. ಗ್ರಂಥದ ಮೂರನೆಯ ಮತ್ತು ನಾಲ್ಕನೆಯ ಭಾಗಗಳಲ್ಲಿ ಯೇಸುಕ್ರಿಸ್ತರು ಕಾಶ್ಮೀರಕ್ಕೆ ಹೋಗಿ ಅಲ್ಲಿ ಮೃತರಾದ ಬಗ್ಗೆ, ಇಸ್ರಾಯೇಲ್ ವಂಶದ ತಪ್ಪಿಸಿಕೊಂಡ ಗೋತ್ರಗಳು ಅಫ್‌ಘಾನಿಸ್ಥಾನ ಮತ್ತು ಕಾಶ್ಮೀರದಲ್ಲಿ ವಾಸಿಸುತ್ತಿರುವ ಬಗ್ಗೆ ವಿವರಿಸಲಾಗಿದೆ. ಗ್ರಂಥದ ಐದನೆಯ ಭಾಗದಲ್ಲಿ ಕಾಶ್ಮೀರದ ಪುರಾತನ ಚಾರಿತ್ರಿಕ ಗ್ರಂಥಗಳಿಂದ ಯೇಸು ಕ್ರಿಸ್ತರ ಗೋರಿಯ ಬಗ್ಗೆ ಇರುವ ಉಲ್ಲೇಖಗಳನ್ನು ನೀಡಲಾಗಿದೆ.

ಈ ಗ್ರಂಥದಲ್ಲಿ ಉಲ್ಲೇಖಿಸಲಾದ ಎರಡು ಮುಖ್ಯ ಗ್ರಂಥಗಳಲ್ಲಿ ಒಂದು, ಅಂದಾಜು ಕ್ರಿಸ್ತ ಶಕ 1400ರಲ್ಲಿ ಮುಲ್ಲಾ ನಾದಿರಿಯಿಂದ ರಚಿತವಾದ "ತಾರೀಖೆ ಕಾಶ್ಮೀರ್" ಆಗಿದೆ. ಇನ್ನೊಂದು ಗ್ರಂಥ ಕ್ರಿ.ಶ.

115ರಲ್ಲಿ ರಚಿಸಲಾದ ಭವಿಷ್ಯ ಪುರಾಣವೆಂಬ ಹಿಂದೂ ಗ್ರಂಥವಾಗಿದೆ. ಅವರು ತಾರೀಖೆ ಕಾಶ್ಮೀರ್ ಗ್ರಂಥದಲ್ಲಿ ಈ ವಿಷಯವನ್ನು ವಿವರಿಸುವ ಪುಟದ ಫೋಟೋ ಸಹ ನೀಡಿದ್ದಾರೆ. ಈ ಗ್ರಂಥದ ಒಂದೇ ಒಂದು ಪ್ರತಿ ಈಗ ಲಭ್ಯವಿದೆ. ಅದು ಕೂಡ ಬಹಳ ಜೀರ್ಣ ಸ್ಥಿತಿಯಲ್ಲಿದೆ. ಮುಲ್ಲಾ ನಾದಿರಿ ಹೀಗೆ ಬರೆದಿದ್ದಾರೆ: ಯೂಝ್ ಆಸಫ್ ಪುಣ್ಯಭೂಮಿಯಿಂದ ಆಗಮಿಸಿದ ಪ್ರವಾದಿ ಆಗಿದ್ದರು. ಯೂಝ್ ಆಸಫ್ ಈಸಾ ಮಸೀಹರೇ ಆಗಿದ್ದರೆಂದು ಸಾಂಪ್ರದಾಯಿಕವಾಗಿ ಗುರುತಿಸಲಾಗಿದೆ.

ಭವಿಷ್ಯ ಪುರಾಣದಲ್ಲಿ, ಉತ್ತರ ಭಾರತದ ಒಬ್ಬ ದೊರೆ ಈಸಾ ಮಸೀಹನೆಂಬ ಪ್ರವಾದಿಯನ್ನು ಭೇಟಿಯಾದ ಬಗ್ಗೆ ವಿವರಿಸಲಾಗಿದೆ. ಮುಲ್ಲಾ ನಾದಿರಿ ಆ ಪುರಾಣದ ಬಗ್ಗೆ ಪ್ರಸ್ತಾಪಿಸಿ ಯೂಝ್ ಆಸಫ್ ಮತ್ತು ಈಸಾ ಪ್ರಾಯಶಃ ಒಬ್ಬರೇ ಆಗಿದ್ದಿರಬಹುದೆಂದು ಹೇಳುತ್ತಾರೆ.

ಲೇಖಕರು ಗ್ರಂಥದಲ್ಲಿ ಅಫ್‌ಘಾನ್ ಜನರ ಮತ್ತು ಕಾಶ್ಮೀರಿ ಜನರ ಆಚಾರಗಳನ್ನು, ನಡೆವಳಿಕೆಗಳನ್ನು ಮತ್ತು ಸಂಪ್ರದಾಯಗಳನ್ನು ಇಸ್ರಾಯೇಲಿನ ಜನರೊಂದಿಗೆ ಹೋಲಿಸಿ ವಿಶದೀಕರಿಸುತ್ತಾರೆ . ಈ ದೇಶಗಳಲ್ಲಿರುವ ವಿವಿಧ ವಿಭಿನ್ನ ಗುಂಪುಗಳ ಹೆಸರುಗಳು ಬೈಬಲಿನಲ್ಲಿರುವ ಹೆಸರುಗಳೊಂದಿಗೆ ಹೋಲಿಕೆ ಹೊಂದಿರುವುದನ್ನು ಬೈಬಲಿನ ಆಧಾರದೊಂದಿಗೆ ವಿವರಿಸಲಾಗಿದೆ.

## 7. JESUS IN ROME

*Author : **ROBERT GRAVES & JOSHUVA PODRO,** London, 1957*

### ಜೀಸಸ್ ಇನ್ ರೋಮ್ (ರೋಮಿನಲ್ಲಿ ಯೇಸು ಕ್ರಿಸ್ತ)

*ಲೇಖಕ : **ರೋಬರ್ಟ್ ಗ್ರೇವ್ಸ್ ಮತ್ತು ಜೋಶುವ ಪೋಡ್ರೋ,** ಲಂಡನ್ 1957)*

ಈ ಗ್ರಂಥದ ಇಬ್ಬರು ಲೇಖಕರು ಇದರ ಮೊದಲು ಪ್ರಕಟಿಸಿದ NAZARENE GOSPEL RESTORED (ನಜರೇನ್ ಸುವಾರ್ತೆಯ ಪುನಃಸ್ಥಾಪನೆ) ಎಂಬ ಗ್ರಂಥದ ಅನುಬಂಧವಾಗಿ ಈ ಕೃತಿಯನ್ನು ರಚಿಸಿದ್ದಾರೆ. ರೋಬರ್ಟ್ ಗ್ರೇವ್ಸ್ ಒಬ್ಬ ಕಾದಂಬರಿಕಾರ ಮತ್ತು ನಾಟಕಕಾರ. ಜೋಶುವ ಪೋಡ್ರೋ ಒಬ್ಬ ಯಹೂದಿ ಪುರೋಹಿತ. ಇಬ್ಬರು ಲೇಖಕರು ತಮ್ಮ ಮೊದಲನೆಯ ಗ್ರಂಥದಲ್ಲಿ ಹೀಗೆ ಅಭಿಪ್ರಾಯ ಸೂಚಿಸಿದ್ದಾರೆ: ಸುವಾರ್ತೆಗಳಲ್ಲಿ ಅನಂತರ ಸೇರಿಸಲ್ಪಟ್ಟ ಕಥೆಗಳನ್ನು ತೆಗೆದುಬಿಡುವುದಾದರೆ ಸುವಾರ್ತೆಗಳ ಬಗ್ಗೆ ತಲಪಬಹುದಾದ ನಿರ್ಧಾರವು ಬೇರೆಯೇ ಆಗಿರುತ್ತದೆ. ಶಿಲುಬೆಗೇರಿಸಲ್ಪಟ್ಟ ನಂತರ ಯೇಸು ಕ್ರಿಸ್ತರನ್ನು ಶಿಷ್ಯರು ಜೀವಂತವಾಗಿರುವುದನ್ನು ಕಂಡರು. ಆದುದರಿಂದ ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಿರಲಿಲ್ಲವೆಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

"ಜೀಸಸ್ ಇನ್ ರೋಮ್" ಎಂಬ ಗ್ರಂಥದಲ್ಲಿ ಲೇಖಕದ್ವಯರು ಹೀಗೆ ಹೇಳುತ್ತಾರೆ: ಶಿಲುಬೆಯಲ್ಲಿ ಮೃತನಾಗದೆ ಪಾರಾದ ನಂತರ ಯೇಸುಕ್ರಿಸ್ತರು ಬೇರೆ ಪ್ರದೇಶದಲ್ಲಿ ತನ್ನ ಪ್ರಚಾರ ಕಾರ್ಯ ಮುಂದುವರಿಸಿರಬಹುದು. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಪ್ರಜ್ಞಾಶೂನ್ಯರಾಗಿದ್ದರು; ಅವರನ್ನು ಜೀವಂತವಾಗಿ ಇಳಿಸಿದ ನಂತರ ಅವರನ್ನು ಕೆಲವು ಶಿಷ್ಯರು ಶುಶ್ರೂಷಿಸಿದರು. ಲೇಖಕರು ಕ್ರಿ.ಶ. 110ರಲ್ಲಿ ಮೃತರಾದ ಬಿಶಪ್ ಇಗ್ನೇಶಿಯಸ್ ಎಂಬವರ ಹೇಳಿಕೆಯನ್ನು ಉಲ್ಲೇಖಿಸುತ್ತಾರೆ: ಶಿಲುಬೆಯ ಸಂಭವ ಕಳೆದು ಇಪ್ಪತ್ತು ವರ್ಷಗಳ ನಂತರ ಯೇಸು ಕ್ರಿಸ್ತರು "ರಕ್ತಮಾಂಸಭರಿತ ದೇಹದೊಂದಿಗೆ" ಜೀವಿಸಿದ್ದರೆಂದು ಬಿಶಪ್ ಹೇಳಿದ್ದರು. ಈ ಗಮನಾರ್ಹ ಉಲ್ಲೇಖವು ಬಿಶಪ್ ಇಗ್ನೇಶಿಯಸ್ ಸ್ಮಯಿಲ್ ನೀನ್ಸ್‌ಗೆ ಬರೆದ ಪತ್ರದಲ್ಲಿ (LETTER TO SMYRNEANS) ಇದೆ.

ಈ ಗ್ರಂಥದ ಐದನೆಯ ಅಧ್ಯಾಯವಾದ "ಯೇಸು ಕ್ರಿಸ್ತರ ಗೋರಿ"ಯಲ್ಲಿ ಕಾಶ್ಮೀರದಲ್ಲಿರುವ ಗೋರಿಯು "ಚಾರಿತ್ರಿಕವಾಗಿ ಅಂಗೀರಾರ್ಹವಾದ ಒಂದು ಅವಶೇಷವಾಗಿದ್ದು ಯೇಸು ಕ್ರಿಸ್ತರು ಶಿಲುಬೆಯಿಂದ ಇಳಿಸಲ್ಪಟ್ಟ ನಂತರದ ಜೀವಿತದ ಬಗ್ಗೆ ಸರಳವೂ ಸಹಜವೂ ಆಗಿರುವ ಒಂದು ಮುಕ್ತಾಯವನ್ನು ಸೂಚಿಸುವುದಾಗಿದೆ" ಎಂದು ಬರೆಯಲಾಗಿದೆ. (ಪುಟ 68 ನೋಡಿರಿ)

ಲೇಖಕರು ಮೇಲೆ ವಿವರಿಸಿದ ಗ್ರಂಥದ (JESUS IN HEAVEN ON EARTH) ಸಾರಾಂಶವನ್ನು ನೀಡಿ ಅದರಿಂದ ಅನೇಕ ಉಲ್ಲೇಖಗಳನ್ನು ನೀಡಿದ್ದಾರೆ.

## 8. RAUZABAL AND OTHER MYSTERIES OF KASHMIR

*Author : **MOHAMMAD YASIN,** Published in Srinagar, Kashmir 1972*

### ರೌಝಬಾಲ್ ಏಂಡ್ ಅದರ್ ಮಿಸ್ಟರೀಸ್ ಆಫ್ ಕಾಶ್ಮೀರ್ (ರೌಝಬಾಲ್ ಮತ್ತು ಕಾಶ್ಮೀರದ ರಹಸ್ಯಗಳು)

*ಲೇಖಕ : **ಮುಹಮ್ಮದ್ ಯಾಸೀನ್,** ಶ್ರೀನಗರ, ಕಾಶ್ಮೀರ್, 1972*

ಇದೊಂದು ಪ್ರಬಂಧರೂಪದಲ್ಲಿದೆ. ಇದರ ಲೇಖಕ ನ್ಯಾಯವಾದಿಯಾಗಿರುತ್ತಾರೆ. ಕೆನಡದ ಮೊಂಟ್ರಿಯಾಲ್‌ನಲ್ಲಿ ಮೆಕ್‌ಗಿಲ್ ಯುನಿವರ್ಸಿಟಿಯಲ್ಲಿ ಇನ್‌ಸ್ಟಿಟ್ಯೂಟ್ ಆಫ್ ಇಸ್ಲಾಮಿಕ್ ಸ್ಟಡೀಸ್‌ನಲ್ಲಿ ಅವರು ಸಹ ಸಂಶೋಧಕರಾಗಿದ್ದರು. ಅವರು ಮುನ್ನುಡಿಯಲ್ಲಿ ಹೀಗೆ ಹೇಳಿರುತ್ತಾರೆ: ನಾನು ಹೊಸದಾದ ಯಾವುದಾದರೂ ಸಾಕ್ಷ್ಯವನ್ನು ಪುರಾತನ ಚಾರಿತ್ರಿಕ ಗ್ರಂಥಗಳಿಂದ ಈ ಪ್ರಬಂಧದಲ್ಲಿ ನೀಡಿಲ್ಲ. ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ವೈಜ್ಞಾನಿಕ ಮತ್ತು ವಿಚಾರಬದ್ಧ ರೀತಿಯಲ್ಲಿ ನಾನು ನೀಡಿರುತ್ತೇನೆ. ಯಾವುದೇ ಧಾರ್ಮಿಕವಾದ ವಿವಾದಗಳಿಂದ ನಾನು ದೂರ ಸರಿದಿರುತ್ತೇನೆ.

ಲೇಖಕರು ಅಹ್ಮದಿಯಾ ಮುಸ್ಲಿಂ ಸಂಘಟನೆಗೆ ಸೇರಿದವರಲ್ಲ. ಆದರೆ ಈ ವಿಷಯಕ್ಕೆ ಸಂಬಂಧಿಸಿ ಪ್ರಥಮವಾಗಿ ಬರೆದುದು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್‌ರೆಂದೂ ಅವರೇ ಪ್ರಥಮ ಬಾರಿ ಈ ಸತ್ಯವನ್ನು ಲೋಕದ ಮುಂದಿರಿಸಿದರೆಂಬುದನ್ನೂ ಲೇಖಕರು ಅಂಗೀಕರಿಸಿ ಬರೆದಿದ್ದಾರೆ. ಈ ಪ್ರಬಂಧವನ್ನು ಅಂಶಗಳ ರೂಪದಲ್ಲಿ ಬರೆಯಲಾಗಿದ್ದು ಸಂಕ್ಷಿಪ್ತವಾಗಿದೆ.

## 9. CHRIST IN KASHMIR

*Author : **AZIZ KASHMIRI,** Published in Srinagar, Kashmir, 1973*

### ಕ್ರೈಸ್ಟ್ ಇನ್ ಕಾಶ್ಮೀರ್

*ಲೇಖಕ: **ಅಝೀಝ್ ಕಾಶ್ಮೀರಿ,** ಶ್ರೀನಗರ, ಕಾಶ್ಮೀರ್, 1973.*

ಲೇಖಕರು ಶ್ರೀನಗರದ ಉರ್ದು ವಾರಪತ್ರಿಕೆ "ರೋಶ್ನಿ"ಯ ಸಂಪಾದಕರಾಗಿದ್ದರು. ಅವರು ಉರ್ದು ಭಾಷೆಯಲ್ಲಿ "ಹಝ್ರತ್ ಈಸಾ ಔರ್ ಈಸಾಯಿಯತ್" ಮತ್ತು "ಮಸೀಹ್ ಕಾಶ್ಮೀರ್ ಮೇ" ಎಂಬ ಪುಸ್ತಕಗಳನ್ನು ಬರೆದಿರುವರು. ಅವರು ಸಹ ಅಹ್ಮದಿಯಾ ಮುಸ್ಲಿಂ ಸಂಘಟನೆಗೆ ಸೇರಿದವರಲ್ಲ. ಕಾಶ್ಮೀರ್ ಎಂಬ ಹೆಸರು ಮೂಲವಾಗಿ ಇಸ್ರಾಯೇಲ್ ಜನಾಂಗಕ್ಕೆ ಸಂಬಂಧಿಸಿದೆ ಎಂದು

ಸ್ಪಷ್ಟಪಡಿಸಿ ಇಸ್ರಾಯೇಲ್ ವಂಶದ ತಪ್ಪಿಸಿಕೊಂಡ ಗೋತ್ರಗಳು ಕಾಶ್ಮೀರದಲ್ಲಿ ನೆಲೆಸಿದ ಬಗ್ಗೆ ಮತ್ತು ಅವರ ಶಾರೀರಿಕ ಸ್ಥಿತಿ, ಆಚಾರ ವಿಚಾರಗಳು ಮತ್ತು ಪಾರಂಪರಿಕ ವಿಷಯಗಳು ಸರಿಹೋಲುವ ಬಗ್ಗೆ ಲೇಖಕರು ವಿವರಿಸಿರುವರು. ಅವರು ಕಾಶ್ಮೀರಿ ಭಾಷೆಯ ಶಬ್ದಗಳ ಪಟ್ಟಿಯನ್ನು ನೀಡಿ ಅವುಗಳು ಹೀಬ್ರೂ ಭಾಷೆಯೊಂದಿಗೆ ಇರುವ ಸಾಮ್ಯತೆಗಳನ್ನು ವಿವರಿಸಿರುವರು. ಹಿಂದಿನ ವಿದ್ವಾಂಸರು ಯೂಝ್ ಆಸಫ್ ಬಗ್ಗೆ ಉಲ್ಲೇಖಗಳನ್ನು ನೀಡಿದ ಗ್ರಂಥಗಳಿಂದಲೇ ಈ ಪುಸ್ತಕದ ಲೇಖಕರು ಉದ್ಧರಣೆಗಳನ್ನು ನೀಡಿರುವರು.

## 10. DID JESUS REDEEM MANKIND?

*Author : **HAZRAT MIRZA BASHIRUDDIN MAHMUD AHMAD,** Published in Qadian, India, 1973*

### ಡಿಡ್ ಜೀಸಸ್ ರಿಡೀಮ್ ಮ್ಯಾನ್‌ಕೈಂಡ್? (ಯೇಸು ಕ್ರಿಸ್ತರು ಮಾನವರನ್ನು ವಿಮೋಚಿಸಿದರೇ?)

*ಲೇಖಕ: **ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್‌ಮೂದ್ ಅಹ್ಮದ್, ಖಾದಿಯಾನ್,** 1973*

ಲೇಖಕರು ಪವಿತ್ರ ಖುರ್‌ಆನಿನ ಸೂರಃ ಮರ್‌ಯಮ್ ಎಂಬ ಅಧ್ಯಾಯಕ್ಕೆ ಉರ್ದು ಭಾಷೆಯಲ್ಲಿ ಬರೆದ ವ್ಯಾಖ್ಯಾನದ ಒಂದು ಭಾಗದ ಇಂಗ್ಲಿಷ್ ಭಾಷಾಂತರ ಇದಾಗಿದೆ. ಲೇಖಕರು 1965ರಲ್ಲಿ ಮೃತರಾದರು. ಅವರು ಮೃತರಾಗಿ ಎಂಟು ವರ್ಷಗಳ ನಂತರ ಈ ಗ್ರಂಥ ಪ್ರಕಟವಾಯಿತು. ಕ್ರೈಸ್ತ ಧರ್ಮನಂಬಿಕೆಗಳಾದ ಮೂಲ ಪಾಪ, ಯೇಸು ಕ್ರಿಸ್ತರ ದೈವತ್ವ ಮತ್ತು ತ್ರಿತ್ವ ಸಿದ್ಧಾಂತಗಳನ್ನು ಪವಿತ್ರ ಖುರ್‌ಆನ್ ಮತ್ತು ಬೈಬಲಿನ ಬೆಳಕಿನಲ್ಲಿ ಚರ್ಚಿಸಲಾಗಿದೆ. ಈ ಪುಸ್ತಕ ನಿಶ್ಚಯವಾಗಿಯೂ ಬಲಿಷ್ಠವಾದ ದೇವಶಾಸ್ತ್ರೀಯ ಗ್ರಂಥವಾಗಿದ್ದರೂ ಅದರಲ್ಲಿ ಅನೇಕ ಉಪಕತೆಗಳಿದ್ದು ಓದಲು ಆಸಕ್ತಿ ಉಂಟುಮಾಡುವುದಾಗಿದೆ. ಲೇಖಕರು ಈ ಗ್ರಂಥದ ಕೊನೆಯ ಭಾಗದಲ್ಲಿ ಯೇಸು ಕ್ರಿಸ್ತರು ಭಾರತದ ಕಡೆಗೆ ಪ್ರಯಾಣ ಕೈಗೊಂಡುದರ ಮೂಲ ಉದ್ದೇಶವನ್ನೂ ಅವರು ಶಿಲುಬೆಯಲ್ಲಿ ಮೃತನಾಗುವುದರಿಂದ ಪಾರಾದ ಬಗ್ಗೆಯೂ ಸುವಾರ್ತೆಗಳ ಸಾಕ್ಷ್ಯಾಧಾರಗಳನ್ನು ವಿವರಿಸಿರುವರು.

## 11. THE MYTH OF THE CROSS

*Author : **ALHAJ A. D. AJJOLA,** Published in Lahore, Pakistan, 1975*

### ದಿ ಮಿಥ್ ಆಫ್ ದಿ ಕ್ರಾಸ್. (ಕ್ರಾಸಿನ ರಹಸ್ಯ)

*ಲೇಖಕ : **ಅಲ್‌ಹಾಜ್ ಎ. ಡಿ. ಅಜಿಜೋಲಾ** ಲಾಹೋರು, ಪಾಕಿಸ್ತಾನ, 1975*

ಈ ಪುಸ್ತಕವನ್ನು ಒಬ್ಬ ಅಹ್ಮದಿಯೇತರ ಮುಸ್ಲಿಮ್ ಬರೆದಿದ್ದು ಅದನ್ನು "ಕ್ರೈಸ್ತ ಮತಪ್ರಚಾರಕರಿಂದ ತೀವ್ರ ಪ್ರಚಾರಕ್ಕೆ ಗುರಿಯಾದ ನೈಜೀರಿಯಾದ ಮುಸ್ಲಿಮ್ ಯುವ ಜನರಿಗೆ" ಅರ್ಪಿಸಲಾಗಿದೆ. ಯೇಸು ಕ್ರಿಸ್ತರು ಶಿಲುಬೆಯಿಂದ ಮೃತನಾಗದೆ ಪಾರಾದರೆಂದೂ ಶಿಲುಬೆಯಿಂದ ಇಳಿಸಿದ ನಂತರ ಅವರ ಶಿಷ್ಯರು ಅವರಿಗೆ ಚಿಕಿತ್ಸೆ ನೀಡಿದರೆಂದೂ ಈ ಪುಸ್ತಕದಲ್ಲಿ ಮುಖ್ಯವಾಗಿ ಪ್ರತಿಪಾದಿಸಲಾಗಿದೆ. ಇತಿಯೋಪಿಯಾದಿಂದ ಹಿಂದೂಸ್ಥಾನದ ತನಕ ಚದುರಿ ಹೋಗಿರುವ ಇಸ್ರಾಯೇಲ್ ವಂಶದ ತಪ್ಪಿಸಿಕೊಂಡ ಕುರಿಗಳಿಗೆ ಸಂದೇಶ ತಲಪಿಸಲು ಯೇಸು ಕ್ರಿಸ್ತರು ಹೋದರು. ಪಾರಂಪರಿಕ ವಿಶ್ವಾಸವನ್ನು ಹೊಂದಿರುವ ಮುಸ್ಲಿಮರ ಆಕ್ಷೇಪಗಳಿಗೆ ಗುರಿಯಾಗದಿರಲು ಲೇಖಕರು ಶಬ್ದಗಳನ್ನು ಬಹಳ ಜಾಗರೂಕತೆಯಿಂದ ಬಳಸಿದ್ದಾರೆ.

ದುರದೃಷ್ಟಕರವಾಗಿ, ಈ ಪುಸ್ತಕದಲ್ಲಿ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್‌ರವರ ಗ್ರಂಥ. INTRODUCTION TO THE STUDY OF HOLY QURAN (ಇಂಟ್ರೊಡಕ್ಷನ್ ಟು ದಿ ಸ್ಟಡೀ ಆಫ್ ಹೋಲಿ ಖುರ್‌ಆನ್) ಇದರ 3, 4, 5, 7, ಮತ್ತು 8ನೇ ಅಧ್ಯಾಯಗಳಿಂದ ಕೃತಿಚೌರ್ಯ ನಡೆಸಲಾಗಿದೆ. ಆ ಗ್ರಂಥದಲ್ಲಿ ಮುಖ್ಯವಾಗಿ ಹೊಸ ಒಡಂಬಡಿಕೆಯ ಸಾಕ್ಷ್ಯಗಳ ಅವಿಶ್ವಸನೀಯತೆ ಮತ್ತು ಯೇಸು ಕ್ರಿಸ್ತರ ಆಗಮನದ ಉದ್ದೇಶಗಳನ್ನು ವಿವರಿಸಲಾಗಿದೆ.

## 12. JESUS DIED IN KASHMIR

*Author : **ANDREAS FABER KAISER,** Published in London, 1977*

### ಜೀಸಸ್ ಡೈಡ್ ಇನ್ ಕಾಶ್ಮೀರ್ (ಯೇಸು ಕ್ರಿಸ್ತರು ಕಾಶ್ಮೀರದಲ್ಲಿ ಮಡಿದರು)

*ಲೇಖಕ : **ಆಂಡ್ರಿಯಸ್ ಫೇಬರ್ ಕೈಸರ್, ಲಂಡನ್** 1977*

ಪಾಶ್ಚಿಮಾತ್ಯ ವಿದ್ವಾಂಸರ ಪೈಕಿ ಈ ವಿಷಯದ ಬಗ್ಗೆ ಅತ್ಯಂತ ಹೆಚ್ಚು ವಿಸ್ತಾರವಾಗಿ ಬರೆದ ಪುಸ್ತಕ ಇದಾಗಿದೆ. ಲೇಖಕರು ಸ್ವತಃ ಮಾಹಿತಿಗಳನ್ನು ಸಂಗ್ರಹಿಸಲು ಕಾಶ್ಮೀರಕ್ಕೆ ಹೋಗಿದ್ದರು. ಅವರು ವಿವಿಧ ಧರ್ಮಗಳನ್ನು ಅಧ್ಯಯನ ಮಾಡಿದ ವಿದ್ವಾಂಸರೂ ನುರಿತ ಪತ್ರಕರ್ತರೂ ಆಗಿರುವರು. ಈ ಪುಸ್ತಕವು ಮೂಲತಃ ಸ್ಪಾನಿಶ್ ಭಾಷೆಯಲ್ಲಿ 1976ರಲ್ಲಿ ಪ್ರಕಟಿಸಲ್ಪಟ್ಟಿತ್ತು. ಅದರ ಇಂಗ್ಲಿಷ್ ಭಾಷಾಂತರ ಈ ಗ್ರಂಥವಾಗಿದೆ. ಈ ಪುಸ್ತಕ ಅನಂತರ ಅನೇಕ ಭಾಷೆಗಳಿಗೆ ಭಾಷಾಂತರಿಸಲ್ಪಟ್ಟಿದೆ.

ಈ ಪುಸ್ತಕದಲ್ಲಿ ಹೀಗೆ ಬರೆಯಲಾಗಿದೆ: ತಮ್ಮನ್ನು 'ಬನೀ ಇಸ್ರಾಯೇಲ್' ಎಂದು ಕರೆದುಕೊಳ್ಳುವ ಒಂದು ಗುಂಪಿನ ಜನರು ಈಗಲೂ ಕಾಶ್ಮೀರದಲ್ಲಿದ್ದಾರೆ.

ಯೇಸು ಕ್ರಿಸ್ತರು ಭಾರತಾಭಿಮುಖವಾಗಿ ಪ್ರಯಾಣಿಸಿದುದು, ಅವರು ಕಾಶ್ಮೀರದಲ್ಲಿ ಮೃತರಾದುದು ಮತ್ತು ಅವರ ಗೋರಿಯ ಬಗ್ಗೆ ವಿವರಿಸಲಾಗಿದೆ. ಅನೇಕ ಫೋಟೋಗಳು ಈ ಗ್ರಂಥದಲ್ಲಿದೆ. ಹಝ್ರತ್ ಯೂಝ್ ಆಸಫ್, ನಬಿ ಸಾಹೇಬ್, ಶಹಝಾದ ನಬಿ ಅಥವಾ ಹಝ್ರತ್ ಈಸಾ ಸಾಹೇಬರ ಗೋರಿ ಎಂದು ಕರೆಯಲ್ಪಡುವ ಗೋರಿಯ ಬಗ್ಗೆ ವಿವರಿಸಲಾಗಿದೆ.

ಕಾಶ್ಮೀರದಲ್ಲಿ ಯೇಸು ಕ್ರಿಸ್ತರ ಸಂತಾನ ಪರಂಪರೆಗೆ ಸೇರಿದ ಒಂದು ಕುಟುಂಬವನ್ನು ಭೇಟಿ ಮಾಡಿದ ಬಗ್ಗೆ ಸಹ ಲೇಖಕರು ಬರೆದಿದ್ದಾರೆ. ಅವರಲ್ಲಿ ಒಬ್ಬರ ಕೈಯಲ್ಲಿರುವ ವಂಶಾವಳಿಯಲ್ಲಿ ಅವರ ಮೂಲ ಪುರುಷ ಯೇಸು ಕ್ರಿಸ್ತರೆಂದು ಬರೆಯಲಾಗಿದೆ.

ಫೇಬರ್ ಕೈಸರ್ ತನ್ನ ಗ್ರಂಥದಲ್ಲಿ ಅಹ್ಮದಿಯಾ ನಿಲುವನ್ನು ತನ್ನ ಸಂಶೋಧನೆಗಳು ಸಾಬೀತುಗೊಳಿಸುತ್ತವೆ ಎಂದು ಹೇಳಿದ್ದಾರೆ. ತನ್ನ ಗ್ರಂಥ ಅಹ್ಮದಿಯಾ ಪ್ರಚಾರ ಸಾಹಿತ್ಯಕ್ಕೆ ಸೇರಿಲ್ಲವೆಂದೂ ಅದು ಯಾವುದೇ ಧಾರ್ಮಿಕ ಪಂಗಡದ ಮೂಲಕ ಸೃಷ್ಟಿಸಲ್ಪಟ್ಟಿಲ್ಲವೆಂದೂ ಅವರು ಪ್ರಸ್ತಾಪಿಸಿದ್ದಾರೆ.

1978ರಲ್ಲಿ ಲಂಡನ್‌ನಲ್ಲಿ ಅಹ್ಮದಿಯಾ ಜಮಾಅತ್ ಆಯೋಜಿಸಿದ "ಡೆಲಿವರೆನ್ಸ್ ಫ್ರಮ್ ದಿ ಕ್ರಾಸ್" ಎಂಬ ವಿಚಾರ ಸಂಕಿರಣದಲ್ಲಿ ಫೇಬರ್ ಕೈಸರ್ ಒಬ್ಬ ಭಾಷಣಕಾರನಾಗಿದ್ದರು.

### 13. TRUTH ABOUT THE CRUCIFIXION

*Published by the London Mosque, London, 1978*

## ಟ್ರುತ್ ಎಬೌಟ್ ದಿ ಕ್ರುಸಿಫಿಕ್ಷನ್ (ಶಿಲುಬೆಯ ಸಂಭವದ ಬಗ್ಗೆ ಸತ್ಯ)

*ಲಂಡನ್ ಮೋಸ್ಕ್, ಲಂಡನ್ 1978*

1978ರಲ್ಲಿ ಲಂಡನ್‌ನಲ್ಲಿ ನಡೆಸಲಾದ "ಇಂಟರ್‌ನೇಶನಲ್ ಕಾನ್‌ಫರೆನ್ಸ್ ಓನ್ ದಿ ಡೆಲಿವರೆನ್ಸ್ ಓಫ್ ಜೀಸಸ್ ಫ್ರಮ್ ದಿ ಕ್ರಾಸ್" ಎಂಬ ವಿಚಾರಸಂಕಿರಣದಲ್ಲಿ ವಿದ್ವಾಂಸರು ಮಾಡಿದ ಭಾಷಣಗಳನ್ನು ಈ ಗ್ರಂಥ ಹೊಂದಿದೆ. ಅಹ್ಮದಿಯಾ ಮುಸ್ಲಿಮ್ ಸಂಘಟನೆ ಈ ವಿಚಾರ ಸಂಕಿರಣವನ್ನು ಏರ್ಪಡಿಸಿತ್ತು. ಭಾಷಣದ ವಿಷಯ ಮತ್ತು ಭಾಷಣಕಾರರ ಹೆಸರು ಈ ಕೆಳಗಿನಂತಿದೆ:

1. **ಯೇಸು ಕ್ರಿಸ್ತರು ದೇವನ ಪ್ರವಾದಿ** – *ಸರ್ ಮುಹಮ್ಮದ್ ಝಫ್ರುಲ್ಲಾ ಖಾನ್*
2. **ಇಸ್ರಾಯೇಲ್‌ನ ತಪ್ಪಿಸಿಕೊಂಡ ಗೋತ್ರಗಳು** – *ಎಂ. ಎಂ. ಅಹ್ಮದ್*
3. **ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲ** – *ಆಂಡ್ರಿಯಸ್ ಫೇಬರ್ ಕೈಸರ್*
4. **ಯೇಸು ಕ್ರಿಸ್ತರು ಶಿಲುಬೆಯ ಮರಣದಿಂದ ಪಾರಾದ ಬಗ್ಗೆ ಬೈಬಲಿನ ಸಾಕ್ಷ್ಯಾಧಾರಗಳು** – *ಬಶೀರ್ ಅಹ್ಮದ್ ರಫೀಕ್*
5. **ಯೂಝ್ ಆಸಫರ ಗೋರಿ** – *ಫಿದಾ ಹಸನೈನ್*
6. **ಯೇಸು ಕ್ರಿಸ್ತರು ಶಿಲುಬೆಯ ಮರಣದಿಂದ ರಕ್ಷಿಸಲ್ಪಟ್ಟ ಬಗ್ಗೆ ಪವಿತ್ರ ಖುರ್‌ಆನಿನ ಮತ್ತು ಇತರ ಇಸ್ಲಾಮೀ ಸಾಕ್ಷ್ಯಾಧಾರಗಳು** – *ಅಬ್ದುಸ್ಸಲಾಮ್ ಮೆಡ್‌ಸೆನ್.*
7. **ಯೇಸು ಕ್ರಿಸ್ತರ ಜೀವಿತದ ಬಗ್ಗೆ ಕೆಲವು ಅಭಿಪ್ರಾಯಗಳು** – *ಆರ್. ಸ್ಕೋಲ್‌ಫೀಲ್ಡ್*
8. **ಯೇಸು ಕ್ರಿಸ್ತರು ಕಾಶ್ಮೀರ ಮತ್ತು ಭಾರತದ ಇತರ ಭಾಗಗಳಿಗೆ ಪ್ರಯಾಣ ಮಾಡಿದುದು.** – *ಶೇಖ್ ಅಬ್ದುಲ್ ಖಾದಿರ್*
9. **ಯೇಸು ಕ್ರಿಸ್ತರ ಶವವಸ್ತ್ರ** – *ಕುರ್ಟ್ ಬರ್ನಾ*
10. **ಪಾಲೆಸ್ತೀನ್ ಹೊರಗೆ ಯೇಸು ಕ್ರಿಸ್ತರ ಚಟುವಟಿಕೆಗಳ ಬಗ್ಗೆ ಹೊಸ ಅಭಿಪ್ರಾಯಗಳು** – *ಎಲ್. ಫಿಲಿಪ್*

ಈ ಪುಸ್ತಕದಲ್ಲಿ ಅಹ್ಮದಿಯಾ ಜಮಾಅತಿನ ತೃತೀಯ ಖಲೀಫರಾಗಿದ್ದ ಹಝ್‌ರತ್ ಮಿರ್ಝಾ ನಾಸಿರ್ ಅಹ್ಮದ್‌ರವರ ಭಾಷಣ ಸಹ ಸೇರಿಸಲ್ಪಟ್ಟಿದೆ.

ಇಷ್ಟರವರೆಗೆ ಈ ವಿಷಯಕ್ಕೆ ಸಂಬಂಧಿಸಿ ನಡೆಸಲಾದ ಸಂಶೋಧನೆಗಳ ಸಮಗ್ರ ಸಂಕ್ಷಿಪ್ತ ವಿವರಣೆ ಈ ಗ್ರಂಥದಲ್ಲಿದೆ.

### 14. DELIVERANCE FROM THE CROSS

*Author: **MUHAMMAD ZAFRULLA KHAN**, London, 1978*

## ಡೆಲಿವೆರನ್ಸ್ ಫ್ರಮ್ ದಿ ಕ್ರಾಸ್ (ಶಿಲುಬೆಯಿಂದ ಬಿಡುಗಡೆ)

*ಲೇಖಕ : **ಮುಹಮ್ಮದ್ ಝಫ್ರುಲ್ಲಾ ಖಾನ್**, ಲಂಡನ್, 1978*

ಈ ಪುಸ್ತಕವನ್ನು ಮೇಲೆ ವಿವರಿಸಲಾದ ವಿಚಾರ ಸಂಕಿರಣ ಆಯೋಜಿಸಿದ ಕಾಲದಲ್ಲಿಯೇ ಪ್ರಕಟಿಸಲಾಗಿತ್ತು. ಯೇಸು ಕ್ರಿಸ್ತರ ಜನನ, ಅವರ ಪ್ರವಾದಿತ್ವ, ಶಿಲುಬೆಯ ಸಂಭವದ ನಂತರ ಅವರ ಜೀವಿತ ಇವುಗಳ ಬಗ್ಗೆ ಅಹ್ಮದಿಯಾ – ಇಸ್ಲಾಮಿಕ ನಿಲುವನ್ನು ಈ ಗ್ರಂಥದಲ್ಲಿ ವಿವರಿಸಲಾಗಿದೆ. ಈ ಗ್ರಂಥದ ಎಂಟನೆಯ ಅಧ್ಯಾಯದಲ್ಲಿ ಯೇಸು ಕ್ರಿಸ್ತರು ಕಾಶ್ಮೀರಕ್ಕೆ ಪ್ರಯಾಣಿಸಿದ ಬಗ್ಗೆ ನೀಡಿದ ವಿವರಣೆ ಬಹಳ ಆಸಕ್ತಿದಾಯಕವಾಗಿದೆ. ಆಕ್ಸ್‌ಫರ್ಡ್ ಯುನಿವರ್ಸಿಟಿಯ ವಿದ್ವಾಂಸ ಓ. ಎಮ್. ಬರ್ಕ್ "AMONG THE DERVISHES" (ದರ್ವೇಶರ ಮಧ್ಯೆ) ಎಂಬ ಗ್ರಂಥ ರಚಿಸಿರುವರು. ಅದರಿಂದ ಉಲ್ಲೇಖಗಳನ್ನು ಲೇಖಕರು ನೀಡಿರುವರು. ಅಫ್‌ಘಾನಿಸ್ಥಾನದ ಹೀರತ್ ಎಂಬಲ್ಲಿ ಯೇಸು ಕ್ರಿಸ್ತರ ಅನುಯಾಯಿಗಳ ವಂಶಜರು ಎಂದು ಹೇಳಿಕೊಳ್ಳುವ ಒಂದು ಗುಂಪುಇದೆ ಎಂದೂ ಯೇಸು ಕ್ರಿಸ್ತರು ಶಿಲುಬೆಯ ಸಂಭವದ ನಂತರ ಅಲ್ಲಿಗೆ ಬಂದು ತಮ್ಮ ಪೂರ್ವಜರಿಗೆ ಉಪದೇಶಿದರೆಂದು ಅವರು ಹೇಳುತ್ತಾರೆಂದೂ ಆ ಪುಸ್ತಕದಲ್ಲಿ ಬರೆದಿದೆ. ಅವರು ಕಾಶ್ಮೀರದಲ್ಲಿ ಯೂಝ್ ಆಸಫ್ ಎಂದು ಪ್ರಸಿದ್ಧರಾದರು.

ಈ ಜನರ ಬಳಿಯಲ್ಲಿ ಯೂಝ್ ಆಸಫರಿಗೆ ಸಂಬಂಧಿಸಿದ ಘಟನೆಗಳನ್ನು ವಿವರಿಸುವ ಒಂದು ಪುಸ್ತಕ ಸಹ ಇದೆ. ಯೂಝ್ ಆಸಫರ ಮೂಲ ಅನುಯಾಯಿಗಳ ವಂಶ ಪರಂಪರೆಗೆ ಈ ಜನರು ಸೇರಿದ್ದರು ಎಂದು ತೋರುತ್ತದೆ. ಅವರು ತಮ್ಮ ಕೆಲವು ಕ್ರಿಸ್ತೀಯ ಆಚರಣೆಗಳಿಗೆ ಬದ್ಧರಾಗಿದ್ದರೂ ಅವರು ಇಸ್ಲಾಮ್ ಧರ್ಮವನ್ನು ಸೇರಿದರು.

### 15. JESUS LIVED IN INDIA

*Author: **HOLGER KERSTON**, Germany, 1983*

## ಜೀಸಸ್ ಲಿವ್ಡ್ ಇನ್ ಇಂಡಿಯಾ (ಯೇಸು ಭಾರತದಲ್ಲಿ ಬದುಕಿದ್ದರು)

*ಲೇಖಕ : **ಹೋಲ್‌ಗರ್ ಕೆರ್‌ಸ್ಟನ್**, ಜರ್ಮನಿ 1983*

ಜರ್ಮನ್ ಭಾಷೆಯ ಈ ಪುಸ್ತಕದ ಇಂಗ್ಲಿಷ್ ಭಾಷಾಂತರ 1986ರಲ್ಲಿ ಲಂಡನ್‌ನಲ್ಲಿ ಬಿಡುಗಡೆಗೊಳಿಸಲ್ಪಟ್ಟಿತು. ಈ ಪುಸ್ತಕದ ಲೇಖಕ ಅಧ್ಯಾಪಕ ಮತ್ತು ಪೌರಸ್ತ್ಯ ದೇಶಗಳ ಬಗ್ಗೆ ಆಸಕ್ತಿ ಹೊಂದಿದ ಪ್ರವಾಸಿಯೂ ಆಗಿದ್ದಾರೆ. 1970ರಲ್ಲಿ ಅವರು ಭಾರತಕ್ಕೆ ಭೇಟಿಕೊಟ್ಟು ಯೇಸುಕ್ರಿಸ್ತರು ಭಾರತಕ್ಕೆ ಆಗಮಿಸಿದರು ಎಂಬ ವಿಚಾರದ ಬಗ್ಗೆ ಅಧ್ಯಯನ ನಡೆಸಿದರು. ಯೇಸು ಕ್ರಿಸ್ತರು ಭಾರತದಲ್ಲಿ ಜೀವಿಸಿದ ಬಗ್ಗೆ ಪುರಾತನ ಸಾಹಿತ್ಯವನ್ನು ಸಂಗ್ರಹಿಸಿ ಅದನ್ನು ಸಂಕ್ಷಿಪ್ತವಾಗಿ ದಾಖಲಿಸುವ ವಿಷಯದಲ್ಲಿ ಅವರು ಪ್ರೊಫೆಸರ್ ಫಿದಾ ಹಸನೈನ್‌ರಿಂದ ಸಹಾಯ ಪಡೆದರು. ಇಸ್ರಾಯೇಲ್ ವಂಶದ ತಪ್ಪಿಸಿಕೊಂಡ ಗೋತ್ರಗಳು ಕಾಶ್ಮೀರ ಮತ್ತು ಭಾರತದ ಇತರೆಡೆಗಳಲ್ಲಿ ವಾಸಿಸಿದ ಬಗ್ಗೆ ಸಹ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಲಾಯಿತು.

ನಿಕೋಲಸ್ ನೋಟೋವಿಚ್ ಬರೆದ "The Unknown Life of Jesus" (ಯೇಸು ಕ್ರಿಸ್ತರ ಅಜ್ಞಾತ ಜೀವನ) ಎಂಬ ಪುಸ್ತಕದಲ್ಲಿ ಯೇಸು ಕ್ರಿಸ್ತರು ಶಿಲುಬೆಯ ಸಂಭವಕ್ಕೆ ಮೊದಲು ಭಾರತಕ್ಕೆ ಭೇಟಿಕೊಟ್ಟಿದ್ದರು ಎಂದು ಪ್ರತಿಪಾದಿಸಲಾಗಿದೆ. ಆ ಪುಸ್ತಕದಲ್ಲಿ ಬರೆಯಲಾದ ವಿವರಣೆ ಸಂಶಯಕರವಾಗಿದ್ದರೂ ಆ ಪುಸ್ತಕವನ್ನು ಇತರ ವಿದ್ವಾಂಸರ ಹಾಗೆ ಈ ಪುಸ್ತಕದ ಲೇಖಕರು ಸಹ ಅವಲಂಬಿಸಿದ್ದರು.

ಯೇಸು ಕ್ರಿಸ್ತರು ಭಾರತದ ಕಡೆಗೆ ಪ್ರಯಾಣಿಸಿದ ಬಗ್ಗೆ ಆರನೆಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಈ ಪುಸ್ತಕದಲ್ಲಿ ಟರ್ಕಿಯ ಕುರ್ದಿಶ್

ಗೋತ್ರಗಳ ಪಾರಂಪರಿಕ ವಿಶ್ವಾಸದ ಬಗ್ಗೆ ಬರೆಯಲಾಗಿದೆ. ಲಕ್ಸೆಂಬರ್ಗ್‌ನ ಒಬ್ಬ ನರವಂಶ ಶಾಸ್ತ್ರಜ್ಞನು ಟರ್ಕಿಯ ಕುರ್ದಿಶ್ ಗೋತ್ರಗಳ ಮಧ್ಯೆ ಅನೇಕ ವರ್ಷ ಜೀವಿಸಿದ್ದನು. ಯೇಸುಕ್ರಿಸ್ತರು ಟರ್ಕಿ ದೇಶದ ಪೂರ್ವ ಭಾಗದಲ್ಲಿ ವಾಸಿಸಿದ್ದರೆಂಬುದರ ಬಗ್ಗೆ ಬಾಯಿಯಿಂದ ಬಾಯಿಗೆ ಜಾರಿಗೊಂಡ ಸಾಂಪ್ರದಾಯಿಕ ವಿಶ್ವಾಸ ಇದೆ ಎಂದು ಆತನು ಬರೆದಿದ್ದನು.

ರೌಝುತ್ತುಸ್ಸಫಾ ಮೊದಲಾದ ಪರ್ಶಿಯನ್ ಚಾರಿತ್ರಿಕ ಗ್ರಂಥಗಳಲ್ಲಿ ಯೇಸು ಕ್ರಿಸ್ತರು ಟರ್ಕಿ ದೇಶದಲ್ಲಿ ತಂಗಿದ ಬಗ್ಗೆ ಉಲ್ಲೇಖಗಳಿವೆ ಎಂದು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್(ಅ) "ಮಸೀಹ್ ಹಿಂದೂಸ್ಥಾನ್ ಮೇ" ಎಂಬ ಗ್ರಂಥದಲ್ಲಿ ಬರೆದಿದ್ದಾರೆಂಬುದು ಗಮನಾರ್ಹವಾಗಿದೆ. 1900ರ ಆರಂಭದ ದಶಕಗಳಲ್ಲಿ ಕ್ರಿಸ್ತ ಶಕ ಪ್ರಥಮ ಶತಮಾನದ ಸಿರಿಯನ್ ಭಾಷೆಯ "ಓಡ್ಸ್ ಆಫ್ ಸೊಲೋಮನ್" ಎಂಬ ದಾಖಲೆಗಳು ಕಂಡುಹಿಡಿಯಲ್ಪಟ್ಟವು. ಅದು ಇಂದು ಟರ್ಕಿ ದೇಶ ಎಂದು ಕರೆಯಲ್ಪಡುವ ಪ್ರದೇಶದಲ್ಲಿ ವಾಸಿಸುತ್ತಿದ್ದ ಯೇಸುಕ್ರಿಸ್ತರ ಅನುಯಾಯಿಗಳಿಗೆ ಸೇರಿದ್ದವು. ಈ ದಾಖಲೆಗಳಿಂದ ತಿಳಿಯುವುದೇನೆಂದರೆ, ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗದೆ ರಕ್ಷಿಸಲ್ಪಟ್ಟರು ಮತ್ತು ಹಿಂಸಾಚಾರಕ್ಕೆ ಹೆದರಿ ದೇಶಬಿಟ್ಟು ವಲಸೆ ಹೋದರು.

ಹೋಲ್ಗರ್ ಕೆರ್‌ಸ್ಟನ್, ಯೇಸುಕ್ರಿಸ್ತರು ಬೌದ್ಧ ಧರ್ಮದೊಂದಿಗೆ ಹೊಂದಿದ ಸಂಬಂಧದ ಬಗ್ಗೆ ಮತ್ತು ಪೌರ್ವಾತ್ಯ ದಿವ್ಯ ರಹಸ್ಯಗಳ ಬಗ್ಗೆ ಪುಸ್ತಕಗಳನ್ನು ಬರೆದಿದ್ದಾರೆ. ನವಯುಗ ಚಳುವಳಿಯ ಜನರಿಗೆ ಅವು ಹೆಚ್ಚು ಪ್ರಭಾವ ಬೀರುತ್ತವೆ.

## 16. LOST CITIES OF CHINA, CENTRAL ASIA, AND INDIA

*Author : **DAVID CHILDRESS**, Illinois, USA, 1985*

### ಲೋಸ್ಟ್ ಸಿಟೀಸ್ ಆಫ್ ಚೈನ, ಸೆಂಟ್ರಲ್ ಏಶಿಯಾ ಆ್ಯಂಡ್ ಇಂಡಿಯಾ

### (ಚೈನ, ಮಧ್ಯ ಏಶಿಯಾ ಮತ್ತು ಭಾರತದ ಅಳಿದ ನಗರಗಳು)

*ಲೇಖಕ : ಡೇವಿಡ್ ಚೈಲ್‌ಡ್ರೆಸ್, ಇಲ್ಲಿನೋಯಿಸ್, ಯು.ಎಸ್.ಎ.*

ಈ ಗ್ರಂಥದ 15ನೇ ಅಧ್ಯಾಯದಲ್ಲಿ ಲೇಖಕ ಕಾಶ್ಮೀರ ಮತ್ತು ಟಿಬೇಟಿನ ಪಶ್ಚಿಮ ಭಾಗದಲ್ಲಿ ಸಂಚಾರ ಮಾಡಿದ ಬಗ್ಗೆ ವಿವರಿಸುತ್ತಾರೆ. ಈ ಅಧ್ಯಾಯ ಪವಿತ್ರ ಖುರ್‌ಆನಿನ ಈ ಕೆಳಗಿನ ವಚನದೊಂದಿಗೆ ಪ್ರಾರಂಭಿಸಲ್ಪಟ್ಟಿದೆ.

"ಅವರು ಅವರನ್ನು (ಈಸಾಮಸೀಹರನ್ನು) ವಧಿಸಲಿಲ್ಲ; ಶಿಲುಬೆಗೇರಿಸಿ ಕೊಲ್ಲಲೂ ಇಲ್ಲ." (4:158)

ಬೈಬಲಿನ ಹೊಸ ಒಡಂಬಡಿಕೆಯಲ್ಲಿ ಶಿಲುಬೆಗೇರಿಸಿದ ಬಗ್ಗೆ ನೀಡಿದ ವಿವರಣೆಯನ್ನು ವಿಮರ್ಶಿಸಿದ ನಂತರ ಲೇಖಕ ಹೀಗೆ ಹೇಳುತ್ತಾರೆ: ಯೇಸು ಕ್ರಿಸ್ತರು ಮೃತರಾಗದೆ ಶಿಲುಬೆಯ ಮರಣದಿಂದ ಪಾರಾದ ಬಗ್ಗೆ ಸಂಭಾವ್ಯತೆ ಇದೆ.

ಅನಂತರ ಲೇಖಕರು ಓದುಗರನ್ನು ಯೇಸು ಕ್ರಿಸ್ತರ ಗೋರಿಯ ಕಡೆಗೆ ಕೊಂಡೊಯ್ಯುತ್ತಾರೆ. ಅವರು ಕಾಶ್ಮೀರಿಗಳ ಪಾರಂಪರಿಕ ವಿಶ್ವಾಸವನ್ನು ಉಲ್ಲೇಖಿಸಿ ಹೇಳುತ್ತಾರೆ: ಯೂಝ್ ಆಸಫ್ ಎಂದು ಕರೆಯಲ್ಪಟ್ಟ ಯೇಸು ಕ್ರಿಸ್ತರು ಎರಡು ಸಾವಿರ ವರ್ಷಗಳ ಹಿಂದೆ ಕಾಶ್ಮೀರದಲ್ಲಿ ಜೀವಿಸಿದ್ದರು.

ಯೇಸುಕ್ರಿಸ್ತರ ಗೋರಿಯನ್ನು ಸಂದರ್ಶಿಸಿ ಅದರ ಒಳಭಾಗದ ವರ್ಣನೆ ನೀಡಿದ ನಂತರ ಲೇಖಕರು ಹೀಗೆ ಕೊನೆಗೆ ಬರೆದಿದ್ದಾರೆ:

"ಈ ಅಸಾಧಾರಣ ಅನುಭವದ ಬಗ್ಗೆ ನಾನು ಯೋಚಿಸಿದೆ. ಇದು ನಿಜವಾಗಿಯೂ ಯೇಸುಕ್ರಿಸ್ತರ ಗೋರಿಯೆಂದು ನನಗೆ ತಿಳಿದಿಲ್ಲ. ಹೊಸ ಸಾಕ್ಷ್ಯ ದೊರಕುವ ತನಕ ಇದು ಎಂದೂ ಸ್ಥಾಪಿತವಾಗಲಾರದು.. ಪ್ರಪಂಚದ ಮಹಾನ್ ಉಪದೇಶಕರಲ್ಲೊಬ್ಬನೂ ಪ್ರವಾಸಿಗಳಲ್ಲೊಬ್ಬನೂ ಆಗಿರುವ ಮಹಾನುಭಾವರನ್ನು ಹಿಂಬಾಲಿಸಿ ಪ್ರಯಾಣ ಮಾಡಲು ಸಾಧ್ಯವಾದುದಕ್ಕೆ ನಾನು ಕೃತಜ್ಞನಾಗಿದ್ದೇನೆ. ಯೇಸು ಕ್ರಿಸ್ತರು ಪವಿತ್ರ ಖುರ್‌ಆನ್ ಮತ್ತು ಇಸ್ಲಾಮೀ ವಿದ್ವಾಂಸರ ಪ್ರಕಾರ "ಮಹಾ ಪ್ರವಾಸಿಯೂ" "ಪ್ರವಾಸಿಗಳ ಮುಖ್ಯಸ್ಥನೂ" ಆಗಿದ್ದರು.

## 17. FIFTH GOSPEL

*Author : **FIDA HASSANAIN AND DAHAN LEVI**, Srinagar, Kashmir, 1988*

### ಫಿಫ್ತ್ ಗೋಸ್ಪೆಲ್ (ಐದನೆಯ ಸುವಾರ್ತೆ)

*ಲೇಖಕರು : ಫಿದಾ ಹಸನೈನ್ ಮತ್ತು ದಹಾನ್ ಲೆವಿ, ಶ್ರೀನಗರ, ಕಾಶ್ಮೀರ 1988*

ಯೇಸು ಕ್ರಿಸ್ತರು ಭಾರತಕ್ಕೆ ಆಗಮಿಸಿದ ಬಗ್ಗೆ ಅಧ್ಯಯನ ನಡೆಸಿದವರಲ್ಲಿ ಪ್ರೊಫೆಸರ್ ಫಿದಾ ಹಸನೈನ್ ಪ್ರಮುಖರಾಗಿದ್ದಾರೆ. ಅವರು ಕಾಶ್ಮೀರ್ ಸ್ಟೇಟ್ ಆರ್ಕಿವ್ಸ್‌ನ ಡೈರೆಕ್ಟರ್ ಆಗಿದ್ದರು. ಕಾಶ್ಮೀರದ ಆರ್ಕಿಯೋಲೋಜಿಕಲ್ ರಿಸರ್ಚ್ ಮತ್ತು ಮ್ಯೂಸಿಯಮ್ ಇದರ ಡೈರೆಕ್ಟರ್ ಸಹ ಅವರು ಆಗಿದ್ದರು. (ಪ್ರಾಚೀನ ಪರಿಶೋಧನೆ ಮತ್ತು ಮ್ಯೂಸಿಯಂ ನಿರ್ದೇಶಕ) ಅವರು 1983ರಲ್ಲಿ ನಿವೃತ್ತಿ ಹೊಂದಿದರು.

ಯೂಝ್ ಆಸಫ್ ಗೋರಿಯ ಇಂದಿನ ಕಾಲದ ಮೇಲ್ವಿಚಾರಕರು ಅನುಮತಿಸುವಷ್ಟು ಸಂಶೋಧನೆಗಳನ್ನು ಪ್ರೊಫೆಸರ್ ಫಿದಾ ಹಸನೈನ್ ಮಾಡಿದ್ದಾರೆ. ಅವರು ಲಂಡನ್ ವಿಚಾರ ಸಂಕಿರಣಕ್ಕೆ 1978ರಲ್ಲಿ ಕಳುಹಿಸಿಕೊಟ್ಟ ಭಾಷಣವನ್ನು ವಿಚಾರ ಸಂಕಿರಣದ ವರದಿಯಲ್ಲಿ ಸೇರಿಸಲಾಗಿದೆ. ಅದರ ಶೀರ್ಷಿಕೆ "ಯೂಝ್ ಆಸಫರ ಗೋರಿ" ಎಂದಾಗಿದೆ.

ಪ್ರೊಫೆಸರ್ ತನ್ನ ಪುಸ್ತಕವಾದ ಫಿಫ್ತ್ ಗೋಸ್ಪಲನ್ನು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರಿಗೂ ನಿಕೋಲಸ್ ನೋಟೋವಿಚ್‌ಗೂ ಭವಿಷ್ಯ ಪುರಾಣದ ಲೇಖಕ ಪಂಡಿತ ಸೂತ್ತರಿಗೂ ಅರ್ಪಿಸಿದ್ದಾರೆ. "ಯೇಸುಕ್ರಿಸ್ತರ ರಹಸ್ಯ ಜೀವಿತದ ಬಗ್ಗೆ ಹೊಸ ಸಂಶೋಧನೆಯ ಬಾಗಿಲನ್ನು ತೆರೆದರು" ಎಂದು ಈ ಮೂವರ ಬಗ್ಗೆ ಅವರು ಅಭಿಪ್ರಾಯ ಸೂಚಿಸಿದ್ದಾರೆ..

ಈ ಗ್ರಂಥದ ಉದ್ದೇಶ ಪಶ್ಚಿಮದವರಿಗೂ ಪೂರ್ವದವರಿಗೂ ಯೇಸು ಕ್ರಿಸ್ತರ ಭಾರತದಲ್ಲಿ ಜೀವಿತದ ಬಗ್ಗೆ ಮೂಲ ಸಾಕ್ಷ್ಯಾಧಾರಗಳನ್ನು ಒದಗಿಸುವುದಾಗಿದೆ ಎಂದು ಲೇಖಕರು ಹೇಳಿದ್ದಾರೆ.

ಯೇಸು ಕ್ರಿಸ್ತರು ಶಿಲುಬೆಯಿಂದ ಜೀವಂತವಾಗಿ ಪಾರಾಗಿ ಕಾಶ್ಮೀರಕ್ಕೆ ಬಂದು ಇಸ್ರಾಯೇಲ್ ಜನಾಂಗದ ಜನರನ್ನು ಕಂಡ ಬಗ್ಗೆ, ಪುರಾತನ ಸಾಹಿತ್ಯಗಳು ಸಾಕ್ಷ್ಯ ನೀಡುವ ಬಗ್ಗೆ ಲೇಖಕರು ವಿವರಿಸಿದ್ದಾರೆ.

ಪ್ರೊಫೆಸರ್ ಹಸನೈನ್ "ಎ ಸರ್ಚ್ ಫೋರ್ ದಿ ಹಿಸ್ಟೋರಿಕಲ್ ಜೀಸಸ್" ಎಂಬ ಇನ್ನೊಂದು ಪುಸ್ತಕವನ್ನೂ ಬರೆದಿದ್ದಾರೆ. ಈ ಪುಸ್ತಕದಲ್ಲಿ ಗೋರಿಯ ಬಗ್ಗೆ ಮತ್ತು ಚಾರಿತ್ರಿಕ ದಾಖಲೆಗಳ ಬಗ್ಗೆ ಅವರು ನಡೆಸಿದ

ಸಂಶೋಧನೆಯನ್ನು ವಿಶದವಾಗಿ ವಿವರಿಸಲಾಗಿದೆ.

## 18. JESUS IN INDIA

*Author :* ***JAMES DEARDORFF**, San Fransisco, 1994*

### ಜೀಸಸ್ ಇನ್ ಇಂಡಿಯಾ (ಯೇಸು ಭಾರತದಲ್ಲಿ)

*ಲೇಖಕ : **ಜೇಮ್ಸ್ ಡೀಯರ್‌ಡೋರ್ಫ್**, ಸಾನ್ ಫ್ರಾನ್ಸಿಸ್ಕೋ, 1994*

ಈ ಪುಸ್ತಕ ನಾಲ್ಕು ಭಾಗಗಳಾಗಿ ವಿಂಗಡಿಸಲ್ಪಟ್ಟಿದೆ:

1. ಯೇಸು ಕ್ರಿಸ್ತರು ಮತ್ತು ಪುನರ್ಜನ್ಮ 2. ಯೇಸು ಕ್ರಿಸ್ತರ ಭಾರತದ ಜೀವಿತ 3. ಯೇಸು ಕ್ರಿಸ್ತರು ಶಿಲುಬೆಯಲ್ಲಿ ಮೃತನಾಗದೆ ರಕ್ಷಿಸಲ್ಪಟ್ಟದ್ದು 4. ಶಿಲುಬೆಯ ಸಂಭವದ ನಂತರ ಪ್ರಯಾಣ.

ಡಿಯರ್‌ಡೋರ್ಫ್ ಪ್ರಕಾರ ಯೇಸು ಕ್ರಿಸ್ತರು ಪೂರ್ವ ದೇಶಗಳಲ್ಲಿ ಜ್ಞಾನ ಗಳಿಸಿ ಹಿಂದಿರುಗಿದ ನಂತರ ಪುನಃ ಪೂರ್ವ ದೇಶಗಳಿಗೆ ಮರಳಿದರು.

ಯೇಸು ಕ್ರಿಸ್ತರು ತನ್ನ ತಾರುಣ್ಯದ ಕಾಲದಲ್ಲಿ ಭಾರತದಲ್ಲಿ ಪುನರ್ಜನ್ಮದ ಬಗ್ಗೆ ಕಲಿತು ಅದನ್ನು ಜನರಿಗೆ ಉಪದೇಶಿಸಿದರೆಂದು ಹೇಳಿ, ಅದಕ್ಕೆ ಸಾಕ್ಷ್ಯವಾಗಿ ಯೇಸುಕ್ರಿಸ್ತರು ಸ್ನಾನಿಕನಾದ ಯೋಹಾನನು ಹಿಂದೆ ಆಗಮಿಸಿದ ಎಲೀಯನಾಗಿದ್ದಾನೆ ಎಂದು ಹೇಳಿದುದನ್ನು ಲೇಖಕರು ಸೂಚಿಸಿದ್ದಾರೆ.

ಯೇಸು ಕ್ರಿಸ್ತರು ಪುನಶ್ಚೇತನಗೊಳಿಸಲ್ಪಟ್ಟರು ಎಂಬ ವಾದವನ್ನು ಮುಂದಿಟ್ಟ ಡೋಕರ್, ಗ್ರೇವ್ಸ್, ಖ್ವಾಜಾ ನಝೀರ್ ಅಹ್ಮದ್ ಮತ್ತು ಹಝ್ರತ್ ಮಿರ್ಝಾ ಗುಲಾಮ್ ಅಹ್ಮದರ(ಅ) ಅಭಿಪ್ರಾಯಗಳನ್ನು ಲೇಖಕರು ವಿಮರ್ಶೆಗೆ ಗುರಿಪಡಿಸುತ್ತಾರೆ. ಹಿಂದೂ ಪುರಾಣವಾದ ಭವಿಷ್ಯ ಪುರಾಣ, ಬೌದ್ಧ ಧಾರ್ಮಿಕ ಗ್ರಂಥಗಳು, ಗ್ರೀಕ್ ಮತ್ತು ರೋಮನ್ ಕಥೆಗಳನ್ನೂ ಈ ಗ್ರಂಥದಲ್ಲಿ ವಿಮರ್ಶಿಸಲಾಗಿದೆ. (ಲೈಫ್ ಆಫ್ ಅಪೋಲೋನಿಯಸ್ ಆಫ್ ಟ್ಯಾನಾ ಎಂಬ ಕಥೆಯು ಗಮನಾರ್ಹವಾಗಿದೆ). ಯೇಸು ಕ್ರಿಸ್ತರು ಬೇರೆ ಕಡೆ ಧರ್ಮ ಪ್ರಚಾರ ಮಾಡಿದುದು ಮತ್ತು ಅವರು ದೀರ್ಘಾಯುಸ್ಸು ಹೊಂದಿದರ ಬಗ್ಗೆ ಪಶ್ಚಿಮಕ್ಕೂ ಸಮಾಚಾರ ತಲಪಿರಬಹುದು. ಇದಕ್ಕೆ ಸಾಕ್ಷ್ಯಾಧಾರವಾಗಿ ಚರ್ಚ್‌ಗೆ ಸಂಬಂಧಿಸಿದ ಸಾಹಿತ್ಯವನ್ನು ಉಲ್ಲೇಖಿಸುತ್ತಾರೆ. ಕ್ರಿಸ್ತಶಕ ದ್ವಿತೀಯ ಶತಕದಲ್ಲಿ ಜೀವಿಸಿದ್ದ ಬಿಷಪ್ ಐರೀನಿಯಸ್ ಯೇಸು ಕ್ರಿಸ್ತರು ದೀರ್ಘಾಯುಸ್ಸು ಪಡೆದ ಬಗ್ಗೆ ಮತ್ತು ತನ್ನ ಜನರ ಮಧ್ಯೆ ಮತಪ್ರಚಾರ ನಡೆಸಿದ ಬಗ್ಗೆ ಪ್ರಸ್ತಾಪಿಸಿದ್ದಾರೆ.

ಲೇಖಕರು ತನ್ನ ಗ್ರಂಥದ ವಿಷಯವನ್ನು ಸಂಕ್ಷಿಪ್ತವಾಗಿ ಹೀಗೆ ಸೂಚಿಸುತ್ತಾರೆ: ಯೇಸುಕ್ರಿಸ್ತರು ಭಾರತದಲ್ಲಿ ಜೀವಿಸಿ ಮೃತರಾದರೆಂದು ಚಾರಿತ್ರಿಕ ಸಾಕ್ಷ್ಯಗಳಿವೆ.

## 19. A SEARCH FOR HISTORICAL JESUS

*Author :* ***FIDA HASSANAIN**, London, 1995*

### ಎ ಸರ್ಚ್ ಫೋರ್ ಹಿಸ್ಟೋರಿಕಲ್ ಜೀಸಸ್

### (ಚಾರಿತ್ರಿಕ ಯೇಸು ಬಗ್ಗೆ ಅನ್ವೇಷಣೆ)

*ಲೇಖಕ : **ಫಿದಾ ಹಸನೈನ್**, ಲಂಡನ್ 1995*

ಪ್ರೊಫೆಸರ್ ಫಿದಾ ಹಸನೈನ್ ಮೊದಲು ಬರೆದ "ದಿ ಫಿಫ್ತ್ ಗೋಸ್ಪೆಲ್" ಎಂಬ ಗ್ರಂಥದ ಮುಂದಿನ ಭಾಗವಾಗಿ ಈ ಗ್ರಂಥವನ್ನು ರಚಿಸಿದ್ದಾರೆ. ಈ ಪುಸ್ತಕ ಹೆಚ್ಚು ಮಾಹಿತಿಗಳನ್ನು ಒಳಗೊಂಡಿದ್ದು 21 ಅಧ್ಯಾಯಗಳನ್ನು ಹೊಂದಿದೆ. ಉತ್ತರ ಭಾರತದಲ್ಲಿ ಬನೀ ಇಸ್ರಾಯೇಲ್ ಜನಾಂಗ, ಯೇಸು ಕ್ರಿಸ್ತರ ಜನನ, ತಾರುಣ್ಯದಲ್ಲಿ ಭಾರತದ ಕಡೆಗೆ ಪ್ರಯಾಣ, ಶಿಲುಬೆಯ ಸಂಭವ – ಇವುಗಳನ್ನು ವಿವರಿಸಲಾಗಿದೆ. ಟ್ಯೂರಿನ್ ಶವವಸ್ತ್ರ, ಯೇಸು ಕ್ರಿಸ್ತರ ಪುನರುತ್ಥಾನ, ಭಾರತಕ್ಕೆ ಪುನಃ ಪ್ರಯಾಣ ಎಂಬ ವಿಷಯಗಳನ್ನು ವಿವರಿಸಲಾಗಿದೆ. ಗ್ರಂಥದ ಕೊನೆಯ ಭಾಗದಲ್ಲಿ ರೌಝಾಬಾಲ್ ಸಮಾಧಿಯ ಬಗ್ಗೆ ಮತ್ತು ಆ ಗೋರಿಯಲ್ಲಿ ದಫನುಗೊಳಿಸಲ್ಪಟ್ಟ ವ್ಯಕ್ತಿಯ ಚರಿತ್ರೆಯನ್ನು ನೀಡಲಾಗಿದೆ.

ಕಾಶ್ಮೀರದ ಆರ್ಕಿಯೋಲಜಿ (ಪ್ರಾಚೀನ ಪರಿಶೋಧನೆ) ವಿಭಾಗದಲ್ಲಿ ಅಧಿಕಾರಿಯಾಗಿದ್ದ ಪ್ರೊಫೆಸರ್, ಸಮಾಧಿಯ ಬಗ್ಗೆ ಹೆಚ್ಚು ವಿಸ್ತಾರವಾಗಿ ಅಧ್ಯಯನ ನಡೆಸಲು ಸಾಧ್ಯವಾಯಿತೆಂದೂ ಅದರ ದುರಸ್ತಿ ಕೆಲಸದ ಮೇಲ್ವಿಚಾರಣೆ ನಡೆಸಿದುದಾಗಿಯೂ ಬರೆದಿದ್ದಾರೆ.

1975ರಲ್ಲಿ ಸಮಾಧಿ ಕಟ್ಟಡದೊಳಗಿದ್ದ ಮರದ ಒಂದು ಶವಪೆಟ್ಟಿಗೆಯನ್ನು ಪರಿಶೀಲಿಸುತ್ತಿದ್ದಾಗ ಅವರಿಗೆ ಮರದ ಒಂದು ಶಿಲುಬೆ ಮತ್ತು ಪಾದದ ಅಚ್ಚು ಇರುವ ಒಂದು ಶಿಲಾಫಲಕವು ಕಾಣಸಿತು. ಪಾದದ ಅಚ್ಚಿನಲ್ಲಿ ಗಾಯದ ಗುರುತುಗಳಿದ್ದುವು. ಪ್ರೊಫೆಸರ್ ಹೀಗೆ ಹೇಳುತ್ತಾರೆ: "ಯೂಝ್ ಆಸಫ್ ಮತ್ತು ಯೇಸು ಕ್ರಿಸ್ತರಿಗೆ ಒಂದು ವಿಷಯ ಸಮಾನವಾಗಿತ್ತು. ಅವರಿಬ್ಬರ ಪಾದಗಳಲ್ಲಿದ್ದ ಗಾಯದ ಗುರುತುಗಳು ಸಮಾನವಾಗಿದ್ದುವು." ಅನಂತರ ಸಂಶೋಧನೆ ನಡೆಸಿದ ಜರ್ಮನಿಯ ವಿದ್ವಾಂಸರು ಟ್ಯೂರಿನ್ ಶವವಸ್ತ್ರದಲ್ಲಿ ಕಾಣಿಸುವ ಪಾದದ ಗಾಯಗಳ ಗುರುತು ಮತ್ತು ಕಲ್ಲಿನ ಫಲಕದಲ್ಲಿರುವ ಪಾದದ ಅಚ್ಚಿನಲ್ಲಿ ಇರುವ ಗಾಯದ ಗುರುತುಗಳು ಸಮಾನವಾಗಿವೆ ಎಂದು ಕಂಡರು. ಈ ಸಂಶೋಧನೆಗಳಿಂದ ಯೂಝ್ ಆಸಫ್ ಎಂದು ಕರೆಯಲ್ಪಡುವುದು ಯೇಸು ಕ್ರಿಸ್ತರೇ ಎಂದು ಪ್ರೊಫೆಸರ್ ನಿರ್ಧಾರಕ್ಕೆ ಬಂದರು . ಟ್ಯೂರಿನಿನ ಶವವಸ್ತ್ರ ಸಹ ಯೇಸು ಕ್ರಿಸ್ತರದ್ದೇ ಎಂದು ಸಹ ಸಾಬೀತಾಗುತ್ತದೆ ಎಂದು ಅವರು ಹೇಳುತ್ತಾರೆ.

ಪ್ರೊಫೆಸರ್ ಹಸನೈನ್ ಕಾಶ್ಮೀರದ ಹಳೆಯ ದಾಖಲೆಗಳನ್ನು ಪರಿಶೋಧಿಸಿ ಯೇಸು ಕ್ರಿಸ್ತರು ಕಾಶ್ಮೀರಕ್ಕೆ ಬಂದು ಅಲ್ಲೇ ನೆಲಸಿದರೆಂಬುದನ್ನು ಸೂಚಿಸುತ್ತದೆ ಎಂದು ನಿರ್ಧರಿಸಿದರು. ಅವರು ಹೇಳುತ್ತಾರೆ: "ಪಶ್ಚಿಮದ ಜನರು ಚಾರಿತ್ರಿಕ ಯೇಸು ಕ್ರಿಸ್ತರನ್ನು ಪುನಃ ಕಂಡುಹಿಡಿಯಲು ನಮ್ಮ ಕೈಜೋಡಿಸಬೇಕೆಂದು ಹೇಳಬೇಕಾದ ಕಾಲವು ಸನ್ನಿಹಿತವಾಗಿದೆ ಎಂದು ನನಗೆ ತೋರುತ್ತದೆ."

ಕ್ರಿ.ಶ. 960ರಲ್ಲಿ ಬರೆಯಲಾದ ಇಕ್ಮಾಲುದ್ದೀನ್ ಎಂಬ ಪುರಾತನ ಗ್ರಂಥದ ಒಂದು ಗಮನಾರ್ಹ ಉಲ್ಲೇಖದ ಕಡೆಗೆ ಪ್ರೊಫೆಸರ್ ನಮ್ಮ ಗಮನ ಸೆಳೆಯುತ್ತಾರೆ. ಯೇಸು ಕ್ರಿಸ್ತರು ಕಾಶ್ಮೀರದಲ್ಲಿ ಜೀವಿಸಿದ್ದರೆ ಅವರ ಸಮಾಧಿಯ ಹೊರತು ಬೇರೆ ಯಾವ ಚಿಹ್ನೆಯೂ ದೊರಕದಿರುವ ಕಾರಣವೇನೆಂದು ಅದರಿಂದ ತಿಳಿಯುತ್ತದೆ.

ಒಂದು ಕಾಲಘಟ್ಟದಲ್ಲಿ ನಸಾರ ಎಂದು ಕರೆಯಲ್ಪಡುವ ಯೇಸು ಕ್ರಿಸ್ತರ ಅನುಯಾಯಿಗಳ ಒಂದು ಗುಂಪು ಕಾಶ್ಮೀರದಲ್ಲಿ ಇತ್ತು. ನಸಾರ ಪುರೋಹಿತರಿಗೆ, ತಮ್ಮ ಧರ್ಮಕ್ಕೆ ಸೇರಿದ ಮಧ್ಯಪೂರ್ವ ದೇಶದ ಜನರು ಇಸ್ಲಾಮ್ ಧರ್ಮ ಸ್ವೀಕರಿಸಿದುದಾಗಿ ತಿಳಿಯಿತು. ಸ್ವಲ್ಪ ಸಮಯದ ನಂತರ, ಎಂದರೆ ಕ್ರಿ.ಶಕ 570ರ ನಂತರ ಅವರು ಸಹ ಇಸ್ಲಾಮಿಗೆ ಸೇರಿದರು. ನಸಾರ ಕ್ರೈಸ್ತರು ತಮ್ಮ ಪ್ರತ್ಯೇಕತೆಯನ್ನು ಹತ್ತನೆಯ ಶತಮಾನದ ಮೊದಲು ಕಳೆದುಕೊಂಡರು.

ಇಕ್ಮಾಲುದ್ದೀನ್ ಎಂಬ ಪುಸ್ತಕದಲ್ಲಿ ಬರೆಯಲಾದ ಮೇಲಿನ ವಿವರಣೆ ಮತ್ತು ಹೀಬ್ರೂ ಭಾಷೆಯಲ್ಲಿ ಬರೆಯಲಾದ ಸುವಾರ್ತೆಯನ್ನು ಕ್ರೈಸ್ತ ವಿದ್ವಾಂಸ ಪಾಂಟಿಯೇನಸ್ (PANTEANUS) ಕ್ರಿ.ಶ. ಎರಡನೆಯ ಶತಮಾನದಲ್ಲಿ ಭಾರತದಲ್ಲಿ ಇಸ್ರಾಯೇಲ್ ಗೋತ್ರದ ಜನರಲ್ಲಿ ಕಂಡು

ಹಿಡಿದುದು ಮತ್ತು ಪರ್ಶಿಯಾದಲ್ಲಿ ನಸಾರ ಜನರನ್ನು ಹಿಂಸಾಚಾರಕ್ಕೆ ಗುರಿಪಡಿಸಿದುದರ ಬಗ್ಗೆ ವಿವರಿಸುವ ಹಳೆಯ ಶಿಲಾ ಶಾಸನಗಳು ಈ ಪ್ರದೇಶಗಳಲ್ಲಿ ಕ್ರೈಸ್ತಧರ್ಮ ಜಾರಿಯಲ್ಲಿತ್ತು ಎಂಬುದನ್ನು ಸೂಚಿಸುತ್ತದೆ. ಮತಾಂತರ ಮತ್ತು ಹಿಂಸಾಚಾರಗಳ ಮೂಲಕ ನಸಾರ ಸಮುದಾಯ, ಅನ್ಯ ಸಮುದಾಯಗಳಲ್ಲಿ ಸೇರಿ ಹೋಯಿತು ಮತ್ತು ಅವರು ಪ್ರತ್ಯೇಕ ಸಮುದಾಯವಾಗಿದ್ದರೆಂಬುದು ವಿಸ್ಮರಿಸಲ್ಪಟ್ಟಿತು. ಪೌಲ್ ಪ್ರಚಾರಗೊಳಿಸಿದ ಕ್ರೈಸ್ತ ಮತವು ಯುರೋಪಿನಲ್ಲಿ ವೇಗವಾಗಿ ಹಬ್ಬಿದಾಗ ಕ್ರೈಸ್ತೇತರ ಮತಧರ್ಮಗಳು ಅಪ್ರತ್ಯಕ್ಷವಾದುದಕ್ಕೆ ಇದನ್ನು ಹೋಲಿಸಬಹುದು.

## 20. CHRISTIANITY A JOURNEY FROM FACTS TO FICTION

*Author : **HAZRAT MIRZA TAHIR AHMAD,** Tilford, Surrey, U.K. 1996*

## ಕ್ರಿಶ್ಚಿಯಾನಿಟಿ ಎ ಜರ್ನೀ ಫ್ರಮ್ ಫ್ಯಾಕ್ಟ್ಸ್ ಟು ಫಿಕ್ಷನ್

*ಲೇಖಕ : **ಹಝ್ರತ್ ಮಿರ್ಝಾ ತಾಹಿರ್ ಅಹ್ಮದ್,** ಟಿಲ್‌ಫೋರ್ಡ್, ಸರ್‍ರೇ, ಯು.ಕೆ. 1996*

ಈ ಪುಸ್ತಕ ಯೇಸುಕ್ರಿಸ್ತರಿಗೆ ಸಂಬಂಧಿಸಿ ಅಹ್ಮದಿಯಾ ಮುಸ್ಲಿಮ್ ಜಮಾಅತಿನ ನಂಬಿಕೆಗಳನ್ನು ಚೆನ್ನಾಗಿ ಸಂಕ್ಷಿಪ್ತ ರೂಪದಲ್ಲಿ ವಿವರಿಸುತ್ತದೆ. ದೇವತ್ವ, ತ್ರಿತ್ವ ಮತ್ತು ಪಾಪ ಪರಿಹಾರ ಇವುಗಳನ್ನು ವೈಚಾರಿಕವಾಗಿ ವಿಮರ್ಶಿಸಿ ಅವುಗಳ ಮೂಲಗಳನ್ನು ವಿವರಿಸಲಾಗಿದೆ.

ಯೇಸುಕ್ರಿಸ್ತರ ಆಕಾಶಾರೋಹಣವು ಬೈಬಲಿಗೆ ಅನಂತರ ಸೇರಿಸಲ್ಪಟ್ಟದ್ದೆಂದು ಲೇಖಕರು ಪ್ರತಿಪಾದಿಸುತ್ತಾರೆ. ಮತ್ತಾಯ ಮತ್ತು ಯೋಹಾನನ ಸುವಾರ್ತೆಗಳು ಇದರ ಬಗ್ಗೆ ಪ್ರಸ್ತಾಪಿಸುವುದಿಲ್ಲ. ಮಾರ್ಕನ ಮತ್ತು ಲೂಕನ ಸುವಾರ್ತೆಗಳಲ್ಲಿ ಇದರ ಬಗ್ಗೆ ವಿವರಣೆಗಳಿವೆ. ಕೋಡೆಕ್ಸ್ ಸಿನಾಯಿಟಿಕಸ್ (ಬೈಬಲಿನ ಅತ್ಯಂತ ಪ್ರಾಚೀನ ಪ್ರತಿ) ಕಂಡುಹಿಡಿಯಲ್ಪಟ್ಟ ನಂತರ ತಿಳಿದು ಬಂದುದೇನೆಂದರೆ, ಆಕಾಶಾರೋಹಣದ ಬಗ್ಗೆ ಇರುವ ವಚನಗಳು ಅನಂತರ ಸೇರಿಸಲ್ಪಟ್ಟವುಗಳಾಗಿವೆ. ಕೋಡೆಕ್ಸ್ ಸಿನಾಯಿಟಿಕಸ್‌ನಲ್ಲಿ ಆಕಾಶಾರೋಹಣದ ಬಗ್ಗೆ ವಚನಗಳಿಲ್ಲ.

ಲೇಖಕರು ಹೀಗೆ ಬರೆದಿರುವರು: "ಯೇಸು ಕ್ರಿಸ್ತರು ಪಾಲೆಸ್ತೀನ್‌ನಿಂದ ಬಹಳ ದೂರವಿರುವ ಕಾಶ್ಮೀರಕ್ಕೆ ಪ್ರಯಾಣಿಸಿದರೆಂದು ಅಹ್ಮದಿಯರು ನಂಬುವುದನ್ನು ಆಕ್ಷೇಪಿಸಿ ಅಷ್ಟು ದೂರ ಪ್ರಯಾಣ ಮಾಡಿದುದು ಅಸಂಭಾವ್ಯವೆಂದು ಹೇಳುತ್ತಾರೆ. ಈ ಆಕ್ಷೇಪಕ್ಕೆ ನನ್ನ ಉತ್ತರ ಹೀಗಿದೆ: ಪಾಲೆಸ್ತೀನ್‌ನಿಂದ ಕಾಶ್ಮೀರಕ್ಕೆ ಇರುವ ದೂರವು ಹೆಚ್ಚೋ ಅಥವಾ ಪಾಲೆಸ್ತೀನ್‌ನಿಂದ ಆಕಾಶದ ಅತ್ಯಂತ ಎತ್ತರದ ಸ್ಥಳಕ್ಕೋ?"

ಯೇಸು ಕ್ರಿಸ್ತರು ಇಸ್ರಾಯೇಲ್ ವಂಶದ ತಪ್ಪಿಸಿಕೊಂಡ ಕುರಿಗಳಿಗೆ ಸಂದೇಶ ತಲಪಿಸುವುದಾಗಿ ವಾಗ್ದಾನ ಮಾಡಿದ್ದರು. ಆ ವಾಗ್ದಾನದ ಗತಿ ಏನಾಯಿತೆಂದು ಅಹ್ಮದಿಯರು ಆಶ್ಚರ್ಯಪಡುತ್ತಾರೆ. ಯೇಸುಕ್ರಿಸ್ತರು ಪಾಲೆಸ್ತೀನ್‌ನಿಂದ ಮೇಲೇರಿ ಪಿತನ ಬಲಭಾಗದಲ್ಲಿ ಆಸೀನರಾದರೆ ಅವರ ವಾಗ್ದಾನ ಈಡೇರುವುದಾದರೂ ಹೇಗೆ? ಯೇಸುಕ್ರಿಸ್ತರು ತಪ್ಪಿಸಿಕೊಂಡ ಕುರಿಗಳ ಅನ್ವೇಷಣೆಗೋಸ್ಕರ ಹೊರಟಿರಬಹುದು ಅಥವಾ ಇಸ್ರಾಯೇಲ್ ವಂಶದ ತಪ್ಪಿಸಿಕೊಂಡ ಕುರಿಗಳು ಅವರಿಗಿಂತ ಮೊದಲು ಆಕಾಶವನ್ನೇರಿ ಹೋದರೋ ಅವರನ್ನು ಅನ್ವೇಷಿಸುತ್ತಾ ಯೇಸುಕ್ರಿಸ್ತರು ಆಕಾಶವನ್ನು ಏರಿ ಹೋದರೋ?

## 21. FROM PALESTINE TO KASHMIR

*Author : **P. CHOUDHARY,** New Delhi, India, 1996*

## ಫ್ರಮ್ ಪಾಲೆಸ್ತೀನ್ ಟು ಕಾಶ್ಮೀರ್ (ಪಾಲೆಸ್ತೀನ್‌ನಿಂದ ಕಾಶ್ಮೀರಕ್ಕೆ)

*ಲೇಖಕ : **ಪಿ. ಚೌಧುರಿ,** ಹೊಸದಿಲ್ಲಿ, 1996*

ಲೇಖಕರು ತನ್ನ ಪುಸ್ತಕವನ್ನು "ಹಿಂದೂ, ಬೌದ್ಧ ಮತ್ತು ಕ್ರೈಸ್ತ ಸಹೋದರರಿಗೆ" ಅರ್ಪಿಸುತ್ತಾರೆ. ಪುಸ್ತಕದ ಮೊದಲಿನ ಅಧ್ಯಾಯಗಳಲ್ಲಿ ಭಾರತವನ್ನು ಬೈಬಲ್ ದೇಶವೆಂದು ಹೆಸರಿಸಿ ಬೈಬಲಿನ ಆದಿಕಾಂಡದ ತೋಟದಿಂದ ಮೊದಲುಗೊಂಡು ಯೇಸುಕ್ರಿಸ್ತರು ಭಾರತದಲ್ಲಿ ಧರ್ಮ ಪ್ರಚಾರ ನಡೆಸಿ ಅಲ್ಲೇ ಮೃತಪಟ್ಟರೆಂದು ವಿವರಿಸುತ್ತಾರೆ. ಯಹೂದಿ ಧರ್ಮ, ಹಿಂದೂ ಧರ್ಮ, ಬೌದ್ಧ ಧರ್ಮ ಮತ್ತು ಕ್ರೈಸ್ತ ಧರ್ಮಗಳಲ್ಲಿ ಬಹಳಷ್ಟು ಸಮಾನ ಅಂಶಗಳಿರುವುದರ ಕಾರಣಗಳಲ್ಲಿ ಇದೊಂದು ಎಂದು ಲೇಖಕರು ವಾದಿಸುತ್ತಾರೆ. ಈ ಧರ್ಮಗಳು ಭಾರತದ ಸಮಾನ ಆಧ್ಯಾತ್ಮಿಕ ಪರಂಪರೆಯನ್ನು ಹೊಂದಿವೆ ಎಂದು ಅವರು ಹೇಳುತ್ತಾರೆ.

ದುರದೃಷ್ಟಕರವಾದ ವಿಷಯವೇನೆಂದರು ಲೇಖಕ ಸ್ವತಃ ಈ ವಿಷಯದ ಬಗ್ಗೆ ಸಂಶೋಧನೆ ನಡೆಸದೆ ಮೇಲೆ ವಿವರಿಸಲಾದ ಮೌಲಾನ ಜಲಾಲುದ್ದೀನ್ ಶಮ್ಸ್‌ರವರ ಗ್ರಂಥದಿಂದ ಕೃತಿಚೌರ್ಯ ಮಾಡಿರುತ್ತಾರೆ. ಲೇಖಕ ತನ್ನ ಗ್ರಂಥಕ್ಕೆ ಆಸರೆಯಾದ ಶಮ್ಸ್‌ರವರ ಗ್ರಂಥದ ಬಗ್ಗೆ ಕೂಡ ಹೇಳುವುದಿಲ್ಲ. ತಾನು ಅನ್ಯ ಗ್ರಂಥದಿಂದ ಪುಟಗಟ್ಟಲೆ ಕೃತಿಚೌರ್ಯ ಮಾಡಿದ ಬಗ್ಗೆ ಯಾವ ಸೂಚನೆ ಸಹ ನೀಡುವುದಿಲ್ಲ.

ಕಾಶ್ಮೀರದಲ್ಲಿ ಯೇಸು ಕ್ರಿಸ್ತರು ಮೃತರಾದರೆಂದೂ ಅದು ಬೈಬಲ್ ದೇಶವೆಂದೂ ಲೇಖಕ ಬರೆದಿರುತ್ತಾರೆ.

## 22. IN SEARCH OF THE LIVING GOD

*Author : **MARK MASON,** Oregon, USA 1997*

## ಇನ್ ಸರ್ಚ್ ಆಫ್ ದಿ ಲಿವಿಂಗ್ ಗಾಡ್ (ಜೀವಂತ ದೇವನ ಅನ್ವೇಷಣೆಯಲ್ಲಿ)

*ಲೇಖಕ : **ಮಾರ್ಕ್ ಮೇಸನ್,** ಒರೇಗೊನ್, ಯು.ಎಸ್.ಎ. 1977*

ಲೇಖಕ ಒಬ್ಬ ಕ್ರೈಸ್ತನಾಗಿದ್ದು ತಾನು ಈ ಪುಸ್ತಕ ಬರೆದುದು "ಕ್ರೈಸ್ತ ಧರ್ಮದ ಹಳೆಯ ಸಮಸ್ಯೆಗಳನ್ನು ಪರಿಹರಿಸಿ ಅದರ ಚಿಕಿತ್ಸಕ ಗುಣವನ್ನು ಪ್ರಕಟಗೊಳಿಸುವುದಕ್ಕೆ" ಎಂದು ಹೇಳಿರುತ್ತಾರೆ. ಕ್ರೈಸ್ತ ಧರ್ಮವನ್ನು ಹೇಗೆ ಸುಧಾರಣೆ ಮಾಡಬಹುದು ಮತ್ತು ಜನರಿಗೆ ಆಕರ್ಷಕವನ್ನಾಗಿ ಮಾಡಬಹುದು ಎಂಬುದರ ಬಗ್ಗೆ ಆತ್ಮ ಚಿಂತನ ನಡೆಸಲಾಗಿದೆ. ಮಧ್ಯಕಾಲೀನ ಚರ್ಚ್ ಅಧಿಕಾರದ ದಾಹ ಹೊಂದಿದ್ದು ಅನೇಕ ಕ್ರೂರಕೃತ್ಯಗಳನ್ನು ಮಾಡಿದೆ ಎಂದು ಲೇಖಕ ಬಹಿರಂಗ ಪಡಿಸುತ್ತಾರೆ.

ಈ ಪುಸ್ತಕದ ನಾಲ್ಕನೆಯ ಅಧ್ಯಾಯದಲ್ಲಿ ಯೇಸು ಕ್ರಿಸ್ತರು ತನ್ನ ಜೀವಿತದ ಪ್ರಥಮ ಘಟ್ಟದಲ್ಲಿ ಭಾರತವನ್ನು ಸಂದರ್ಶಿಸಿರಬಹುದು ಎಂದು ಲೇಖಕ ಹೇಳುತ್ತಾರೆ. ಹೋಲ್ಗರ್ ಕೆರ್‌ಸ್ಟನ್ ಬರೆದ ಗ್ರಂಥವನ್ನು ಉಲ್ಲೇಖಿಸಿ, ಯೇಸುಕ್ರಿಸ್ತರ ಶಿಲುಬೆಯ ಸಂಭವದ ನಂತರದ ಜೀವಿತವನ್ನು ಮತ್ತು ಶ್ರೀನಗರದಲ್ಲಿರುವ ಸಮಾಧಿಯ ಬಗ್ಗೆ ವಿವರಿಸಲಾಗಿದೆ. ಚರ್ಚ್ ಪಾದರಿಯಾದ ಐರೀನಿಯಸ್ ಕ್ರಿಸ್ತ ಶಕ ಎರಡನೆಯ ಶತಮಾನದಲ್ಲಿ ಜೀವಿಸಿದ್ದರು. ಯೇಸು ಕ್ರಿಸ್ತರು ಏಶಿಯಾದಲ್ಲಿ ಮುದಿ ಪ್ರಾಯದ ತನಕ ತನ್ನ ಶಿಷ್ಯ ಯೋಹಾನನೊಂದಿಗೆ ಜೀವಿಸಿದ್ದರೆಂದೂ ಅವರು ಟ್ರಾಜನ್ ಚಕ್ರವರ್ತಿಯ ಕಾಲದ ತನಕ ಜೀವಿಸಿದ್ದರೆಂದೂ ಐರೀನಿಯಸ್ ಬರೆದಿದ್ದರು. ಟ್ರಾಜನ್ ಚಕ್ರವರ್ತಿಯ ಆಡಳಿತೆ ಕ್ರಿ.ಶ. 98ರಲ್ಲಿ ಪ್ರಾರಂಭವಾಯಿತು.

ಕೊನೆಯದಾಗಿ ಲೇಖಕ "ಯೇಸುಕ್ರಿಸ್ತರು ಸಹಜವಾಗಿ ಕಾಶ್ಮೀರದಲ್ಲಿ ಮೃತರಾಗಿದ್ದರೆ ಏನು?" ಎಂಬ ಪ್ರಶ್ನೆಗೆ ಹೀಗೆ ಉತ್ತರ ನೀಡುತ್ತಾರೆ:

"ನನ್ನ ಸ್ವಂತ ನಂಬಿಕೆ ಏನೆಂದರೆ ಹೀಗೆ ಸಂಭವಿಸಿದ್ದರೆ ಕ್ರೈಸ್ತ ಧರ್ಮಕ್ಕೆ ಯಾವುದೇ ದೋಷ ಉಂಟಾಗಲಾರದು. ಯೇಸು ಕ್ರಿಸ್ತರು ಶಿಲುಬೆಯಲ್ಲಿ ವಾಸ್ತವಿಕವಾಗಿ ಮೃತರಾದರೆಂಬುದು ಒಂದು ಚಿಕ್ಕ ಅಂಶವಾಗಿದೆ. ಮುಖ್ಯವಾದುದೇನೆಂದರೆ ಎಲ್ಲರ ಪಾಪ ಪರಿಹಾರಕ್ಕೋಸ್ಕರ ಅವರು ಬಹಳ ನೋವು ಅನುಭವಿಸಿದರು. ಅವರು ಶಿಲುಬೆಯಲ್ಲಿ ಮೃತರಾಗದಿದ್ದರೆ ಅವರು ನೋವಿನಿಂದ ಮುಕ್ತರಾಗಲು ಅನುಭವಿಸಿದ ಯಾತನೆ ಅವರು ಕೂಡಲೇ ಮೃತರಾಗಿ ಅದ್ಭುತಕರವಾಗಿ ಜೀವಂತರಾಗುವುದಕ್ಕಿಂತ ಹೆಚ್ಚು ಆಗಿರುತ್ತದೆ."

ಲೇಖಕ ಕೊನೆಗೆ ಹೇಳುತ್ತಾರೆ: "ಯೇಸು ಕ್ರಿಸ್ತರು ಶಿಲುಬೆಗೇರಿಸಲ್ಪಡುವ ಮೊದಲು ಭಾರತವನ್ನು ಸಂದರ್ಶಿಸಿದುದು ಮತ್ತು ಶಿಲುಬೆಯ ಸಂಭವದ ನಂತರ ಪುನಃ ಸಂದರ್ಶಿಸಿದುದು ಸಂಭಾವ್ಯವಾಗಿದೆ."

## 23. CHRISTIAN CONSPIRACY

*Author: **JOSEPH MACCHIO, USA, 1999***

### ಕ್ರಿಶ್ಚಿಯನ್ ಕನ್‌ಸ್ಪಿರಸಿ (ಕ್ರಿಸ್ತೀಯ ಗೂಢಾಲೋಚನೆ)

*ಲೇಖಕ : **ಜೋಸೆಫ್ ಮಾಚಿಯೋ**, ಯು.ಎಸ್.ಎ., 1999*

ಇದು ಇಲೆಕ್ಟ್ರೋನಿಕ್ ಪುಸ್ತಕವಾಗಿದೆ. ಕಾಗದದ ಪುಸ್ತಕ ರೂಪದಲ್ಲಿ ಇದು ಲಭ್ಯವಲ್ಲ. ಇದನ್ನು newhopenet.com ಮೂಲಕ ಲಾಗ್ ಆನ್ ಮಾಡಬಹುದಾಗಿದೆ. ಇದು ಮಾರ್ಕ್ ಮೇಸನ್ ಬರೆದ ಗ್ರಂಥದ ಹಾಗೆ ಒಬ್ಬ ಕ್ರೈಸ್ತನ ಆತ್ಮಾವಲೋಕನವಾಗಿದೆ.

ಈ ಪುಸ್ತಕವನ್ನು ಬರೆದ ಉದ್ದೇಶ ಕ್ರೈಸ್ತ ಧರ್ಮದಲ್ಲಿರುವ ಮನುಷ್ಯ ನಿರ್ಮಿತ ವಿಶ್ವಾಸಗಳನ್ನು ಬದಲಾಯಿಸಿ ಮೂಲಭೂತ ಕ್ರೈಸ್ತ ಧರ್ಮ ಎಂದು ಲೇಖಕನು ಹೆಸರಿಸಿರುವ ವಿಶ್ವಾಸಾದರ್ಶಗಳನ್ನು ಅದರ ಸ್ಥಾನದಲ್ಲಿ ಇರಿಸುವುದಾಗಿದೆ. ಕ್ರೈಸ್ತಧರ್ಮದ ನಂಬಿಕೆಗಳ ಬಗ್ಗೆ, ಯೇಸು ಕ್ರಿಸ್ತರ ಬಗ್ಗೆ, ಅವರ ಪುನರುತ್ಥಾನದ ಬಗ್ಗೆ ಮತ್ತು ಶಿಲುಬೆ ಸಂಭವ ನಂತರ ಅವರ ಸ್ಥಿತಿಗತಿಗಳ ಬಗ್ಗೆ ಅನೇಕ ಭಿನ್ನಾಭಿಪ್ರಾಯಗಳು ಇದ್ದುವು ಎಂದು ಲೇಖಕರು ಪ್ರತಿಪಾದಿಸುತ್ತಾರೆ. ಆ ಭಿನ್ನಾಭಿಪ್ರಾಯಗಳನ್ನು ದಮನ ಮಾಡಿ ಕ್ರೈಸ್ತ ಧರ್ಮಾನುಯಾಯಿಗಳ ಒಂದು ಗುಂಪು ಪ್ರಾಬಲ್ಯ ಪಡೆಯಿತು. ಅದೇ ಸುಸಮ್ಮತವಾದ ಕ್ರೈಸ್ತ ಧರ್ಮವಾಯಿತು. ಅನೇಕ ಸುವಾರ್ತೆಗಳ ಪ್ರತಿಗಳು ನಾಶಗೊಳಿಸಲ್ಪಟ್ಟು ಕೊನೆಗೆ ಪರಿಷ್ಕೃತವಾದ ನಾಲ್ಕು ಸುವಾರ್ತೆಗಳು ಅಸ್ತಿತ್ವಕ್ಕೆ ಬಂದುವು.

ಕ್ರೈಸ್ತ ಧರ್ಮದ ಇಂದಿನ ವಿಶ್ವಾಸಾದರ್ಶಗಳ ಮತ್ತು ದೇವಶಾಸ್ತ್ರದ ತಳದಲ್ಲಿ ಯೇಸು ಕ್ರಿಸ್ತರ ನಿಜವಾದ ಚರಿತ್ರೆ ಈಗಲೂ ಕಾಣಬಹುದಾಗಿದೆ ಎಂದೂ ಕೆಲವು ಸುಳಿವುಗಳು ನಂಬಿಕೆಗರ್ಹವಾಗದ ಸಾಹಿತ್ಯಗಳಿಂದಲೂ ಚರ್ಚ್ ಚರಿತ್ರೆಗಳಿಂದಲೂ ದೊರಕುತ್ತವೆ ಎಂದೂ ಲೇಖಕರು ಹೇಳುತ್ತಾರೆ. ಒಂದು ಉದಾಹರಣೆ ಹೀಗಿದೆ: ಯೇಸುಕ್ರಿಸ್ತರು ಪುನರುತ್ಥಾನಗೊಂಡು ನಲ್ವತ್ತು ದಿವಸಗಳ ನಂತರ ಆಕಾಶಾರೋಹಣ ಮಾಡಿದರೆಂದು ಕ್ರೈಸ್ತ ಪಾದರಿಗಳು ತಮ್ಮ ನಂಬಿಕೆಯಾಗಿ ಅಂಗೀಕರಿಸಿರುತ್ತಾರೆ. ಆದರೆ ಯೇಸುಕ್ರಿಸ್ತರು ಆಕಾಶಾರೋಹಣ ಮಾಡಿರುವರೆಂದು ಭಾವಿಸಲ್ಪಡುವ ಕಾಲದಲ್ಲಿಯೂ ಅವರು ಭೂಮಿಯಲ್ಲಿ ವಾಸಿಸುತ್ತಿದ್ದರೆಂಬುದಕ್ಕೆ ಅನೇಕ ಸಾಂಪ್ರದಾಯಿಕ ಸಾಕ್ಷ್ಯಗಳಿವೆ. ಕ್ರಿಸ್ತಶಕ 3ನೇ ಶತಮಾನದ ಪಿಸ್ತಿಸ್ ಸೋಫಿಯಾ ಎಂಬ ಸುವಾರ್ತೆಯಲ್ಲಿ ಯೇಸು ಕ್ರಿಸ್ತರು ತನ್ನ ಶಿಷ್ಯರೊಂದಿಗೆ ಹನ್ನೊಂದು ವರ್ಷಗಳಷ್ಟು ಕಾಲ ಶಿಲುಬೆಯ ಸಂಭವದ ನಂತರ ಧರ್ಮ ಪ್ರಚಾರ ಮಾಡುತ್ತಿದ್ದರೆಂದು ಬರೆಯಲಾಗಿದೆ. ಶಿಲುಬೆಯ ಸಂಭವದ ನಂತರ ಸಹ ಯೇಸು ಕ್ರಿಸ್ತರು ಅನೇಕ ವರ್ಷ ಭೂಮಿಯಲ್ಲಿ ಜೀವಿಸಿದ್ದರು ಎಂದು ಚರ್ಚ್ ಪಾದರಿಗಳಾದ ಐರೀನಿಯಸ್ ಮತ್ತು ಇಗ್ನೇಶಿಯಸ್ ನಂಬುತ್ತಾ ಇದ್ದರು.

ಕೆರ್‌ಸ್ಟನ್ ಬರೆದ "ಜೀಸಸ್ ಲಿವ್ಡ್ ಇನ್ ಇಂಡಿಯಾ" ಎಂಬ ಪುಸ್ತಕವನ್ನೂ ಉಲ್ಲೇಖಿಸಿ ಲೇಖಕರು, ಯೇಸುಕ್ರಿಸ್ತರು ಭಾರತಕ್ಕೆ ಪ್ರಯಾಣಿಸಿದ ಬಗ್ಗೆ ಬರೆದಿರುತ್ತಾರೆ. ಕಾಶ್ಮೀರದ ಸಮಾಧಿ ಬಗ್ಗೆ ಲೇಖಕ ಹೀಗೆ ಬರೆಯುತ್ತಾರೆ: "ಯೇಸುಕ್ರಿಸ್ತರ ಸಮಾಧಿಯನ್ನು ಮುಸ್ಲಿಮರೂ ಹಿಂದೂಗಳೂ ಕ್ರೈಸ್ತರೂ ಸಂದರ್ಶಿಸುತ್ತಿರುವುದರಿಂದ ಅವರು ಪೂರ್ವ ದೇಶದಲ್ಲಿ ಒಬ್ಬ ಜಾಗತಿಕ ಪ್ರವಾದಿ ಎಂದೂ ಅಧ್ಯಾಪಕನೆಂದೂ ಗೌರವಿಸಲ್ಪಡುತ್ತಾರೆಂದು ಮತ್ತು ಅವರ ತತ್ವಗಳು ಅನೇಕ ಧರ್ಮಗಳಿಗೂ ಅಂಗೀಕಾರಾರ್ಹವಾಗಿವೆ ಎಂದೂ ಸಾಬೀತಾಗುತ್ತದೆ."

ಬೇರೆ ಕೆಲವು ಲೇಖಕರ ಹಾಗೆ ಈ ಪುಸ್ತಕದ ಲೇಖಕ ಸಹ ಯೇಸು ಕ್ರಿಸ್ತರು ತರುಣನಾಗಿದ್ದಾಗ ಭಾರತಕ್ಕೆ ಬಂದು ಪೌರ್ವಾತ್ಯ ರಹಸ್ಯ ಜ್ಞಾನವನ್ನೂ ಹಿಂದೂದರ್ಶನವನ್ನೂ ಇನ್ನಿತರ ಆಧ್ಯಾತ್ಮಿಕ ಪಾಠಗಳನ್ನೂ ಕಲಿತಿದ್ದರೆಂದು ಅಭಿಪ್ರಾಯ ಹೊಂದಿದ್ದಾರೆ.

ಯೇಸು ಕ್ರಿಸ್ತರು ಹಿಂದು ಮತ್ತು ಬೌದ್ಧ ಧರ್ಮಗಳ ತತ್ವಗಳನ್ನು ಪಾಲೆಸ್ತೀನ್‌ಗೆ ತಂದರೆಂದು ಮತ್ತು ಅವರು ಅನಂತರ ನಿಗೂಢ ರಹಸ್ಯಗಳ ಪ್ರದೇಶವಾದ ಭಾರತಕ್ಕೆ ಮರಳಿದರೆಂಬ ಪ್ರತಿಪಾದನೆಯು ಪಶ್ಚಿಮ ರಾಷ್ಟ್ರಗಳ ಸಾಹಿತಿಗಳೆಡೆಯಲ್ಲಿ ಪ್ರಚಾರಗಳಿಸುತ್ತಾ ಇದೆ. ವಿಶಿಷ್ಟವಾಗಿ ನವಯುಗದ ವಕ್ತಾರರಲ್ಲಿ ಇದು ಹೆಚ್ಚು ಪ್ರಭಾವ ಶಾಲಿಯಾಗಿದೆ.

## ಬೇರೆ ಪ್ರಕಟಣೆಗಳು

### 1. THE TOMB OF JESUS

*Author: **SUFI MOTIUR REHMAN BENGALI**, 1946*

**ದಿ ಟೋಂಬ್ ಆಫ್ ಜೀಸಸ್ (ಯೇಸುವಿನ ಸಮಾಧಿ)**

*ಲೇಖಕ : **ಸೂಫೀ ಮುತೀಉರ್ರಹ್ಮಾನ್ ಬೆಂಗಾಲಿ**, 1946*

ಅಹ್ಮದಿಯಾ ಜಮಾಅತಿನ ನಂಬಿಕೆಗಳನ್ನು ಸಂಕ್ಷಿಪ್ತವಾಗಿ ವಿವರಿಸುವ ಮತ್ತು ಶ್ರೀನಗರದ ಯೇಸುಕ್ರಿಸ್ತರ ಗೋರಿಯ ಚರಿತ್ರೆ ವಿವರಿಸುವ ಚಿಕ್ಕ ಪುಸ್ತಕ.

### 2. JESUS SON OF MARY

*Author: **QAZI MUHAMMAD BARKATHULLAH**, Phildelphia, U.S.A., 1972*

**ಜೀಸಸ್ ಸನ್ ಆಫ್ ಮೇರಿ (ಮರ್‌ಯಮ್ ಪುತ್ರ ಯೇಸು)**

*ಲೇಖಕ : **ಖಾಝಿ ಮುಹಮ್ಮದ್ ಬರ್ಕತುಲ್ಲಾ**, ಫಿಲಡೆಲ್ಫಿಯಾ, ಯು.ಎಸ್.ಎ., 1972*

### 3. CRUMBLING OF THE CROSS

*Author: **MUMTAZ AHMAD FARUQI**, Lahore, 1973*

**ಕ್ರಂಬ್ಲಿಂಗ್ ಆಫ್ ದಿ ಕ್ರಾಸ್ (ಶಿಲುಬೆಯ ಕುಸಿತ)**

*ಲೇಖಕ : **ಮುಮ್ತಾಝ್ ಅಹ್ಮದ್ ಫಾರೂಖೀ**, ಲಾಹೋರು, 1973*

ಈ ಪುಸ್ತಕದಲ್ಲಿ ಖ್ವಾಜಾ ನಝೀರ್ ಅಹ್ಮದರ "ಜೀಸಸ್ ಇನ್ ಹೆವನ್ ಆನ್ ಅರ್ತ್" ಎಂಬ ಪುಸ್ತಕದ ಸಂಕ್ಷೇಪದೊಂದಿಗೆ ಹೊಸ ಮಾಹಿತಿಗಳನ್ನು ನೀಡಲಾಗಿದೆ.

### 4. JESUS DID NOT PERISH ON THE CROSS

*Author : **KURT BERNA**, Zurich, Switzerland, 1975)*

**ಜೀಸಸ್ ಡಿಡ್ ನೋಟ್ ಪೆರಿಶ್ ಆನ್ ದಿ ಕ್ರಾಸ್**

**(ಯೇಸು ಶಿಲುಬೆಯಲ್ಲಿ ಮೃತನಾಗಲಿಲ್ಲ)**

*ಲೇಖಕ : **ಕುರ್ಟ್ ಬರ್ನಾ**, ಝೂರಿಚ್, ಸ್ವಿಟ್‌ಝರ್‌ಲೇಂಡ್, 1975*

ಇದು ಜರ್ಮನ್ ಭಾಷೆಯಲ್ಲಿ ಬರೆದು 1962ರಲ್ಲಿ ಪ್ರಕಟಿಸಿದ ಗ್ರಂಥದ ಇಂಗ್ಲಿಷ್ ಭಾಷಾಂತರವಾಗಿದೆ. ಟ್ಯೂರಿನಿನ ಶವವಸ್ತ್ರದಲ್ಲಿರುವ ರಕ್ತದ ಕಲೆಗಳ ಮೂಲಕ ದೊರೆತ ಸಾಕ್ಷ್ಯದ ಬೆಳಕಿನಲ್ಲಿ ಯೇಸುಕ್ರಿಸ್ತರು ಶಿಲುಬೆಯಲ್ಲಿ ಮೃತರಾಗಲಿಲ್ಲ ಎಂದು ಲೇಖಕರು ಪ್ರತಿಪಾದಿಸುತ್ತಾರೆ.

### 5. TESTIMONY OF THE SHROUD

*Author : **RODNEY HOARE**, Newyork, U.S.A., 1979*

**ಟೆಸ್ಟಿಮನಿ ಆಫ್ ದಿ ಶ್ರೌಡ್ (ಶವವಸ್ತ್ರದ ಸಾಕ್ಷ್ಯ)**

*ಲೇಖಕ : **ರೋಡ್ನೀ ಹೋರ್**, ನ್ಯೂಯೋರ್ಕ್, ಯು.ಎಸ್.ಎ., 1979*

ಟ್ಯೂರಿನಿನ ಶವವಸ್ತ್ರದಲ್ಲಿರುವ ರಕ್ತಕಲೆಗಳ ಸಾಕ್ಷ್ಯವನ್ನು ವಿಮರ್ಶಿಸಿ ಶಾಖೋತ್ಪನ್ನ ಮಾಡುವ ಶರೀರವನ್ನು ಎಂದರೆ ಜೀವಂತ ಶರೀರವನ್ನು ಆ ಶವವಸ್ತ್ರದಲ್ಲಿ ಸುತ್ತಲ್ಪಟ್ಟಿದ್ದಿತೆಂದು ಸಾಬೀತುಗೊಳಿಸಲಾಗಿದೆ. ಆ ವ್ಯಕ್ತಿ ಅನಂತರ ಮೃತನಾಗಿರಬಹುದೆಂದು ಅಥವಾ ಪಾಕಿಸ್ಥಾನ ಅಥವಾ ಉತ್ತರ ಅಮೇರಿಕ ತನಕ ಪ್ರಯಾಣಿಸಿರಬಹುದೆಂದು ಅನುಮಾನ ಸೂಚಿಸಲಾಗಿದೆ.

### 6. JESUS AND MOSES ARE BURIED IN INDIA

*Author : **GENE METLOCK**, U.S.A., 1991*

**(ಯೇಸು ಮತ್ತು ಮೋಶೆ ಭಾರತದಲ್ಲಿ ದಫನುಗೊಳಿಸಲ್ಪಟ್ಟರು)**

**ಜೀಸಸ್ ಆ್ಯಂಡ್ ಮೋಸೆಸ್ ಆರ್ ಬರೀಡ್ ಇನ್ ಇಂಡಿಯಾ**

ಲೇಖಕ : **ಜೀನ್ ಮೆಟ್‌ಲೋಕ್**, ಯು.ಎಸ್.ಎ., 1991

### 7. JESUS AMONG THE LOST SHEEP

*Author : **Aziz A. Chaudhary**, London, U.K.,1992*

**ಜೀಸಸ್ ಎಮಂಗ್ ದಿ ಲೋಸ್ಟ್ ಶೀಪ್**

**(ಕಳೆದು ಹೋದ ಕುರಿಗಳ ಮಧ್ಯೆ ಯೇಸು)**

*ಲೇಖಕ : **ಅಝೀಝ್ ಎ. ಚೌಧರಿ**, ಲಂಡನ್, 1992*

ಯೇಸು ಕ್ರಿಸ್ತರು ಕಾಶ್ಮೀರಕ್ಕೆ ವಲಸೆ ಹೋಗಿ ಅಲ್ಲಿ ಮೃತರಾದ ಬಗ್ಗೆ ಅಹ್ಮದಿಯಾ ಜಮಾಅತಿನ ವಿಶ್ವಾಸವನ್ನು ಈ ಪುಸ್ತಕದಲ್ಲಿ ಬರೆಯಲಾಗಿದೆ:

**8.** ಪಾಕಿಸ್ತಾನದ ಶೇಖ್ ಅಬ್ದುಲ್ ಖಾದಿರ್ ಯೇಸುಕ್ರಿಸ್ತರಿಗೆ ಸಂಬಂಧಿಸಿ ಅನೇಕ ಲೇಖನಗಳನ್ನು ರಿವ್ಯೂ ಆಫ್ ರಿಲಿಜನ್ಸ್, ಮುಸ್ಲಿಮ್ ಹೆರಾಲ್ಡ್‌ಡ್, ಅಲ್‌ಫುರ್ಖಾನ್, ಅಲ್‌ಫಝ್ಲ್ ಎಂಬ ಇಂಗ್ಲಿಷ್, ಉರ್ದು ಪತ್ರಿಕೆಗಳಲ್ಲಿ 1960, 1970 ಮತ್ತು 1980ರ ದಶಕಗಳಲ್ಲಿ ಬರೆದಿದ್ದಾರೆ. ಅವರ ಲೇಖನಗಳ ಕೆಲವು ಶೀರ್ಷಿಕೆಗಳು ಹೀಗಿವೆ:

"ಮಾರ್ಕನ ಸುವಾರ್ತೆಯ ಕೊನೆಯ ವಚನ"

"ಒಂದು ಹೊಸ ಕೋಪ್ಟಿಕ್ ಸುವಾರ್ತೆಯ ಕಂಡುಹಿಡಿತ"

"ಯೇಸುಕ್ರಿಸ್ತರ ಮಾತೆ ಮರ್‌ಯಮ್ ಪೂರ್ವದೇಶದಲ್ಲಿ"

"ಭವಿಷ್ಯ ಮಹಾಪುರಾಣ"

"ಮಸೀಹ ಪೂರ್ವದೇಶದಲ್ಲಿ"

"ಯೂಝ್ ಆಸಫರ ಸಮಾಧಿಯ ಚರಿತ್ರೆ"

"ಓಡ್ಸ್ ಆಫ್ ಸೋಲೋಮನ್"

1978ರಲ್ಲಿ ಲಂಡನ್‌ನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಅವರು ತನ್ನ ಸಂಶೋಧನೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಶೇಖ್ ಅಬ್ದುಲ್ ಖಾದಿರ್ ಬರೆದ "ಯೇಸುಕ್ರಿಸ್ತರ ಮಾತೆ ಮರ್‌ಯಮ್ ಪೂರ್ವದೇಶದಲ್ಲಿ" ಎಂಬ ಲೇಖನದ ಕುರಿತು ಸ್ವಲ್ಪ ಹೆಚ್ಚು ವಿವರಣೆ ನೀಡಲು ಬಯಸುತ್ತೇವೆ. ಈ ವಿಷಯದ ಬಗ್ಗೆ ಹೆಚ್ಚಾಗಿ ಇತರರ ಲೇಖನಗಳಲ್ಲಿ ಪ್ರಸ್ತಾಪಿಸಲ್ಪಡುವುದಿಲ್ಲ. 1964ರ ಜನವರಿ ತಿಂಗಳ ರಿವ್ಯೂ ಆಫ್ ರಿಲಿಜನ್ಸಿನ ಸಂಚಿಕೆಯಲ್ಲಿ ಈ ಲೇಖನ ಪ್ರಕಟವಾಯಿತು.

ಪವಿತ್ರ ಖುರ್‌ಆನ್‌ನಲ್ಲಿ, 'ನಾವು ಮರ್ಯಮರ ಪುತ್ರನನ್ನೂ ಅವರ ಮಾತೆಯನ್ನೂ ಒಂದು ದೃಷ್ಟಾಂತವನ್ನಾಗಿ ಮಾಡಿದೆವು. ವಿಶ್ರಾಂತಿಗೆ ಯೋಗ್ಯವೂ ನೀರಿನ ಒರತೆಗಳೂ ಇರುವ ಒಂದು ಉನ್ನತ ಪ್ರದೇಶದೆಡೆಗೆ ತಲಪುವಂತೆ ಮಾಡಿ ನಾವು ಅವರಿಗೆ ಆಶ್ರಯನೀಡಿದೆವು." (23:51) ಎಂಬ ವಚನವಿದೆ. ಶಿಲುಬೆಯ ಸಂಭವದ ನಂತರ ಯೇಸು ಕ್ರಿಸ್ತರ ಜೀವಿತದ ಹಾಗೆ ಮರ್‌ಯಮರ ಜೀವಿತ ಸಹ ರಹಸ್ಯಮಯ ವಾಗಿದೆ. ಮರ್‌ಯಮರ ಗೋರಿ ಪಾಲೆಸ್ತೀನ್‌ನಲ್ಲಾಗಲೀ ಸಮೀಪ ಪ್ರದೇಶಲ್ಲಾಗಲೀ ಕಾಣದ ಕಾರಣ ಅವರು ಆಕಾಶವನ್ನೇರಿ ಹೋಗಿರುವರೆಂಬ ಒಂದು ಪಾರಂಪರಿಕ ವಿಶ್ವಾಸ ಸಹ ಇದೆ. ಸಂತ ಎಪಿಪಿನಿಯಸ್ (ಕ್ರಿ.ಶ. 315-403) ಹೀಗೆ ಹೇಳಿರುತ್ತಾರೆ: ಮೇರಿಯನ್ನು ಯೋಹಾನ ಎಂಬ ಯೇಸು ಕ್ರಿಸ್ತರ ಶಿಷ್ಯನ ಆರೈಕೆಗೆ ನೀಡಲಾಯಿತು. ಅವರಿಬ್ಬರೂ ಪಾರ್ಥಿಯ ದೇಶದ (ಏಶಿಯಾ) ಕಡೆಗೆ ಹೋದರು. ಏಕ್ಟ್ಸ್ ಆಫ್ ಫಿಲಿಪ್ ಎಂಬ ಅಂಗೀಕಾರರಹಿತ ಸುವಾರ್ತೆ ಯೋಹಾನ ಪಾರ್ಥಿಯದ ಕಡೆಗೆ ಹೋದುದನ್ನು ಪ್ರಸ್ತಾಪಿಸುತ್ತದೆ. ರೋಮನ್ ಸಾಮ್ರಾಜ್ಯದಲ್ಲಿ ಯಹೂದಿಗಳಿಂದ ಹಿಂಸೆಯನ್ನು ಅನುಭವಿಸಿದ ಕಾರಣ ಯೇಸುಕ್ರಿಸ್ತರ ಶಿಷ್ಯರು ಪಾರ್ಥಿಯಕ್ಕೆ ವಲಸೆ ಹೋದರೆಂದು ತೋರುತ್ತದೆ. ಅವರು ಪ್ರಾಯಶಃ ಅಲ್ಲಿ ಯೇಸುಕ್ರಿಸ್ತರನ್ನು ಕಂಡಿರಬಹುದು. ಪಿಸ್ತಿಸ್ ಸೋಫಿಯಾ ಎಂಬ ಅಂಗೀಕಾರರಹಿತ ಸುವಾರ್ತೆ ಸಹ ಯೇಸು ಕ್ರಿಸ್ತರು ಮಾತೆ ಮೇರಿಯೊಂದಿಗೆ ಅಂದಾಜು ಹನ್ನೊಂದು ವರ್ಷ ಭೂಮಿಯಲ್ಲಿ ಜೀವಿಸಿರುವುದಾಗಿ ಸೂಚಿಸುತ್ತದೆ.

ಶೇಖ್ ಅಬ್ದುಲ್ ಖಾದಿರ್ ತನ್ನ ಲೇಖನದಲ್ಲಿ ರೌಝುತ್ತುಸ್ಸಫಾ ಮೊದಲಾದ ಗ್ರಂಥಗಳನ್ನು ಉಲ್ಲೇಖಿಸಿ ಮರ್‌ಯಮರು ಯೇಸುಕ್ರಿಸ್ತರ ಜೊತೆಗೆ ಪ್ರಯಾಣ ಮಾಡಿದುದನ್ನು ವಿವರಿಸುತ್ತಾರೆ. ಬಿಹಾರುಲ್ ಅನ್‌ವಾರ್ ಎಂಬ ಗ್ರಂಥದಲ್ಲಿ ಕ್ರೈಸ್ತರ ನಂಬಿಕೆಗಳನ್ನು ಆಧಾರವಾಗಿಟ್ಟು ಕೊಂಡು ಯೇಸು ಕ್ರಿಸ್ತರ ಜೊತೆ ಮರ್‌ಯಮ್ ಮತ್ತು ಶಿಷ್ಯರು ಇಂದು ಇರಾಖ್ ಎಂದು ಕರೆಯಲ್ಪಡುವ ಪ್ರದೇಶದಲ್ಲಿ ವಾಸಿಸಿರುವುದಾಗಿ ಉಲ್ಲೇಖಿಸಲಾಗಿದೆ. ಸುವಾರ್ತೆಗಳಲ್ಲಿರುವ ಪೀಟರನ ಪ್ರಥಮ ಪತ್ರ ಬೇಬಿಲೋನ್ (ಇರಾಖ್)ನಲ್ಲಿರುವ ಯೇಸುಕ್ರಿಸ್ತರ ಅನುಯಾಯಿಗಳನ್ನು ಸಂಬೋಧಿಸಿ ಬರೆಯಲಾಗಿದೆ ಎಂಬುದು ಗಮನಾರ್ಹವಾಗಿದೆ.

ಶೇಖ್ ಅಬ್ದುಲ್ ಖಾದಿರ್‌ರವರು ಪಾಕಿಸ್ತಾನದ ಮರ್‍ರೀ ಎಂಬಲ್ಲಿರುವ ಮರ್‌ಯಮರ ಗೋರಿಯ ಬಗ್ಗೆ ಸಹ ಪ್ರಸ್ತಾಪಿಸುತ್ತಾರೆ. ಇನ್ನೊಂದು ಗೋರಿ ಕಾಶ್‌ಗರ್‌ನಲ್ಲಿದೆ. ಅದನ್ನು ಸಹ ಮೇರಿಯ ಗೋರಿ ಎಂದು ಹೇಳಲಾಗುತ್ತಿದೆ. ಇವುಗಳ ಬಗ್ಗೆ ಪುರಾವಸ್ತುಗಳಿಗೆ ಸಂಬಂಧಿಸಿದ ಸಂಶೋಧನೆ ನಡೆಸಬೇಕಾಗಿದೆ ಎನ್ನುತ್ತಾರೆ.

## ಯೇಸುಕ್ರಿಸ್ತರು ಕಾಶ್ಮೀರದಲ್ಲಿ ಮೃತರಾದರೆಂಬ ಅಭಿಪ್ರಾಯವನ್ನು ವಿರೋಧಿಸುವ ಪ್ರಕಟಣೆಗಳು

### 1. THE ESSENCE ODYSSEY

*Author :* ***HUGH SHONFIELD**, 1984*

ದಿ ಎಸ್ಸೀನ್ ಒಡಿಸ್ಸೀ *ಲೇಖಕ : **ಹ್ಯೂ ಶೋನ್‌ಫೀಲ್ಡ್**, 1984*

ಯೂಝ್ ಆಸಫ್ ಎಂಬ ಹೆಸರಿನ ವ್ಯತ್ಪತ್ತಿಯನ್ನು ಬೌದ್ಧ ಧರ್ಮದ ಮತ್ತು ಕಾಶ್ಮೀರದ ಮೂಲಗಳಿಂದ ಕಂಡುಹಿಡಿಯಲು ಈ ಪುಸ್ತಕದ ಪ್ರಾರಂಭದಲ್ಲಿ ಪ್ರಯತ್ನಿಸಲಾಗಿದೆ. ಲೇಖಕ ಹೀಗೆ ತನ್ನ ನಿರ್ಧಾರವನ್ನು ಸೂಚಿಸುತ್ತಾರೆ: ಶ್ರೀನಗರದಲ್ಲಿರುವ ಯಹೂದಿ ಮಾದರಿ ಗೋರಿ ಒಬ್ಬ ಎಸ್ಸೀನ್ ಉಪದೇಶಕ ಗುರುವಿನದಾಗಿರಬಹುದು. ಆತನ ಹೆಸರು ಜೋಸೆಫ್ ಎಂಬ ಹೆಸರಿಗೆ ಸಾಮ್ಯತೆ ಹೊಂದಿದ್ದಿರಬಹುದು. ಆ ಕಾಲದ ಧಾರ್ಮಿಕ ಸ್ಥಿತಿಯ ಪ್ರಭಾವದಿಂದ ಈ ಹೆಸರು ಯೇಸುಕ್ರಿಸ್ತರೊಂದಿಗೂ ಬುದ್ಧನೊಂದಿಗೂ ಜೋಡಿಸಲ್ಪಟ್ಟಿತು.

### 2. STRANGE TALES OF JESUS : A SURVEY OF UNFAMILIAR GOSPELS

*Author :* ***PER BESKOW**, Phildelphia, U.S.A., 1985*

**ಸ್ಟ್ರೇಂಜ್ ಟೇಲ್ಸ್ ಆಫ್ ಜೀಸಸ್: ಎ ಸರ್ವೇ ಆಫ್ ಅನ್‌ಫೆಮೀಲಿಯರ್ ಗೋಸ್‌ಪೆಲ್ಸ್**

**(ಯೇಸುಕ್ರಿಸ್ತರಿಗೆ ಸಂಬಂಧಿಸಿ ವಿಚಿತ್ರ ಕಥೆಗಳು : ಅಪ್ರಸಿದ್ಧ ಸುವಾರ್ತೆಗಳ ಬಗ್ಗೆ ಸರ್ವೇಕ್ಷಣೆ)**

*(ಲೇಖಕ : **ಪೆರ್ ಬೆಸ್ಕೊ, ಫಿಲ್‌ಡೆಲ್ಫಿಯಾ**, ಯು.ಎಸ್.ಎ. 1984)*

ಅಹ್ಮದಿಯರು ಪ್ರತಿಪಾದಿಸುವ ವಿಷಯಕ್ಕೆ ಪೌರ್ವಾತ್ಯ ಮೂಲಗಳು ಸಾಕ್ಷ್ಯಾಧಾರ ನೀಡುತ್ತವೆ ಎಂದು ಪ್ರತಿಪಾದಿಸಲಾಗುತ್ತಿದೆಯಾದರೂ ಅವುಗಳಿಗೆ ಯಾವುದೇ ಮಹತ್ವವಿಲ್ಲ ಎಂದು ಈ ಪುಸ್ತಕದಲ್ಲಿ ಪ್ರತಿಪಾದಿಸಲಾಗಿದೆ. (ಪುಟ 63)

### 3. JESUS' TOMB IN INDIA

*Author :* ***PAUL PAPPAS**,*
*Berkerly, California, U.S.A., 1991*

**ಜೀಸಸ್ ಟೋಂಬ್ ಇನ್ ಇಂಡಿಯಾ**

**(ಯೇಸು ಕ್ರಿಸ್ತರ ಸಮಾಧಿ ಭಾರತದಲ್ಲಿ)**

*ಲೇಖಕ : **ಪೌಲ್ ಪಪ್ಪಾಸ್**, ಬರ್ಕಲೀ, ಕೆಲಿಫೋರ್ನಿಯಾ, 1991*

ಈ ಪುಸ್ತಕದಲ್ಲಿ ಹೀಗೆ ಬರೆಯಲಾಗಿದೆ:

"ಇಂಡಿಯಾ ದೇಶದ ಶ್ರೀನಗರದಲ್ಲಿ ಯೇಸುಕ್ರಿಸ್ತರ ಗೋರಿ ಇದೆ ಎಂದು ಅಹ್ಮದಿಯರು ವಾದಿಸುತ್ತಾರಾದರೂ ಅದರ ನಿಖರತೆ ಬಗ್ಗೆ ಚಾರಿತ್ರಿಕ ಸಾಕ್ಷ್ಯಗಳನ್ನು ನೀಡಿಲ್ಲ. ಕೆಲವು ದಂತ ಕಥೆಗಳನ್ನು ಅವಲಂಬಿಸುವ ಪ್ರಶ್ನಾರ್ಹವಾದ ಕೃತಿಗಳ ಹೊರತು ಬೇರೆ ಸಾಕ್ಷ್ಯಾಧಾರಗಳನ್ನು ಅವರು ಒದಗಿಸಿಲ್ಲ. ಅವರಿಗೆ ಪುರಾವಸ್ತುಗಳಿಗೆ ಸಂಬಂಧಿಸಿದ ಅಥವಾ ನರವಂಶ ಶಾಸ್ತ್ರಕ್ಕೆ ಸಂಬಂಧಿಸಿದ ಸಾಕ್ಷ್ಯಗಳ ಮೂಲಕ ಯೂಝ್ ಆಸಫರ ಗೋರಿ ಯೇಸು ಕ್ರಿಸ್ತರದೆಂದು ಸಾಬೀತುಗೊಳಿಸಲು ಸಾಧ್ಯವಾಗಿಲ್ಲ. ಆದುದರಿಂದ ಅಹ್ಮದಿಯರ ವಾದವು ಅಹ್ಮದಿಯಾ ಜಮಾಅತಿನ ಸ್ಥಾಪಕರಿಗೆ ಲಭಿಸಿದ ದೇವವಾಣಿಯನ್ನು ಮಾತ್ರ ಅವಲಂಬಿಸಿದೆ." (ಪುಟ 154)

### 4. JESUS DID NOT DIE IN KASHMIR

*Author :* ***S. LANDMANN**, Germany, 1996*

**ಜೀಸಸ್ ಡಿಡ್ ನೋಟ್ ಡೈ ಇನ್ ಕಾಶ್ಮೀರ್**
**(ಯೇಸುಕ್ರಿಸ್ತ ಕಾಶ್ಮೀರದಲ್ಲಿ ಮೃತನಾಗಲಿಲ್ಲ)**

*ಲೇಖಕ : **ಎಸ್. ಲ್ಯಾಂಡ್‌ಮನ್**, ಜರ್ಮನಿ.*

ಈ ಪುಸ್ತಕದ ಇಂಗ್ಲಿಷ್ ಭಾಷಾಂತರ ಲಭ್ಯವಲ್ಲ.

## ಅನುಬಂಧ

**1.** ಇತ್ತೀಚೆಗೆ ಅಬೂಬಕರ್ ಸಲಾಹುದ್ದೀನ್ "ಸೇವಿಂಗ್ ದಿ ಸೇವಿಯರ್" ಎಂಬ ಒಂದು ಪುಸ್ತಕವನ್ನು ಪುಸ್ತಕರೂಪದಲ್ಲಿಯೂ ಇಲೆಕ್ಟ್ರೋನಿಕ್ ಮಾಧ್ಯಮದಲ್ಲೂ ಪ್ರಕಟಿಸಿದ್ದಾರೆ. ಅದು ಅತ್ಯುತ್ತಮ ಸಂಶೋಧಕ ಗ್ರಂಥವಾಗಿದೆ. ಜಮ್ಮು ಪ್ರೆಸ್ ಅದನ್ನು ಪ್ರಕಟಿಸಿದೆ.

ಲೇಖಕರು ಪ್ರೊಫೆಸರ್ ಫಿದಾ ಹಸನೈನ್‌ರೊಂದಿಗೆ ಸಹಕರಿಸಿದ್ದಾರೆ. ಈ ಪ್ರೊಫೆಸರ್ ಈ ಪುಸ್ತಕಕ್ಕೆ ಮುನ್ನುಡಿ ಬರೆದಿದ್ದಾರೆ. ವಂಶವಾಹಿಗಳ ಅಧ್ಯಯನದ ಮೂಲಕ ಕಾಶ್ಮೀರ ಮತ್ತು ಅಫ್‌ಘಾನಿಸ್ಥಾನದ ಜನರನ್ನು ಇಸ್ರಾಯೇಲ್ ಜನಾಂಗದವರೊಂದಿಗೆ ಸಂಬಂಧ ಹೊಂದಿರುವುದನ್ನು ವಿವರಿಸಿದ್ದಾರೆ. ಕಾಶ್ಮೀರದ ಗೋರಿಯ ಚಾರಿತ್ರಿಕ ಹಿನ್ನಲೆಯನ್ನೂ ಸಮಗ್ರವಾಗಿ ವಿವರಿಸಲಾಗಿದೆ.

**2.** ಭಾರತ ಸರಕಾರದ ಹಿರಿಯ ಅಧಿಕಾರಿಯಾಗಿದ್ದ ಜೋಸೆಫ್ ಬೆಂಜಮಿನ್ ಬರೆದ ಪುಸ್ತಕದ ಹೆಸರು : THE MYSTERY OF ISRAEL'S TEN LOST TRIBES AND THE LEGEND OF JESUS IN INDIA. (ಇಸ್ರಾಯೇಲ್‌ನ ತಪ್ಪಿಸಿಕೊಂಡ ಗೋತ್ರಗಳ ರಹಸ್ಯ ಮತ್ತು ಯೇಸು ಕ್ರಿಸ್ತರು ಭಾರತದಲ್ಲಿ ಎಂಬ ದಂತ ಕಥೆ.)

ಲೇಖಕರು, ಕಾಶ್ಮೀರದ ಜನರು ಇಸ್ರಾಯೇಲ್ ಜನತೆಯೊಂದಿಗೆ ಹೊಂದಿರುವ ಚಾರಿತ್ರಿಕ ಮತ್ತು ಪುರಾವಸ್ತುಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ನೀಡಿದ್ದಾರೆ. ಅವರು ಯೂಝ್ ಆಸಫ್ ಗೋರಿಯನ್ನು ಯೇಸುಕ್ರಿಸ್ತರ ಗೋರಿಯೆಂದು ಗುರುತಿಸಿದ ಬಗ್ಗೆ ಹೇಳುತ್ತಾರೆ. ಈ ಪುಸ್ತಕದ ಒಂದು ವೈಶಿಷ್ಟ್ಯವೇನೆಂದರೆ, ಇದರಲ್ಲಿ ಕಾಶ್ಮೀರ ಕಣಿವೆಯ ವೃದ್ಧರಾದ ಗ್ರಾಮ ಮುಖ್ಯರೊಂದಿಗೆ ನಡೆಸಿದ ಸಂದರ್ಶನಗಳನ್ನು ನೀಡಲಾಗಿದೆ. ಅವರ ಮಾತುಗಳನ್ನು ಉಲ್ಲೇಖಿಸಿ ಅವರ ಇಸ್ರಾಯೇಲ್ ಪರಂಪರೆಯನ್ನು ಸಾಬೀತುಗೊಳಿಸಲಾಗಿದೆ.

**(ಸೌಜನ್ಯ : "The Muslim Sunrise" 2003 Issue 4)**

# ವ್ರತಾನುಷ್ಠಾನ ಏಕೆ?

★ ಹಝ್ರತ್ ಮಿರ್ಝಾ ಬಶೀರುದ್ದೀನ್ ಮಹ್ಮೂದ್ ಅಹ್ಮದ್

ವರ್ಷದಲ್ಲಿ ಒಂದು ತಿಂಗಳು ಉಪವಾಸ ವ್ರತವನ್ನು ಕಡ್ಡಾಯವಾಗಿ ವಿಧಿಸಲ್ಪಟ್ಟಿರುವುದರ ಉದ್ದೇಶವೇನೆಂದೂ ವ್ರತಾನುಷ್ಠಾನದಿಂದ ಏನು ಪ್ರಯೋಜನ ನಮಗುಂಟಾಗುವುದೆಂದೂ ಅಲ್ಲಾಹು ನಮಗೆ ಕಲಿಸುತ್ತಾನೆ. ಖುರ್‌ಆನ್ ಹೇಳುವುದನ್ನು ನೋಡಿರಿ: "ಲಅಲ್ಲಕುಂ ತತ್ತಕೂನ್" (ನೀವು ದೋಷಬಾಧೆಯಿಂದ ದೂರವಿದ್ದುಕೊಂಡು, ರಕ್ಷಿಸಲ್ಪಡಲಿಕ್ಕಾಗಿ). "ತತ್ತಕೂನ್" ಎಂಬ ಪದ ಖುರ್‌ಆನಿನಲ್ಲಿ ಮೂರು ವಿಧ ಅರ್ಥಗಳಲ್ಲಿ ಪ್ರಯೋಗಿಸಲ್ಪಟ್ಟು ಕಾಣಬಹುದು: ವಿಷಮತೆಗಳಿಂದ ರಕ್ಷೆ ಪಡೆಯುವುದು, ಪಾಪಗಳಿಂದ ಮುಕ್ತಿ ಹೊಂದುವುದು, ಆಧ್ಯಾತ್ಮಿಕ ಉನ್ನತ ಪದವಿಗಳನ್ನು ಕರಗತಮಾಡುವುದು. ಹೀಗೆ ವ್ರತಾನುಷ್ಠಾನದ ಮೂರು ಗುಣಗಳನ್ನು ಅಲ್ಲಾಹು ಈ ವಚನ ಮೂಲಕ ನಮಗೆ ತಿಳಿಸಿಕೊಟ್ಟಿರುವನು.

ಪ್ರಥಮವಾಗಿ, ವಿಷಮತೆಗಳಿಂದ ರಕ್ಷೆಗಳಿಸುವುದು ಹೇಗೆಂದು ನೋಡಿರಿ. ಇದರಲ್ಲಿ ಬಾಹ್ಯವಾಗಿ ತುಸು ವಿರೋಧಾಭಾಸವಿರುವುದಾಗಿ ಅನಿಸಬಹುದು. ಉಪವಾಸ ಅನುಷ್ಠಿಸುವುದೇ ವಿಷಮಕರವಾದ ಒಂದು ಕಾರ್ಯವಾಗಿರುವಾಗ ಅದು ವಿಷಮತೆಗಳಿಗೆ ಹೇಗೆ ಪರಿಹಾರ ಮಾರ್ಗವಾಗುವುದು? ಇದಾಗಿದೆ ಪ್ರಶ್ನೆ. ಆದರೆ ತುಸು ಆಲೋಚಿಸುವುದಾದರೆ ನಮಗೆ ಈ ಸಂಗತಿಯನ್ನು ಸುಲಭವಾಗಿ ಗ್ರಹಿಸಬಹುದು. ವ್ರತಾನುಷ್ಠಾನವು ಮನುಷ್ಯರ ಸಾಮಾಜಿಕ ಸಂರಕ್ಷಣೆಯ ಎರಡು ವಿಧ ಪಾಠಗಳನ್ನು ನಮಗೆ ಬೋಧಿಸುತ್ತದೆ. ಧನಿಕರು ಎಲ್ಲಾ ದಿನಗಳಲ್ಲಿ ರುಚಿಕರವಾದ ಆಹಾರಗಳನ್ನು ಭಕ್ಷಿಸುತ್ತಾರೆ. ಅವರಿಗ ಹಸಿವೆಯಿಂದ ದಿನ ದೂಡುವ ತಮ್ಮ ದರಿದ್ರರಾದ ಸಹೋದರರ ವಿಚಾರವೇನೂ ತಿಳಿದಿರುವುದಿಲ್ಲ. ಕಾರಣವೇನೆಂದರೆ, ಅವರು ಒಮ್ಮೆಯಾದರೂ ಹಸಿವೆಯ ಕಷ್ಟವೇನೆಂದು ಅನುಭವಿಸಿರುವುದಿಲ್ಲ. ಆದುದರಿಂದ ಅದು ಏನೆಂದು ಅವರಿಗೆ ತಿಳಿದುಕೊಳ್ಳಲು ಸಾಧ್ಯವಾಗುವುದಿಲ್ಲ. ಆದರೆ ಇಸ್ಲಾಮಿನ ವಿಧಿ ಪ್ರಕಾರ ಧನಿಕರು ಸಹ ಕಡ್ಡಾಯವಾಗಿ ಉಪವಾಸ ಅನುಷ್ಠಿಸಬೇಕು. ಆಗ ಹಸಿವೆಯ ಕಷ್ಟವೇನೆಂದು ಅವರಿಗೆ ಅನುಭವವಾಗುತ್ತದೆ. ಆ ಮೂಲಕ ಅವರಿಗೆ ತಮ್ಮ ನಿರ್ಗತಿಕರಾದ ಸಹೋದರರ ಸ್ಥಿತಿಯೇನೆಂದು ತಿಳಿಯಲು ಸಂದರ್ಭ ಒದಗುತ್ತದೆ. ಹಾಗೆ ಅವರೊಡನೆ ಸಹತಾಪ ತೋರಿಸಬೇಕೆಂಬ ಪ್ರಜ್ಞೆಯುಂಟಾಗುತ್ತದೆ. ಅದರ ಫಲವಾಗಿ ಸಮುದಾಯಕ್ಕೆ ಸಂರಕ್ಷಣೆ ಮತ್ತು ಪ್ರಗತಿ ಉಂಟಾಗುತ್ತದೆ. ಸಮುದಾಯದ ಸಂರಕ್ಷಣೆ ವ್ಯಕ್ತಿಯ ಸಂರಕ್ಷಣೆಯೂ ಆಗುವುದಷ್ಟೆ.

ಎರಡನೇ ಪಾಠ ಇದಾಗಿದೆ: ಮನುಷ್ಯರು ಆಲಸಿಗರೂ ಪ್ರಜ್ಞಾವಿಹೀನರೂ ಸುಖಲೋಲುಪರೂ ಆಗಿರಲಿಕ್ಕೆ ಇಸ್ಲಾಂ ಅನುಮತಿಸುವುದಿಲ್ಲ. ಬದಲಾಗಿ, ಅಗತ್ಯ ಬಂದಾಗ ಸರ್ವವಿಧ ವಿಷಮತೆಗಳನ್ನೂ ಕಷ್ಟಕಾರ್ಪಣ್ಯಗಳನ್ನೂ ಸಹಿಸುವ ಸನ್ನದ್ಧತೆ ಅವರಿಗಿರಬೇಕೆಂದು ಇಸ್ಲಾಂ ಉದ್ದೇಶಿಸುತ್ತದೆ. ವ್ರತಾನುಷ್ಠಾನ ಪ್ರತಿ ವರ್ಷ ಮುಸ್ಲಿಮರಲ್ಲಿ ಈ ಒಂದು ಸ್ವಭಾವವನ್ನು ಉಂಟುಮಾಡುತ್ತದೆ. ಇಸ್ಲಾಮಿನ ಈ ವಿಧಿ ಪ್ರಕಾರ ವರ್ತಿಸುವವರು ಎಂದಿಗೂ ಸುಖಲೋಲುಪತೆಯಲ್ಲೂ ಸೋಮಾರಿತನದಲ್ಲೂ ಸಿಲುಕಿ ನಾಶಹೊಂದಲಾರರು.

ವ್ರತಾನುಷ್ಠಾನದಿಂದ ಮನುಷ್ಯನು ಪಾಪ ವಿಮುಕ್ತಿ ಹೊಂದುವುದು ಹೇಗೆಂದು ನೋಡೋಣ. ವಾಸ್ತವದಲ್ಲಿ ಮನುಷ್ಯರು ಭೌತಿಕ ಸುಖ ಮತ್ತು ಸ್ವೇಚ್ಛೆಯಲ್ಲಿ ಲೀನರಾಗುವ ನಿಮಿತ್ತ ಪಾಪ ಉಂಟಾಗುತ್ತದೆ. ಒಬ್ಬನು ಒಂದು ಚಟಕ್ಕೆ ಗುರಿಯಾದರೆ ಅದನ್ನು ತ್ಯಜಿಸಲು ಅವನಿಗೆ ಕಷ್ಟವಾಗುತ್ತದೆ. ಆದರೆ ತನ್ನ ಇಷ್ಟಾನುಸಾರ ಅದನ್ನು ಉಪೇಕ್ಷಿಸುವ ಶಕ್ತಿ ಅವನು ಆರ್ಜಿಸಿದ್ದರೆ, ನಂತರ ಆ ಇಚ್ಛೆಗಳು ಅವನನ್ನು ಪರಾಭವಗೊಳಿಸಲಾರವು. ಓರ್ವನು ಸರ್ವವಿಧ ಭೌತಿಕ ಸುಖಗಳನ್ನೂ ಇಚ್ಛೆಗಳನ್ನೂ ದೇವನಿಗೆ ಬೇಕಾಗಿ ತ್ಯಜಿಸಿ ಒಂದು ತಿಂಗಳ ಕಾಲ ಸ್ಥಿರತೆಯಿಂದ ಸ್ವಯಂ ನಿಯಂತ್ರಿಸುವ ಅಭ್ಯಾಸವನ್ನು ಬೆಳೆಸುವುದಾದರೆ ಅವನಿಗೆ ತನ್ನನ್ನು ಪಾಪದೆಡೆಗೆ ಕೊಂಡೊಯ್ಯುವ ಇಚ್ಛೆಗಳನ್ನು ಸುಲಭದಲ್ಲಿ ದಮನಿಸಲು ಸಾಧ್ಯವಾಗುವುದು..

ಮೇಲೆ ಹೇಳಿದ ಪ್ರಕಾರ ವ್ರತಾನುಷ್ಠಾನ ಮೂಲಕ ಆತ್ಮ ಪರಿಶುದ್ಧತೆ ಮತ್ತು ಸಂಯಮ ಶಕ್ತಿ ಸಂಪಾದಿಸಿದ ಮನುಷ್ಯನಿಗೆ ಈ ಮಾಸದಲ್ಲಿ ಹೆಚ್ಚಿನ ಸತ್ಕರ್ಮ, ದೇವಧ್ಯಾನ, ಆರಾಧನೆ ಮತ್ತು ಪ್ರಾರ್ಥನೆಗಳನ್ನು ಮಾಡುವರೆ ಪ್ರಚೋದನೆ ಮತ್ತು ಸಂದರ್ಭ ಲಭಿಸುತ್ತದೆ. ಹಗಲಿನಲ್ಲಿ ಮಾತ್ರವಲ್ಲ ರಾತ್ರಿಯಲ್ಲೂ ಆರಾಧನೆ ಮತ್ತು ಪ್ರಾರ್ಥನೆಗಳನ್ನು ಮಾಡುವರೆ ಸಂದರ್ಭ ಒದಗುವುದು. ಮಾತ್ರವಲ್ಲ, ಮನುಷ್ಯನು ಅಲ್ಲಾಹುವಿನ ಸಂತುಷ್ಟಿಯನ್ನು ಬಯಸಿ ತನ್ನ ಭೌತಿಕ ಸುಖಗಳನ್ನು ಉಪೇಕ್ಷಿಸುವಾಗ ಅಲ್ಲಾಹು ಸಹ ಅವನನ್ನು ತನ್ನೆಡೆಗೆ ಆಕರ್ಷಿಸಿ ಅವನ ಆತ್ಮಕ್ಕೆ ಹೆಚ್ಚಿನ ಶಕ್ತಿ ಮತ್ತು ಉನ್ನತಿಯನ್ನು ನೀಡುತ್ತಾನೆ. ಹೀಗೆ ವ್ರತಾನುಷ್ಠಾನ ಮೂಲಕ ಮನುಷ್ಯನಿಗೆ ಉನ್ನತವಾದ ಆಧ್ಯಾತ್ಮಿಕ ಸ್ಥಾನವನ್ನು ಗಳಿಸುವರೆ ಸಾಧ್ಯವಾಗುತ್ತದೆ.

# 'ಸನ್ಮಾರ್ಗ'ದ ಜಲ್ಪ

★ ಕೆ. ಎಂ. ಉಮರ್, ಮಡಿಕೇರಿ

'ಸನ್ಮಾರ್ಗ' ವಾರಪತ್ರಿಕೆ 2013 ಜನವರಿ 13-19ರ "ಕೇಳಿದಿರಾ? ಕೇಳಿ" ವಿಭಾಗದಲ್ಲಿ ಎಸ್. ಬಿ. ಗಾಣಿಗೇರ, ಶಿವಮೊಗ್ಗ ಇವರು, ಸಾಯಿಬಾಬಾ ಪ್ರವಾದಿಯೇ? ಎಂದು ಕೇಳಿದ ಪ್ರಶ್ನೆಗೆ ಉತ್ತರಿಸಿದ ಸನ್ಮಾರ್ಗದ ಮುಜೀಬ್ ವಾಗ್ದತ್ತ ಮಹ್‌ದೀ ಮಸೀಹ್ ಹಝ್ರತ್ ಮಿರ್ಝಾ ಗುಲಾಂ ಅಹ್ಮದ್‌ರವರನ್ನೂ(ಅ) ಅವರ ಶಿಷ್ಯರನ್ನೂ ಕಾಫಿರ್ ಆಗಿ ಚಿತ್ರೀಕರಿಸಿದ್ದಾರೆ. ಇದಕ್ಕವರು ಆಧಾರವಾಗಿ ತೋರಿಸಿರುವುದು, ಪವಿತ್ರ ಖುರ್‌ಆನಿನ ಎರಡು ಆಯತ್‌ಗಳಾಗಿವೆ. ಮೊದಲನೆಯದು ಸೂರಃ ಅಲ್ ಅಹ್‌ಝಾಬಿನ 40ನೇ ಆಯತ್. ಇನ್ನೊಂದು ಸೂರಃ ಆಲಿ ಇಮ್ರಾನಿನ 81ನೇ ಆಯತ್. ಈ ಎರಡು ಆಯತ್‌ಗಳಿಂದಲೂ ತಿಳಿದು ಬರುವುದು ಮಾನವ ವಂಶಕ್ಕೆ ಅತಿದೊಡ್ಡ ಅನುಗ್ರಹವಾದ ನುಬುವ್ವತ್ ಕೊನೆಗೊಂಡಿದೆ ಎಂದಲ್ಲ. ಬದಲಾಗಿ ಇಸ್ಲಾಮಿನ ವಿಜಯಕ್ಕಾಗಿ ಹಝ್ರತ್ ಮುಹಮ್ಮದ್ ಮುಸ್ತಫಾರವರ(ಸ) ಶಿಷ್ಯರಲ್ಲಿ ನುಬುವ್ವತ್ ಜಾರಿಯಲ್ಲಿರುವುದು ಎಂದಾಗಿದೆ.

ಇಂತಹ ವಿಷಯಗಳು ಇವರ ಪತ್ರಿಕೆಗಳಲ್ಲಿ ಆಗಾಗ ಪ್ರಕಟಗೊಳ್ಳುತ್ತಲೇ ಇರುತ್ತವೆ. ಅದಕ್ಕೆ ಅಹ್ಮದೀ ಮುಸ್ಲಿಮರಾದ ನಾವು ಆಗಾಗ ಉತ್ತರ ಬರೆಯುತ್ತಲೇ ಇದ್ದೇವೆ. ಅವೆಲ್ಲಾ ಇವರ ಮುಂದೆ ಗೋರ್ಗಲ್ಲ ಮೇಲೆ ಮಳೆ ಸುರಿದಂತೆ ಸರಿ. ಆದರೂ ಓದುಗರ ಗಮನಕ್ಕಾಗಿ ಪುನಃ ಉತ್ತರ ಬರೆಯುತ್ತೇವೆ.

ಮೊದಲನೆಯದಾಗಿ, ಸೂರಃ ಅಲ್ ಅಹ್‌ಝಾಬಿನ 41ನೇ ಆಯತಿನಲ್ಲಿ ಹ। ಮುಹಮ್ಮದ್‌ರು(ಸ) ಅಂತ್ಯ ಪ್ರವಾದಿ, ಅವರ ನಂತರ ಇನ್ನು ಯಾವ ಪ್ರವಾದಿಯೂ ಬರಲಾರರು ಎಂಬ ವಿಷಯಕ್ಕೆ ಉತ್ತರಿಸುತ್ತೇನೆ.

ಪವಿತ್ರ ಖುರ್‌ಆನಿನ ಸೂರಃ ಅಹ್‌ಝಾಬಿನ 40ನೇ ಸೂಕ್ತ – "ಮಾಕಾನ ಮುಹಮ್ಮದುನ್ ಅಬಾ ಅಹದಿನ್ ಮಿನ್‌ರ್ರಿಜಾಲಿಕುಂ ವಲಾಕಿನ್ ರ್ರಸೂಲಲ್ಲಾಹಿ ವ ಖಾತಮನ್ನಬಿಯ್ಯೀನ್" ಎಂಬ ಆಯತಿನ "ವ ಖಾತಮನ್ನಬಿಯ್ಯೀನ್" ಎಂಬುದಕ್ಕೆ ಹ। ಮುಹಮ್ಮದ್ ನಬಿ(ಸ) ಅಂತ್ಯ ಪ್ರವಾದಿ ಎಂದೂ ಅವರ ನಂತರ ಯಾವುದೇ ಪ್ರವಾದಿ ಬರಲಾರರೆಂದೂ ಇವರು ವಾದಿಸುತ್ತಾರೆ. ಆದರೆ "ಖಾತಮನ್ನಬಿಯ್ಯೀನ್" ಎಂಬುದರ ಅರ್ಥ ಪ್ರವಾದಿಗಳ ಮುದ್ರೆ, ಪ್ರವಾದಿಗಳಲ್ಲಿ ಶ್ರೇಷ್ಠ ಎಂದಾಗಿದೆ. ಹ। ಮುಹಮ್ಮದ್ ಮುಸ್ತಫಾರವರ(ಸ) ಧರ್ಮಪತ್ನಿ ಹ। ಆಯಿಶಾ ಸಿದ್ದೀಖರವರೂ(ರ) ನಂತರ ಜೀವಿಸಿದ ಅನೇಕ ಮಹಾತ್ಮರುಗಳೂ ತಮ್ಮ ಶಿಷ್ಯರಿಗೆ ಉಪದೇಶಿಸಿದ ಅದೇ ವಿಶ್ವಾಸವಾಗಿದೆ ಅಹ್ಮದಿಯಾ ಮುಸ್ಲಿಂ ಜಮಾಅತಿನ ವಿಶ್ವಾಸ. ಆದ್ದರಿಂದ ಸೂರಃ ಅಹ್‌ಝಾಬಿನ 40ನೇ ಆಯತ್‌ನಲ್ಲಿ ಹ। ಮುಹಮ್ಮದ್(ಸ) ಅಂತ್ಯಪ್ರವಾದಿ ಎಂದು ಹೇಳಿಲ್ಲ. ಮಾತ್ರವಲ್ಲ, ಪವಿತ್ರ ಖುರ್‌ಆನಿನಲ್ಲಿ ಹ। ಮುಹಮ್ಮದ್‌ರನ್ನು(ಸ) ಅಂತ್ಯ ಪ್ರವಾದಿ ಎಂದು ಎಲ್ಲೂ ಹೇಳಿಲ್ಲ. ಬದಲಾಗಿ ಆ ಪುಣ್ಯಾತ್ಮರ ನಂತರ ಇಸ್ಲಾಂ ದೀನ್ ದುರ್ಬಲಗೊಳ್ಳುವುದು; ಪವಿತ್ರ ಖುರ್‌ಆನನ್ನು ಜನರು ಕೈಬಿಡುವರು; ಆ ಕಾಲದಲ್ಲೆಲ್ಲ ಅವರ ಶಿಷ್ಯರಲ್ಲಿ ಪ್ರವಾದಿಗಳು ಬರುವರು ಎಂದು ಪವಿತ್ರ ಖುರ್‌ಆನ್ ನಮಗೆ ಮನವರಿಕೆ ಮಾಡಿಕೊಡುತ್ತದೆ. ಇದಕ್ಕೆ ಅನುಗುಣವಾಗಿ ಹ। ನಬಿ ಕರೀಂರವರು(ಸ) ಸುಮಾರು ಎಪ್ಪತ್ತಕ್ಕೂ ಮಿಗಿಲಾದ ಹದೀಸ್‌ಗಳಲ್ಲಿ ಈಸಬ್ನು ಮರ್‌ಯಂ ಎಂಬ ಗುಣನಾಮದ ಒಬ್ಬ ಪ್ರವಾದಿ ಬರುವರು ಎಂದು ಹೇಳಿರುವರು. ಹ। ಆಯಿಶಾ ಸಿದ್ದೀಖರವರು(ರ) ಸೇರಿದಂತೆ ಅನೇಕ ಇಮಾಮರುಗಳು ತಮ್ಮ ಗ್ರಂಥಗಳಲ್ಲಿ ಈ ರೀತಿ ಬರೆದರು: ಖಾತಂ ಎಂಬುದರ ಅರ್ಥ ಹ। ಮುಹಮ್ಮದ್‌ರವರ(ಸ) ನಂತರ ಇನ್ನು ಯಾವ ಪ್ರವಾದಿಯೂ ಬರಲಾರರು ಎಂದಲ್ಲ. ಬೇರೊಂದು ಶರೀಅತಿನ ಪ್ರವಾದಿಗಳು ಇನ್ನು ಬರಲಾರರು. ಮುಹಮ್ಮದ್ ಮುಸ್ತಫಾರವರ(ಸ) ಉಮ್ಮತಿಯಲ್ಲಿ ಇನ್ನೂ ಪ್ರವಾದಿಗಳು ಬರಬಹುದು. ಈ ರೀತಿ ಪ್ರವಾದಿಗಳು ಬರುವುದರಿಂದ ಹ। ಮುಹಮ್ಮದ್‌ರವರ(ಸ) ಖಾತಂ ಪದವಿಗೆ ಕಳಂಕ ಬರುವುದಿಲ್ಲ.

ಆದ್ದರಿಂದ ಹ। ಮುಹಮ್ಮದ್ ಮುಸ್ತಫಾರವರ(ಸ) ನಂತರ ಅವರ ಉಮ್ಮತಿಯಲ್ಲಿ ಎಲ್ಲರೂ ಉತ್ತಮರಾಗಿಯೇ ಇರುವರೆಂದೂ ಆದ್ದರಿಂದ ಅವರ ಶಿಷ್ಯರಲ್ಲಿ ಒಬ್ಬ ಪ್ರವಾದಿ ಬರಲಾರರೆಂದೂ ಸಮರ್ಥಿಸಲು ಸನ್ಮಾರ್ಗದ ಮುಜೀಬ್‌ರಿಗೆ ಕೊನೆಯ ತನಕ ಸಾಧ್ಯವಿಲ್ಲ. ಇವರು, ಇನ್ನು ಯಾರೂ ತಾನು ಪ್ರವಾದಿ ಎಂದು ವಾದಿಸುವಂತಿಲ್ಲ ಎಂದು ಬರೆದಿರುವುದು ಇವರ ಸ್ವಂತ ಭಾವನೆಯಾಗಿದೆ.

ಮುಂದುವರಿದು ಮುಜೀಬ್ ಬರೆಯುತ್ತಾರೆ: ಅಂತಹ ಓರ್ವ ಮಹ್‌ದಿಯ ಕಲ್ಪನೆಯೇ ಕಾಲ್ಪನಿಕವಾಗಿದೆ. ಮಹ್‌ದಿಯ ಆಗಮನದ ಕುರಿತು ಮುಸ್ಲಿಂ ಸಮುದಾಯ ನಿರೀಕ್ಷೆಯಲ್ಲಿದ್ದರೂ ಅದರ ಕುರಿತಾಗಿ ಬಂದಿರುವ ವರದಿಗಳು ದುರ್ಬಲವೆಂದು ವಿದ್ವಾಂಸರು ಹೇಳುತ್ತಾರೆ.

ಅಹ್ಮದಿಯಾ ಮುಸ್ಲಿಂ ಜಮಾಅತಿನ ಮೇಲೆ ಇವರಿಗಿರುವ ದ್ವೇಷ ಕಾರಣ ಖಾತಮುಲ್ ಅಂಬಿಯಾ ಹ। ಮುಹಮ್ಮದ್ ಮುಸ್ತಫಾ(ಸ) ಸಹೀಹಾದ ಹದೀಸ್‌ಗಳು ಕೂಡ ಇವರಿಗೆ ದುರ್ಬಲವಾಯಿತು. ಪವಿತ್ರ ಖುರ್‌ಆನ್ ಯಹೂದಿಗಳ ಕುರಿತು ಹೇಳುತ್ತದೆ:

"ಯಹೂದ್ಯರ ಪೈಕಿ ಕೆಲವರು (ದೈವಿಕ) ವಚನಗಳನ್ನು ಅವುಗಳ ಸ್ಥಾನಗಳಿಂದ ಪಲ್ಲಟಗೊಳಿಸುತ್ತಾರೆ." (4:46)

ನಬಿ ವಚನವಾದ ಸಿಹಾಹುಸಿತ್ತಾದಲ್ಲಿ ಪ್ರಥಮ ಸ್ಥಾನ ಪಡೆದಂತಹ ಸಹೀಹುಲ್ ಬುಖಾರಿ, ಅದರಲ್ಲೂ ಇಬ್ನು ಅಬ್ಬಾಸ್ ವರದಿ ಮಾಡಿದ ಹದೀಸ್‌ನಲ್ಲಿ ನಾಲ್ಕು ಸಲ ಹ। ಮುಹಮ್ಮದ್‌ರವರು(ಸ) ಪ್ರಮಾಣ ಮಾಡಿ ಹೇಳಿರುವರು: ನಿಮ್ಮ ಪೈಕಿ ಇಬ್ನು ಮರ್‌ಯಂ ಎಂಬ ಹೆಸರಿನ ಒಬ್ಬ ಪ್ರವಾದಿ ಬರುವರು ಎಂದು.

ಮಹ್‌ದಿ ಮತ್ತು ಇಬ್ನು ಮರ್‌ಯಂ ಒಂದೇ ವ್ಯಕ್ತಿಯ ಹೆಸರೆಂದು ಸಿಹಾಹುಸಿತ್ತಾದ, ಇಬ್ನುಮಾಜಾದಲ್ಲೂ ಇದೆ. ಆದ್ದರಿಂದ ಮಹ್‌ದಿಯ ಕುರಿತಾದ ವರದಿ ದುರ್ಬಲವಲ್ಲ; ಬಲವಿರುವುದೇ ಆಗಿದೆ. ಇದರ ಕುರಿತು ಅಬುಲ್ ಆಲಾ ಮೌದೂದಿಯವರು ಹೇಳಿರುವುದು – ಬಹುಶಃ ಈಸಾರವರು(ಅ) ವಫಾತಾಗಿದ್ದರೂ ಸಹ ಅಂತ್ಯಕಾಲದಲ್ಲಿ ಅಲ್ಲಾಹು ಅವರನ್ನು ಜೀವ ಕೊಟ್ಟಾದರೂ ಲೋಕಕ್ಕೆ ಕಳುಹಿಸುವನು ಎಂದು. ಮೌಲಾನರಿಗೆ ಚೆನ್ನಾಗಿ ಗೊತ್ತಿದೆ – ಎಪ್ಪತ್ತಕ್ಕೂ ಮಿಗಿಲಾದ ಹದೀಸಿನಲ್ಲಿ ನಿಮ್ಮೊಳಗೆ ಇಬ್ನು ಮರ್‌ಯಂ ಬರುವರೆಂಬ ವಚನವಿದೆ. ಆದ್ದರಿಂದ ವಿದ್ವಾಂಸರ ಮಾತು ಇಲ್ಲಿ ಆಧಾರವಲ್ಲ; ಪವಿತ್ರ ಖುರ್‌ಆನ್ ಮತ್ತು ಹದೀಸ್‌ಗಳೇ ಮುಖ್ಯ.

ಮುಂದುವರಿದು ಸನ್ಮಾರ್ಗದ ಮುಜೀಬ್ ಬರೆಯುತ್ತಾರೆ: *"ಖುರ್‌ಆನಿನಲ್ಲಿ ಪ್ರವಾದಿಗಳಿಂದ ಪಡೆಯಲಾಗಿದೆ ಎಂದು ಹೇಳಲಾಗಿರುವ ಕರಾರು ಪ್ರವಾದಿ ಮುಹಮ್ಮದ್(ಸ) ಅವರಿಗಿಂತ ಮುಂಚಿನ ಪ್ರವಾದಿಗಳಿಂದಾಗಿತ್ತು. ಏಕೆಂದರೆ ಪ್ರವಾದಿ ಮುಹಮ್ಮದ್(ಸ) ಅಂತಿಮ ಪ್ರವಾದಿಯಾಗಿದ್ದಾರೆ. ಅವರ ನಂತರ ಕಿಯಾಮತ್‌ನ ವರೆಗೆ ಯಾವ ಪ್ರವಾದಿಯೂ ಬರಲಿಕ್ಕಿಲ್ಲ. ಇನ್ನು ಯಾರಾದರೂ ತಾನು ಪ್ರವಾದಿ*

ಯೆಂದು ವಾದಿಸಿದಾಗ ಆತ ಅಪ್ಪಟ ಮೋಸಗಾರ. ಕಳೆದ ಶತಮಾನದಲ್ಲಿ ಪಂಜಾಬಿನಲ್ಲಿ ಮಿರ್ಝಾ ಗುಲಾಮ್ ಅಹ್ಮದ್ ಎಂಬವರು ತಾನು ಪ್ರವಾದಿ ಎಂದು ಘೋಷಿಸಿದರು. ಬ್ರಿಟಿಷ್ ಸರಕಾರವು ಅವರಿಗೆ ಸರ್ವ ರೀತಿಯಲ್ಲೂ ಬೆಂಬಲ ನೀಡಿತ್ತು. ಆದರೆ ಮುಸ್ಲಿಮರ ಪ್ರತಿಕ್ರಿಯೆ ಗಮನಾರ್ಹವಾಗಿತ್ತು . ಮುಸ್ಲಿಮ್ ಸಮುದಾಯದ ಎಲ್ಲ ವಿದ್ವಾಂಸರೂ ಒಕ್ಕೊರಲಿನಿಂದ ಅದನ್ನು ವಿರೋಧಿಸಿದರು. ಮಾತ್ರವಲ್ಲ, ಅವರನ್ನೂ ಅವರ ಮೇಲೆ ವಿಶ್ವಾಸವಿರಿಸಿದವರನ್ನೂ ಕಾಫಿರರೆಂದು ಸಾರಿದರು.

"ಮೇಲೆ ಪರಾಮರ್ಶಿಸಿದ ಕುರ್‌ಆನ್ ಸೂಕ್ತದ ಅರ್ಥ ಹೀಗಿದೆ: 'ಅಲ್ಲಾಹನು ಪ್ರವಾದಿಗಳೊಡನೆ, ಇಂದು ನಾವು ನಿಮಗೆ ಗ್ರಂಥ ಮತ್ತು ಸದ್ವಿವೇಕ ಪ್ರದಾನ ಮಾಡಿರುತ್ತೇವೆ. ನಾಳೆ ಇನ್ನೊಬ್ಬ ಸಂದೇಶವಾಹಕರು ನಿಮ್ಮಲ್ಲಿ ಮೊದಲಿನಿಂದಲೇ ಇರುವ ಇದೇ ಶಿಕ್ಷಣದ ದೃಢೀಕರಣ ಮಾಡುತ್ತಾ ನಿಮ್ಮ ಬಳಿಗೆ ಬಂದರೆ ನೀವು ಅವನ ಮೇಲೆ ವಿಶ್ವಾಸವಿಟ್ಟು ಅವನಿಗೆ ಸಹಾಯ ಮಾಡಬೇಕಾಗುವುದು ಎಂಬ ಕರಾರು ಪಡೆದುದನ್ನು ಸ್ಮರಿಸಿರಿ. (3:81)

"ಆದ್ದರಿಂದ ಪ್ರವಾದಿ ಮುಹಮ್ಮದ್‌ರ ನಂತರ ಯಾರೂ ತಾನು ಪ್ರವಾದಿಯೆಂದು ಘೋಷಿಸುವಂತಿಲ್ಲ."

ಇಲ್ಲಿ ಮುಜೀಬ್ ಸೂರಃ ಆಲಿ ಇಮ್ರಾನಿನ 81ನೇ ಸೂಕ್ತದ ಅರ್ಥ ಬರೆದು, ನಂತರ ಅವರ ಸ್ವಂತ ಕೆಲವು ವಿವರಣೆ ಬರೆದಿದ್ದಾರೆ. ಅದೆಷ್ಟು ಸರಿ ಎಂದು ನೋಡೋಣ.

ಇಲ್ಲಿ ಮುಜೀಬ್ ಪ್ರಸ್ತುತ ಖುರ್‌ಆನ್ ಸೂಕ್ತಕ್ಕೆ ತದ್ವಿರುದ್ಧವಾದ ವ್ಯಾಖ್ಯಾನ ಬರೆದು ತಮ್ಮ ಹೃದಯದ ಅನಿಸಿಕೆಯನ್ನು ತೋರ್ಪಡಿಸುತ್ತಾರೆ. ಮೇಲೆ ಪರಾಮರ್ಶಿಸಿದ ಪವಿತ್ರ ಖುರ್‌ಆನಿನ ಸೂಕ್ತಕ್ಕೆ ವ್ಯಾಖ್ಯಾನದ ಅಗತ್ಯವಿಲ್ಲವೆಂದು ತಿಳಿದು ಬರುತ್ತದೆ. ನಿಮಗೆ ಪ್ರದಾನ ಮಾಡಿದ ಗ್ರಂಥ ಕ್ರಮೇಣ ನಿಮ್ಮಿಂದ ದೂರವಾಗುವುದು, ಆಗ ಇನ್ನೊಬ್ಬ ಸಂದೇಶವಾಹಕ ನಿಮ್ಮಲ್ಲಿಗೆ ಬರುತ್ತಾರೆ. ಆಗ ನೀವು ಅವರನ್ನು ವಿರೋಧಿಸದೆ ಅವರಲ್ಲಿ ವಿಶ್ವಾಸವಿಟ್ಟು ಅವರಿಗೆ ಸಹಾಯ ಮಾಡಿರಿ ಎಂದಾಗಿದೆ ಕರಾರು. ಆದರೆ ಮುಜೀಬ್ ಹಾಗೂ ಅವರ ಪೂರ್ವಿಕರು ವಾದಿಸುವುದು ಮುಹಮ್ಮದ್‌ರವರ(ಸ) ನಂತರ ಯಾರೂ ಸಂದೇಶವಾಹಕ ಬರುವಂತಿಲ್ಲ. ಹಾಗೇನಾದರೂ ಬಂದರೆ ಅವರನ್ನು ಬಹುಸಂಖ್ಯಾತ ಮುಸ್ಲಿಮರೂ ಅವರ ವಿದ್ವಾಂಸರೂ ಸೇರಿ ಕಾಫಿರ್ ಎಂದು ವಿರೋಧಿಸಬೇಕೆಂದು. ಇವರಿಗೆ ಯಾರು ಈ ಅಧಿಕಾರ ಕೊಟ್ಟರು?

ಮುಜೀಬರ ಗುರು ಅಬುಲ್ ಆಲಾ ಮೌದೂದಿ ಸೂರಃ ಆಲಿ ಇಮ್ರಾನಿನ 81ನೇ ಆಯತಿಗೆ ಹೀಗೆ ಟಿಪ್ಪಣಿ ಬರೆದಿದ್ದಾರೆ: "ಇದರ ಅರ್ಥವೇನೆಂದರೆ – ಪ್ರತಿಯೊಬ್ಬ ಪ್ರವಾದಿಯಿಂದಲೂ ಈ ಬಗ್ಗೆ ಪ್ರಮಾಣ ವಚನ ಪಡೆದುಕೊಳ್ಳಲಾಗುತ್ತಿತ್ತು. ಪ್ರವಾದಿಯಿಂದ ಪಡೆದ ಪ್ರಮಾಣ ವಚನಕ್ಕೆ ಅವರ ಅನುಯಾಯಿಗಳೂ ಬಾಧ್ಯರಾಗುವುದು ಸಹಜ. ಇಲ್ಲಿ ನೀಡಿರುವ ಆದೇಶವೆಂದರೆ – ನೀವು ಬಾಧ್ಯತೆ ಹೊಂದಿರುವ ಅದೇ ಧರ್ಮದ ಆಹ್ವಾನ ಮತ್ತು ಸಂಸ್ಥಾಪನೆಗಳಿಗಾಗಿ ನಮ್ಮ ಕಡೆಯಿಂದ ಕಳುಹಿಸಲ್ಪಡುವ ಪ್ರವಾದಿಗೆ ನೀವು ಸಹಕಾರ ನೀಡಬೇಕಾಗುವುದು. ಅವರೊಂದಿಗೆ ಪಕ್ಷಪಾತವೆಸಗಬಾರದು. ನಿಮ್ಮನ್ನೇ ನೀವು ಧರ್ಮದ ಏಕಾಧಿಕಾರಿಗಳೆಂದು ಭಾವಿಸಿಕೊಳ್ಳಬಾರದು. ಸತ್ಯವನ್ನು ವಿರೋಧಿಸಬಾರದು. ನಮ್ಮ ಕಡೆಯಿಂದ ಎಲ್ಲೇ ಆಗಲಿ, ಯಾರೇ ಆಗಲಿ ಸತ್ಯ ಧ್ವಜವನ್ನೇರಿಸಲಿಕ್ಕಾಗಿ ಎಬ್ಬಿಸಲ್ಪಟ್ಟರೆ ಆ ಧ್ವಜದ ಕೆಳಗೆ ನೀವೂ ಒಟ್ಟು ಸೇರಬೇಕು.

"ಹ। ಮುಹಮ್ಮದ್‌ರಿಗಿಂತ(ಸ) ಮೊದಲು ಪ್ರತಿಯೊಬ್ಬ ಪ್ರವಾದಿಯಿಂದಲೂ ಇದೇ ಪ್ರಮಾಣ ವಚನ ಪಡೆದುಕೊಳ್ಳಲಾಗುತ್ತಿತ್ತೆಂದೂ ಈ ಕಾರಣದಿಂದಲೇ ಪ್ರತಿಯೊಬ್ಬ ಪ್ರವಾದಿಯೂ ತನ್ನ ಸಮುದಾಯಕ್ಕೆ ಅನಂತರ ಬರಲಿರುವ ಪ್ರವಾದಿಯ ಸಮಾಚಾರ ತಿಳಿಸಿ. ಅವರಿಗೆ ಸಹಕಾರ ನೀಡಬೇಕೆಂದು ಹೇಳಿರುವುದನ್ನೂ ಇಲ್ಲಿ ಗಮನಿಸಬೇಕು. ಆದರೆ ಕುರ್‌ಆನಲ್ಲಾಗಲಿ ಹದೀಸಿನಲ್ಲಾಗಲಿ ಎಲ್ಲೂ ಹ। ಮುಹಮ್ಮದ್ (ಸ)ರೊಡನೆ ಇಂತಹ ಕರಾರನ್ನು ಪಡೆದುದಾಗಲಿ, ಅವರು ತಮ್ಮ ಉಮ್ಮತ್‌ಗೆ (ಸಮುದಾಯಕ್ಕೆ) ಮುಂಬರುವ ಪ್ರವಾದಿಯ ಸಮಾಚಾರ ತಿಳಿಸಿ, ಅವರ ಮೇಲೆ ವಿಶ್ವಾಸವಿಡಬೇಕೆಂದು ಆದೇಶ ಕೊಟ್ಟಿರುವುದಾಗಲಿ ಇಲ್ಲ."

ಇದೇ ಕರಾರನ್ನು ಅಲ್ಲಾಹನು ಹಝ್ರತ್ ಮುಹಮ್ಮದ್ ಮುಸ್ತಫಾ ಸಲ್ಲಲ್ಲಾಹು ಅಲೈಹಿ ವಸಲ್ಲಮರಿಂದ ಪಡೆದುದು ಅಬುಲ್ ಆಲಾ ಮೌದೂದಿಗಾಗಲಿ, ಶಿಷ್ಯ ಮುಜೀಬ್‌ಗಾಗಲಿ ಖುರ್‌ಆನಿನಲ್ಲಿ ಕಾಣಿಸದಿರುವುದು ಅವರ ಆಧ್ಯಾತ್ಮಿಕ ಕುರುಡು ಕಾರಣದಿಂದಾಗಿರಬಹುದು.

ಸೂರಃ ಅಲ್ ಅಹ್‌ಝಾಬ್ 7ನೇ ಸೂಕ್ತದಲ್ಲಿ ಹಿಂದೆ ಮೂಸಾ, ಈಸಾ ಮುಂತಾದ ಪ್ರವಾದಿಗಳಿಂದ ಪಡೆದಂತಹ ಅದೇ ಕರಾರನ್ನು ಹ। ಮುಹಮ್ಮದ್‌ರಿಂದಲೂ(ಸ) ಪಡೆದುದಾಗಿ ಪವಿತ್ರ ಖುರ್‌ಆನ್ ಹೇಳುತ್ತದೆ. ನೋಡಿರಿ: "ನಾವು ಪ್ರವಾದಿಗಳಿಂದ ಅವರ ಒಡಂಬಡಿಕೆಯನ್ನು ಪಡೆದುಕೊಂಡ ಸಂದರ್ಭ (ಸ್ಮರಿಸು). **ನಿನ್ನಿಂದಲೂ** ನೂಹ್, ಇಬ್‌ರಾಹೀಂ ಮೂಸಾ, ಈಸಬ್ನು ಮರ್ಯಮ್ ಎಂಬವರಿಂದಲೂ (ನಾವು ಒಡಂಬಡಿಕೆ ಪಡೆದುಕೊಂಡ ಸಂದರ್ಭ). ದೃಢವಾದೊಂದು ಒಡಂಬಡಿಕೆಯನ್ನು ನಾವು ಅವರಿಂದ ಪಡೆದುಕೊಂಡಿದ್ದೆವು." (33:7)

ಈ ವಾಕ್ಯದಲ್ಲಿ ಪ್ರವಾದಿಗಳೆಲ್ಲರಿಂದಲೂ ಕರಾರು ಪಡೆದಿರುವುದನ್ನು ಸಾಮಾನ್ಯವಾಗಿ ಹೇಳಿದ ನಂತರ ಐದು ಪ್ರವಾದಿಗಳಿಂದ ಕರಾರು ಪಡೆದಿರುವ ಕುರಿತು ಪ್ರತ್ಯೇಕವಾಗಿ ಎತ್ತಿ ಹೇಳಲಾಗಿದೆ. ಹಝ್ರತ್ ಮುಹಮ್ಮದ್ ಮುಸ್ತಫಾರಿಂದ(ಸ) ಕರಾರು ಪಡೆದುದನ್ನು ಇಲ್ಲಿ ಮೊತ್ತ ಮೊದಲಾಗಿ ಹೇಳಲಾಗಿದೆ. ಆದುದರಿಂದ ಹ। ಮುಹಮ್ಮದ್‌ರವರ(ಸ) ಅನುಯಾಯಿಗಳಲ್ಲೂ ಪ್ರವಾದಿಗಳುಂಟಾಗುವರೆಂದೂ ಅವರಲ್ಲಿ ನಂಬಿಕೆಯಿಡಬೇಕಾದುದು ಆ ಪ್ರವಾದಿಯರ್ವರ ಅನುಯಾಯಿಗಳ ಕರ್ತವ್ಯವೆಂದೂ ಸ್ಪಷ್ಟವಾಗುತ್ತದೆ. ಹೀಗಿರುವಾಗ, 'ಕುರ್‌ಆನಿನಲ್ಲಾಗಲಿ ಹದೀಸ್‌ನಲ್ಲಾಗಲಿ ಎಲ್ಲೂ ಹ। ಮುಹಮ್ಮದ್‌ರೊಡನೆ(ಸ) ಇಂತಹ ಕರಾರನ್ನು ಪಡೆದುದಾಗಲಿ ಇಲ್ಲ' ಎಂದು ಮೌದೂದಿಯವರು 'ಪಾಂಡಿತ್ಯ' ತೋರ್ಪಡಿಸಿರುವುದು ಒಂದೋ ಖುರ್‌ಆನಿನಲ್ಲಿ ಅವರಿಗಿರುವ ಅಜ್ಞತೆಯ ಕಾರಣದಿಂದಾಗಿರಬಹುದು; ಅಲ್ಲವಾದರೆ ಸಾಮಾನ್ಯ ಮುಸ್ಲಿಮರನ್ನು ವಂಚಿಸಲು ಉದ್ದೇಶಪೂರ್ವಕ ನಡೆಸಿದ ಒಂದು ಅಕ್ರಮ ಹೆಜ್ಜೆಯಾಗಿರಬಹುದು ಎಂದೇ ತಿಳಿಯಬೇಕು.

ಕಾಲಕ್ರಮೇಣ ಮುಸ್ಲಿಮರು ದಾರಿ ತಪ್ಪಿ ಪವಿತ್ರ ಖುರ್‌ಆನನ್ನು ಕೈಬಿಡುವರು. ಆ ಕಾಲದಲ್ಲಿ ಹಿಂದೆ ಜನರಿಗೆ ಅವತರಿಸಿದಂತಹ ಅದೇ ಪವಿತ್ರ ಖುರ್‌ಆನ್ ದೃಢೀಕರಣಕ್ಕಾಗಿ ಹ। ಮುಹಮ್ಮದ್‌ರವರ(ಸ) ಶಿಷ್ಯರಲ್ಲಿ ಒಬ್ಬ ಸಂದೇಶವಾಹಕ ಬರುವರೆಂದು ಮೇಲೆ ವಿವರಿಸಿದ ಎರಡು ಆಯತ್‌ಗಳಿಂದಲೂ ಸೂರ್ಯಪ್ರಕಾಶದಂತೆ ತಿಳಿದುಬರುತ್ತದೆ. ಅಲ್ಲದೆ, ಇನ್ನೂ ಅನೇಕ ಆಯತ್‌ಗಳಿಂದಲೂ ಹ। ಮುಹಮ್ಮದ್‌ರ(ಸ) ಶಿಷ್ಯರಲ್ಲಿ ನಬಿ ಬರಬಹುದೆಂದು ಸಾಬೀತಾಗುತ್ತದೆ. ಆದರೆ ಹ। ಮುಹಮ್ಮದ್(ಸ) ನಂತರ ಇನ್ನು ಯಾವ ಪ್ರವಾದಿಯೂ ಬರಲಾರರೆಂದು ಪವಿತ್ರ ಖುರ್‌ಆನಿನಲ್ಲಿ ಒಂದು ಆಯತನ್ನಾದರೂ ಮುಜೀಬರಿಗೆ ತೋರಿಸಲು ಸಾಧ್ಯವಿಲ್ಲ.

ಮುಜೀಬ್‌ರವರ ಇನ್ನೊಂದು ಆರೋಪ. ಹ। ಅಹ್ಮದ್‌ರವರಿಗೆ ಬ್ರಿಟಿಷ್ ಸರಕಾರ ಸಂಪೂರ್ಣ ಬೆಂಬಲ ನೀಡಿತ್ತು ಎಂದಾಗಿದೆ. ಇವರು

ಹೀಗೆ ಹೇಳಿರುವುದರಲ್ಲಿ ಏನೂ ಆಶ್ಚರ್ಯವಿಲ್ಲ. ಇಂತಹ ಆರೋಪವನ್ನು ಹಿಂದೆ ಹ| ಮುಹಮ್ಮದ್‌ರ(ಸ) ಮೇಲೆಯೂ ಅವರ ವಿರೋಧಿಗಳು ಆರೋಪಿಸಿದ್ದಾರೆಂದು ಪವಿತ್ರ ಖುರ್‌ಆನ್ ಹೇಳುತ್ತದೆ.

"ಇದು ಅವನು (ಮುಹಮ್ಮದ್) ಸೃಷ್ಟಿಸಿ ಮಾಡಿದ ಒಂದು ಸುಳ್ಳೇ ಆಗಿದೆ. ಅದಕ್ಕೆ ಬೇರೊಂದು ಜನಾಂಗ ಅವನಿಗೆ ಸಹಾಯ ಮಾಡಿದೆ ಎಂದು ಅವಿಶ್ವಾಸಿಗಳು ಹೇಳುತ್ತಾರೆ. ಹಾಗೆ ಅವರು ಅನ್ಯಾಯವೆಸಗಿದ್ದಾರೆ ಹಾಗೂ ಸುಳ್ಳನ್ನೂ ಹೇಳಿದ್ದಾರೆ." (25:4)

ಅದೇ ಕೃತ್ಯವನ್ನು ಇಂದು ಮಹ್‌ದೀ ಮಸೀಹರ ವಿರೋಧಿಗಳೂ ಮಾಡುತ್ತಿದ್ದಾರೆ ಅಷ್ಟೇ.

ಮುಂದುವರಿದು ಮುಜೀಬ್ ಬರೆಯುತ್ತಾರೆ: *"ಆದರೆ ಮುಸ್ಲಿಮರ ಪ್ರತಿಕ್ರಿಯೆ ಗಮನಾರ್ಹವಾಗಿತ್ತು. ಮುಸ್ಲಿಮ್ ಸಮುದಾಯದ ಎಲ್ಲ ವಿದ್ವಾಂಸರು ಒಕ್ಕೊರಲಿನಿಂದ ಅದನ್ನು ವಿರೋಧಿಸಿದರು. ಮಾತ್ರವಲ್ಲ, ಅವರನ್ನೂ ಅವರ ಮೇಲೆ ವಿಶ್ವಾಸವಿರಿಸಿದವರನ್ನೂ ಕಾಫಿರರೆಂದು ಸಾರಿದರು."*

ತನ್ನ ಪೂರ್ವಿಕರು ನಡೆಸಿದ ದೇವ ವಿರೋಧಿ ಚಟುವಟಿಕೆಯನ್ನು ತುಂಬಾ ಆನಂದದಿಂದ ಮುಜೀಬ್ ಬರೆದಿರುತ್ತಾರೆ. ಆದರೆ ಇದೇ ಮಾತನ್ನು ಇನ್ನಿತರ ಮುಸ್ಲಿಮರು ಜಮಾಅತೆ ಇಸ್ಲಾಮಿನ ಮೇಲೆ ಹೇಳಿದಾಗ ಇವರಿಗೆ ಸಹಿಸಲು ಸಾಧ್ಯವಾಗುವುದಿಲ್ಲ. ಆಗ ಇವರಿಗೆ ಹದೀಸ್‌ಗಳ ನೆನಪಾಗುತ್ತದೆ.

ಹಿಂದೆ 1991ರಲ್ಲಿ ಇವರನ್ನು ಇನ್ನಿತರ ಮುಸ್ಲಿಮರಲ್ಲಿ ಯಾರೋ ಕಾಫಿರ್ ಎಂದು ಹೇಳಿದ್ದಕ್ಕೆ ಇವರು ಇದೇ ಪತ್ರಿಕೆಯಲ್ಲಿ ಕೆಲವು ನ್ಯಾಯೀಕರಣ ಬರೆದರು.

ಸಹೀಹುಲ್ ಬುಖಾರಿಯ ಒಂದು ಹದೀಸನ್ನು ವ್ಯಾಖ್ಯಾನಿಸಿ ಮುಜೀಬ್ ಬರೆಯುತ್ತಾರೆ: *ನಾವು ನಮಾಝ್ ಮಾಡುವಂತೆ ಕಿಬ್ಲಾಕ್ಕೆ ತಿರುಗಿ ನಮಾಝ್ ಮಾಡುವ ಹಾಗೂ ನಾವು ಕೊಯ್ದುದನ್ನು ಅಥವಾ ನಮ್ಮ ಆಹಾರವನ್ನು ಸೇವಿಸುವವರೆಲ್ಲರನ್ನೂ ನೀವು ಮುಸ್ಲಿಮರೆಂದು ಪರಿಗಣಿಸಬೇಕು. ಅವರು ನೈಜ ವಿಶ್ವಾಸಿಗಳೇ ಅಥವಾ ಅವರು ಕಪಟಿಗಳೇ ಎಂಬುದನ್ನು ನೀವು ಕೆದಕಿ ನೋಡಬೇಕಾಗಿಲ್ಲ. ಅವರು ಅವಿಶ್ವಾಸಿಗಳು, ಕಪಟ ವಿಶ್ವಾಸಿಗಳು ಎಂದು ಪ್ರಚಾರ ಮಾಡಬೇಡಿರಿ. ಅಂಥ ಧೋರಣೆ ಅಲ್ಲಾಹನ ಹೊಣೆಗಾರಿಕೆಯಲ್ಲಿ ಹಸ್ತಕ್ಷೇಪ ನಡೆಸಿದಂತಹ ಘೋರ ಪಾಪವಾಗುವುದು. ಕುಂದುಕೊರತೆ, ಭಿನ್ನಾಭಿಪ್ರಾಯಗಳ ಹೆಸರಿನಲ್ಲಿ ಮುಸ್ಲಿಮರನ್ನು ಸಾಮೂಹಿಕವಾಗಿ ಇಸ್ಲಾಮಿನಿಂದ ಹೊರಹಾಕಿ ಕಾಫಿರ್, ಮುಶ್ರಿಕ್ ಎಂದು ವಿಧಿಸುವವರು ಈ ಪ್ರವಾದಿ ವಚನವನ್ನು ಕೂಲಂಕಷವಾಗಿ ಪರಿಶೀಲಿಸಬೇಕು. ತಾನು ಮುಸ್ಲಿಮನೆಂಬ ಓರ್ವನ ಘೋಷಣೆಯನ್ನು ಆತನ ಕರ್ಮ ಜೀವನದ ವಿವರಣೆ ಅಥವಾ ಅಭಿಪ್ರಾಯಗಳ ಆಧಾರದಲ್ಲಿ ವಿಶ್ಲೇಷಿಸಬಾರದು. ಆತನು ನಮಾಝ್ ಮಾಡುತ್ತಿದ್ದಾನೆಯೇ, ಮುಸ್ಲಿಮರ ಆಹಾರ ಸೇವಿಸುತ್ತಿದ್ದಾನೆಯೇ ಅಥವಾ ಸಾಮಾಜಿಕ ಜೀವನದಲ್ಲಿ ಮುಸ್ಲಿಮರ ಜೊತೆ ಸೇರುತ್ತಾನೆಯೇ ಎಂಬುದನ್ನು ಮಾತ್ರ ನೋಡಬೇಕು. ಅವರೆಡೂ ಇದ್ದರೆ ಅವನು ಮುಸ್ಲಿಮನೇ ಸರಿ, ತರುವಾಯ ಆತನನ್ನು ಕಾಫಿರ್ ಅಥವಾ ಮುಶ್ರಿಕ್ ಎಂದು ಕರೆಯುವ ಹಕ್ಕು ಯಾರಿಗೂ ಇಲ್ಲ. ಆತನೊಳಗೆ ಶಿರ್ಕ್ ಮತ್ತು ಕುಫ್ರ್‌ನ ಅಂಶವಿದ್ದರೆ ಆ ಬಗ್ಗೆ ಅಲ್ಲಾಹನೇ ವಿಚಾರಿಸಿಕೊಳ್ಳುತ್ತಾನೆ. ಅದನ್ನು ನೋಡುವ ಹೊಣೆ ನಮಗಿಲ್ಲ."* (ಸನ್ಮಾರ್ಗ–ಎಪ್ರಿಲ್ 14, 1991)

ಇದು ಇವರು ಹಿಂದಿನಿಂದಲೂ ನಡೆದುಕೊಂಡು ಬಂದ ರೀತಿಯಾಗಿದೆ. ಇವರಿಗೆ ನೋವಾಗುವ ಮಾತನ್ನು ಹೇಳಿದಾಗ ಇವರಿಗೆ ನಬಿ ವಚನ, ಅಲ್ಲಾಹನ ವಚನವೆಲ್ಲ ನೆನಪಾಗುತ್ತದೆ. ಆದರೆ ಇದೇ ಮಾತನ್ನು ಇಸ್ಲಾಮಿನ ಪ್ರಧಾನ ಅನುಷ್ಠಾನ ಕರ್ಮಗಳು ಐದು ಮತ್ತು ಮೂಲಭೂತ ವಿಶ್ವಾಸ ಆರು ಇವುಗಳಲ್ಲಿ ದೃಢವಾಗಿ ವಿಶ್ವಾಸವಿರಿಸಿ ಪವಿತ್ರ ದೀನುಲ್ ಇಸ್ಲಾಮನ್ನೂ ಹ| ಮುಹಮ್ಮದ್ ಮುಸ್ತಫಾರವರ(ಸ) ಮಹತ್ವವನ್ನೂ ಲೋಕದಾದ್ಯಂತ ಪ್ರಚಾರ ಮಾಡುತ್ತಲೂ ಇಸ್ಲಾಮಿನ ವಿರೋಧಿಗಳಿಗೆ ಇಸ್ಲಾಮಿನ ಸುಂದರ ಮುಖ ತೋರಿಸಿಕೊಡುತ್ತಲೂ ಅಹೋರಾತ್ರೆ ಎನ್ನದೆ ಒಬ್ಬ ನೇತಾರರ ಕೈ ಕೆಳಗೆ ಸುದೃಢವಾದ ವ್ಯವಸ್ಥೆಯಲ್ಲಿ, ಶಾಂತಿಯಿಂದ ಜಿಹಾದ್ ಮಾಡುತ್ತಿರುವ ಅಲ್ ಜಮಾಅತಾದ ಅಹ್ಮದಿಯಾ ಮುಸ್ಲಿಮರನ್ನು ಕಾಫಿರ್ ಎಂದು ಗಣಿಸುವಾಗ, ಒಬ್ಬ ಮುಸ್ಲಿಮನನ್ನು ನೀವು ಕಾಫಿರ್ ಎಂದು ಹೇಳಿದರೆ, ನೀವು ಸ್ವಯಂ ಕಾಫಿರಾಗುವಿರಿ ಎಂಬ ಪ್ರವಾದಿ ವಚನವನ್ನು ಮುಜೀಬ್ ಕೂಲಂಕಷವಾಗಿ ಅಧ್ಯಯನ ಮಾಡುವುದು ಒಳ್ಳೆಯದು.

◆


mta

*MUSLIM TELEVISION AHMADIYYA is now launched on Asia Broadcast satellite (ABS-1) especially for Asian Viewers. You can now watch MTA in 2ft Dish (DTH/Airtel) by adjusting its frequency.*

**Details of this channel**

| | |
|---|---|
| Channel Name | : Muslim TV |
| Satellite | : ABS - 1 |
| Direction | : 75° East |
| Frequency | : 12579 |
| Symbol Rate | : 22000 |
| Polarization | : Horizontal |
| FEC | : 3/4 |

# ಇಸ್ಲಾಮಿನ ಪ್ರಾಥಮಿಕ ಪಾಠಗಳು

## ಖುತುಬತುನ್ನಿಕಾಹ್

ನಿಕಾಹ್ ಮಾಡಲು ಖತೀಬ್ ಎದ್ದು ನಿಂತು ಹೀಗೆ ಖುತುಬ ಓದಬೇಕು:

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ مِنْ شُرُوْرِ
اَنْفُسِنَا وَمِنْ سَيِّاٰتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَا هَادِيَ لَهٗ ۔ اَشْهَدُ اَنْ
لَّآ اِلٰهَ اِلَّا اللّٰهُ وَاَشْهَدُ اَنَّ مُحَمَّدًا عَبْدُهٗ وَرَسُوْلُهٗ ۔ اَمَّا بَعْدُ فَاَعُوْذُ بِاللّٰهِ مِنَ الشَّيْطٰنِ الرَّجِيْمِ ۔
بِسْمِ اللّٰهِ الرَّحْمٰنِ الرَّحِيْمِ ۔ (١) ـ يٰٓاَيُّهَا النَّاسُ اتَّقُوْا رَبَّكُمُ الَّذِيْ خَلَقَكُمْ مِّنْ نَّفْسٍ وَّاحِدَةٍ
وَّخَلَقَ مِنْهَا زَوْجَهَا وَبَثَّ مِنْهُمَا رِجَالًا كَثِيْرًا وَّنِسَآءً ۚ وَاتَّقُوا اللّٰهَ الَّذِيْ تَسَآءَلُوْنَ بِهٖ وَالْاَرْحَامَ ۔ اِنَّ
اللّٰهَ كَانَ عَلَيْكُمْ رَقِيْبًا ۔ (٢) ـ يٰٓاَيُّهَا الَّذِيْنَ اٰمَنُوا اتَّقُوا اللّٰهَ وَقُوْلُوْا قَوْلًا سَدِيْدًا ۙ يُّصْلِحْ لَكُمْ
اَعْمَالَكُمْ وَيَغْفِرْ لَكُمْ ذُنُوْبَكُمْ ۗ وَمَنْ يُّطِعِ اللّٰهَ وَرَسُوْلَهٗ فَقَدْ فَازَ فَوْزًا عَظِيْمًا ۔ (٣) ـ يٰٓاَيُّهَا
الَّذِيْنَ اٰمَنُوا اتَّقُوا اللّٰهَ وَلْتَنْظُرْ نَفْسٌ مَّا قَدَّمَتْ لِغَدٍ ۚ وَاتَّقُوا اللّٰهَ ۔ اِنَّ اللّٰهَ خَبِيْرٌۢ
بِمَا تَعْمَلُوْنَ ۝

ಅಲ್ ಹಮ್ದು ಲಿಲ್ಲಾಹಿ ನಹ್‌ಮದುಹೂ ವ ನಸ್ತಿಈನುಹೂ ವ ನಸ್ತಗ್‌ಫಿರುಹೂ ವ
ನೂಮಿನು ಬಿಹೀ ವ ನತವಕ್ಕಲು ಅಲೈಹಿ ವ ನಊಧುಬಿಲ್ಲಾಹಿ ಮಿನ್ ಶುರೂರಿ
ಅನ್‌ಫುಸಿನಾ ವ ಮಿನ್ ಸಯ್ಯಿಆತಿ ಅಅ್‌ಮಾಲಿನಾ ಮನ್ ಯಹ್‌ದಿಹಿಲ್ಲಾಹು
ಫಲಾ ಮುಧಿಲ್ಲ ಲಹೂ ವಮನ್ ಯುಧ್‌ಲಿಲ್‌ಹು ಫಲಾ ಹಾದಿಯ ಲಹೂ.
ಅಮ್ಮಾ ಬಅ್‌ದು ಫಅಊಧುಬಿಲ್ಲಾಹಿ ಮಿನಶ್ಶೈತಾನಿರ್ರಜೀಮ್
ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಮ್

1. ಯಾಅಯ್ಯುಹನ್ನಾಸುತ್ತಖೂ ರಬ್ಬಕುಮುಲಧೀ ಖಲಖಕುಮ್ ಮಿನ್‌ನಫ್ಸಿನ್ ವಾಹಿದತಿನ್ ವ ಖಲಖ ಮಿನ್‌ಹಾ ಝೌಜಹಾ ವ ಬಸ್ಸ ಮಿನ್‌ಹುಮಾ ರಿಜಾಲನ್ ಕಸೀರನ್ ವ ನಿಸಾಅ್. ವತ್ತಖುಲ್ಲಾಹಲ್ಲಧೀ ತಸಾಅಲೂನ ಬಿಹೀ ವಲ್ ಅರ್‌ಹಾಮ್. ಇನ್ನಲ್ಲಾಹ ಕಾನ ಅಲೈಕುಮ್ ರಖೀಬಾ.
2. ಯಾ ಅಯ್ಯುಹಲ್ಲಧೀನ ಅಮನುತ್ತಖುಲ್ಲಾಹ ವ ಖೂಲೂ ಖೌಲನ್ ಸದೀದನ್ ಯುಸ್‌ಲಿಹ್ ಲಕುಮ್ ಅಅ್‌ಮಾಲಕುಮ್ ವ ಯಗ್‌ಫಿರ್ ಲಕುಮ್ ಧುನೂಬಕುಮ್ ವಮನ್‌ಯುತಿಇಲ್ಲಾಹ ವರಸೂಲಹೂ ಫಖದ್ ಫಾಝ ಫೌಝುನ್ ಅಝೀಮ
3. ಯಾ ಅಯ್ಯುಹಲ್ಲಧೀನ ಅಮನುತ್ತಖುಲ್ಲಾಹ ವಲ್‌ತನ್‌ಝುರು ನಫ್‌ಸುನ್ ಮಾ ಖದ್ದಮತ್ ಲಿಗದಿನ್ ವತ್ತಖುಲ್ಲಾಹ್ ಇನ್ನಲ್ಲಾಹ ಖಬೀರುನ್ ಬಿಮಾ ತಅ್‌ಮಲೂನ್

ಪವಿತ್ರ ಖುರ್‌ಆನಿನ ಮೇಲಿನ ಆಯತುಗಳನ್ನು ಓದಿ ಹೇಳಿ ನಿಕಾಹದ ಆವಶ್ಯಕತೆ ಮತ್ತು ಅದರ ಮಹತ್ವಗಳನ್ನೂ ಪ್ರಯೋಜನಗಳನ್ನೂ ವಿವರಿಸಿ ಖುತುಬ ಮಾಡಬೇಕು. ಖುತ್‌ಬದ ನಂತರ ವಧುವಿನ ವಲಿಯ ಮೂಲಕ ನಿಕಾಹಕ್ಕೆ ಆಕೆಯ ಸಮ್ಮತಿಯನ್ನು ಪಡೆಯಬೇಕು. ಮಹ್‌ರ್ ನಿಶ್ಚಿತವಾಗಿರಬೇಕು. ವದುವಿನ ವಲಿಯಿಂದ ಸಮ್ಮತಿಯನ್ನು ಪಡೆದ ನಂತರ ವರನ ಸಮ್ಮತಿಯನ್ನು ಪಡೆಯಬೇಕು . ಇಬ್ಬರ ಸಮ್ಮತಿ ದೊರೆತ ಕೂಡಲೇ ನಿಕಾಹ್ ಆಯಿತೆಂದು ಘೋಷಿಸಿ ನೆರೆದವರೆಲ್ಲರೂ ಸೇರಿ ದುಆ ಮಾಡಬೇಕು.

## ಬಾಂಗ್ಲಾ: ಜಮಾತೆ ನಾಯಕನಿಗೆ ಜೀವಾವಧಿ

ಢಾಕಾ ಫೆ. 5: 1971ರಲ್ಲಿ ಪಾಕಿಸ್ಥಾನದೊಂದಿಗೆ ನಡೆದ ವಿಮೋಚನಾ ಯುದ್ಧದ ವೇಳೆ ಮಾನವೀಯತೆಗೆ ವಿರುದ್ಧವಾದ ಯುದ್ಧಾಪರಾಧಗಳನ್ನು ನಡೆಸಿದ ಆರೋಪಕ್ಕೆ ಗುರಿಯಾಗಿದ್ದ ಮೂಲಭೂತವಾದಿ ಸಂಘಟನೆಯಾಗಿರುವ ಜಮಾತೆ ಇಸ್ಲಾಮಿ(ಜೆಐ)ನ ಉನ್ನತ ನಾಯಕನೋರ್ವನಿಗೆ ಬಾಂಗ್ಲಾದೇಶದ ವಿಶೇಷ ನ್ಯಾಯಮಂಡಳಿಯು ಜೀವಾವಧಿ ಶಿಕ್ಷೆಯನ್ನು ವಿಧಿಸಿದೆ.

ಜಮಾತೆ ಇಸ್ಲಾಮಿನ ಪ್ರಧಾನ ಕಾರ್ಯದರ್ಶಿ ಅಬ್ದುಲ್ ಖಾದರ್ ಮೊಲ್ಲಾಗೆ ಜೀವನ ಪರ್ಯಂತ ಸೆರೆವಾಸ ಶಿಕ್ಷೆಯನ್ನು ವಿಧಿಸಿರುವುದಾಗಿ ಅಂತಾರಾಷ್ಟ್ರೀಯ ಅಪರಾಧಗಳ ತ್ರಿಸದಸ್ಯ ನ್ಯಾಯಮಂಡಳಿಯ ಅಧ್ಯಕ್ಷ ನ್ಯಾಯಮೂರ್ತಿ ಒಬೈದುಲ್ಲಾ ಹುಸೇನ್ ತಿಳಿಸಿದರು. ಇದಕ್ಕೂ ಮುನ್ನ ಮೊಲ್ಲಾ ಅವರನ್ನು ಬಿಗು ಭದ್ರತೆಯಲ್ಲಿ ನ್ಯಾಯಾಲಯಕ್ಕೆ ಕರೆತರಲಾಗಿತ್ತು.

ನ್ಯಾಯಾಧೀಶರು ತೀರ್ಪನ್ನು ಪ್ರಕಟಿಸುತ್ತಿದ್ದಂತೆಯೇ ಜಮಾತೆ ಬೆಂಬಲಿಗರು ಢಾಕಾದ ವಿವಿಧೆಡೆಗಳಲ್ಲಿ ಪೊಲೀಸರೊಂದಿಗೆ ಘರ್ಷಣೆಗೆ ಮುಂದಾದರು. ಈ ಘರ್ಷಣೆಯಲ್ಲಿ ಹಲವರು ಗಾಯಗೊಂಡಿದ್ದಾರೆ. ದೇಶದ ಹಲವೆಡೆ ಜಮಾತೆ ಕಾರ್ಯಕರ್ತರು ವಾಹನಗಳಿಗೆ ಬೆಂಕಿ ಹಚ್ಚಿದ್ದು, ಬಸ್‌ಗಳ ಮೇಲೆ ದಾಳಿ ನಡೆಸಿದ್ದಾರೆ.

ಶಾಂತಿಯುತ ಪ್ರತಿಭಟನೆಗೆ ಅವಕಾಶ ನೀಡುವುದಾಗಿ ಪೊಲೀಸರು ಭರವಸೆ ನೀಡಿರುವರಾದರೂ ಯಾವುದೇ ಹಿಂಸಾತ್ಮಕ ಪ್ರತಿಭಟನೆಯನ್ನು ಸಹಿಸಲಾಗದು ಎಂದು ಸ್ಪಷ್ಟ ಎಚ್ಚರಿಕೆ ನೀಡಲಾಗಿದೆ.

2010ರ ಜುಲೈ 13ರಂದು ಬಾಂಗ್ಲಾ ಪೊಲೀಸರಿಂದ ಬಂಧನಕ್ಕೊಳಗಾಗಿದ್ದ ಮೊಲ್ಲಾ ವಿರುದ್ಧ ಯುದ್ಧಾಪರಾಧದ 6 ಆರೋಪಗಳನ್ನು ದಾಖಲಿಸಲಾಗಿತ್ತು. ಇದೀಗ ನ್ಯಾಯಮಂಡಳಿ ಆತನ ವಿರುದ್ಧದ ಎಲ್ಲ ಆರೋಪಗಳನ್ನು ಎತ್ತಿಹಿಡಿದಿದೆ.

**("ಉದಯವಾಣಿ" 6 ಫೆಬ್ರವರಿ 2013)**

## ಟಿಪ್ಪು ಹಿಂದೂ ದ್ವೇಷಿಯೆನ್ನುವುದು ಅಪ್ಪಟ ಸುಳ್ಳಿನ ಮುದ್ದೆ

ಬಿಜಾಪುರ, ಫೆ.9: "ಬರಹಗಾರರೇ, ದ್ವೇಷ, ಪರಮತ ದೂಷಣೆಯ ಯುದ್ಧಾಸ್ತ್ರಗಳ ಸುಳ್ಳಿನ ಆಯುಧಗಳನ್ನು ತಯಾರಿಸುವ ಆಳುವವರ ಊಳಿಗದ ಆಳುಗಳಾಗಬೇಡಿ". ಬಿಜಾಪುರದಲ್ಲಿ ನಡೆಯುತ್ತಿರುವ 79ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಹಿರಿಯ ಸಾಹಿತಿ, ಚಿಂತಕ ಡಾ. ಕೋ. ಚೆನ್ನಬಸಪ್ಪ ಅವರು ಕನ್ನಡ ಕುಲಕೋಟಿಗೆ ನೀಡಿದ ಕರೆಯಿದು.

ಇಂದು ಬಿಜಾಪುರದಲ್ಲಿ ಉದ್ಘಾಟನೆಗೊಂಡ ಸಮ್ಮೇಳನದ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಅವರು, ತಮ್ಮ ಹೃದಯವಂತಿಕೆಯ, ನೇರ, ನಿಷ್ಠುರದ ಮಾತುಗಳಿಂದ ಜಾತ್ಯತೀತ ಕನ್ನಡ ನಾಡನ್ನು ಕಟ್ಟಲು ಕನ್ನಡಿಗರಿಗೆ ಕರೆ ನೀಡಿದರು.

ಟಿಪ್ಪು ಹಿಂದೂ ಮತದ್ವೇಷಿ ಎಂಬುದು ಅಪ್ಪಟ ಸುಳ್ಳಿನ ಮುದ್ದೆ. ಯಾಕೆಂದರೆ ಮರಾಠಿಗರಿಂದ ಭಗ್ನವಾದ ಶೃಂಗೇರಿ ಶ್ರೀ ಶಾರದಮ್ಮನ ದೇವಾಲಯವನ್ನು ಪುನಃ ನಿರ್ಮಾಣ ಮಾಡಿದವರು ಹೈದರ್ ಮತ್ತು ಟಿಪ್ಪು. ಶ್ರೀ ಶೃಂಗೇರಿ ಜಗದ್ಗುರುಗಳಿಗೆ ಕನ್ನಡದಲ್ಲಿ ಪತ್ರಗಳನ್ನು ಬರೆದು ಅಮ್ಮನ ಮೆರವಣಿಗೆಗೆ ಪಲ್ಲಕ್ಕಿ ಕಾಣಿಕೆ ಕೊಟ್ಟವನು ಟಿಪ್ಪು. ಅಂಥವನು ಹಿಂದೂ ಮತ ದ್ವೇಷಿಯೆ?

ಸಾಹಿತಿಗಳೇ ಸುಳ್ಳನ್ನು ಆಡುತ್ತಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದ ಅವರು, ಟಿಪ್ಪು ಹಿಂದೂಗಳ ದ್ವೇಷಿಯೆಂದು, ಅವನು 71 ಸಾವಿರ ಹಿಂದೂಗಳನ್ನು ಬಲಾತ್ಕಾರವಾಗಿ ಇಸ್ಲಾಮ್ ಧರ್ಮಕ್ಕೆ ಮತಾಂತರ ಮಾಡಿದನೆಂಬ ಸುಳ್ಳನ್ನು ಹೇಳುತ್ತಿದ್ದಾರೆ.

ಇದನ್ನು ಕೇಳಿದೊಡನೆ ಅವನ ಆಳ್ವಿಕೆಯ ಕಾಲದಲ್ಲಿ ಕೊಡಗು ಪ್ರಾಂತದಲ್ಲಿ ಅಷ್ಟು ಜನಸಂಖ್ಯೆ ಇತ್ತೆ ಎಂಬ ಸಂಶಯ ಬಂದು ಸರಕಾರವೇ ಪ್ರಕಟಿಸಿರುವ ಕೂರ್ಗ್ ಗೆಝೆಟಿಯರ್ ತೆಗೆದುನೋಡಿದೆ. 1871ರಲ್ಲಿ ಇಡೀ ಕೂರ್ಗ್ ರಾಜ್ಯದಲ್ಲಿ 1,68,312 ಜನರಿದ್ದರು. 1961ರ ಜನಗಣತಿ ಪ್ರಕಾರ ಒಟ್ಟು 3,22,829 ಜನಸಂಖ್ಯೆ ಇತ್ತು. ಹಾಗಾದರೆ 1792ರ ಅವಧಿಯಲ್ಲಿ ಎಷ್ಟು ಜನರಿದ್ದಿರಬಹುದು ಎಂದು ಲೆಕ್ಕ ಹಾಕಿದರೆ ಒಂದು ಲಕ್ಷಕ್ಕಿಂತ ಹೆಚ್ಚಾಗಿರಲಾರರು. ಆ ನೂರು ಸಾವಿರ ಜನರಲ್ಲಿ 71 ಸಾವಿರ ಜನರನ್ನು ಇಸ್ಲಾಂ ಮತಕ್ಕೆ ಮತಾಂತರ ಮಾಡಿದ್ದರೆ ಈ ಇನ್ನೂರ ಹತ್ತು ವರ್ಷಗಳಲ್ಲಿ ಎಷ್ಟು ಜನ ಮುಸ್ಲಿಮರಿರಬೇಕಿತ್ತು? ಕನಿಷ್ಠ 2 ಲಕ್ಷ ಮುಸ್ಲಿಮರಿರಬೇಕು. ಆದರೆ ಈಗ ಕೊಡಗು ಜಿಲ್ಲೆಯಲ್ಲಿ ಒಟ್ಟು ಮುಸ್ಲಿಮರು 14,720 ಮಾತ್ರ ಇದ್ದಾರೆ.

ಸರಸ್ವತಿಯ ಸುಪುತ್ರರೂ ಸಂಶೋಧಕರೂ ಆದಂಥವರೆಂದು ಹೇಳಿಕೊಳ್ಳುವವರು ಇಂಥ ಹಸಿ ಸುಳ್ಳನ್ನು ಹೇಳಬಹುದೆ? ಇದು ಸಮ್ಮೇಳನಾಧ್ಯಕ್ಷ ಕೋ. ಚೆನ್ನಬಸಪ್ಪ ಅವರ ಪ್ರಶ್ನೆ.

**("ವಾರ್ತಾಭಾರತಿ" 10 ಫೆಬ್ರವರಿ 2013)**

## ಭಾರತ ವಿರೋಧಿ ಅಲ್ಲ

ಡಿ. 10ರ ಹೊಸದಿಗಂತದಲ್ಲಿ ಭಾರತ ವಿರುದ್ಧ ದ್ವೇಷಪೂರಿತ ಸುದ್ದಿ ಬಿತ್ತರಿಸುತ್ತಿವೆ 24 ವಿದೇಶಿ ಚಾನೆಲ್ ಎಂಬ ಅಂತರ್ಜಾಲ ವರದಿ ಪ್ರಕಟವಾಗಿದೆ. ಇದರಲ್ಲಿ ಅಹ್ಮದಿಯಾ ಚಾನೆಲ್ (ಬ್ರಿಟನ್)ನ್ನೂ ಸೇರಿಸಲಾಗಿದೆ. ಆದರೆ ಅಹ್ಮದಿಯಾ ಚಾನೆಲ್ ಅಥವಾ ಎಂಟಿಎ ಭಾರತ ವಿರೋಧಿ ಅಲ್ಲ. ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸ್ಥಾಪಕ ಮಿರ್ಝಾ ಗುಲಾಂ ಅಹ್ಮದ್ ಪಂಜಾಬ್‌ನ ಗುರುದಾಸ್‌ಪುರ ಜಿಲ್ಲೆಯ ಖಾದಿಯಾನ್ ಮೂಲದವರು. ಲೋಕದಲ್ಲೆಡೆ ಇರುವ ಅಹ್ಮದಿಯರಿಗೆ ಭಾರತದ ಮೇಲೆ ಅತ್ಯಂತ ಗೌರವ ಮತ್ತು ಪ್ರೀತಿ ಇದೆ. ಅಹ್ಮದಿಯಾ ಸಂಘಟನೆ ದ್ವೇಷ ಹರಡದೆ ಶಾಂತಿ, ಸೌಹಾರ್ದ, ಪ್ರೀತಿ, ಸಾಮರಸ್ಯ, ನ್ಯಾಯಪಾಲನೆ ಇತ್ಯಾದಿಗಳನ್ನು ಪ್ರೋತ್ಸಾಹಿಸುತ್ತದೆ. ಎಲ್ಲರೊಂದಿಗೆ ಪ್ರೀತಿ, ಯಾರೊಂದಿಗೂ ದ್ವೇಷವಿಲ್ಲ ಎಂಬುದು ನಮ್ಮ ಧ್ಯೇಯ.

**ಮುಹಮ್ಮದ್ ಯೂಸುಫ್**
**ಅಧ್ಯಕ್ಷರು, ಅಹ್ಮದಿಯಾ ಮುಸ್ಲಿಂ ಸಂಘಟನೆ**
**("ಹೊಸದಿಗಂತ" 13 ಜನವರಿ 2013)**

## ಕುರಾನ್ ನೆನಪಿಟ್ಟುಕೊಳ್ಳದ ಮಗನನ್ನು ಹೊಡೆದು ಕೊಂದಳು

ಲಂಡನ್, ಡಿ. 6: ಕುರಾನ್‌ನ ಕೆಲವು ಸಾಲುಗಳನ್ನು ನೆನಪಿಟ್ಟುಕೊಳ್ಳಲು ವಿಫಲನಾದ ಮಗನನ್ನು ನಾಯಿಗೆ ಹೊಡೆದಂತೆ ಥಳಿಸಿ ಕೊಂದ ಭಾರತೀಯ ಮೂಲದ ತಾಯಿಯ ಅಪರಾಧ ಬ್ರಿಟಿಷ್ ಕೋರ್ಟಿನಲ್ಲಿ ಸಾಬೀತಾಗಿದೆ. ಮಗನನ್ನು ಕೊಂದದ್ದಲ್ಲದೆ ಶವ ಸುಟ್ಟು ಪುರಾವೆ ನಾಶ ಮಾಡಿದ ಆರೋಪ ಆಕೆಯ ಮೇಲಿತ್ತು.

ಭಾರತದಲ್ಲಿ ಕಲಿತು ಗಣಿತ ಪದವೀಧರೆಯಾಗಿದ್ದ ಸಾರಾ ಇಗೆಯ (33) ಅಪರಾಧ ಕಾರ್ಡಿಫ್ ಕ್ರೌನ್ ಕೋರ್ಟಿನಲ್ಲಿ ಬುಧವಾರ ಸಾಬೀತಾಯಿತು.

ಎರಡು ವರ್ಷಗಳ ಹಿಂದೆ ಜುಲೈಯಲ್ಲಿ ಆಕೆ ಪೊಂಟಕನ್ನದಲ್ಲಿರುವ ಮನೆಯಲ್ಲಿ ಮಗ ಯಾಸೀನ್ ಇಗೆಯನ್ನು ಥಳಿಸಿ ಕೊಂದು ಬಳಿಕ ಶವವನ್ನು ಸುಟ್ಟುಹಾಕಿದ್ದಳು.

ನ್ಯಾಯಾಂಗ ವಿಚಾರಣೆಗೆ ಅಡ್ಡಿಯುಂಟುಮಾಡಿರುವ ಆರೋಪವೂ ಸಾಬೀತಾಗಿದ್ದು, ನ್ಯಾಯಾಲಯ ಆಕೆಯ ಶಿಕ್ಷೆಯ ಸ್ವರೂಪವನ್ನು ಪ್ರಕಟಿಸುವ ಪ್ರಕ್ರಿಯೆಯನ್ನು ಮುಂದೂಡಿದೆ. ವಿಚಾರಣೆಯ ಸಂದರ್ಭದಲ್ಲಿ ಸಾರಾ ಮಗನಿಗೆ ಹೊಡೆದ ದೊಣ್ಣೆಯಲ್ಲಿ ಸೈತಾನ ಸೇರಿಕೊಂಡಿತ್ತು ಎಂದು ಕೂಡ ಹೇಳಿಕೊಂಡಿದ್ದಾಳೆ.

ಆಕೆಯ ಗಂಡ ಯೂಸುಫ್ ಇಗೆಯನ್ನು ನ್ಯಾಯಾಲಯ ಮಗನನ್ನು ಪಾರು ಮಾಡಲು ವಿಫಲಗೊಂಡ ಆರೋಪದಿಂದ ಖುಲಾಸೆಗೊಳಿಸಿದೆ.

ಮೊದಲು ಯಾಸೀನ್ ಮನೆಯಲ್ಲಿ ಸಂಭವಿಸಿದ ಬೆಂಕಿ ಅವಘಡದಿಂದ ಸತ್ತಿದ್ದಾನೆಂದು ಭಾವಿಸಲಾಗಿತ್ತು. ಆದರೆ ವೈದ್ಯಕೀಯ ಪರೀಕ್ಷೆಯಲ್ಲಿ ಅವನು ಸತ್ತು ಕೆಲವು ತಾಸು ಕಳೆದ ಬಳಿಕ ದೇಹ ಸುಟ್ಟಿರುವ ಸಂಗತಿ ತಿಳಿಯಿತು.

**("ಉದಯವಾಣಿ" 7 ಡಿಸೆಂಬರ್ 2012)**

## ಯೇಸುಕ್ರಿಸ್ತನ ಸಮಾಧಿ!

ಕಾಶ್ಮೀರದ ಕಣಿವೆ ಮುಸಲ್ಮಾನರೇ ಹೆಚ್ಚಾಗಿರುವ ಪ್ರದೇಶ. ಇಲ್ಲಿಗೆ ಯಹೂದಿಗಳು ಭಾರೀ ಸಂಖ್ಯೆಯಲ್ಲಿ ಪ್ರವಾಸಕ್ಕೆ ಬರುತ್ತಾರೆ ಎನ್ನುವುದು ಅಚ್ಚರಿಯ ಸತ್ಯ. ಇವರು ಬರುವುದು ಕಾಶ್ಮೀರದ ಸೌಂದರ್ಯ ಸವಿಯಲು ಅಲ್ಲ, ಇಲ್ಲಿರುವ ಯೇಸುವಿನ ಸಮಾಧಿ ನೋಡಲು!

ಇಂದು ಪ್ರಚಲಿತವಿರುವ ಕೆಲವು ದಂತಕಥೆಗಳ ಪ್ರಕಾರ ಯೇಸುಕ್ರಿಸ್ತ ಪುನರುತ್ಥಾನದ ಬಳಿಕ ಮಧ್ಯ ಏಷ್ಯಾ ಮಾರ್ಗವಾಗಿ ಕಾಶ್ಮೀರ ತಲಪಿ, ಕಾಶ್ಮೀರದಲ್ಲಿ ನೆಲಸಿದ್ದ. ಇಲ್ಲಿ ಯೇಸುಕ್ರಿಸ್ತನ ಹೆಸರು ಯುಜ್ ಅಸಾಫ್ ಎಂದಾಗಿತ್ತು.

ಶ್ರೀನಗರ ಜಿಲ್ಲೆಯ ಖಾನ್ಯಾರ್ ಎಂಬಲ್ಲಿರುವ ರೋಜಾಬಲ್ ಸಮಾಧಿ ಯಹೂದಿ ಶೈಲಿಯಲ್ಲಿದೆ. ಇದರ ಸುತ್ತ ಇತ್ತೀಚೆಗೆ ಸಿಮೆಂಟಿನ ಗೋಡೆಗಳ ಕಟ್ಟಡ ನಿರ್ಮಾಣವಾಗಿದೆ. ಇದು ಯೇಸುಕ್ರಿಸ್ತನ ಸಮಾಧಿ ಎಂಬ ವದಂತಿಗಳ ಕಾರಣ ಭಾರೀ ಸಂಖ್ಯೆಯಲ್ಲಿ ವಿದೇಶೀ ಪ್ರವಾಸಿಗಳು ಬರುತ್ತಿದ್ದರು. ಇದೀಗ ಇಲ್ಲಿ ವಿದೇಶೀಯರನ್ನು ನಿಷೇಧಿಸಲಾಗಿದೆ.

**("ತುಷಾರ" ಸೆಪ್ಟಂಬರ್ 2010)**

## ಯುದ್ಧಾಪರಾಧ; ಹಿರಿಯ ಜಮಾತ್ ನಾಯಕನಿಗೆ ಮರಣದಂಡನೆ

ಢಾಕಾ, ಫೆ.28: 1971ರಲ್ಲಿ ಪಾಕಿಸ್ಥಾನ ವಿರುದ್ಧದ ಸ್ವಾತಂತ್ರ್ಯಕ್ಕಾಗಿ ನಡೆದ ಯುದ್ಧದ ಸಂದರ್ಭದಲ್ಲಿ ಜನರ ಹತ್ಯೆ, ಧಾರ್ಮಿಕ ಕಿರುಕುಳದಂತಹ ಮಾನವೀಯತೆ ವಿರುದ್ಧದ ಅಪರಾಧಗಳನ್ನು ನಡೆಸಿದ ಆರೋಪಗಳ ಮೇಲೆ ಬಾಂಗ್ಲಾದೇಶದ ಮೂಲಭೂತವಾದಿ ಜಮಾತೆ ಇಸ್ಲಾಮಿ ಪಾರ್ಟಿಯ ಹಿರಿಯ ನಾಯಕ ದಿಲಾವರ್ ಹೊಸೈನ್ ಸಯ್ಯದಿಗೆ ಬಾಂಗ್ಲಾದ ವಿಶೇಷ ನ್ಯಾಯಮಂಡಳಿ ಮರಣದಂಡನೆ ಶಿಕ್ಷೆಯನ್ನು ವಿಧಿಸಿದೆ.

ಯುದ್ಧಾಪರಾಧ ಪ್ರಕರಣದ ವಿಚಾರಣೆಯನ್ನು ವಿರೋಧಿಸಿ ಜಮಾತೆ ಇಸ್ಲಾಮಿ ಪಾರ್ಟಿ ದೇಶದಾದ್ಯಂತ ವ್ಯಾಪಕ ಪ್ರತಿಭಟನೆಗಳನ್ನು ನಡೆಸುತ್ತಿರುವಂತೆಯೇ ನ್ಯಾಯಮೂರ್ತಿ ಎ.ಟಿ.ಎಂ. ಫಜಲ್ ಕಬೀರ್ ನೇತೃತ್ವದದ ತ್ರಿಸದಸ್ಯ ಅಂತಾರಾಷ್ಟ್ರೀಯ ಅಪರಾಧಗಳ ನ್ಯಾಯಮಂಡಳಿ ಜಮಾತೆ ಇಸ್ಲಾಮಿ ಪಾರ್ಟಿಯ ಉಪಾಧ್ಯಕ್ಷ ಸಯ್ಯದಿಗೆ ಗಲ್ಲು ಶಿಕ್ಷೆಯನ್ನು ವಿಧಿಸುವ ತೀರ್ಪಿತ್ತಿದೆ. ಯುದ್ಧಾಪರಾಧಕ್ಕೆ ಸಂಬಂಧಿಸಿದಂತೆ ಮರಣದಂಡನೆ ಶಿಕ್ಷೆಗೆ ಗುರಿಯಾದ ಮೂರನೇ ಜೆಐ ರಾಜಕಾರಣಿ ಇವರಾಗಿದ್ದಾರೆ.

ತೀರ್ಪು ಹೊರಬೀಳುತ್ತಿರುವಂತೆಯೇ ದೇಶದಾದ್ಯಂತ ಬಿಗಿ ಬಂದೋಬಸ್ತನ್ನು ಮಾಡಲಾಗಿದೆ. ಜೆಐ ದೇಶವ್ಯಾಪಿ ಮುಷ್ಕರಕ್ಕೆ ಕರೆ ನೀಡಿರುವ ಸಂದರ್ಭದಲ್ಲಿಯೇ ನ್ಯಾಯಮಂಡಳಿ ಸಯ್ಯದಿಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸಿರುವುದರಿಂದಾಗಿ ದೇಶದಲ್ಲಿ ಹಿಂಸಾಚಾರಗಳು ಭುಗಿಲೇಳುವ ಭೀತಿ ತಲೆದೋರಿದೆ. ಹಿಂಸಾನಿರತ 10 ದುಷ್ಕರ್ಮಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಜೆಐನ ಕಾರ್ಯಕರ್ತರು 10ಕ್ಕೂ ಅಧಿಕ ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ.

**("ಉದಯವಾಣಿ" 1 ಮಾರ್ಚ್ 2013)**

## ಯುದ್ಧಾಪರಾಧ; ಜಮಾತ್ ಕಟ್ಟಾಳುವಿಗೆ ಮರಣದಂಡನೆ

ಢಾಕಾ, ಮೇ.9: 1971ರಲ್ಲಿ ನಡೆದ ಪಾಕಿಸ್ಥಾನ ವಿರುದ್ಧದ ವಿಮೋಚನಾ ಸಮರದ ವೇಳೆ ಯುದ್ಧಾಪರಾಧ ನಡೆಸಿದ ಆರೋಪಕ್ಕೆ ಗುರಿಯಾಗಿದ್ದ ದೇಶದ ಮೂಲಭೂತವಾದಿ ಸಂಘಟನೆಯಾದ ಜಮಾತೆ ಇಸ್ಲಾಮಿಯ ಕಟ್ಟಾಳು ಮುಹಮ್ಮದ್ ಖಮರುಜ್ಜಾಮ್‌ಗೆ ಬಾಂಗ್ಲಾದೇಶದ ವಿಶೇಷ ನ್ಯಾಯಮಂಡಳಿಯು ಮರಣದಂಡನೆ ಶಿಕ್ಷೆ ವಿಧಿಸಿದೆ.

ಅಂತಾರಾಷ್ಟ್ರೀಯ ಅಪರಾಧ ನ್ಯಾಯಮಂಡಳಿ–2ರ ಅಧ್ಯಕ್ಷರಾಗಿರುವ ಒಬಾಯ್ದುಲ್ಲಾ ಹಸನ್ ಅವರು ಖಮರುಜ್ಜಾಮ್‌ಗೆ ಮರಣದಂಡನೆ ಶಿಕ್ಷೆಯನ್ನು ವಿಧಿಸುವ ತೀರ್ಪನ್ನು ಪ್ರಕಟಿಸಿದರು. ಖಮರುಜ್ಜಾಮ್, ಜಮಾತೆ ಇಸ್ಲಾಮಿಯ ಸಹಾಯಕ ಪ್ರಧಾನ ಕಾರ್ಯದರ್ಶಿಯಾಗಿದ್ದು, ಬಾಂಗ್ಲಾ ವಿಮೋಚನಾ ಯುದ್ಧದ ವೇಳೆ ಯುದ್ಧಾಪರಾಧ ಆರೋಪವನ್ನು ಈತನ ಮೇಲೆ ಹೊರಿಸಲಾಗಿದೆ.

**("ಉದಯವಾಣಿ" 10 ಮೇ 2013)**

## 91 ವರ್ಷದ ಬಾಂಗ್ಲಾ ವ್ಯಕ್ತಿಗೆ 90 ವರ್ಷ ಜೈಲು

ಢಾಕಾ: ಬಾಂಗ್ಲಾದೇಶದ ಜಮಾತ್ ಇ ಇಸ್ಲಾಮಿ ಮೂಲಭೂತವಾದಿ ಸಂಘಟನೆಯ ನಾಯಕ ಗುಲಾಂ ಅಜಂಗೆ 90 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ. 1971ರಲ್ಲಿ ನಡೆದ ಪಾಕಿಸ್ತಾನ ವಿರುದ್ಧದ ಸ್ವಾತಂತ್ರ್ಯ ಸಂಗ್ರಾಮದ ವೇಳೆ ದೌರ್ಜನ್ಯ ಎಸಗಿದ ಒಟ್ಟು 61 ಪ್ರಕರಣಗಳಲ್ಲಿ ಅಜಂ (91) ದೋಷಿ ಎಂದು ಸಾಬೀತಾದ ಹಿನ್ನೆಲೆಯಲ್ಲಿ ಈ ಪ್ರಮಾಣದ ಶಿಕ್ಷೆ ವಿಧಿಸಲಾಗಿದೆ. ಅಂತಾರಾಷ್ಟ್ರೀಯ ಅಪರಾಧ ನ್ಯಾಯಾಧಿಕರಣ ಈ ತೀರ್ಪು ನೀಡಿದೆ. ಅಜಂ ಮಾಡಿದ ತಪ್ಪಿಗೆ ಅವರಿಗೆ ಗಲ್ಲು ಶಿಕ್ಷೆಯನ್ನೇ ವಿಧಿಸಬೇಕಾಗಿತ್ತಾದರೂ ಅವರ ವಯಸ್ಸಿನ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡು ಅವರಿಗೆ 90 ವರ್ಷ ಜೈಲು ಶಿಕ್ಷೆ ವಿಧಿಸಲಾಗಿದೆ ಎಂದು ನ್ಯಾಯಾಲಯ ಹೇಳಿತು.

**("ಉದಯವಾಣಿ" 16 ಜುಲಾಯಿ 2013)**

## ದೇವರು ದೊಡ್ಡವನು..!

ಭಾಷೆಗಳ ವೈರುಧ್ಯ ನೋಡಿ. ದೇವರು ದೊಡ್ಡವನು ಎಂಬ ಕನ್ನಡ ಭಾಷೆಯಲ್ಲಿನ ಏಕವಚನ ಮತ್ತು ಬಹುವಚನದ ಸಂದಿಗ್ಧತೆ ಮೂಲಕ ತಿಳಿಯಬಹುದು. ದೇವರು ಅಂದಾಗ ಬಹುವಚನ ಪ್ರಯೋಗಿಸಿದರೆ, ದೊಡ್ಡವನು ಅಂದಾಗ ಏಕವಚನ ಪ್ರಯೋಗ. ಇದು ನಿಜ ಅರ್ಥದಲ್ಲಿ ಅತ್ಯಂತ ಪರಿಣಾಮಕಾರಿ ಪದ ಪ್ರಯೋಗ ಎಂಬ ಅನಿಸಿಕೆ ನನ್ನದು. ಬಹುವಚನದಲ್ಲಿ ಗೌರವ ಮತ್ತು ಏಕವಚನದಲ್ಲಿ ಪ್ರೀತಿ ಕೂಡಿರುತ್ತದೆ. ಈ ಮೂಲಕ ಗೌರವ ಮತ್ತು ಪ್ರೀತಿಯ ಸಮ್ಮಿಲನದಿಂದ ದೇವರನ್ನು ಕಾಣುವ ಪ್ರಯತ್ನ. **– ಪದ್ಮಶ್ರೀ ಬನ್ನಂಜೆ ಗೋವಿಂದಾಚಾರ್ಯರ ವಿಶ್ಲೇಷಣೆ.**

**("ಉದಯವಾಣಿ" 19 ನವೆಂಬರ್ 2012)**

## ಬಾಂಗ್ಲಾದೇಶ: ಜಮಾಅತೆ ಇಸ್ಲಾಮಿ ನೋಂದಣಿ ರದ್ದು

ಢಾಕಾ, ಆ.1: ಬಾಂಗ್ಲಾದೇಶದ ಅತಿದೊಡ್ಡ ಬಲಪಂಥೀಯ ಪಕ್ಷ ಜಮಾಅತೆ ಇಸ್ಲಾಮಿ ಪಕ್ಷದ ನೋಂದಣಿಯನ್ನು ಹೈಕೋರ್ಟ್ ಗುರುವಾರ ರದ್ದುಪಡಿಸಿದೆ. ಹೈಕೋರ್ಟ್‌ನ ಈ ಐತಿಹಾಸಿಕ ತೀರ್ಪು ಜಮಾಅತೆ ಇಸ್ಲಾಮಿ ಪಕ್ಷವು ಮುಂಬರುವ ಚುನಾವಣೆಗಳಲ್ಲಿ ಸ್ಪರ್ಧಿಸುವುದನ್ನು ನಿಷೇಧಿಸಿದೆ. ಒಂದು ಅವಧಿಯಲ್ಲಿ ಪ್ರಬಲ ಪಕ್ಷವಾಗಿ ಮೆರೆದಿದ್ದ ಜಮಾಅತೆ ಇಸ್ಲಾಮಿ ಪಕ್ಷಕ್ಕೆ ಹೈಕೋರ್ಟ್ ನೀಡಿರುವ ಈ ತೀರ್ಪು ರಾಜಕೀಯ ಭವಿಷ್ಯವನ್ನು ಕರಾಳವನ್ನಾಗಿಸಿದೆ ಎಂದು ವಿಶ್ಲೇಷಿಸಲಾಗಿದೆ.

ಜಮಾಅತೆ ಇಸ್ಲಾಮಿಯನ್ನು ರಾಜಕೀಯ ಪಕ್ಷವಾಗಿ ನೋಂದಾವಣೆಗೊಳಿಸಿರುವ ಕಾನೂನು ಬದ್ಧತೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ರಿಟ್ ಅರ್ಜಿಯ ವಿಚಾರಣೆ ನಡೆಸಿದ ತ್ರಿಸದಸ್ಯ ನ್ಯಾಯಪೀಠವು ಈ ತೀರ್ಪು ನೀಡಿದೆ. ಬಾಂಗ್ಲಾದೇಶದ ತರೀಕತ್ ಫೆಡರೇಶನ್ ಮಹಾಕಾರ್ಯದರ್ಶಿ ರಿಝಾವುಲ್ ಹಕ್ ಚಾಂದ್‌ಪುರಿ ಹಾಗೂ ಇತರ 24 ಮಂದಿ 2009ರ ಜನವರಿ 25ರಂದು ಪಕ್ಷದ ಕಾನೂನುಬದ್ಧತೆಯನ್ನು ಪ್ರಶ್ನಿಸಿ ರಿಟ್ ಅರ್ಜಿ ಸಲ್ಲಿಸಿದ್ದರು.

**("ವಾರ್ತಾಭಾರತಿ" 2 ಆಗಸ್ಟ್ 2013)**

## 'ಏಸುವನ್ನು ಶಿಲುಬೆಗೇರಿಸಿದ್ದು ಅನ್ಯಾಯ'

ನೈರೋಬಿ (ಕೀನ್ಯ), ಆ.5 : ಏಸದು ಜಗತ್ತಿನ ಒಳಿತಿಗಾಗಿ ಶಿಲುಬೆಗೇರಿ ಕಷ್ಟ ಅನುಭವಿಸಿದ ಎಂಬುದು ಲೋಕರೂಢಿಯ ಮಾತು. ಆದರೆ ಇದೇ ವಿಚಾರದಲ್ಲಿ ಕೀನ್ಯಾದ ವಕೀಲರೊಬ್ಬರು, ಅಂತಾರಾಷ್ಟ್ರೀಯ ಕೋರ್ಟ್‌ನಲ್ಲಿ ದಾವೆ ಹೂಡಿದ್ದಾರೆ. ವಕೀಲ ದೋಲಾ ಇಂಡಿಡಿಸ್, 2 ಸಾವಿರ ವರ್ಷಗಳ ಹಿಂದೆ, ಏಸುವನ್ನು ಶಿಲುಬೆಗೇರಿಸಿದ್ದಕ್ಕೆ ಸಂಬಂಧಿಸಿದಂತೆ, ಈಗ ದಾವೆ ಹೂಡಿದ್ದು, ಶಿಲುಬೆಗೇರಿಸುವ ಮೂಲಕ ಏಸುವಿನಿಂದ ನ್ಯಾಯವನ್ನು ಕಿತ್ತುಕೊಳ್ಳಲಾಗಿದ್ದು, ಮಾನವ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ಆಪಾದಿಸಿದ್ದಾರೆ. ರೋಮ್‌ನ ಅಂದಿನ ಮಹಾರಾಜ ಟೈಬೆರಿಸ್, ಹೆರಾಡ್, ಜುಡೆನ್‌ನ ಗವರ್ನರ್ ಪಾಂಟಿಸ ಪಿಲಾಟೆ, ಯಹೂದಿ ಮುಖ್ಯ ಅರ್ಚಕರೊಬ್ಬರನ್ನೂ ಪ್ರತಿವಾದಿಯಾಗಿ ಮಾಡಲಾಗಿದೆ. ಅಲ್ಲದೇ ಮುಂದಿನ ದಿನಗಳಲ್ಲಿ ಇಸ್ರೇಲ್, ಇಟಲಿ ಮತ್ತು ರೋಮನ್ ರಾಜಮನೆತನಕ್ಕೂ ನೋಟಿಸ್ ಜಾರಿ ಮಾಡುವ ಉದ್ದೇಶವಿದೆ.

**("ಉದಯವಾಣಿ" 6 ಆಗಸ್ಟ್ 2013)**

## ಸಲಿಂಗಿಗಳ ಪರ ಪೋಪ್ ದನಿ

ಪಾದ್ರಿಗಳ ಲೈಂಗಿಕ ಹಗರಣಗಳಿಂದ ಜರ್ಝರಿತವಾಗಿದ್ದ ಚರ್ಚ್ ಪ್ರತಿಷ್ಠೆಯ ಪುನರುತ್ಥಾನದಲ್ಲಿ ತೊಡಗಿರುವ ಪೋಪ್ ಫ್ರಾನ್ಸಿಸ್ 'ಸಲಿಂಗಿಗಳನ್ನು ಮುಖ್ಯವಾಹಿನಿಗೆ ಕರೆತರಬೇಕಿದೆ' ಎಂದಿದ್ದಾರೆ. 'ಸಲಿಂಗಿಯೊಬ್ಬ ಉತ್ತಮನಾಗಿದ್ದು, ದೇವರಿಗೆ ಶರಣು ಬಂದರೆ ಆತನ ಬಗ್ಗೆ ತೀರ್ಪು ನೀಡಲು ನಾನ್ಯಾರು?' ಎಂದ ಅವರು ಅದೇ ಉಸಿರಿನಲ್ಲಿ 'ಸಲಿಂಗ ಮನೋಭಾವ ಪಾಪವಲ್ಲ, ಆದರೆ ಅಕೃತ್ಯಗಳು ಹೌದು' ಎಂದರು.

"ಅವರ ಈ ಮನೋಭಾವದಿಂದ ಅವರನ್ನು ಕಡೆಗಣಿಸಬಾರದು. ಅವರನ್ನು ಸಮಾಜದ ಮುಖ್ಯವಾಹಿನಿಗೆ ಕರೆದು ತರಬೇಕು. ಆದರೆ ಆ ಬಗ್ಗೆ ನಡೆಸುತ್ತಿರುವ ಲಾಬಿಗಳಿಂದಲೇ ಹೆಚ್ಚಿನ ಹಾನಿಯಾಗಿದೆ" ಎಂದು ಅಭಿಪ್ರಾಯಪಟ್ಟರು.ಮಹಿಳೆಯರ ಸ್ಥಾನಮಾನ ವಿಷಯ ಪ್ರಸ್ತಾವಿಸಿದ ಅವರು, "ಮಹಿಳೆಯರಿಗೆ ಪಾದ್ರಿಗಳ ಸ್ಥಾನವಿಲ್ಲ. ಆದರೆ ಚರ್ಚ್ ಆಡಳಿತದಲ್ಲಿ ಮಹಿಳೆಯರ ಪಾತ್ರ ಹೆಚ್ಚಲಿದೆ" ಎಂದು ಭರವಸೆ ನೀಡಿದರು.

**("ತರಂಗ" 15 ಆಗಸ್ಟ್ 2013)**

## ಮತ್ತೊಬ್ಬ ಬಾಂಗ್ಲಾ ಮೂಲಭೂತವಾದಿಗೆ ಗಲ್ಲು

ಢಾಕಾ: 1971 ಬಾಂಗ್ಲಾದೇಶ ಸ್ವಾತಂತ್ರ್ಯ ಚಳುವಳಿ ವೇಳೆ ಪಾಕಿಸ್ತಾನದೊಂದಿಗೆ ಕೈಜೋಡಿಸಿ ಹಲವರ ಸಾವಿಗೆ ಕಾರಣನಾಗಿದ್ದ ಮೂಲಭೂತವಾದಿ ಜಮಾತ್ ಎ ಇಸ್ಲಾಮಿ ಸಂಘಟನೆಯ ಕಾರ್ಯದರ್ಶಿ ಅಲಿ ಆಶನ್ ಮಹಮ್ಮದ್‌ಗೆ ಸ್ಥಳೀಯ ನ್ಯಾಯಾಲಯ ಗಲ್ಲು ಶಿಕ್ಷೆ ವಿಧಿಸಿದೆ. ಅಲಿ ಆಶನ್, ಮಾನವೀಯತೆ ಮೇಲೆ ಕೌರ್ಯ ಎಸಗಿದ್ದಾರೆ ಮತ್ತು ನೂರಾರು ಜನರನ್ನು ಹತ್ಯೆ ನಡೆಸುವಲ್ಲಿ ಸಹಕರಿಸಿರುವುದು ಸಾಬೀತಾದ ಹಿನ್ನೆಲೆಯಲ್ಲಿ ಅವರಿಗೆ ಗಲ್ಲು ಶಿಕ್ಷೆ ನೀಡಲಾಗಿದೆ ಎಂದು ನ್ಯಾಯಾಲಯ ಘೋಷಿಸಿದೆ.

**("ಉದಯವಾಣಿ" 18 ಜುಲಾಯಿ 2013)**

ಅಹ್ಮದಿಯರಿಗೆ ಸುತ್ತೋಲೆ

## ತಹ್‌ರೀಕ್ ಜದೀದ್ ಮತ್ತು ಪವಿತ್ರ ರಮಝಾನ್ ತಿಂಗಳು

ಹಝ್‌ರತ್ ಖಲೀಫತುಲ್ ಮಸೀಹ್ ಸಾನೀ (ದ್ವಿತೀಯ ಖಲೀಫ) ರಝಿಯಲ್ಲಾಹು ಅನ್‌ಹು ತಹ್‌ರೀಕ್ ಜದೀದ್ ಮತ್ತು ರಮಝಾನ್ ತಿಂಗಳ ನಾಲ್ಕು ಮುಖ್ಯ ಸಮಾನ ವಿಷಯಗಳಾದ ಸರಳ ಜೀವಿತ, ಕಷ್ಟಪಟ್ಟು ಕೆಲಸಮಾಡುವುದರ ಅಭ್ಯಾಸ, ಸ್ಥಿರಚಿತ್ತತೆ ಮತ್ತು ಪ್ರಾರ್ಥನೆ ಇವುಗಳ ಬಗ್ಗೆ ಸವಿಸ್ತಾರವಾಗಿ ವಿವರಿಸಿದ ನಂತರ ಹೀಗೆ ಹೇಳಿದರು:

"ನೀವು ರಮಝಾನ್ ತಿಂಗಳಲ್ಲಿ ಅದರ ಲಾಭ ಪಡೆಯಲು ಇಚ್ಛಿಸುವುದಾದರೆ, ತಹ್‌ರೀಕ್ ಜದೀದ್ ಅಭಿಯಾನದಲ್ಲಿ ಭಾಗವಹಿಸಿರಿ. ನೀವು ತಹ್‌ರೀಕ್ ಜದೀದ್‌ಗೆ ಲಾಭ ಉಂಟು ಮಾಡಲು ಬಯಸುವುದಾದರೆ, ಉಪವಾಸದಿಂದ ಸರಿಯಾದ ರೀತಿಯಲ್ಲಿ ಲಾಭ ಪಡೆಯಿರಿ. ತಹ್‌ರೀಕ್ ಜದೀದ್ ಎಂದರೆ ಸರಳ ಜೀವಿತ ಕೈಗೊಳ್ಳುವುದು, ಕಷ್ಟಪಟ್ಟು ಕೆಲಸಮಾಡುವ ಮತ್ತು ಬಲಿದಾನಗಳನ್ನು ಮಾಡುವ ಅಭ್ಯಾಸ ಮಾಡಿಕೊಳ್ಳುವುದು ಆಗಿದೆ. ರಮಝಾನ್ ತಿಂಗಳು ಇದೇ ಪಾಠವನ್ನು ನಿಮಗೆ ಕಲಿಸಲಿಕ್ಕೋಸ್ಕರ ಆಗಮಿಸುತ್ತದೆ. ಯಾವ ಉದ್ದೇಶಕ್ಕಾಗಿ ರಮಝಾನ್ ತಿಂಗಳು ಆಗಮಿಸಿದೆಯೋ ಆ ಉದ್ದೇಶ ಲಕ್ಷ್ಯಗಳನ್ನು ತಲುಪಲು ನೀವು ಕಠಿಣ ಪರಿಶ್ರಮ ನಡೆಸಿರಿ.... ಪ್ರತಿಯೊಬ್ಬನು ತನ್ನ ರಮಝಾನ್ ಉಪವಾಸ ತಹ್‌ರೀಕ್ ಜದೀದಿನ ಸಂಯಮನ ನಿಯಮ ಪ್ರಕಾರ ಅನುಷ್ಠಿಸಲು ಪ್ರಯತ್ನಿಸಬೇಕು. ತಹ್‌ರೀಕ್ ಜದೀದ್ ಅನುಷ್ಠಾನವು ರಮಝಾನಿನ ಉಪವಾಸದ ಅನುಷ್ಠಾನದ ಪ್ರಕಾರವಾಗಿರಬೇಕು. ರಮಝಾನ್ ನಮ್ಮ ಶಾರೀರಿಕ ಅಶಾಭಿಲಾಷೆಗಳನ್ನು ಹತೋಟಿಯಲ್ಲಿಡುವುದಾಗಬೇಕು. ತಹ್‌ರೀಕ್ ಜದೀದ್ ನಮ್ಮ ಆತ್ಮಕ್ಕೆ ನವಚೈತನ್ಯ ತುಂಬುವಂತಹದ್ದಾಗಬೇಕು. ರಮಝಾನಿನಿಂದ ನೀವು ಲಾಭ ಪಡೆಯಿರಿ ಎಂದು ನಾನು ಹೇಳಿದುದರ ಅರ್ಥ ನೀವು ತಹ್‌ರೀಕ್ ಜದೀದಿನ ಉದ್ದೇಶ ಲಕ್ಷ್ಯಗಳನ್ನು ರಮಝಾನಿನ ಬೆಳಕಿನಲ್ಲಿ ಮನವರಿಕೆ ಮಾಡಿಕೊಳ್ಳಬೇಕು ಎಂದಾಗಿದೆ. ನೀವು ತಹ್‌ರೀಕ್ ಜದೀದ್ ಕಡೆಗೆ ಲಕ್ಷ್ಯ ನೀಡಿರಿ ಎಂದು ನಾನು ಹೇಳಿದುದರ ಅರ್ಥ ಪ್ರತಿಯೊಂದು ಅವಸ್ಥೆಯಲ್ಲಿಯೂ ರಮಝಾನಿನ ಭಾವನೆ ನಿಮ್ಮ ಮೇಲೆ ಅಧಿಕಾರ ಚಲಾಯಿಸುವಂತಾಗಬೇಕು ಎಂದಾಗಿದೆ. ನಿಜವಾದ ತ್ಯಾಗ ಮತ್ತು ನಿರಂತರ ತ್ಯಾಗ ಮಾಡುವ ಅಭ್ಯಾಸ ನಿಮ್ಮಲ್ಲಿ ಉಂಟುಮಾಡಬೇಕು. ನಿಜವಾದ ತ್ಯಾಗವಿಲ್ಲದೆ ದಾಟಿ ಹೋಗುವ ರಮಝಾನ್ ಸರಿಯಾದ ರಮಝಾನ್ ಅಲ್ಲ. ಆತ್ಮಕ್ಕೆ ನವಚೈತನ್ಯ ನೀಡದೆ ದಾಟಿ ಹೋಗುವ ತಹ್‌ರೀಕ್ ಜದೀದ್ ಸರಿಯಾದ ತಹ್‌ರೀಕ್ ಅನುಷ್ಠಾನವಲ್ಲ." (ಖುತುಬ ಜುಮುಅ 4-11-1938)

ಇದೇ ವಿಷಯವನ್ನು ಮುಂದುವರಿಸುತ್ತಾ 1938 ನವೆಂಬರ್ ದಿನಾಂಕ 11ರಂದು ಶುಕ್ರವಾರದ ಖುತುಬದಲ್ಲಿ ತಹ್‌ರೀಕ್ ಜದೀದ್ ಚಂದಾ ನೀಡುವವರಿಗೋಸ್ಕರ ವಿಶೇಷ ಪ್ರಾರ್ಥನೆ ನಡೆಸಬೇಕೆಂದು ಆಗ್ರಾಹಪಡಿಸುತ್ತಾ ಹಝ್‌ರತ್ ಖಲೀಫತುಲ್ ಮಸೀಹ್ ಸಾನೀ ರಝಿಯಲ್ಲಾಹು ಅನ್‌ಹು ಹೀಗೆ ಹೇಳಿದರು:-

"ರಮಝಾನ್ ತಿಂಗಳ ಕೊನೆಯ ಹತ್ತು ದಿವಸ ಪ್ರಾರಂಭವಾಗಲಿದೆ. ಈ ತಹ್‌ರೀಕ್ ಜದೀದ್‌ಗೋಸ್ಕರ ಹಿಂದೆ ಮಾಡಿದ ತ್ಯಾಗಗಳ ಬಗ್ಗೆ ಕೃತಜ್ಞತೆ ಅರ್ಪಿಸಲು ಮತ್ತು ಮುಂದೆ ತ್ಯಾಗಗಳನ್ನು ಮಾಡಲು ಶಕ್ತಿಯನ್ನು ಗಳಿಸಲು ಪ್ರಾರ್ಥನೆ ಮಾಡುತ್ತಾ ಈ ದಿನಗಳನ್ನು ವಿನಿಯೋಗಿಸಿರಿ. ಹಿಂದಿನ ವರ್ಷಗಳಲ್ಲಿ ತ್ಯಾಗಗಳನ್ನು ಮಾಡಲು ಯಾರಿಗೆ ಭಾಗ್ಯ ಲಭಿಸಿದೆಯೋ ಅವರು ಅದಕ್ಕೋಸ್ಕರ ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸಲಿ. ತ್ಯಾಗಗಳನ್ನು ಮಾಡುವ ಪ್ರತಿಯೊಬ್ಬನಿಗೋಸ್ಕರ ಪ್ರಾರ್ಥನೆ ಮಾಡುವ ಪ್ರತಿಯೊಬ್ಬನು ಪ್ರಾರ್ಥಿಸಲಿ - ಧರ್ಮದ ಪ್ರಗತಿಗೋಸ್ಕರ ಮತ್ತು ಜಮಾಅತನ್ನು ಬಲಪಡಿಸಲು ಮಾಡಿದ ತ್ಯಾಗಗಳ ಫಲಸ್ವರೂಪವಾಗಿ ಅಲ್ಲಾಹನು ಅನುಗ್ರಹಗಳನ್ನು ತ್ಯಾಗಮಾಡುವ ಜನರಿಗೆ ಸುರಿಸಲಿ. ಅಂತಹ ಜನರಿಗೆ ಅಲ್ಲಾಹನು ತನ್ನ ಪ್ರೀತಿ ಮತ್ತು ಅನುಗ್ರಹಗಳನ್ನು ದಯಪಾಲಿಸಲಿ. ಅಲ್ಲಾಹನ ಮಾರ್ಗದಲ್ಲಿ ಮಾಡಿದ ತ್ಯಾಗಗಳನ್ನು ಎಷ್ಟು ಪ್ರೀತಿ ಮತ್ತು ನಿಷ್ಠೆಯಿಂದ ಮಾಡಲಾಗಿದೆಯೋ ಅದಕ್ಕೆ ಅನುಸಾರವಾಗಿ ಅಲ್ಲಾಹನು ಅನುಗ್ರಹ ನೀಡಲಿ." (ಅಲ್‌ಫಝ್ಲ್ 15-11-1938)

ಖುರ್‌ಶೀದ್ ಅಹ್ಮದ್ ಅನ್‌ವರ್
ವಕೀಲುಲ್ ಮಾಲ್ ತಹ್‌ರೀಕ್ ಜದೀದ್, ಖಾದಿಯಾನ್.


ಹೊಸ ಪ್ರಕಟನೆಗಳು

**ಧರ್ಮದ ನಾಮದಲ್ಲಿ ರಕ್ತಪಾತ**
*ಗ್ರಂಥ ಕರ್ತ* : ಮಿರ್ಝಾ ತಾಹಿರ್ ಅಹ್ಮದ್
ಪುಟಗಳು : 185 ಬೆಲೆ : ರೂ. 50/-

**ಖತ್‌ಮೆ ನುಬುವ್ವತ್ - ನಿಜಾಂಶಗಳು**
*ಗ್ರಂಥ ಕರ್ತ* : ಮಿರ್ಝಾ ಬಶೀರ್ ಅಹ್ಮದ್
ಪುಟಗಳು : 155 ಬೆಲೆ : ರೂ. 50/-

ಸಂಪರ್ಕಿಸಿರಿ :
**ಅಹ್ಮದಿಯಾ ಮುಸ್ಲಿಮ್ ಜಮಾಅತ್**
ನಂ.1, 3ನೇ ಕ್ರಾಸ್, ವಿಲ್ಸನ್ ಗಾರ್ಡನ್, ಬೆಂಗಳೂರು - 560 027. Ph : 080 - 22246133

ವಾರ್ತೆ

# ಅಹ್ಮದಿಯಾ ಶಾಂತಿ ಸಮ್ಮೇಳನ




ಮಡಿಕೇರಿ : ಅಹ್ಮದಿಯಾ ಮುಸ್ಲಿಂ ಜಮಾಅತಿನ ಯುವಜನ ಸಂಘಟನೆ "ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ" ಪ್ಲಾಟಿನಮ್ ಜೂಬಿಲಿ ಆಚರಣೆಯ ಅಂಗವಾಗಿ ಮಡಿಕೇರಿಯಲ್ಲಿ ಮೇ 18ರಂದು ಶಾಂತಿ ಸಮ್ಮೇಳನ ಏರ್ಪಡಿಸಲ್ಪಟ್ಟಿತ್ತು.

ಅಹ್ಮದಿಯಾ ಮುಸ್ಲಿಂ ಜಮಾಅತಿನ ಸರ್ವೋಚ್ಚ ನೇತಾರ ಹಝ್ರತ್ ಖಲೀಫತುಲ್ ಮಸೀಹ್ V ಅವರ ಶಾಂತಿ ಸಂದೇಶವನ್ನು ಓದಿ ಹೇಳಿ, ಇಸ್ಲಾಂ ಮೂಲತಃ ಶಾಂತಿಯ ಸಂದೇಶ ಸಾರುತ್ತಿದ್ದು ಹಿಂಸೆ, ಹಲ್ಲೆ ಇತ್ಯಾದಿ ದುಷ್ಕೃತ್ಯಗಳನ್ನು ಖಂಡಿಸುತ್ತದೆಂದು ಮೌಲ್ವಿ ಖಲೀಂ ಖಾನ್ ಸಾಹೇಬ್ ನುಡಿದರು.

ಸ್ವಾರ್ಥಕ್ಕಾಗಿ ಧರ್ಮದ ಬಳಕೆಯಾಗುತ್ತಿರುವುದರಿಂದ ಮತೀಯ ಸಾಮರಸ್ಯಗಳು ಮುರಿದು ಬೀಳುತ್ತಿವೆ ಎಂದು ಶ್ರೀ ರಾಮಕೃಷ್ಣ ಶಾರದಾ ಆಶ್ರಮದ ಅಧ್ಯಕ್ಷ ಬೋಧ ಸ್ವರೂಪಾನಂದ ಸ್ವಾಮೀಜಿ ಹೇಳಿದರು. ನಮ್ಮ ಆತ್ಮದ ಉನ್ನತಿಯೊಂದಿಗೆ ಜಗತ್ತಿನ ಉನ್ನತಿಗೂ ಯತ್ನಿಸಬೇಕೆಂದರು. ದೇವನೊಬ್ಬನೇ ನಾಮ ಹಲವು ಎಂಬ ವಿಷಯದ ಅರಿವು ಎಲ್ಲರಿಗೂ ಆದಲ್ಲಿ ಅಶಾಂತಿಗೆ ಅವಕಾಶವಿಲ್ಲ ಎಂದರು.

ಬದ್ರುದ್ದೀನ್ ಸಾಹೇಬ್ ಮಾತನಾಡಿ, ಉಗ್ರಗಾಮಿಗಳ ಧರ್ಮ ಮನುಷ್ಯ ಹತ್ಯೆ ಮಾತ್ರವಾಗಿದ್ದು ಅವರಿಗೆ ಬೇರೆ ಧರ್ಮವಿಲ್ಲ ಎಂದರು. ಜಿಹಾದ್ ಇಂದು ತಪ್ಪಾಗಿ ಗ್ರಹಿಸಲ್ಪಟ್ಟಿದ್ದು, ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರಾದಿ ಮನಸ್ಸಿನ ಷಡ್ವೈರಿಗಳನ್ನು ಹೊಡೆದೋಡಿಸಿ ಮನಸ್ಸನ್ನು ಶುದ್ಧೀಕರಣಗೊಳಿಸುವುದೇ ನಿಜವಾದ ದೊಡ್ಡ ಜಿಹಾದ್ ಎಂದರು.

ಖುದ್ದಾಮುಲ್ ಅಹ್ಮದಿಯಾ ಭಾರತದ ಅಧ್ಯಕ್ಷ ಹಾಫಿಝ್ ಮಖ್‌ದೂಮ್ ಶರೀಫ್ ಸಾಹೇಬ್ ಮಾತನಾಡಿ ಅಲ್ಲಾಹನಲ್ಲಿ ಭಕ್ತಿ ಹೆಚ್ಚಿದಷ್ಟೂ ಪರಸ್ಪರರಲ್ಲಿ ಪ್ರೀತಿ – ಅಭಿಮಾನ ಹೆಚ್ಚುತ್ತದೆ ಎಂದರು. ಪ್ರೀತಿಯ ಸೌಧ ಕಟ್ಟಲು ಎಲ್ಲರೂ ಮುಂದಾಗಬೇಕು ಎಂದರು .

ಇಂದು ವಿಶ್ವದಲ್ಲಿ ಪ್ರೀತಿ ಬೇಕಿದೆ ಎಂದು ಸಿ.ಎಸ್.ಐ. ಚರ್ಚಿನ ರೆವರಂಡ್ ಸುಧೀರ್ ರಾಬಿನ್‌ಸನ್ ಹೇಳಿದರು. ಮಾನವ ಸರಿ ಇದ್ದಲ್ಲಿ ವಿಶ್ವ ಸರಿಹೊಂದುತ್ತದೆ ಎಂದ ಅವರು, ಮಾನವರಲ್ಲಿ ಪ್ರೀತಿ– ಸಾಮರಸ್ಯ ಅವಶ್ಯ ಎಂದರು.

ಮೌಲ್ವಿ ನಾಸಿರ್ ಅಹ್ಮದ್ ಸಾಹೇಬ್, ಇಸ್ಲಾಂ ಶಾಂತಿಯ ಧರ್ಮ ಎಂದು ಪ್ರತಿಪಾದಿಸಿದರು.

"ಧರ್ಮದನಾಮದಲ್ಲಿ ರಕ್ತಪಾತ" ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಿದ "ಶಕ್ತಿ" ಪತ್ರಿಕೆಯ ಸಂಪಾದಕರಾದ ಬಿ. ಜಿ. ಅನಂತಶಯನ, ಅಶಾಂತ ಹೃದಯಗಳಿಂದ ಶಾಂತಿಯ ಚಿಲುಮೆ ಹೊರಹೊಮ್ಮಲು ಸಾಧ್ಯವಿಲ್ಲ ಎಂದರು.

ತಮೀಂ ಅಬ್ಬಾಸ್ ಸಾಹೇಬ್ ಹಝ್ರತ್ ಮುಹಮ್ಮದ್ ಪೈಗಂಬರರ(ಸ) ಶಾಂತಿಯ ಅಭಿಯಾನವನ್ನು ವಿವರಿಸಿದರು. ಉಸ್ಮಾನ್ ಪಾಶ ಸಾಹೇಬ್ ಖುರ್‌ಆನ್ ಪಠಿಸಿದರು. ಮೌಲ್ವಿ ಇರ್ಶಾದ್ ಅಹ್ಮದ್ ಸಾಹೇಬ್ ಕೆ. ಎಂ. ಉಮರ್ ಸಾಹೇಬ್ ರಚಿಸಿದ ಪದ್ಯವನ್ನು ಹಾಡಿದರು. ಬಶೀರ್ ಅಹ್ಮದ್ ಸಾಹೇಬ್ ಕೃತಜ್ಞತೆ ಸಲ್ಲಿಸಿದರು.

ವಾರ್ತೆ

## ಖುದ್ದಾಮುಲ್ ಅಹ್ಮದಿಯಾ ಪ್ಲಾಟಿನಮ್ ಜೂಬಿಲಿ ಸಮ್ಮೇಳನ

ಹುಬ್ಬಳ್ಳಿ : ಅಹ್ಮದಿಯಾ ಮುಸ್ಲಿಂ ಜಮಾಅತಿನ ಯುವಜನ ಸಂಘಟನೆ 'ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ' ಪ್ಲಾಟಿನಮ್ ಜೂಬಿಲಿ ಸಮ್ಮೇಳನ ಹೆಗ್ಗೇರಿಯಲ್ಲಿ ಜರಗಿತು.

ಮುಖ್ಯ ಅತಿಥಿಯಾಗಿದ್ದ ಮೌಲಾನ ಫರ್ಝುಲ್ ಹಕ್ ಖಾನ್ ಸಾಹೇಬ್ ಮಾತನಾಡಿ, ಯುವಕರ ಸುಧಾರಣೆಯಾದರೆ ಮಾತ್ರ ಸಮಾಜದ ಸುಧಾರಣೆ ಸಾಧ್ಯವೆಂದೂ ಸಮಾಜವು ಶಿಕ್ಷಣಕ್ಕೆ ಆದ್ಯತೆ ನೀಡಬೇಕೆಂದೂ ಹೇಳಿದರು. ಬಡವರ, ದೀನದಲಿತರ ಸೇವೆ ಮಾಡುವುದು ಸಂಘಟನೆಯ ಮುಖ್ಯ ಉದ್ದೇಶ ಎಂದರು. ಅಲ್ಲಾಹನು ತೋರಿಸಿದ ಮಾರ್ಗದಲ್ಲಿ ನಡೆಯುವುದು, ಧರ್ಮನಿಷ್ಠೆ ಪಾಲಿಸುವುದು, ತಾನು ಕಷ್ಟಪಟ್ಟು ದುಡಿದ ಹಣದಿಂದ ಅಲ್ಲಾಹನ ಮಾರ್ಗದಲ್ಲಿ ಖರ್ಚು ಮಾಡುವುದು, ಆಧ್ಯಾತ್ಮಿಕ ಶಿಕ್ಷಣವನ್ನು ಗಳಿಸುವುದು ಎಂದೆಲ್ಲ ಹಝ್ರತ್ ಖಲೀಫತುಲ್ ಮಸೀಹ್ ದ್ವಿತೀಯರವರು ಯುವಜನರಿಗೆ ನೀಡಿದ ಉಪದೇಶಗಳನ್ನು ಅವರು ನೆನಪಿಸಿದರು.

ಮೌಲ್ವಿ ಸುಕ್ತಾರ್ ಅಲಿ, ಶಮ್ಸುರ್ರಹ್ಮಾನ್, ಮೌಲಾ ಸಾಬ್, ಶಬ್ಬೀರ್ ರಾಮದುರ್ಗ, ವಸೀಮ್ ಲೂದಿ, ಇಮಾದ್ ಬೆಳಗಾವಿ ಮೊದಲಾದವರು ಸಮ್ಮೇಳನದ ಉದ್ದೇಶ ಕುರಿತು ಮಾತನಾಡಿದರು. ರಫೀಕ್ ಖಾನ್ ರಾಮದುರ್ಗ ಅಧ್ಯಕ್ಷತೆ ವಹಿಸಿದ್ದರು.

## ಅಹ್ಮದಿಯಾ ಬುಕ್ ಸ್ಟಾಲ್




ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಯುವ ಜನರ ಸಂಘಟನೆಯಾದ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಸ್ಥಾಪನೆಯ ಪ್ಲಾಟಿನಮ್ ಜೂಬಿಲಿ ಸಮಾರಂಭದ ಸಂದರ್ಭದಲ್ಲಿ ಒಂದು ತಾತ್ಕಾಲಿಕ ಬುಕ್‌ಸ್ಟಾಲನ್ನು ಮಂಜೇಶ್ವರದ ಖುದ್ದಾಮುಲ್ ಅಹ್ಮದಿಯಾ ವತಿಯಿಂದ ಹೊಸಂಗಡಿಯಲ್ಲಿ 2013 ಮೇ ದಿನಾಂಕ 11 ಮತ್ತು 12ರಂದು ತೆರೆಯಲಾಯಿತು. ಬಸ್ ನಿಲ್ದಾಣದ ಸಮೀಪ ನಿರ್ಮಿಸಲಾದ ಬುಕ್‌ಸ್ಟಾಲ್ ಸಾವಿರಾರು ಜನರನ್ನು ಆಕರ್ಷಿಸಿತು.

ಅನಂತರ 2013 ಮೇ ದಿನಾಂಕ 25 ಮತ್ತು 26ರಂದು ಉಪ್ಪಳದಲ್ಲಿ ಸಹ ಒಂದು ತಾತ್ಕಾಲಿಕ ಬುಕ್‌ಸ್ಟಾಲನ್ನು ತೆರೆಯಲಾಯಿತು. ಅಲ್ಲಿ ಸಹ ಸಾವಿರಾರು ಜನರಿಗೆ ಇಸ್ಲಾಮ್ ಮತ್ತು ಅಹ್ಮದಿಯಾ ಜಮಾಅತಿನ ಶಾಂತಿ ಮತ್ತು ಸೌಹಾರ್ದದ ಸಂದೇಶ ತಲಪಿಸಲಾಯಿತು.

## ಪ್ರೊ। ಶರೀಫ್ ಅಹ್ಮದ್ ಖಾನ್‌ರಿಗೆ ಡಾಕ್ಟರೇಟ್



ನ್ಯೂಢೆಲ್ಲಿಯ ಕೇಂದ್ರ ವಿಶ್ವವಿದ್ಯಾಲಯವಾದ ಜಾಮಿಅ ಮಿಲ್ಲಿಯ ಇಸ್ಲಾಮಿಯ ವಿಶ್ವವಿದ್ಯಾಲಯದಿಂದ ಅರಬಿ ಭಾಷೆಯಲ್ಲಿ ಡಾಕ್ಟರೇಟ್ ಪದವಿ ಗಳಿಸಿದರು. "ಕೇರಳತ್ತಿಲೆ ಅರಬಿ ಎಝುತ್ತುಗಾರುಡೆ ಸಾಮ್ರಾಜ್ಯತ್ವ ವಿಶುದ್ಧ ಚೇರ್ತ್ತ್ ನಿಲ್ಪ್" ಎಂಬ ವಿಷಯದಲ್ಲಿ ಪ್ರೊ। ಶರೀಫ್ ಅಹ್ಮದ್ ಖಾನ್‌ರವರು ಡಾ। ಅಬ್ದುಲ್ ಮಾಜಿದ್ ಖಾಝಿಯವರ ಮಾರ್ಗದರ್ಶನದಲ್ಲಿ ಸಂಶೋಧನೆ ಮಾಡಿದ್ದರು. ಕೋಝಿಕ್ಕೋಡ್ ವಿಶ್ವವಿದ್ಯಾಲಯದಲ್ಲಿ ಎಂ. ಎ. ಅರಬಿಕ್, ಬಿ. ಎ. ಅಫ್ಝಲುಲ್ ಉಲಮಾ ಅರಬಿಕ್ ಎಂಬಿವುಗಳಲ್ಲಿ ಪ್ರಥಮ ರಾಂಕ್ ಗಳಿಸಿದ್ದರು. ಇವರು ಪತ್ತಪಿರಿಯಂ ಜಮಾಅತ್ ಘಟಕದ ಸದಸ್ಯರಾಗಿದ್ದರು.

ದಿವಂಗತ ವೀರಾನ್ ಕುಟ್ಟಿ ಮುಸ್ಲಿಯಾರ್ ಮತ್ತು ಆಯಿಶರವರ ಪುತ್ರ, ಪತ್ನಿ ಹಾನಿಯಾ BDS ವಿದ್ಯಾರ್ಥಿನಿ.

ವಾರ್ತೆ

## ಡಾ। ಅಮತುಶ್ಶಾಫಿಗೆ 6 ಗೋಲ್ಡ್ ಮೆಡಲ್

ಎಪ್ರಿಲ್ 27ರಂದು ವಿಜಯವಾಡದಲ್ಲಿ ನಡೆದ N.T.R. ಯುನಿವರ್ಸಿಟಿಯ 17ನೇ ಘಟಿಕೋತ್ಸವದಲ್ಲಿ ಆಂಧ್ರ ಪ್ರದೇಶದ ರಾಜ್ಯಪಾಲ E.S.I. ನರಸಿಂಹನ್ ಅವರಿಂದ ಡಾ। ಅಮತುಶ್ಶಾಫಿಯವರಿಗೆ 6 ಬಂಗಾರದ ಪದಕಗಳನ್ನು ನೀಡಲಾಯಿತು. ಡಾ। ಅಮತುಶ್ಶಾಫಿ ಅವರು ಅಹ್ಮದಿಯಾ ಜಮಾಅತಿನ "ವಕ್ಫೆನೌ" ಯೋಜನೆಯ ಸದಸ್ಯರಾಗಿದ್ದಾರೆ (B-451). ಅವರು ಹೈದರಾಬಾದಿನ ಮುಹಮ್ಮದ್ ಅಝೀಮುದ್ದೀನ್ ಸಾಹೇಬರ ಪುತ್ರಿ ಹಾಗೂ ಕೆನಡದ ಡಾ। ಕಾಶಿಫ್ ಅಹ್ಮದ್ ಸಾಹೇಬರ ಪತ್ನಿಯಾಗಿದ್ದಾರೆ.

ನಾಲ್ಕು ಬಂಗಾರದ ಪದಕಗಳನ್ನು NTRUHS ವತಿಯಿಂದ, 5ನೇ ಪದಕವನ್ನು Dr. T. Srinivasan Memorial Gold Medal ವತಿಯಿಂದ ಮತ್ತು 6ನೇ ಪದಕವನ್ನು ಅವರ ಕಾಲೇಜ್ ವತಿಯಿಂದ, ಅವರು ಅತ್ಯಧಿಕ ಅಂಕಗಳನ್ನು ಪಡೆದುದಕ್ಕೋಸ್ಕರ ನೀಡಲಾಗಿದೆ. ಈ ಪದಕಗಳನ್ನು ಸ್ವೀಕರಿಸಲಿಕ್ಕಾಗಿ ಅವರು ಕೆನಡಾದಿಂದ ಆಗಮಿಸಿದ್ದರು. MBBS ಪರೀಕ್ಷೆಯಲ್ಲಿ ವಿಶ್ವವಿದ್ಯಾಲಯದಲ್ಲೇ ಅತ್ಯಧಿಕ ದಾಖಲೆ ಅಂಕಗಳನ್ನು ಅವರು ಪಡೆದಿದ್ದರು.

## *Medico bags Six Gold Medals*



**EXCELLENCE HONOURED**

*Amtul Shafi receives certificates and medals from Governor E.S.L. Narsimhan as Dr. V. Shanta, chairperson of IWA Cancer Institute, Chennai, looks on at the convocation ceremony in Vijaywada. Ms. Shafi won six gold medals to set a record.*

**DC CORRESPONDENT**

HYDRABAD, APRIL 29

Amtul Shafi, a student of Shadan Institute of Medical Sciences, Hospital and Research Centre, has created a record by bagging six gold medals at the recent convocation held by the NTR University ofHealth Sciences, Vijayawada.

While four of the medals were presented by the NTUHS, one gold medal was given by the AP State Medical Council and one was awarded by her college for getting the highest marks.

Ms Shafi bagged the Dr. T. Srinivasan Memorial gold medal for getting the highest marks in the subject of medicine while pursuing MBBS in the state and the Dr Pulaparti Srinivasan Memorial gold medals for being the best outgoing medicine student in final MBBS. She also won the T. Saroja Murthy and M. Jaya Lakshmi Memorial gold medals for topping in medicine. The gold medal from the APMC came her way for being the best outgoing student and being the college topper. A gold medal was also given by the Shadan Institute of Medical Sciences to her for being the best outgoing and for best over all performance in MBBS.

**("Deccan Chronicle" 30-04-2013)**

ಇನ್ಸಾನಿಯತ್ ಝಿಂದಾಬಾದ್

ಮಾನವೀಯತೆ ಚಿರಕಾಲ ಬಾಳಲಿ

## ಸಂಪಾದಕರಿಗೆ ಪತ್ರ

ಆತ್ಮೀಯರೆ,

ಅಸ್ಸಲಾಮು ಅಲೈಕುಂ.

"ಯುಗರಶ್ಮಿ" ಓದುಗರಲ್ಲಿ ನಾನೊಬ್ಬ. ಸಂಚಿಕೆ ಕೈ ಸೇರುತ್ತಲೇ ಓದಿ ಮುಗಿಸುವವರೆಗೆ ನೆಮ್ಮದಿ ಇರುವುದಿಲ್ಲ. **2012**ರ ಜೂನ್, ಡಿಸೆಂಬರ್ ಸಂಚಿಕೆಗಳು ವಿಶೇಷವಾಗಿ ಮನಸೆಳೆದಿವೆ. ಪ್ರತಿಯೊಂದು ಶೀರ್ಷಿಕೆ, ವಿಷಯ ಉತ್ತಮವಾಗಿದೆ. ಅಹ್ಮದಿಯಾ ಮುಸ್ಲಿಂ ಸಂಘಟನೆಯ ಸರ್ವೋಚ್ಚ ನಾಯಕರಾದ ಖಲೀಫರು ಬರೆದಂತಹ "ಜಾಗತಿಕ ರಾಷ್ಟ್ರ ನಾಯಕರಿಗೆ ಪತ್ರಗಳು" ಪ್ರಕಟಿಸಿದ್ದು ಅಭಿನಂದನಾರ್ಹ ಹಾಗೂ ಅತ್ಯುತ್ತಮ ಹೆಜ್ಜೆ. (ಜಝಾಕುಮುಲ್ಲಾಹ್)

ಈವರೆಗಿನ ಅಧ್ಯಯನ ನಂತರ "ಯುಗರಶ್ಮಿ" ಕುರಿತು ನನ್ನ ಅನಿಸಿಕೆಗಳನ್ನು ಕವನ ರೂಪದಲ್ಲಿ ವ್ಯಕ್ತಪಡಿಸಿದ್ದೇನೆ. ಪ್ರಕಟಿಸಲು ಇಷ್ಟಪಟ್ಟರೆ ಧನ್ಯವಾದಗಳು.

### ನನ್ನ ಜೀವ "ಯುಗರಶ್ಮಿ"

ಯುಗಯುಗಗಳ ಮಾಹಿತಿ
ಒಳಗೊಂಡಿದೆ ಯುಗರಶ್ಮಿ
ಪ್ರವಾದಿಗಳ ಇತಿಹಾಸ
ಬಿಚ್ಚಿಡುತಿದೆ ಯುಗರಶ್ಮಿ
ದೇವ ಒಬ್ಬ ನಾಮ ಹಲವು
ಸರ್ವಧರ್ಮಗಳ ತಿರುಳು ಯುಗರಶ್ಮಿ
ಹಝ್ರತ್ "ಅಹ್ಮದ್" ಯುಗಪುರುಷ ಕಲ್ಕಿ ಅವತಾರ,
ಮಸೀಹ್ ಮೌಊದ್, ಇಮಾಮ್ ಮಹ್‌ದಿಯ ಬೆಳಕು ಯುಗರಶ್ಮಿ
ದೇವನಿಂದ ದೂರ ಸರಿದು, ಪಾಪದಿಂದ ತುಂಬಿ ತುಳುಕಿದ ಜನರನ್ನು
ದೇವ ಮಡಿಲಿಗೆ ಕರೆಯುತಿದೆ ಯುಗರಶ್ಮಿ
ಯಾರ ಮೇಲೂ ಗೂಬೆ ಬೇಡ, ಎಲ್ಲಾ ಧರ್ಮ ಒಂದೇ
ಸತ್ಯವನು ಅರಿತು ನಡೆ ಎನ್ನುತಿದೆ ಯುಗರಶ್ಮಿ
ಯಾರು ಏನೇ ಅನ್ನಲಿ ನನಗಂತೂ
ನನ್ನ ಜೀವ ಯುಗರಶ್ಮಿ

ಮುಹಮ್ಮದ್ ಇಸ್ಮಾಯೀಲ್
ಗೋಗಿ

---

ಸರ್ವಧರ್ಮ ಸಮನ್ವಯವನ್ನು ಸಾರುವ ಯುಗರಶ್ಮಿ ಅತ್ಯುತ್ತಮವಾಗಿ ಮೂಡಿಬರುತ್ತಿದೆ. ಧರ್ಮದ ಬಗ್ಗೆ ಜನರಲ್ಲಿರುವ ಮೌಢ್ಯಗಳನ್ನು ಕಳೆಯುತ್ತಿದೆ. ಇದರಲ್ಲಿರುವ "ಓದಿದ್ದು" ಕಾಲಂ ನನ್ನ ಮನಸ್ಸಿಗೆ ಮಾಹಿತಿಯ ಭರಪೂರವನ್ನು ಒದಗಿಸುತ್ತಿದೆ. ಈ ಯುಗರಶ್ಮಿ ಹೀಗೇ ಮುಂದುವರಿಯಲಿ. ಯುಗರಶ್ಮಿ ಬೆಳಗಲಿ.

– ಧೀರಜ್ ಕೆ. ಜಿ.
ಬೆಳ್ಳಾರೆ

---

**"Love for All Hatred for None"**

**"ಎಲ್ಲರೊಂದಿಗೂ ಪ್ರೀತಿ ಯಾರಲ್ಲೂ ದ್ವೇಷವಿಲ್ಲ"**

# ನಬಿ ಕೀರ್ತನೆ

★ ನಜ್ಮತುನ್ನಿಸಾ ಲೈಝ್

ಓ ನಬಿಯೇ,
ತಮ್ಮ ಸೃಷ್ಟಿ ಮೂಲಕ
ಈ ಲೋಕವು
ಮಾನವ ಶ್ರೇಷ್ಠನನ್ನು ದರ್ಶಿಸಿತು.

ಓ ನಬಿಯೇ,
ತಾವು ಜನಿಸದಿರುತ್ತಿದ್ದರೆ
ಈ ಲೋಕದಲ್ಲಿ ಪವಿತ್ರವಾದ
ಇಸ್ಲಾಂ ದೀನ್ ಉಂಟಾಗುತ್ತಿರಲಿಲ್ಲ

ಓ ನಬಿಯೇ,
ತಾವು ಬಾರದೆ ಇರುತ್ತಿದ್ದರೆ
ಈ ಲೋಕದಲ್ಲಿ ಖುರ್‌ಆನ್ ಗ್ರಂಥ
ನಮಗೆ ಲಭಿಸುತ್ತಿರಲಿಲ್ಲ

ಓ ನಬಿಯೇ,
ತಾವು ಇಲ್ಲದೆ ಇರುತ್ತಿದ್ದರೆ
ಈ ಲೋಕದಲ್ಲಿ ನಾವು
ಸತ್ಯ ವಿಶ್ವಾಸಿಯಾದ ಮುಸ್ಲಿಮ್ ಆಗುತ್ತಿರಲಿಲ್ಲ

ಒಂಟೆ ಸವಾರಿ ನಿಲ್ಲುವ ಕಾಲದಲ್ಲಿ
ಇಸ್ಲಾಮಿನ ಪುರೋಗತಿಗೆ
ಈ ಲೋಕದಲ್ಲಿ ಮಹ್‌ದಿ ಬರುವರು
ಎಂದು ನುಡಿದ ಮುತ್ತು ನಬಿ

ಕೊನೆಯ ಕಾಲಘಟ್ಟದಲ್ಲಿ
ಮುಸ್ಲಿಮರು 73 ಪಂಗಡಗಳಾಗುವಾಗ
ಈ ಲೋಕದಲ್ಲಿ ಒಂದು ಪಂಗಡ ಸತ್ಯವಾಗುವುದು
ಎಂದು ನುಡಿದ ಸತ್ಯ ನಬಿ

ಸ್ತ್ರೀಯರ ಕಣ್ಣೀರು ಒರಸಿ,
ಅವರಿಗೆ ಉನ್ನತ ಸ್ಥಾನ ದೊರಕಿಸಿದ ಪುಣ್ಯದೂತ
ಸ್ತ್ರೀಯರ ಜೊತೆ ಉತ್ತಮ ರೀತಿಯಲ್ಲಿ ವರ್ತಿಸಬೇಕೆಂದು
ಹೇಳಿದ ಪುಣ್ಯದೂತ

ಪ್ರವಾದಿಗಳೆಲ್ಲರೂ ಉತ್ತಮರಾಗಿದ್ದರೂ
ಓ ನಬಿಯೇ, ತಾವು ಉತ್ತಮರಲ್ಲಿ ಉತ್ತಮರು
ಅಲ್ಲಾಹನನ್ನು ನಮಗೆ ಕಾಣಿಸಿಕೊಟ್ಟ ಪುಣ್ಯದೂತ
ತಮ್ಮ ಮೇಲೆ ಸಾವಿರ ಸಾವಿರ ಸಲಾಂ ಬರ್ಕತ್ತು ವರ್ಷಿಸಲಿ.

# ಪೋಪ್ ಫ್ರಾನ್ಸಿಸ್‌ರಿಗೆ ಅಹ್ಮದಿಯಾ ಖಲೀಫರ ಸಂದೇಶ

ಲಂಡನ್,
*14–3–2013*





ಚ"ನಾನು ಪ್ರಥಮವಾಗಿ, ಪೋಪ್ ಫ್ರಾನ್ಸಿಸ್ Iರನ್ನು ಮತ್ತು ಲೋಕದಲ್ಲಿರುವ ಎಲ್ಲ ಕ್ಯಾಥೊಲಿಕ್‌ರನ್ನು ಅಭಿನಂದಿಸುತ್ತೇನೆ. ಹೊಸ ಪೋಪರ ನಿಯುಕ್ತಿ ಕ್ರೈಸ್ತರಿಗೆ ಮಾತ್ರವಲ್ಲ, ಎಲ್ಲ ಭೂನಿವಾಸಿಗಳಿಗೂ ಅನುಗ್ರಹೀತವಾಗಲಿ. ಹೊಸ ಪೋಪ್ ಕ್ರೈಸ್ತ ಸಭೆಯನ್ನು ಯಥಾರ್ಥ ಕ್ರೈಸ್ತ ಧರ್ಮದ ಕಡೆಗೆ ಕೊಂಡೊಯ್ಯಲಿ. ಮುಂದಿನ ಕಾಲಘಟ್ಟದಲ್ಲಿ ಲೋಕದಲ್ಲಿ ಶಾಂತಿ–ಸೌಹಾರ್ದ ಬೆಳೆಯಲು ಪೋಪ್ ತನ್ನ ಪ್ರಭಾವವನ್ನು ಬೀರುವರೆಂದು ನಾನು ಭರವಸೆಪಡುತ್ತೇನೆ ಮತ್ತು ಅದಕ್ಕೋಸ್ಕರ ಪ್ರಾರ್ಥಿಸುತ್ತೇನೆ. ನಮ್ಮ ಸರ್ವಸಮಾನ ಅಧ್ಯಾಪನಗಳಲ್ಲಿ ಮುಖ್ಯವಾಗಿ ದೇವೇಕತ್ವದ ಬಗ್ಗೆ ನಾವು ಐಕ್ಯದಿಂದ ವರ್ತಿಸಬೇಕಾದುದು ಅತ್ಯಾವಶ್ಯಕವಾಗಿದೆ.

ವಿಭಜನವನ್ನು ವರ್ಧಿಸುವುದಕ್ಕಿಂತ ಈಗ ಲೋಕಕ್ಕೆ ಉತ್ಕಟ ಅವಶ್ಯವಾಗಿರುವುದು ಐಕ್ಯ ಮತ್ತು ಅನುಕಂಪ. ಪೋಪ್ ಬೆನೆಡಿಕ್ಟ್ XVI ಅವರಿಗೆ ನಾನು 2011ರಲ್ಲಿ ಬರೆದ ಪತ್ರದಲ್ಲಿ ಇದೇ ವಿಷಯವನ್ನು ಬರೆದಿದ್ದೆ.

ಲೋಕದಲ್ಲಿರುವ ಎಲ್ಲ ಜನರನ್ನು ಶಾಂತಿ, ಸಾಮರಸ್ಯ ಮತ್ತು ಪರಸ್ಪರ ತಿಳುವಳಿಕೆ ಮೂಲಕ ಒಂದುಗೂಡಿಸಲು ತಮ್ಮ ಪ್ರಭಾವವನ್ನು ಬೀರಬೇಕೆಂದೂ ಹಾಗೆ ಲೋಕವನ್ನು ನಾಶದಿಂದ ಪಾರುಮಾಡಲು ಪ್ರಯತ್ನಿಸಬೇಕೆಂದೂ ನಾನು ಆ ಪತ್ರದಲ್ಲಿ ಕೋರಿದ್ದೆ. ಅದೇ ಸಂದೇಶವನ್ನೇ ಹೊಸ ಪೋಪ್‌ರಿಗೂ ನಾನು ಕಳುಹಿಸುತ್ತೇನೆ.

ಅಹ್ಮದಿಯಾ ಮುಸ್ಲಿಂ ಜಮಾಅತಿನ ಬಗ್ಗೆ ಹೇಳುವುದಾದರೆ, ನಾವು ಧರ್ಮ ಸೌಹಾರ್ದವನ್ನು ಪೋಷಿಸಲು ಮತ್ತು ಶಾಂತಿ–ಸಮಾಧಾನವನ್ನು ಸ್ಥಾಪಿಸಲು ಸದಾ ಮುಂಚೂಣಿಯಲ್ಲಿದ್ದೇವೆ. ಶಾಂತಿ ಮತ್ತು ಸಹಿಷ್ಣುತೆಯನ್ನು ಕಾಂಕ್ಷಿಸುವ ಎಲ್ಲ ಜನರೊಡನೆ ಮತ್ತು ಸಂಘಟನೆಗಳೊಡನೆ ನಾವು ಸದಾ ಸಹಕರಿಸುತ್ತೇವೆ. ಅದು ಎಂದೆಂದಿಗೂ ಮುಂದುವರಿಯುತ್ತಾ ಇರುವುದು.

ನಾನು ಇನ್ನೊಮ್ಮೆ ಪೋಪ್ ಫ್ರಾನ್ಸಿಸ್‌ರನ್ನೂ ಕ್ರೈಸ್ತ ಸಭೆಯನ್ನೂ ಅಭಿನಂದಿಸಿ, ಈ ಸ್ಥಾನಲಬ್ಧಿ ಇಡೀ ಲೋಕಕ್ಕೆ ಶಾಂತಿಯ ಉಗಮಸ್ಥಾನವಾಗಲಿ ಎಂದು ಪ್ರಾರ್ಥಿಸುತ್ತೇನೆ.

Registered with the Registrar of Newspapers for India No. R.N. 27354/75
Yugarashmi Kannada Quarterly, September - 2013. Price : Rs. 15/-




**Friday Sermon**
LIVE every Friday
12:00 GMT



**Faith Matters**
Answering your questions about faith and religion



**Rah-e-Huda**
A live and interactive show answering your questions about Islam



**Fiqa'hi Masail**
An interactive show answering your questions about Islamic jurisprudence
Every Wednesday at 16:20 GMT



**Beacon of Truth**
Shedding light on the beautiful, true teachings of Islam



**Intikhab-e-Sukhan**
LIVE every Saturday
12:50 GMT




**Real Talk : Ladies Edition**
Discussing today's social and moral issues



MTA International's Official YouTube Channel
www.youtube.com/mtaonline1



YouTube | mta

**National Toll Free Number : 1800 3010 2131**
**National Website : ahmadiyyamuslimjamaat.in**
**International Website : alislam.org**
**Email : info@ahmadiyyamuslimjamaat.in**

Edited and Published by Muhammad Yusuf on behalf of Jamath Ahmadiyya at 10-23-1008/1, Ist Floor, Ansari Road, Mangalore - 575 001.
Printed at 'Karavali Printers', Azizuddin Road, Mangalore on behalf of Jubilee Printing Press, Mangalore.
Typeset at 'We Are Designers', Bharath Building, Hampankatta, Mangalore - 575 001